ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ

ಮಂಗಳವಾರ, 24 ಮಾರ್ಚ್ 2026

ಸಂಪುಟ 15, ಸಂಚಿಕೆ 364, ಪುಟಗಳು 12

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ

₹5

RNI No.KARKAN/ 2011/64413

hosadigantha.com
epaper.hosadigantha.com
Hosadigantha Digital



ಅಯೋಧ್ಯೆಗೆ 450 ಕೆಜಿ ಪ್ರಸಾದ ರವಾನೆ | ೦೭ ರಾಹೆಗಳಲ್ಲಿ ಎಐ ಡ್ಯಾಶ್‌ಕ್ಯಾಮ್! | ೦೭ ರಷ್ಯಾ ಜತೆ ಪಾಲುದಾರಿಕೆ ಇನ್ನಷ್ಟು ದೃಢ | ೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ರೋಹಿಣಿ

ದಿನದ ಮಾತು

ಭವಿಷ್ಯ ಎದುರಿಸಲು ಸಿದ್ಧನಿರುವಾತ, ಯಾವುದೇ ಸಂದರ್ಭದಲ್ಲಿ ಜಾಣ್ಮೆಯಿಂದ ವರ್ತಿಸುವಾತ ಸುಖಿಗಳು. ಕೇವಲ ಅದೃಷ್ಟ ಅವಲಂಬಿಸಿ ಬದುಕುವವನು ಬೇಗ ಹಾಳಾಗುತ್ತಾನೆ.

▲ ಚಾಣಕ್ಯ ನೀತಿ

ಎಲ್‌ಪಿಜಿಗೆ ಪರ್ಯಾಯ-ಗೋಬರ್‌ಗ್ಯಾಸ್

ಧರಣಿ ಮಂಡಲ

◆ ಕೆ.ಎಸ್.ಶೈಲೇಶ್ ಹೊಳ್ಳ

◆ ಪುಟ ೬

ಕಿರುಸುದ್ದಿ

ಡಿಜಿಟಲ್ ಅರೆಸ್ಟ್ ಹೆಸರಲ್ಲಿ ಐದು ಕೋಟಿ ರೂ. ವಂಚನೆ

◆ **ಬೆಂಗಳೂರು:** ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಸೈಬರ್ ವಂಚಕರು ಅಮಾಯಕರಿಗೆ ಮೋಸ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಇತ್ತೀಚೆಗಷ್ಟೇ ಉದ್ಯಮಿಯೊಬ್ಬರಿಗೆ 15 ಕೋಟಿ ರೂ. ವಂಚಿಸಿದ್ದ ಘಟನೆ



ಮಾಸುವ ಮುನ್ನವೇ, ಇದೀಗ 94 ವರ್ಷದ ನಿವೃತ್ತ ಸಂಶೋಧಕರೊಬ್ಬರಿಂದ ಬರೋಬ್ಬರಿ 4.91 ಕೋಟಿ ರೂ. ವಂಚಿಸಿರುವ ಆಘಾತಕಾರಿ ಪ್ರಕರಣ ಬೆಳಕಿಗೆ ಬಂದಿದೆ. ಸೈಬರ್ ವಂಚಕರು ನಿವೃತ್ತ ಸಂಶೋಧಕರೊಬ್ಬರ ಲ್ಯಾಂಡ್ ಲೈನ್‌ಗೆ ಕರೆ ಮಾಡಿ, ನಿಮ್ಮ ವಿರುದ್ಧ ಬಳ್ಳಾರಿಯಲ್ಲಿ ಮಾನವ ಕಳ್ಳಸಾಗಾಣಿಕೆ ಪ್ರಕರಣ ದಾಖಲಾಗಿದೆ ಎಂದು ಹೆದರಿಸಿದ್ದಾರೆ. ನಂತರ ಸಂದೀಪ್ ರಾವ್ ಎಂಬ ವ್ಯಕ್ತಿ ತಾನು ಸಿಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡು, ವೃದ್ಧರ ಆಧಾರ್ ವಿವರಗಳನ್ನು ವಾಟ್ಸ್‌ಆ್ಯಪ್ ಮೂಲಕ ಪಡೆದಿದ್ದಾನೆ. ➡ಪುಟ ೪

ಹಳದಿ ಲೋಹ, ಬೆಳ್ಳಿ ದರದಲ್ಲಿ ಭಾರೀ ಕುಸಿತ

◆ **ಹೊಸದಿಲ್ಲಿ:** ಚಿನ್ನ ಮತ್ತು ಬೆಳ್ಳಿ ಬೆಲೆಗಳಲ್ಲಿ ಸೋಮವಾರ ತೀವ್ರ ಕುಸಿತ ಕಂಡುಬಂದಿದ್ದು, ಎ ದೇಶೀಯ ಚಿನ್ನದ ದರ ಶೇ.6.5 ರಷ್ಟು ಇಳಿಕೆಯಾಗಿ ಪ್ರತಿ 10 ಗ್ರಾಂಗೆ 1,35,100 ರೂ. ತಲುಪಿದೆ. ಇದರೊಂದಿಗೆ, ಜನವರಿ 29ರಂದು ದಾಖಲಾಗಿದ್ದ 1.93 ಲಕ್ಷ ರೂ.ಗಳ ಗರಿಷ್ಠ ಮಟ್ಟದಿಂದ ಶೇ.30 ರಷ್ಟು ಕುಸಿತ ಕಂಡಿದೆ. ಬೆಳ್ಳಿ ಬೆಲೆ ಶೇ. 8.97 ರಷ್ಟು ಕುಸಿದು ಪ್ರತಿ ಕೆಜಿಗೆ 2,06,441 ರೂ.ಗೆ ತಲುಪಿದ್ದು, ದಾಖಲೆಯ ಮಟ್ಟದಿಂದ ಒಟ್ಟು ಶೇ.50ಕ್ಕಿಂತ ಹೆಚ್ಚು ಕುಸಿತ ಕಂಡಿದೆ.

◆ ಪುಟ ೭

ಶಾಲಾ ವಿದ್ಯಾರ್ಥಿಗಳಿಗೆ ಮೊಬೈಲ್ ಬಳಕೆ ನಿಷೇಧ

◆ ಪುಟ ೫

ತುಳು ಅಧಿಕೃತ ಭಾಷೆಯಾಗಿ ಘೋಷಿಸಿ: ಉಮಾನಾಥ್

◆ ಪುಟ ೪

ಸರ್ಕಾರಿ ಯೋಜನೆ ಅನುಷ್ಠಾನದಲ್ಲಿ ತಾಳಮೇಳವೇ ಬರುತ್ತಿಲ್ಲ: ಬಿಜೆಪಿ

◆ ಪುಟ ೫

ಮಾತುಕತೆ, ರಾಜತಾಂತ್ರಿಕತೆ ಮಾತ್ರ ಸಂಘರ್ಷಕ್ಕೆ ಪರಿಹಾರ: ಮೋದಿ

ಕೋವಿಡ್ ವೇಳೆ ತೋರಿದ ತಾಳ್ಮೆಯಂತೆ ಈ ಸಂಕಷ್ಟ ಎದುರಿಸೋಣ

ಏಕತೆಯಿಂದ ಎದುರಿಸಿ



ಶಾಂತಿ, ಸಹನೆ, ಜಾಗೃತಿ ಇರಲಿ

ಕೊನೆಯಲ್ಲಿ ಪ್ರಧಾನಿ ಮೋದಿ ಅವರು ದೇಶದ ಜನರಿಗೆ ಶಾಂತಿ, ಸಹನೆ ಮತ್ತು ಜಾಗೃತಿಯಿಂದ ಇರಲು ಕರೆ ನೀಡಿದರು. ನಾವು ಒಟ್ಟಾಗಿ ನಡೆದುಕೊಂಡರೆ ಯಾವುದೇ ಸವಾಲನ್ನೂ ಎದುರಿಸಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಈ ಸಂಕಷ್ಟದ ಸಂದರ್ಭದಲ್ಲಿ ಭಾರತದಿಂದ ಏಕಮತದ ಧ್ವನಿ ಜಗತ್ತಿಗೆ ಕೇಳಿಸಬೇಕು ಎಂದು ಮೋದಿ ಹೇಳಿದರು.

ಹಡಗುಗಳ ಮೇಲೆ ದಾಳಿಗೆ ಖಂಡನೆ

ಅಂತಾರಾಷ್ಟ್ರೀಯ ಜಲಮಾರ್ಗಗಳಾದ ಹಾರ್ಮುಜ್



ಜಲಸಂಧಿಯಲ್ಲಿ ವ್ಯಾಪಾರ ಹಡಗುಗಳ ಮೇಲೆ ದಾಳಿಗಳು ನಡೆಯುತ್ತಿರುವುದು ಸ್ವೀಕಾರಾರ್ಹವಲ್ಲ ಎಂದು ಅವರು ಖಂಡಿಸಿದರು. ಜಗತ್ತಿನ ಸುಮಾರು ಶೇ.20 ಇಂಧನ ಸಾಗಾಣಿಕೆ ಈ ಮಾರ್ಗದ ಮೂಲಕ ನಡೆಯುವುದರಿಂದ ಇದರ ಭದ್ರತೆ ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು.

◆ **ಹೊಸದಿಲ್ಲಿ:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧ ಪರಿಸ್ಥಿತಿ ದೀರ್ಘಕಾಲ ಮುಂದುವರಿಯುವ ಸಾಧ್ಯತೆ ಇದೆ ಎಂದಿರುವ ಪ್ರಧಾನಿ ನರೇಂದ್ರ ಮೋದಿ, ದೇಶವು ಕೊರೋನಾ ಸಂದರ್ಭದಲ್ಲಿ ತೋರಿಸಿದಂತೆ ಏಕತೆ ಮತ್ತು ತಾಳ್ಮೆಯಿಂದ ಈ ಸಂಕಷ್ಟವನ್ನೂ ಎದುರಿಸಬೇಕು ಎಂದು ಕರೆ ನೀಡಿದ್ದಾರೆ.

ಲೋಕಸಭೆಯಲ್ಲಿ ಸೋಮವಾರ ಹೇಳಿಕೆ ನೀಡಿರುವ ಅವರು, ಈ ಸಂಘರ್ಷವು ಇಂಧನ, ರಾಸಾಯನಿಕ



ಗೊಬ್ಬರ, ರಾಷ್ಟ್ರೀಯ ಭದ್ರತೆ ಸೇರಿದಂತೆ ಹಲವಾರು ಕ್ಷೇತ್ರಗಳ ಮೇಲೆ ಪರಿಣಾಮ ಬೀರುತ್ತಿದ್ದು, ಪಶ್ಚಿಮ ಏಷ್ಯಾದಲ್ಲಿ ನೆಲೆಸಿರುವ ಭಾರತೀಯರ ಸುರಕ್ಷತೆ ಕುರಿತು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿದೆ ಎಂದರು.

ಮಾತುಕತೆಯಿಂದ ಪರಿಹಾರ: ಸಂಘರ್ಷಕ್ಕೆ ಅಂತಿಮ ಪರಿಹಾರ ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕವೇ ಸಾಧ್ಯ. ಎಲ್ಲಾ ಸಂಬಂಧಿತ ರಾಷ್ಟ್ರಗಳ ನಾಯಕರೊಂದಿಗೆ ಮಾತುಕತೆ ನಡೆಸಿರುವುದಾಗಿ ಪ್ರಧಾನಿ ಮೋದಿ ತಿಳಿಸಿದರು. ➡ಪುಟ ೪

ಎಲ್ಲಾ ರಾಷ್ಟ್ರಗಳಿಗೂ ಸವಾಲು ◆ ಪುಟ ೪

ಭಾರತೀಯರ ಸುರಕ್ಷತೆಗೆ ವಿಶೇಷ ಕ್ರಮ

ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ವಾಸಿಸುವ ಸುಮಾರು ಒಂದು ಕೋಟಿ ಭಾರತೀಯರ ಸುರಕ್ಷತೆ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಮೋದಿ ಹೇಳಿದರು. ಯುದ್ಧ ಆರಂಭವಾದ ಬಳಿಕ 3.75 ಲಕ್ಷಕ್ಕೂ ಹೆಚ್ಚು ಭಾರತೀಯರನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ಕರೆತರಲಾಗಿದೆ ಎಂದು ಮಾಹಿತಿ ನೀಡಿದರು. ಇರಾನ್‌ನಿಂದಲೇ ಸುಮಾರು 1,000 ಭಾರತೀಯರು, ಈ ಪೈಕಿ 700ಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳು ಸುರಕ್ಷಿತವಾಗಿ ವಾಪಸ್ಸಾಗಿದ್ದಾರೆ ಎಂದು ಹೇಳಿದರು.

ಇಂಧನ ಭದ್ರತೆಗೆ ಯೋಜನೆ

ಇಂಧನ ಭದ್ರತೆಗಾಗಿ ಕಳೆದ ದಶಕದಲ್ಲಿ ಭಾರತ ಮಹತ್ವದ ಕ್ರಮಗಳನ್ನು ಕೈಗೊಂಡಿದೆ ಎಂದು ಮೋದಿ ವಿವರಿಸಿದರು.



27 ದೇಶಗಳಿಂದ ಇಂಧನ ಆಮದು ಮಾಡುತ್ತಿದ್ದ ಭಾರತ ಈಗ 41 ದೇಶಗಳಿಂದ ಇಂಧನ ಪಡೆಯುತ್ತಿದೆ ಎಂದು ಹೇಳಿದರು. ಭಾರತದ ಬಳಿ 5.3 ಮಿಲಿಯನ್ ಮೆಟ್ರಿಕ್ ಟನ್‌ಗಳಷ್ಟು ಸ್ಟ್ರಾಟೆಜಿಕ್ ಪೆಟ್ರೋಲಿಯಂ ಸಂಗ್ರಹವಿದ್ದು ಇದನ್ನು 6.5 ಮಿಲಿಯನ್ ಟನ್‌ಗೆ ಹೆಚ್ಚಿಸಲು ಯೋಜನೆ ಇದೆ. ದೇಶೀಯ ತೈಲ ಕಂಪನಿಗಳಲ್ಲಿಯೂ ಸಾಕಷ್ಟು ಸಂಗ್ರಹವಿದೆ ಎಂದು ಹೇಳಿದರು.

ವಿದ್ಯುತ್ ವ್ಯವಸ್ಥೆ ಸಮರ್ಪಕ

ಬೇಸಿಗೆ ಆರಂಭವಾಗಿರುವುದರಿಂದ ವಿದ್ಯುತ್ ಬೇಡಿಕೆ



ಹೆಚ್ಚಾಗಿದೆ. ದೇಶದ ವಿದ್ಯುತ್ ಘಟಕಗಳಲ್ಲಿ ಸಾಕಷ್ಟು ಕಲ್ಲಿದ್ದಲು ಸಂಗ್ರಹವಿದೆ ಎಂದು ಹೇಳಿದರು. ಭಾರತವು 2ನೇ ವರ್ಷವೂ 1 ಬಿಲಿಯನ್ ಟನ್‌ಗಿಂತ ಹೆಚ್ಚು ಕಲ್ಲಿದ್ದಲು ಉತ್ಪಾದಿಸಿ ದಾಖಲೆ ನಿರ್ಮಿಸಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿಯೂ ದೇಶ ಮಹತ್ವದ ಸಾಧನೆ ಮಾಡಿದೆ ಎಂದು ಹೇಳಿದರು.

ಕಾಂಗ್ರೆಸ್-ಬಿಜೆಪಿಯಿಂದ ಶಕ್ತಿ ಪ್ರದರ್ಶನ

ರಂಗೇರಿದ ಉಪ ಕಣ



ದಾವಣಗೆರೆ ದಕ್ಷಿಣದಿಂದ ನಾಮಪತ್ರ ಸಲ್ಲಿಸಿದ ಸಮರ್ಥ್. ಸಿಎಂ, ಡಿಸಿಎಂ ಇದ್ದರು.



ಬಾಗಲಕೋಟೆಯಿಂದ ನಾಮಪತ್ರ ಸಲ್ಲಿಸಿದ ಚರಂತಿಮಠ. ಬಿಜೆಪಿ ನಾಯಕರು ಇದ್ದರು.

◆ **ಬಾಗಲಕೋಟೆ:** ಆಡಳಿತ ಕಾಂಗ್ರೆಸ್ ಮತ್ತು ವಿರೋಧ ಪಕ್ಷವಾದ ಬಿಜೆಪಿ ನಾಮಪತ್ರ ಸಲ್ಲಿಕೆಯ ಕೊನೆಯ ದಿನವಾದ ಸೋಮವಾರ ಭರ್ಜರಿಯಾಗಿ ನಾಮಪತ್ರ ಸಲ್ಲಿಕೆ ಮಾಡುವ ಮೂಲಕ ಬಾಗಲಕೋಟೆ ಉಪಸಮರ ಕಣಕ್ಕೆ ರಂಗೇರಿಸಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ



ಡಿಸಿಎಂ ಡಿ.ಕೆ. ಶಿವ ಕುಮಾರ್ ಮತ್ತಿತರ ನಾಯಕರ ನೇತೃತ್ವದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ನಾಮಪತ್ರ ಸಲ್ಲಿಸಿದರೆ, ಇತ್ತ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಸಂಸದ ಗೋವಿಂದ ಕಾರ ಜೋಳ, ಮಾಜಿ ಸಚಿವ ಬಿ. ಶ್ರೀರಾಮುಲು ಮತ್ತಿತರ ನಾಯಕರ ನೇತೃತ್ವದಲ್ಲಿ ಭಾರೀ ಮೆರವಣಿಗೆ ನಡೆಸಿ ಬಿಜೆಪಿಯ ವೀರಣ್ಣ ಚರಂತಿಮಠ ತಮ್ಮ ನಾಮಪತ್ರ ಸಲ್ಲಿಸಿದರು.

> **ಬಿಜೆಪಿಯವರು ಕೇವಲ ಹಿಂದುತ್ವ ವಾದವನ್ನು ಮುಂದಿಡುತ್ತಾರೆಯೇ ಹೊರತು, ಕೃಷ್ಣಾ ಮೇಲ್ದಂಡೆ ಹಂತ-3 ಯೋಜನೆಗೆ ಅವರ ಅಧಿಕಾರಾವಧಿಯಲ್ಲಿ ಯಾವುದೇ ಅಭಿವೃದ್ಧಿ ಮಾಡಲಿಲ್ಲ, ನಮ್ಮ ಸರ್ಕಾರ ಈ ಯೋಜನೆಯಿಂದ ಮುಳುಗಡೆಯಾಗುವ ಜಮೀನಿಗೆ ಸೂಕ್ತ ಪರಿಹಾರ ನೀಡುವ ನಿರ್ಣಯ ಕೈಗೊಂಡಿದೆ.**
>
> ■ ಸಿದ್ದರಾಮಯ್ಯ, ಸಿಎಂ

ಬಿಜೆಪಿ ಚರಂತಿಮಠ, ಕಾಂಗ್ರೆಸ್‌ನಿಂದ ಉಮೇಶ್ ಅಖಾಡಕ್ಕೆ

◆ **ಬಾಗಲಕೋಟೆ:** ಬಿಜೆಪಿಯಿಂದ ವೀರಣ್ಣ ಚರಂತಿಮಠ ಅವರು ಮುಚಖಂಡಿ ವೀರಭದ್ರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಸಿದ ಬಳಿಕ ಹಳೆ ಬಾಗಲಕೋಟೆಯ ಕಣವಿ ವೀರಭದ್ರೇಶ್ವರ ದೇವಸ್ಥಾನದ ಆವರಣದಿಂದ ಬಸವೇಶ್ವರ ವೃತ್ತದ ತನಕ ಭರ್ಜರಿ ಮೆರವಣಿಗೆ ನಡೆಸಿದರು. ➡ಪುಟ ೪

ದಾವಣಗೆರೆಯಲ್ಲಿ ಬೃಹತ್ ಮೆರವಣಿಗೆ

◆ **ದಾವಣಗೆರೆ:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ನಾಮಪತ್ರ ಸಲ್ಲಿಕೆಯ ಅಂತಿಮ ದಿನವಾಗಿದ್ದ ಸೋಮವಾರ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ನಾಯಕರೊಂದಿಗೆ ಬೃಹತ್ ಮೆರವಣಿಗೆ ನಡೆಸಿ ಶಕ್ತಿ ಪ್ರದರ್ಶಿಸುವ ಮೂಲಕ ನಾಮಪತ್ರ ಸಲ್ಲಿಸಿದರು. ➡ಪುಟ ೪

ಇರಾನ್ ವಿದ್ಯುತ್ ಸ್ಥಾವರ ಮೇಲಿನ ದಾಳಿ ಮುಂದಕ್ಕೆ: ಟ್ರಂಪ್

ಕೊಲ್ಲಿ ಸಂಘರ್ಷಕ್ಕೆ ಕೊಂಚ ವಿರಾಮ

◆ **ದುಬೈ:** ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಗಡುವನ್ನು ವಿಸ್ತರಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ



ನಡೆಸಲು ಉದ್ದೇಶಿಸಿದ್ದ ಮಿಲಿಟರಿ ದಾಳಿಯನ್ನು 5 ದಿನ ಮುಂದೂಡಿರುವುದಾಗಿ ಸೋಮವಾರ ಘೋಷಿಸಿದ್ದಾರೆ. ತಾವೇ ವಿಧಿಸಿಕೊಂಡಿದ್ದ ಗಡುವು ಮುಗಿಯುವ ಕೆಲವೇ ಗಂಟೆಗಳ ಮೊದಲು ಟ್ರಂಪ್ ಸಾಮಾಜಿಕ ಜಾಲತಾಣದ ಮೂಲಕ ಈ ಘೋಷಣೆ ಮಾಡಿದ್ದಾರೆ. ನಾಲ್ಕು ವಾರಗಳ ಈ ಸಂಘರ್ಷಕ್ಕೆ ಸಂಪೂರ್ಣ ಪರಿಹಾರದ ನಿಟ್ಟಿನಲ್ಲಿ ನಡೆಯುತ್ತಿರುವ ಚರ್ಚೆಗಳ ಯಶಸ್ಸಿನಿಂದ ನಿರ್ಧಾರ ತೆಗೆದುಕೊಳ್ಳಲಾಗಿದೆ ಎನ್ನಲಾಗಿದೆ.

ಇರಾನ್ ಎಚ್ಚರಿಕೆಗೆ ಮಣಿಯಿತೇ?: ಇರಾನ್‌ನ ಸರ್ಕಾರಿ ದೂರದರ್ಶನ ಈ ಕ್ರಮವನ್ನು ಟೆಹ್ರಾನ್‌ನ ಎಚ್ಚರಿಕೆಗೆ ಅಮೆರಿಕ ಮಣಿದಿದೆ ಎಂದು ಬಣ್ಣಿಸಿದೆ. ಇರಾನ್‌ನ ರೆವಲ್ಯೂಷನರಿ ಗಾರ್ಡ್‌ಗೆ ಸಂಬಂಧಿಸಿದ ಸುದ್ದಿ ಸಂಸ್ಥೆಗಳು, ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವೆ ಯಾವುದೇ ಮಾತುಕತೆ ನಡೆದಿಲ್ಲ ಎಂದು ಪ್ರತಿಪಾದಿಸಿವೆ. ➡ಪುಟ ೪

ಇಂಧನ ಮಾರುಕಟ್ಟೆ ತಲ್ಲಣ

◆ **ಟೆಹ್ರಾನ್:** ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಇರಾನ್ ಸರ್ಕಾರ ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸುವ



ಆಯ್ದ ಹಡಗುಗಳಿಗೆ ಪ್ರತಿ ಪ್ರಯಾಣಕ್ಕೆ 2 ಮಿಲಿಯನ್ ಡಾಲರ್ (ಅಂದಾಜು 18.8 ಕೋಟಿ.ರೂ.) ಭಾರೀ ಸುಂಕ ವಿಧಿಸಲು ನಿರ್ಧರಿಸಿದೆ. ಈ ಕ್ರಮ, ಜಾಗತಿಕ ಹಡಗು ಸಾರಿಗೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಸಿದೆ. ◆ ವಿವರ ಪುಟ ೭

ಗೇಲ್‌ನಲ್ಲಿ ನೋಂದಾಯಿಸಿಕೊಳ್ಳಲು 1 ವಾರ ಕಾಲಾವಕಾಶ

ವಾಣಿಜ್ಯ ಅನಿಲ ನೋಂದಣಿ ಕಡ್ಡಾಯ

◆ **ವಿಧಾನ ಪರಿಷತ್ತು:** ವಾಣಿಜ್ಯ ಎಲ್‌ಪಿಜಿ ಬಳಕೆದಾರರು ವಿಶೇಷವಾಗಿ ಹೋಟೆಲ್‌ಗಳು ಒಂದು ವಾರದೊಳಗೆ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ(ಜಿಎಐಎಲ್) ಕಡ್ಡಾಯವಾಗಿ



ನೋಂದಾಯಿಸಿಕೊಳ್ಳಬೇಕು ಎಂದು ಆಹಾರ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಮೇಲ್ಮನೆಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಪ್ರಮುಖವಾಗಿ ವಾಣಿಜ್ಯ ಉದ್ದೇಶ ಸಿಲಿಂಡರ್ ಪಡೆಯುವ ಸಂಸ್ಥೆಗಳು ಕಡ್ಡಾಯವಾಗಿ ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ ನೋಂದಣಿ ಮಾಡಬೇಕಾಗಿರುವುದು ಅಗತ್ಯವಾಗಿದ್ದು, ಕೇಂದ್ರ ಸರ್ಕಾರ ಇದನ್ನು ಕಡ್ಡಾಯಗೊಳಿಸಿದೆ. ವಾರದಲ್ಲಿ ಈ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಿದರೆ, ಮುಂಬರುವ ದಿನಗಳಲ್ಲಿ ವಾಣಿಜ್ಯಿಕ ಸಿಲಿಂಡರ್ ಪೂರೈಕೆಗೆ ಅನುಕೂಲವಾಗಲಿದೆ ಎಂದರು. ➡ಪುಟ ೪

ಮಧ್ಯಪ್ರವೇಶಕ್ಕೆ ಹೈ ನಿರಾಕರಣೆ

◆ **ಬೆಂಗಳೂರು:** ಅಡುಗೆ ಅನಿಲ ಪೂರೈಕೆಯಲ್ಲಿನ ವ್ಯತ್ಯಯ ಸರಿಪಡಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ



ಕೋರಿ ಬೆಂಗಳೂರು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣೆ ನಡೆಸಲು ಹೈಕೋರ್ಟ್ ಸೋಮವಾರ ನಿರಾಕರಿಸಿತು. ಹಾಲಿ ವಿಚಾರವನ್ನು ಸರ್ಕಾರಕ್ಕೆ ಬಿಡುವುದು ಒಳಿತು ಎಂಬ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ವಾದವನ್ನು ನ್ಯಾ.ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ಪುರಸ್ಕರಿಸಿತು. ➡ಪುಟ ೪

ವಿಧಾನಸೌಧಕ್ಕೆ ಬೀಟೆ ಬಾಗಿಲು

◆ **ಬೆಂಗಳೂರು:** ರಾಜ್ಯದ ಆಡಳಿತ ಮತ್ತು ಪ್ರಜಾಪ್ರಭುತ್ವದ ಶಕ್ತಿಸೌಧ ಈಗ ಮತ್ತಷ್ಟು



ಆಕರ್ಷಕವಾಗಿದೆ. ವಿಧಾನಸೌಧದ ಪಶ್ಚಿಮ ದ್ವಾರಕ್ಕೆ ಬೀಟೆ ಮರದ ಬಾಗಿಲನ್ನು ಅಳವಡಿಸಲಾಗಿದೆ. ಇದನ್ನು ಮಂಗಳವಾರ ಬೆಳಗ್ಗೆ 10 ಗಂಟೆಗೆ ಉದ್ಘಾಟಿಸಲಾಗುತ್ತಿದೆ.

ವಿಧಾನಸಭೆ ಸಭಾಂಗಣದ ಪಶ್ಚಿಮ ದ್ವಾರಕ್ಕೆ ಆಕರ್ಷಕವಾದ ಕೆತ್ತನೆಯುಳ್ಳ ನೂತನ ಬಾಗಿಲು ನಿರ್ಮಿಸಿದಂತೆ ಲೋಕೋಪಯೋಗಿ ಇಲಾಖೆಯ ಮೂಲಕ ವಿಧಾನಸೌಧದ ಸೌಂದರ್ಯಕ್ಕೆ ತಕ್ಕಂತೆ ನೆಲಮಹಡಿಯ ಪಶ್ಚಿಮ ದ್ವಾರದ ಕಬ್ಬಿಣದ ಗ್ರಿಲ್ ಬದಲಾಯಿಸಲಾಗಿದೆ. ಕುಸುರಿ ಕೆತ್ತನೆಯುಳ್ಳ ಬೀಟೆ ಮರದ ಬಾಗಿಲನ್ನು ಅಳವಡಿಸಲಾಗಿದೆ. ಬಾಗಿಲು ನಿರ್ಮಾಣಕ್ಕೆ ಜಿಎಸ್‌ಟಿ ಸೇರಿ ಒಟ್ಟು 84 ಲಕ್ಷ ರೂ. ವೆಚ್ಚವಾಗಿದೆ. ➡ಪುಟ ೪



ಜೀವಂತ ವ್ಯಕ್ತಿಯನ್ನೇ ಸತ್ತಿದ್ದಾನೆಂದು ಘೋಷಣೆ | ಹೈ ಕಿಡಿ

ಬದುಕಿರುವವನಿಗೆ ಮರಣ ಪತ್ರ!

ಬೆಂಗಳೂರಿನ ಪ್ರಕರಣಕ್ಕೆ ನ್ಯಾಯಾಲಯ ತೀವ್ರ ಅಸಮಾಧಾನ

◆ **ಬೆಂಗಳೂರು:** ಒಬ್ಬ ಮನುಷ್ಯ ತಾನು ಜೀವಂತವಾಗಿದ್ದೇನೆ ಎಂದು ಸಾಬೀತುಪಡಿಸಲು ನ್ಯಾಯಾಲಯದ ಮೆಟ್ಟಿಲೇರಬೇಕಾದ ಪರಿಸ್ಥಿತಿ ಬಂದಿರುವುದು ವ್ಯವಸ್ಥೆಯ ಅತಿ ದೊಡ್ಡ ದುರಂತ. ಬದುಕಿರುವ ವ್ಯಕ್ತಿಯ ಹೆಸರಿನಲ್ಲಿ ಮರಣ ಪ್ರಮಾಣ ಪತ್ರ ನೀಡಿ, ಆತನಿಗೆ ಪಡಿತರವೂ ಸಿಗದೆ ಪರದಾಡುವಂತೆ ಮಾಡಿದ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಅರ್ಜಿದಾರರು ಜೀವಂತವಾಗಿದ್ದು, ಅವರ ಹೆಸರಿನಲ್ಲಿ ನೀಡಿರುವ ಮರಣ ಪ್ರಮಾಣ ಪತ್ರ ರದ್ದುಪಡಿಸುತ್ತಿಲ್ಲ ಎಂದರೆ ಹೇಗೆ? ಎಂದು ಕಿಡಿಕಾರಿರುವ ಹೈಕೋರ್ಟ್, ಬುಧವಾರದೊಳಗೆ ಮರಣ ಪ್ರಮಾಣ ಪತ್ರ ರದ್ದುಪಡಿಸಿ ರುವ ಹಿಂಬರಹ ಸಲ್ಲಿಸಬೇಕು ಎಂದು ಜಿಬಿಎಯ ಜನನ ಮತ್ತು ಮರಣ ನೋಂದಣಾಧಿಕಾರಿಗೆ ತಾಕೀತು ಮಾಡಿದೆ. ಬೆಂಗಳೂರಿನ ಚಿಕ್ಕಪೇಟೆಯ ವಲಯ ಕಚೇರಿಯ ಜನನ ಮತ್ತು ಮರಣ ನೋಂದಣಾಧಿಕಾರಿಯು 2025ರ ಏ.23ರಂದು ನೀಡಿರುವ ತಾತ್ಕಾಲಿಕ ಮರಣ ಪ್ರಮಾಣ ಪತ್ರವನ್ನು ರದ್ದುಪಡಿಸಲು ನಿರ್ದೇಶಿಸಬೇಕು ಎಂದು ಕೋರಿ ಡಿ.ಮೆಹಬೂಬ್ ಬಾಷಾ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾ.ಸಚಿನ್ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ನಡೆಸಿತು. ➡ಪುಟ ೪



ವಿವರಣೆ ಸಲ್ಲಿಸಲು ಗಡುವು

ಬುಧವಾರದೊಳಗೆ ಮರಣ ಪ್ರಮಾಣ ಪತ್ರ ನೀಡಿರುವುದನ್ನು ಹಿಂಪಡೆದು ನ್ಯಾಯಾಲಯಕ್ಕೆ ತಿಳಿಸಬೇಕು. ಜನನ ಮತ್ತು ಮರಣ ನೋಂದಣಾಧಿಕಾರಿಯು ಈ ಸಂಬಂಧ ವಿವರಣೆ ಸಲ್ಲಿಸಬೇಕು ಎಂದು ಆದೇಶಿಸಿದೆ. ಅಲ್ಲದೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಜಿಬಿಎ ಜನನ ಮತ್ತು ಮರಣ ನೋಂದಣಾಧಿಕಾರಿ, ಕಿದ್ವಾಯಿ ಸ್ಮಾರಕ ಆಸ್ಪತ್ರೆಯ ಆಡಳಿತಾಧಿಕಾರಿ, ಚಿಕ್ಕಪೇಟೆಯ ವೈದ್ಯಾಧಿಕಾರಿ, ಜಿಬಿಎಯ ಸಾಂಖ್ಯಿಕ ವಿಭಾಗದ ಜಂಟಿ ನಿರ್ದೇಶಕರಿಗೆ ಹೈಕೋರ್ಟ್ ನೋಟಿಸ್ ಜಾರಿಗೊಳಿಸಿದೆ.

ಎಐಎಡಿಎಂಕೆ 178ರಲ್ಲಿ, ಬಿಜೆಪಿ 23ರಲ್ಲಿ ಸ್ಪರ್ಧೆ



◆ **ಚೆನ್ನೈ:** ತಮಿಳುನಾಡಿನ ಮುಂಬರುವ ವಿಧಾನಸಭಾ ಚುನಾವಣೆಗೆ ಸೀಟು ಹಂಚಿಕೆಯನ್ನು ಎನ್‌ಡಿಎ ಅಂತಿಮಗೊಳಿಸಿದೆ. ಇದರಂತೆ ವಿಧಾನಸಭೆ 234 ಕ್ಷೇತ್ರಗಳ ಪೈಕಿ 178 ಸ್ಥಾನಗಳಿಗೆ ಎಡಿಎಂಕೆ ಸ್ಪರ್ಧಿಸಲಿದೆ. ಬಿಜೆಪಿ 27 ಸ್ಥಾನಗಳಲ್ಲಿ ಸ್ಪರ್ಧಾ ಕಣಕ್ಕಿಳಿಯಲಿದೆ. ಇತರ ಮಿತ್ರಪಕ್ಷಗಳಲ್ಲಿ ಪಿಎಂಕೆ 18 ಸ್ಥಾನಗಳಿಗೂ, ಎಎಂಎಂಕೆ 11 ಸ್ಥಾನಗಳಿಗೂ ಸ್ಪರ್ಧಿಸಲಿದೆ. ◆ ವಿವರ ಪುಟ ೭

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,30,000** (2,45,000) ಅಪರಂಜಿ ಚಿನ್ನ: **1,35,650** (1,45,970) ಆಭರಣ ಚಿನ್ನ: **1,24,350** (1,38,800) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **72,696** (1,836↓) ಎನ್‌ಎಸ್‌ಇ **22,512** (601↓)

$1 = ₹93.72

ಕಿರುಸುದ್ದಿ

ಇಂದಿನಿಂದ ಕಲಾಸಂಗಮ ನಾಟಕೋತ್ಸವ



ಧಾರವಾಡ: ಕಲಾಸಂಗಮ ಸಂಸ್ಥೆ ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಎರಡು ದಿನಗಳ ನಾಟಕೋತ್ಸವ ಮಾ.24 ಮತ್ತು 25ರಂದು ಸಂಜೆ 5.30ಕ್ಕೆ ರಂಗಾಯಣದ ಸಾಂಸ್ಕೃತಿಕ ಸಮುಚ್ಚಯ ಭವನದಲ್ಲಿ ಹಮ್ಮಿಕೊಂಡಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಲಾಸಂಗಮ ಸಂಸ್ಥೆ ಅಧ್ಯಕ್ಷ ಪ್ರಭು, ಕಲಾವಿದ ಸುಭಾಷ ಶಿಂಧೆ ಉದ್ಘಾಟಿಸುವರು. ಉ.ಕ. ಚಲನಚಿತ್ರ ವಾಣಿಜ್ಯ ಮಂಡಳಿಯ ಕಾರ್ಯದರ್ಶಿ ಮಂಜುನಾಥ ಹೆಗೇದಾರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕನ್ನಡ-ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸದಾನಂದ ಡಂಗನವರ, ಬನಶಂಕಿ ಭವನದ ಅಧ್ಯಕ್ಷ ಶಿವಾನಂದ ಲೋಲೆನವರ, ವಕೀಲ ಪ್ರಕಾಶ ಉಡಕೇರಿ ಪಾಲ್ಗೊಳ್ಳುವುದಾಗಿಯೂ ಹೇಳಿದರು.

ರಂಗಭೂಮಿ ಹಿರಿಯ ಕಲಾವಿದೆ ಡಾ.ಹೆಲನ್ ಮೈಸೂರ ಅವರಿಂದ ರಂಗಚಿಂತನೆ ನಡೆಸಲಿದ್ದು, ಜಾನಪದ ಕಲಾವಿದ ಪ್ರಭು ಕುಂದರಗಿ ತಂಡದ ಜಾನಪದ ಗೀತೆಗಳ ಪ್ರಸ್ತುತಿ ನಂತರ 'ಎಲ್ಲರಂತಲ್ಲ ನಾವ ಅವ್ವ' ನಾಟಕ ಪ್ರದರ್ಶನವೂ ನಡೆಯಲಿದೆ ಎಂದರು.

ಮಾ.25ರ ಸಂಜೆ 5.30ಕ್ಕೆ ಸಮಾರೋಪದಲ್ಲಿ ಕವಿವಿ ಪ್ರಸಾರಂಗದ ವಿಶ್ರಾಂತ ನಿರ್ದೇಶಕ ಡಾ.ಚಂದ್ರಶೇಖರ ರೊಟ್ಟಿಗವಾಡ ಅಧ್ಯಕ್ಷತೆ ವಹಿಸುವರು. ವಕೀಲ ಉದಯಕುಮಾರ ದೇಸಾಯಿ, ಡಾ.ಕಲ್ಮೇಶ ಹಾವೇರಪೇಟ್ ಪಾಲ್ಗೊಳ್ಳುವುದಾಗಿ ಹೇಳಿದರು. ಕವಿಸಂ ಕೋಶಾಧ್ಯಕ್ಷ ಸತೀಶ ತುರಮರಿ, ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಸಂಜೀವ ದುಮಕ್ಕನಾಳ ಭಾಗವಹಿಸುವರು. ಮಕ್ಕಳಿಂದ ನೃತ್ಯಗಳು ಜರಗಲಿವೆ. ಬಳಿಕ 'ಅಂಬಿಗರ ಚೌಡಯ್ಯ' ನಾಟಕ ಪ್ರದರ್ಶನ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಡಾ. ಹೆಲನ್ ಮೈಸೂರ, ಡಾ. ಕಲ್ಮೇಶ ಹಾವೇರಿಪೇಟ್, ಅರವಿಂದ ಮುಳಗುಂದ, ಮಕಬುಲ್ ಹುಣಸಿಕಟ್ಟಿ ಇದ್ದರು.

ನಿಗಮಕ್ಕೆ 1 ಸಾವಿರ ಕೋಟಿ ರೂ. ಅನುದಾನ ನೀಡಲಿ

ಹುಬ್ಬಳ್ಳಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಬೌದ್ಧ ಅಭಿವೃದ್ಧಿ ನಿಗಮವನ್ನು ಘೋಷಣೆ ಮಾಡಿದ ಹಿನ್ನೆಲೆ ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ. 1 ಸಾವಿರ ಕೋಟಿ ರೂ. ನಿಗಮಕ್ಕೆ ಅನುದಾನ ನೀಡಬೇಕು ಎಂದು ವಿಶ್ವ ಬಹುಜನ ಮತ್ತು ಸಂವಿಧಾನದ ರಕ್ಷಾ ಸೇನಾದ ರಾಷ್ಟ್ರ ಘಟಕದ ಅಧ್ಯಕ್ಷ ಸದಾನಂದ ತೆರದಾಳ ಮತ್ತು ಕರ್ನಾಟಕ ಸಮತಾ ಸೈನಿಕ ದಳದ ರಾಜ್ಯ ಉಪಾಧ್ಯಕ್ಷ ಶಂಕರ ಅಜಮನಿ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಬಿ.ಆರ್. ಅಂಬೇಡ್ಕರ್ ಹಾಗೂ ಸಮಾಜ ಸುಧಾರಕರ ಪುಸ್ತಕವನ್ನು ಉರ್ದುಭಾಷೆಯಲ್ಲಿ ಅನುವಾದಿಸುವುದು. ಬಾಬಾ ಸಾಹೇಬರು ಕರ್ನಾಟಕದ ಕಲಬುರ್ಗಿ, ವಿಜಯಪುರ, ಬೆಳಗಾವಿ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಭೇಟಿ ನೀಡಿದ ಸ್ಥಳಗಳಿಗೆ ಬಿ.ಆರ್. ಅಂಬೇಡ್ಕರ್ ಹೆಸರಿನಲ್ಲಿ ಕ್ರೈಸ್ತ್ ಸಂಸ್ಥೆ ಸಹಯೋಗದಲ್ಲಿ ಕ್ರೈಸ್ತ್ ವಸತಿ ಶಾಲೆ ಪ್ರಾರಂಭ, ವಿದ್ಯಾರ್ಥಿ ಆಗುತ್ತಿರುವ ದೌರ್ಜನ್ಯ ತೆಗೆ ರೋಹಿತ್ ವೇಮುಲ ಕಾಯ್ದೆ, ಅಂತರಜಾತಿ ವಿವಾಹದ ದೌರ್ಜನ್ಯ ತಡೆಗೆ ಇವನಮ್ಮವ ಕಾಯ್ದೆ, ಬೌದ್ಧ ಧಮ್ಮಾಚಾರಿಗಳಿಗೆ 6 ಸಾವಿರ ಗೌರವ ಧನ ನೀಡುವುದು ಸೇರಿ ಅನೇಕ ಘೋಷಣೆ ಮಾಡಿರುವುದು ಸಂತಸ ತಂದಿದೆ ಎಂದರು.

ಶಹಾಪೂರದ ಬುದ್ಧ ಮಲಗಿದ ಬೆಟ್ಟದ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಬೇಕು. ಹುಬ್ಬಳ್ಳಿ ಸಮೀಪದ ಬೂದನಗುಡ್ಡದ ಹೆಸರನ್ನು ಬದಲಿಸಿ ಬುದ್ಧನ ಗುಡ್ಡವೆಂದು ನಾಮಕರಣ ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಎಸ್.ಪಿ.ಹುಬ್ಬಳ್ಳಿಕರ, ರಮೇಶ ವಡ್ಡಪಲ್ಲಿ, ಉಮೇಶ ಚಲವಾದಿ, ಇಂದುಮತಿ ಶಿರಗಾವಿ ಇದ್ದರು.

ನಿಧನ ಸುದ್ದಿ

ಅನ್ನಪೂರ್ಣಾ ಟಗರಪುರ



ಧಾರವಾಡ: ಇಲ್ಲಿಯ ಜಯನಗರ ನಿವಾಸಿ ಅನ್ನಪೂರ್ಣಾ ಸತೀಶ ಟಗರಪುರ(82) ಭಾನುವಾರ ನಿಧನರಾದರು. ಮೃತರಿಗೆ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಳಗವಿದೆ.



ಹುಬ್ಬಳ್ಳಿ: ಮಹಾನಗರ ಪಾಲಿಕೆ ವ್ಯಾಪ್ತಿಯ ನಂ. 67 ರಲ್ಲಿ ಸ್ವಚ್ಛ ಸಂಡೇ ಅಭಿಯಾನ ಅಂಗವಾಗಿ ಗಬ್ಬೂರಗಲ್ಲಿ, ಭೂಸಪೇಟ, ಅಕ್ಕಿಹೊಂಡ, ಶಿಂಪಿಗಲ್ಲಿ, ರಾಮದೇವ ಹಾಗೂ ಹರಿ ಮಂದಿರ ಹಾಗೂ ಇತರ ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯ ಮಾಡಲಾಯಿತು. ಪಾಲಿಕೆ ಸದಸ್ಯ ಶಿವು ಮೆಣಸಿನಕಾಯಿ, ವಲಯ ಸಹಾಯಕ ಆಯುಕ್ತ ಜಗದೀಶ ದೊಡ್ಡಮನಿ, ನೂರಂದಪ್ಪ ಭಜಂತ್ರಿ, ಲಕ್ಷ್ಮಿ ಗುಡಿಹಾಳ, ಮಂಜು ಕೆಂಪಣ್ಣನವರ, ಆನಂದ ನವಲಗುಂದ, ಶೇಕಪ್ಪಾ ನೀಡಗುಂದಿ, ರಾಜು ಕೋರ್ಯಾಣಮಠ ಉಪಸ್ಥಿತರಿದ್ದರು.

ಪಠ್ಯ ಪುಸ್ತಕಕ್ಕೆ ಮಾತ್ರ ಸೀಮಿತವಾಗದಿರಿ

ಹುಬ್ಬಳ್ಳಿ: ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯಲ್ಲಿ ಎಸ್. ಎಸ್ ಶೆಟ್ಟರ್ ಫೌಂಡೇಶನ್ ವತಿಯಿಂದ ಹಮ್ಮಿಕೊಂಡಿದ್ದ ಯುವ ಸಂವಾದ ಕಾರ್ಯಕ್ರಮದಲ್ಲಿ ಬಿಜೆಪಿ ಯುವ ಮುಖಂಡರಾದ ಸಂಕಲ್ಪ ಶೆಟ್ಟರ್ ಅವರು ಭಾಗಿಯಾಗಿ, ಶೂಟರ್‌ಗಳೊಂದಿಗೆ ಅವರ ಕ್ರೀಡೆ ಮತ್ತು ಭವಿಷ್ಯದ ಗುರಿಗಳ ಕುರಿತು ಚರ್ಚಿಸಿ, ಸಲಹೆ ಸೂಚನೆಗಳನ್ನು ನೀಡಿದರು.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಕ್ರೀಡಾಪಟುಗಳೊಂದಿಗೆ ಸಂವಾದ ನಡೆಸಲು ಅವಕಾಶ ಕಲ್ಪಿಸಿ, ಸ್ಫೂರ್ತಿ ತುಂಬುವುದರ ಜೊತೆಗೆ ಅವರ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರಗಳನ್ನು ಸಹ ಕಂಡುಕೊಳ್ಳಲು ಸಹಾಯವಾಯಿತು.

ಕೇವಲ ಪಠ್ಯ ಪುಸ್ತಕಕ್ಕೆ ಮಾತ್ರ ಸೀಮಿತವಾಗಿರದೆ, ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ಇಂದಿನ ಯುವಕರು ಆಸಕ್ತಿ ಕ್ರೀಡೆಗಳಲ್ಲಿಯೂ ಸಹ ಭಾಗಿಯಾಗಿ ಯಶಸ್ವಿಯಾಗಬೇಕು ಎಂದರು. ಜಿಲ್ಲಾ ಮಟ್ಟದಿಂದ ರಾಜ್ಯ- ರಾಷ್ಟಮಟ್ಟಕ್ಕೆ ಅಂತಾರಾಷ್ಟ್ರೀಯ ಮಟ್ಟಕ್ಕೆ ತಲುಪಿ, ದೇಶದ ಕೀರ್ತಿ ಪತಾಕೆಯನ್ನು ಎತ್ತರಕ್ಕೆ ಹಾರಿಸಬೇಕು. ಎಲ್ಲ ಸಾಧನೆಗಳಿಗೂ ಅಡಿಪಾಯ ಕನಸುಗಳು, ಕನಸು ಕಾಣಬೇಕು ಕಂಡ ಕನಸನ್ನು ನನಸಾಗಿಸಿಕೊಳ್ಳಲು ಹಗಲಿರುಳು ಶ್ರಮಿಸಬೇಕು, ಆಗ ವ್ಯಕ್ತಿ ಯಶಸ್ವಿಯಾಗಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯ ಮುಖ್ಯಸ್ಥ ರವಿಚಂದ್ರ ಬಾಳೆಹೊಸೂರು, ಎಸ್.ಎಸ್ ಶೆಟ್ಟರ್ ಫೌಂಡೇಶನ್ ಸದಸ್ಯರು, ಶೂಟರ್‌ಗಳು, ತರಬೇತುದಾರರು ಹಾಗೂ ಪಾಲಕರು ಉಪಸ್ಥಿತರಿದ್ದರು.



ಹುಬ್ಬಳ್ಳಿ: ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿಯಲ್ಲಿ ಎಸ್. ಎಸ್ ಶೆಟ್ಟರ್ ಫೌಂಡೇಶನ್ ವತಿಯಿಂದ ಹಮ್ಮಿಕೊಂಡಿದ್ದ ಯುವ ಸಂವಾದ ಕಾರ್ಯಕ್ರಮದಲ್ಲಿ ಬಿಜೆಪಿ ಯುವ ಮುಖಂಡರಾದ ಸಂಕಲ್ಪ ಶೆಟ್ಟರ್ ಅವರು ಭಾಗಿಯಾಗಿ, ಶೂಟರ್‌ಗಳೊಂದಿಗೆ ಅವರ ಕ್ರೀಡೆ ಮತ್ತು ಭವಿಷ್ಯದ ಗುರಿಗಳ ಕುರಿತು ಚರ್ಚಿಸಿ, ಸಲಹೆ ಸೂಚನೆಗಳನ್ನು ನೀಡಿದರು.

ಪಾಲಿಕೆ ಸದಸ್ಯರಿಗೆ ವಿಶೇಷ ಕಾರ್ಯಾಗಾರ

ಮುನ್ಸಿಪಲ್ ಬಾಂಡ್ ಅಭಿವೃದ್ಧಿಗೆ ಪೂರಕ

ಹುಬ್ಬಳ್ಳಿ: ನಗರದ ಖಾಸಗಿ ಹೋಟೆಲ್‌ವೊಂದರಲ್ಲಿ ಹು-ಧಾ ಮಹಾನಗರ ಪಾಲಿಕೆ ಹಾಗೂ ಜಿಐಝಡ್ ಇಂಡಿಯಾ ಸಂಸ್ಥೆ ಸಹಯೋಗದಲ್ಲಿ ಮುನ್ಸಿಪಲ್ ಬಾಂಡ್‌ಗಳು ಮತ್ತು ನವೀನ ನಗರ ಹಣಕಾಸು ವ್ಯವಸ್ಥೆ ಕುರಿತು ಮಹಾನಗರ ಪಾಲಿಕೆ ಸದಸ್ಯರಿಗಾಗಿ ವಿಶೇಷ ಕಾರ್ಯಾಗಾರಕ್ಕೆ ಸೋಮವಾರ ಮೇಯರ್ ಜ್ಯೋತಿ ಪಾಟೀಲ ಹಾಗೂ ಸದಸ್ಯರು ಚಾಲನೆ ನೀಡಿದರು.

ಎ.ಕೆ ಕ್ಯಾಪಿಟಲ್ಸ್‌ನ ಪ್ರತಿನಿಧಿ ಚಂದ್ರಶೇಖರ್ ಮಾತನಾಡಿ, ಕಳೆದ ಐದಾರು ವರ್ಷದಲ್ಲಿ ಹಲವು ರಾಜ್ಯಗಳ ಕಾರ್ಪೋರೇಶ್‌ನ್‌ಗಳು ಮುನ್ಸಿಪಲ್ ಬಾಂಡ್‌ಗಳಿಂದ ಸಾಲ ಪಡೆದು ಉತ್ತಮ ಯೋಜನೆಗಳ ಮೂಲಕ ಅಭಿವೃದ್ಧಿ ಹೊಂದುತ್ತಿವೆ. ಸರ್ಕಾರಕ್ಕೆ ಅಲಂಬಿತವಾಗದೆ ಸ್ವಾವಲಂಬಿಯಾಗಲು ಅನುಕೂಲವಾಗಿದೆ ಎಂದು ತಿಳಿಸಿದರು.

ತ್ವರಿತವಾಗಿ ಮುನ್ಸಿಪಲ್ ಬಾಂಡ್ ಮೂಲಕ ವಿಳಂಬವಿಲ್ಲದೆ ಬಂಡವಾಳ ಪಡೆಯಬಹುದು. ಅಂದಾಜು ನೂರು ಕೋಟಿ ಬಾಂಡ್‌ಗೆ 13 ಕೋಟಿ ಪ್ರೋತ್ಸಾಹಧನ ಸಿಗಲಿದೆ. ಗ್ರೀನ್ ಮತ್ತು ಯೆಲ್ಲೊ ಬಾಂಡ್‌ಗೆ 10 ಕೋಟಿ ಪ್ರೋತ್ಸಾಹಧನ ದೊರೆಯಲಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಅನುಕೂಲವಾಗುತ್ತದೆ ಎಂದರು.



» ಎ.ಕೆ ಕ್ಯಾಪಿಟಲ್ಸ್‌ನ ಪ್ರತಿನಿಧಿ ಚಂದ್ರಶೇಖರ್ ಅಭಿಪ್ರಾಯ

ಆನ್‌ಲೈನ್‌ನಲ್ಲಿ ಮಾಹಿತಿ

ಕೇರ್ ಎಡ್ಜ್ ಸಂಸ್ಥೆಯ ಕೇದಾರ ದೇಶಪಾಂಡೆ ಅವರು ಗ್ರೀನ್ ಬಾಂಡ್, ಕ್ಲೈಮೇಟ್ ಬಾಂಡ್ಸ್ ಇನಿಷಿಯೇಟಿವ್‌ನ ದಕ್ಷಿಣ ಏಷ್ಯಾ ಮುಖ್ಯಸ್ಥೆ ನೇಹಾ ಕುಮಾರ್ ಅವರು ಕ್ಲೈಮೇಟ್ ಬಾಂಡ್ ಕುರಿತು ಆನ್‌ಲೈನ್ ಮೂಲಕ ಮಾಹಿತಿ ಒದಗಿಸಿದರು.

ಸಮಿತಿ ರಚನೆ ಅವಶ್ಯಕ

ಮುನ್ಸಿಪಲ್ ಬಾಂಡ್ ಪಡೆಯಲು ಪಾಲಿಕೆಯ ಖಾತೆ ಆಡಿಟ್ ಆಗಬೇಕು. ಬಳಿಕ ಮರ್ಚಂಟ್ ಬ್ಯಾಂಕರ್ ಅದನ್ನು ಪರಿಶೀಲಿಸಿಸಬೇಕು. ಪಾಲಿಕೆ ಸಮಿತಿ ರಚಿಸುವ ಮೂಲಕ ಯೋಜನೆ ಆಯ್ಕೆ ಮಾಡಿ ಸಾಮಾನ್ಯ ಸಭೆಯಲ್ಲಿ ಠರಾವು ಪಾಸ್ ಮಾಡಬೇಕು. ಅಲ್ಲಿಂದ ಸರ್ಕಾರಕ್ಕೆ, ಸೆಬಿಗೆ ಹೋಗುತ್ತದೆ. ಲೀಸ್ಟ್ ಆದ ನಂತರ ಲೋನ್ ಸಿಗುತ್ತದೆ ಎಂದು ಪಾಲಿಕೆ ಆಯುಕ್ತ ಡಾ. ರುದ್ರೇಶ್ ಘಾಳಿ ತಿಳಿಸಿದರು. ಹಳೇ ತ್ಯಾಜ್ಯ ಸಂಸ್ಕರಣೆ, ಸೌರಶಕ್ತಿ ಯೋಜನೆ, ಸವದತ್ತಿಯಿಂದ ಧಾರವಾಡಕ್ಕೆ ನೀರು ಪೂರೈಸುವ ಹಳೇ ಪೈಪ್‌ಲೈನ್ ಬದಲಿಸುವುದು, ನೀರಸಾಗರ ಜಲಾಶಯದಿಂದ ಹೆಚ್ಚುವರಿಯಾಗಿ 40 ಎಂಎಲ್‌ಡಿ ನೀರು ಪಡೆಯುವುದು ಸೇರಿ ವಿವಿಧ ಯೋಜನೆಗಳನ್ನು ಮುನ್ಸಿಪಲ್ ಬಾಂಡ್ ಮೂಲಕ ಜಾರಿಗೊಳಿಸಬಹುದು ಎಂದರು.

ಪಾರದರ್ಶಕವಾಗಿ ಮುನ್ಸಿಪಲ್ ಬಾಂಡ್‌ಗಳ ಮೂಲಕ ಬಂಡವಾಳ ಸಂಗ್ರಹಿಸಬಹುದು. ಇದು ಆರ್ಥಿಕ ಶಿಸ್ತಿಗೆ ಬಹಳ ಅನುಕೂಲವಾಗಿದೆ. 1000 ಕೋಟಿಗೆ 100 ಕೋಟಿ ಪ್ರೋತ್ಸಾಹಧನ ಸಿಗುತ್ತದೆ ಎಂದರು.

ಪವರ್‌ಟೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಅಧ್ಯಕ್ಷೆ ಸುಜಾತಾ ಶ್ರೀಕುಮಾರ್ ಮಾತನಾಡಿ, ಕೇಂದ್ರ ಸರ್ಕಾರ 2005ರಲ್ಲಿ ಮುನ್ಸಿಪಲ್ ಬಾಂಡ್ ಬಗ್ಗೆ ಮಾರ್ಗಸೂಚಿ ರೂಪಿಸಿದೆ. ಲಕ್ನೊ, ಘಾಜಿಯಾಬಾದ್, ಸೂರತ್, ವಡೋದರಾ ಸೇರಿ 32 ನಗರ ಸ್ಥಳೀಯ ಸಂಸ್ಥೆಗಳು ಮುನ್ಸಿಪಲ್ ಬಾಂಡ್ ಮೂಲಕ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿವೆ ಎಂದರು.

ಸ್ಥಳೀಯ ಸಂಸ್ಥೆಗಳಿಗೆ ಮುನ್ಸಿಪಲ್ ಬಾಂಡ್ ಮೂಲಕ ಬಂಡವಾಳ ಸಂಗ್ರಹಿಸಿ ಯೋಜನೆಗೆ ಆಯ್ಕೆ ಮಾಡುವ ಅಧಿಕಾರವಿದೆ. ಜನರಿಗೆ ಅನುಕೂಲವಾಗುವ ಯೋಜನೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ಹೇಳಿದರು.

ಉಪಮೇಯರ್ ಸಂತೋಷ ಚವ್ಹಾಣ್, ಪಾಲಿಕೆಯ ಸಭಾನಾಯಕ ಈರೇಶ ಅಂಚಟಗೇರಿ, ವಿಪಕ್ಷ ನಾಯಕ ಇಮ್ರಾನ್ ಯಲಿಗಾರ, ಸದಸ್ಯರಾದ ಶಿವು ಹಿರೇಮಠ, ರಾಧಾಬಾಯಿ ಸಫಾರೆ, ರಾಜಣ್ಣ ಕೊರವಿ, ಚಂದ್ರಿಕಾ ಮೇಸ್ತ್ರಿ, ಪಾಲಿಕೆ ಉಪ ಆಯುಕ್ತ ಆರ್. ವಿಜಯಕುಮಾರ್ ಇದ್ದರು.

ಸಾಹಿತ್ಯಕ್ಕೆ ದಾಸಿಮಯ್ಯರ ಕೊಡುಗೆ ಅಪಾರ

ಧಾರವಾಡ: ವಚನ ಸಾಹಿತ್ಯ ರಚಿಸಿ, ಸಮಾಜಕ್ಕೆ ಮಾರ್ಗದರ್ಶನ ನೀಡಿದ ಶರಣ ದೇವರ ದಾಸಿಮಯ್ಯ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಹು-ಧಾ ಮಹಾನಗರ ವ್ಯಾಪ್ತಿಯ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಕಾಶ ಹಳಿಯಾಳ ಹೇಳಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಸೋಮವಾರ ಜರುಗಿದ ಆದ್ಯ ವಚನಕಾರ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದಾಸಿಮಯ್ಯರ ವಚನಗಳು ಸರಳತೆ, ಸಮಾನತೆ, ಭಕ್ತಿ ತತ್ವಗಳನ್ನು ಸಾರುತ್ತವೆ. ಜಾತಿಬೇಧ ವಿರೋಧಿಸಿದ ಅವರು, ಮಾನವೀಯ ಮೌಲ್ಯಗಳನ್ನು ಉತ್ತೇಜಿಸಿದ ಮಹಾನ್ ಸಂತರು. ಅವರ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ತಿಳಿಸಿದರು.

ಬೆಂಗಳೂರು ದೇವಾಂಗ ಸಮಾಜದ ಸಂಘಟಿಕ ರವೀಂದ್ರ ಪಾಟೀಲ ಮಾತನಾಡಿ, ಮಕ್ಕಳನ್ನು ಕೇವಲ ಆಟ-ಪಾಠಗಳಲ್ಲೇ ತೊಡಗಿಸುವುದರಿಂದ ಅವರ ಮನರಂಜನೆ ಮತ್ತು ಮೂಲಭೂತ ಶಿಕ್ಷಣ ಬೆಳೆಯುತ್ತದೆ. ಮೂಲ ವೃತ್ತಿಗಳ ಮರೆಯದಂತೆ ಹೇಳಿದರು.

ದೇವಾಂಗ ಸಮಾಜ ಎದುರಿಸಿದ ಸವಾಲುಗಳು ಏನು? ಅವರು ಹೇಗೆ ಶ್ರಮಪಟ್ಟು ಜೀವನ ನಡೆಸಿದರು ಎಂಬುದು ಮಕ್ಕಳಿಗೆ ವಿವರಿಸಿದ ಅವರು, ಶ್ರಮದ ಮೌಲ್ಯ ಅರಿಯಬೇಕು. ಪ್ರಾಮಾಣಿಕತೆ ಮತ್ತು ಜವಾಬ್ದಾರಿತನದ ಗುಣಗಳು ಬೆಳೆಸಿಕೊಳ್ಳಲು ತಿಳಿಸಿದರು.

ದೇವಾಂಗ ಸಂಘ ಅಧ್ಯಕ್ಷ ಡಾ. ಕೆ.ಜಿ.ಬ್ಯಾಕೋಡಿ, ದೇವಾಂಗ ಸಂಘ ಅಧ್ಯಕ್ಷ ಲಕ್ಷ್ಮೀಕಾಂತ ಇಟ್ನಾಳ, ಧಾರವಾಡ ದೇವಾಂಗ ನೇಕಾರ ಅಭಿವೃದ್ಧಿ ಸಂಘದ ಅಧ್ಯಕ್ಷ ರವಿ ಲೋಲಿ, ಗರಗ ದೇವಾಂಗ ಸಮಾಜದ ಅಧ್ಯಕ್ಷ ಜಗದೀಶ ಜವಳಿ ಮಾತನಾಡಿದರು.

ದೇವರ ದಾಸಿಮಯ್ಯ ಅವರ ಜೀವನ ಚರಿತ್ರೆ ಕುರಿತು ಧಾರವಾಡ ಹಿರೇಮಲ್ಲೂರ ಈಶ್ವರನ ಮಹಾವಿದ್ಯಾಲಯ ಅಧ್ಯಾಪಕ ಡಾ. ಈರಣ್ಣ ಇಂಜಗನೇರಿ ವಿಶೇಷ ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ದೇವಾಂಗ ಶಕ್ತಿ ಮಹಿಳಾ ಮಂಡಳದ ಅಧ್ಯಕ್ಷೆ ಡಾ.ರಾಧಾ ಅಶೋಕ ಗೌಡರ, ಬನಶಂಕರಿ ದೇವಾಂಗ ಸಂಘದ ಅಧ್ಯಕ್ಷ ಬಸವರಾಜ ಕುಸುಬಿ, ಮುಖಂಡ ರಾಮು ತಾವರೆ ಉಪಸ್ಥಿತರಿದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಸ್ವಾಗತಿಸಿದರು. ರವಿ ಕುಲಕರ್ಣಿ ನಿರೂಪಿಸಿ, ವಂದಿಸಿದರು.



ತಪ್ಪದೇ ಮತದಾರ ಪಟ್ಟಿ ಪರಿಷ್ಕರಿಸಲಿ: ಮಜ್ಜಗಿ



ಹುಬ್ಬಳ್ಳಿ: ಇಲ್ಲಿಯ ಕಾರವಾರ ರಸ್ತೆಯ ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ಎಸ್‌ಐಆರ್ ಕುರಿತು ಸೋಮವಾರ ವಿಶೇಷ ಸಭೆ ನಡೆಯಿತು.

ಹು-ಧಾ ಮಹಾನಗರ ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ ಮಾತನಾಡಿ, ನಿಜವಾದ ಭಾರತೀಯ ಪ್ರಜೆ ಮತದಾನದಿಂದ ಹೊರಗೆ ಉಳಿಯಬಾರದು. 2002 ರಲ್ಲಿ ಎಸ್‌ಐಆರ್ ನಡೆದಿತ್ತು. ನಂತರ ಈಗ ನಡೆಯುತ್ತಿದೆ. ಆದ್ದರಿಂದ ತಪ್ಪದೆ ಎಲ್ಲ ಮತದಾರ ಪಟ್ಟಿ ಪರಿಷ್ಕರಿಸಬೇಕು ಎಂದು ತಿಳಿಸಿದರು.

ಧಾರವಾಡ ಜಿಲ್ಲಾ ಎಸ್‌ಐಆರ್ ಸಂಯೋಜಕ ಸಂಜಯ ಕಪಟಕರ ಮಾತನಾಡಿ, ಇದೇ ಎಪ್ರಿಲ್ 1 ರಿಂದ ನಡೆಯುವ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ವಿಶೇಷಬಾಗಿ ಬಿಎಲ್‌ಎ 1 ಬಿಎಲ್‌ಎ-2 ಗಳ ಪಾತ್ರ ಹೆಚ್ಚಾಗಿದೆ. ಪಕ್ಷದ ಎಲ್ಲ ಪ್ರಮುಖರು ಮನೆ ಮನೆಗೆ ತೆರಳಿ ಪರಿಷ್ಕರಣೆ ಮಾಡಬೇಕು ಎಂದು ಹೇಳಿದರು.

ಮೇಯರ್ ಜ್ಯೋತಿ ಪಾಟೀಲ, ಮಾಜಿ ಶಾಸಕ ಅಶೋಕ ಕಾಟವೆ, ಪ್ರಮುಖ ಲಿಂಗರಾಜ ಪಾಟೀಲ, ಮಂಜುನಾಥ ಕಾಟಕರ, ಮಂಜುನಾಥ ಮಲ್ಲಿಗವಾಡ, ಶಂಕರ ಶೇಳಕೆ ಇದ್ದರು.

ಸರ್ವಧರ್ಮ ಸಾಮೂಹಿಕ ವಿವಾಹ ನಾಳೆ

ಧಾರವಾಡ: ಶ್ರೀ ಬಸವೇಶ್ವರ ಅರ್ಬನ್ ಕೋ-ಆಫ್ ಕ್ರೆಡಿಟ್ ಸೊಸೈಟಿಯ ರಜತ ಮಹೋತ್ಸವ ಸರ್ವಧರ್ಮ ಸಾಮೂಹಿಕ ವಿವಾಹ ಮಾ.25ಕ್ಕೆ ಹಮ್ಮಿಕೊಂಡಿದೆ ಎಂದು ಸೊಸೈಟಿ ಅಧ್ಯಕ್ಷ ಸಹದೇವ ನಿಗದಿ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಿಗ್ಗೆ 10ಕ್ಕೆ ನಗರದ ಉಳವಿ ಚನ್ನಬಸವೇಶ್ವರ ದೇವಸ್ಥಾನದಲ್ಲಿ ಸಾಮೂಹಿಕ ವಿವಾಹಗಳು ಜರಗಲಿದ್ದು, ವಧು ಬಟ್ಟೆ, ಕಾಲುಂಗುರ, ತಾಳಿ, ವರನಿಗೆ ಬಟ್ಟೆ ನೀಡಲಿದೆ ಎಂದರು.

ಮುಕ್ತಿಮಠ ಶಿವಸಿದ್ಧ ಸೋಮೇಶ್ವರ ಶಿವಾಚಾರ್ಯರು ಹಾಗೂ ಬಳ್ಳಾರಿ ಅಜ್ಜನವರು ಸಾನ್ನಿಧ್ಯ ವಹಿಸುವರು. ಧಾರವಾಡ ಉಳವಿ ಚನ್ನಬಸವೇಶ್ವರ ಧರ್ಮ ಫಂಡ ಸಂಸ್ಥೆ ಅಧ್ಯಕ್ಷ ಡಾ. ಎಸ್.ಆರ್.ರಾಮನಗೌಡರ ಪಾಲ್ಗೊಳ್ಳುವುದಾಗಿ ತಿಳಿಸಿದರು.

ಶಾಸಕರಾದ ವಿನಯ ಕುಲಕರ್ಣಿ, ಮಾಜಿ ಶಾಸಕರಾದ ಶಂಕರಪಾಟೀಲ ಮುನೇನಕೊಪ್ಪ, ಅಮೃತ ದೇಸಾಯಿ, ಸೀಮಾ ಮಸೂತಿ, ಬಿ.ಎಂ.ಸೂರಗೊಂಡ ಮತ್ತು ಮೇಯರ್ ಜ್ಯೋತಿ ಪಾಟೀಲ ಭಾಗವಹಿಸುವುದಾಗಿ ಹೇಳಿದರು.

ಹು-ಧಾ ಪೊಲೀಸ್ ಆಯುಕ್ತ ಎನ್.ಶಶಿಕುಮಾರ, ವಿದ್ಯಾಗಿರಿ ಪೊಲೀಸ್ ಠಾಣೆ ಸಿಪಿಐ ಎಂ.ಎಂ.ತಹಶೀಲ್ದಾರ್, ಸಹಕಾರ ಸಂಘ ಉಪನಿಬಂಧಕ ಡಿ.ಆರ್.ಸಿ.ಎಸ್ ದಸ್ತಗಿರಿ ಅಲಿ, ನಿಂಗರಾಜ ಬೆಣ್ಣೆ ಪಾಲ್ಗೊಳ್ಳಲಿದ್ದಾರೆ ಎಂದರು.



ಕೋ-ಆಪ್ ರೇಟಿವ್ ಯುನಿಯನ್ ಅಧ್ಯಕ್ಷ ಉಮೇಶ ಹೆಬಸೂರ ಅತಿಥಿಗಳಾಗಿ ಪಾಲ್ಗೊಳ್ಳುವರು. ಮಾ.24ರ ಸಂಜೆ 5.30 ಗಂಟೆಗೆ 21 ಜೋಡಿ ವಧು-ವರರ ಮೆರವಣಿಗೆ ಜರುಗಲಿದೆ ಎಂದು ಮಾಹಿತಿ ನೀಡಿದರು.

ವಿವಾಹವಾದ ಎಲ್ಲ ಜೋಡಿಗಳನ್ನು ಏ.24ರಂದು ಉಚಿತವಾಗಿ ಅಯೋಧ್ಯ, ಕಾಶಿ, ಪ್ರಯಾಗರಾಜ್, ಆಗ್ರಾ, ಮಥುರಾ ಹಾಗೂ ಬೃಂದಾವನ ಸೇರಿ ಪ್ರಮುಖ ಸ್ಥಳಗಳಿಗೆ ಪ್ರವಾಸ ಮಾಡಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮೋಹನ ರಾಮದುರ್ಗ, ಮೈಲಾರ ಉಪ್ಪಿನ, ಗದಿಗೆಪ್ಪ ಮುದಿಯಪ್ಪನವರ, ಶಿವಾನಂದ ಗುಂಡಗೋವಿ ಇದ್ದರು.

ಏ.1ಕ್ಕೆ ಹೆಬ್ಬಳ್ಳಿ ವೀರಭದ್ರೇಶ್ವರ ಜಾತ್ರೆ

ಧಾರವಾಡ: ತಾಲೂಕಿನ ಹೆಬ್ಬಳ್ಳಿ ಗ್ರಾಮದ ವೀರಭದ್ರೇಶ್ವರ ದೇವರ ಜಾತ್ರೆ ನಿಮಿತ್ಯ ಏ.1 ಗುಗ್ಗಳ, 2ಕ್ಕೆ ಮಹಾರಥೋತ್ಸವ ನಡೆಯಲಿದೆ. ಗುಗ್ಗಳ ಮಾಡಿಸುವವರು ಮಾ.30 ರೊಳಗಾಗಿ ರೂ.3,501 ಪಾವತಿಸಿ ಹೆಸರು ನೋಂದಾಯಿಸಬೇಕು. ಏ.2ರ ಸಂಜೆ 5.30ಕ್ಕೆ ಜಾಗೃತ ವೀರಭದ್ರೇಶ್ವರ ರಥೋತ್ಸವಕ್ಕೆ ಚೈತನ್ಯಾಶ್ರಮದ ದತ್ತಾವಧೂತ ಮಹಾರಾಜರ ಮತ್ತು ಶಿವಾನಂದ ಮಠದ ಬ್ರಹ್ಮಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿದೆ. ಏ.3ಕ್ಕೆ ಕಡುಬಿನ ಕಾಳಗ ಜರುಗಲಿದೆ. ಮಾಹಿತಿಗೆ ದೂ:6361815097ಕ್ಕೆ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.



ಹುಬ್ಬಳ್ಳಿ: ಸುಜ್ಞಾನ ವಿದ್ಯಾಪೀಠ ಹಾಗೂ ಸಾಂಸ್ಕೃತಿಕ ರಂಗ ಕಲಾವಿದರ ಸಾಧಕರ ಸಂಘ ಕೊಡ ಮಾಡುವ ದ.ರಾ. ಬೇಂದ್ರೆ, ಸದ್ಭಾವನಾ ಸೇವಾ ರತ್ನ ಪ್ರಶಸ್ತಿಯನ್ನು ಸಮಾಜ ಸೇವಕ ಡಾ. ರಮೇಶ ಮಹಾದೇವಪ್ಪನವರ ಅವರಿಗೆ ನೀಡಿ ಗೌರವಿಸಲಾಯಿತು.



ಹುಬ್ಬಳ್ಳಿ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಭಾನುವಾರ ಬಾಗಲಕೋಟೆ ಉಪಚುನಾವಣೆ ಪ್ರಚಾರಕ್ಕೆ ತೆರಳುವ ಮಾರ್ಗದಲ್ಲಿ ಮಧ್ಯದಲ್ಲಿ ಕುಸುಗಲ್ ರಸ್ತೆ ಮಧುರಾ ಕಾಲೋನಿಯಲ್ಲಿ ಹೋಟೆಲ್‌ವೊಂದರಲ್ಲಿ ಗಿರಿಮಿಟ್, ಮಿರ್ಚಿ ಸವಿದರು. ಮಹಾನಗರ ಜಿಲ್ಲಾ ಅಧ್ಯಕ್ಷ ತಿಪ್ಪಣ್ಣಾ ಮಜ್ಜಗಿ, ತೊಟಪ್ಪ ನೀಡಗುಂದಿ, ಕೃಷ್ಣಾ ಗಂಡಗಾಳೇಕರ, ಪ್ರವೀಣ ಹುರಳಿ, ವೆಂಕಟೇಶ ಕಾಟವೆ, ಮೀನಾಕ್ಷಿ ವಂಟಮುರಿ ಇದ್ದರು.

ವಿವಿಧ ಗಣ್ಯರ ಸಮ್ಮುಖದಲ್ಲಿ ಪೂಜೆ | ಭಕ್ತರಿಂದ 'ಹರ ಹರ ಮಹಾದೇವ' ಘೋಷಣೆ

ಐತಿಹಾಸಿಕ ಶಂಭೋಲಿಂಗೇಶ್ವರ ರಥೋತ್ಸವಕ್ಕೆ ಚಾಲನೆ

ಕುಂದಗೋಳ: ಪಟ್ಟಣದ ಶಿವಾಜಿನಗರ ಕಿಲ್ಲಾ ಓಣಿಯ ಪ್ರಸಿದ್ಧ ಹಾಗೂ ಐತಿಹಾಸಿಕ ಶ್ರೀ ಶಂಭೋಲಿಂಗೇಶ್ವರ ದೇವಸ್ಥಾನದ 18 ವರ್ಷದ ರಥೋತ್ಸವವು ಸೋಮವಾರ ಅಪಾರ ಭಕ್ತವೃಂದದ ನಡುವೆ ಭಕ್ತಿಭಾವದಿಂದ ನಡೆಯಿತು.

ಪಟ್ಟಣದ ಶ್ರೀ ಶಿತಿಕಂಠೇಶ್ವರ ಶಿವಾಚಾರ್ಯ ಸ್ವಾಮೀಜಿ ಶಿವಾನಂದ ಮಠದ ಶಿವಾನಂದ ಸ್ವಾಮೀಜಿ ಕಲ್ಯಾಣಪುರ ಮಠದ ಬಸವಣ್ಣಜ್ಜನವರು ವಿವಿಧ ಗಣ್ಯರ ಸಮ್ಮುಖದಲ್ಲಿ ಪೂಜೆ ಸಲ್ಲಿಸಿ ರಥದ ಹಗ್ಗವನ್ನು ಎಳೆಯುವ ಮೂಲಕ ರಥೋತ್ಸವಕ್ಕೆ ಭವ್ಯ ಚಾಲನೆ ನೀಡಿದರು. ಬೆಳಗ್ಗಿನಿಂದಲೇ ದೇವಸ್ಥಾನ ಆವರಣದಲ್ಲಿ ಧಾರ್ಮಿಕ ವಿಧಿವಿಧಾನಗಳು ಜರುಗಿದ್ದು, ಅರ್ಚಕರು ವೇದಮಂತ್ರಗಳ ಘೋಷಗಳ ನಡುವೆ ವಿಶೇಷ ಪೂಜೆಗಳನ್ನು ನೆರವೇರಿಸಿದರು. ನಂತರ ಸಾಂಪ್ರದಾಯಿಕವಾಗಿ ಅಲಂಕೃತಗೊಂಡ ರಥಕ್ಕೆ ಪೂಜೆ ಸಲ್ಲಿಸಿ, ಗಣ್ಯರು ಮತ್ತು ಜನಪ್ರತಿನಿಧಿಗಳು ರಥವನ್ನು ಎಳೆಯುವ ಮೂಲಕ ಮಹೋತ್ಸವಕ್ಕೆ ಚಾಲನೆ ನೀಡಿದರು.



ರಥ ಸಾಗುವ ಮಾರ್ಗದಲ್ಲಿ ಭಕ್ತರು "ಹರ ಹರ ಮಹಾದೇವ" ಎಂಬ ಘೋಷಣೆಗಳನ್ನು ಕೂಗಿ ಭಕ್ತಿಭಾವದಲ್ಲಿ ತೇಲಿದರು. ರಥವು ವಿವಿಧ ವಾದ್ಯಮೇಳಗಳೊಂದಿಗೆ ಕಿಲ್ಲಾ ಓಣಿಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು ಮಾರ್ಗ ಮಧ್ಯದಲ್ಲಿ ಮಹಿಳೆಯರು ಕುಂಕುಮ, ಹೂವುಗಳಿಂದ ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಯುವಕರು ಹಾಗೂ ಹಿರಿಯರು ಮಹಿಳೆಯರು ಭಾಗವಹಿಸಿ ಹಬ್ಬದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದರು.

ಶಂಭೋಲಿಂಗೇಶ್ವರ ರಥೋತ್ಸವವು ಪಟ್ಟಣದ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರತೀಕವಾಗಿದ್ದು,ಜನರನ್ನು ಒಗ್ಗೂಡಿಸುವ ಪವಿತ್ರ ರತೋತ್ಸವವಾಗಿದೆ ಇಂತಹ ಉತ್ಸವಗಳು ಸಮಾಜದಲ್ಲಿ ಏಕತೆ, ಸೌಹಾರ್ದತೆ ಮತ್ತು ಧಾರ್ಮಿಕ ಮೌಲ್ಯಗಳನ್ನು ಬಲಪಡಿಸುತ್ತವೆ ಎಂದು ಭಕ್ತರು ಅಭಿಪ್ರಾಯಪಟ್ಟರು.

ರಥೋತ್ಸವದ ಅಂಗವಾಗಿ ಭಾನುವಾರ ಭಜನಾ ಮೇಳಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಸೋಮವಾರ ಮಧ್ಯಾಹ್ನ ಅನ್ನಸಂತರ್ಪಣೆ ಕಾರ್ಯಕ್ರಮಗಳು ಜರುಗಿದವು.ಪಟ್ಟಣದ ಹಾಗೂ ಅನೇಕ ಗ್ರಾಮಗಳಿಂದ ಆಗಮಿಸಿದ ಭಕ್ತರು ದೇವರ ದರ್ಶನ ಪಡೆದು ತಮ್ಮ ಭಕ್ತಿಯನ್ನು ಅರ್ಪಿಸಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಷಣ್ಮುಖ ಶಿವಳ್ಳಿ, ಮುಖಂಡರಾದ ಅರವಿಂದ ಕಟಗಿ,ರಾಜು ಕೊಪ್ಪದ,ರಾಮಣ್ಣ ಬಮ್ಮಸುಮುದ್ರ, ಮಲ್ಲಿಕಾರ್ಜುನ ಕೀರೆಸುರ, ಮಲ್ಲಿಕಾರ್ಜುನ ಕುನ್ನೂರ,ನಿಂಗಪ್ಪ ಕೀರೆಸುರ, ಶಿವಾನಂದ ಕಟಗಿ,ರಮೇಶ ಕೊಪ್ಪದ, ಅಶೋಕ ಬಮ್ಮಸಮುದ್ರ,ಚಿದು ಕುನ್ನೂರ, ಪ್ರವೀಣ ಕೀರೆಸುರ, ಗೌಡಪ್ಪ ಅವ್ವಾರಿ, ಶಿವು ಕಟಗಿ, ಮುತ್ತುರಾಜ್ ಕೊಪ್ಪದ, ವೀರೇಶ ರವದಿ,ಶಿವಣ್ಣ ಗವಳಿ, ವಿವಿಧ ಜನಪ್ರತಿನಿಧಿಗಳು, ಮುಖಂಡರು, ದೇವಸ್ಥಾನದ ಕಮಿಟಿ ಯವರು ಭಜನಾ ಮಂಡಳಿ ಸದಸ್ಯರು ಹಾಗೂ ಸಾವಿರಾರು ಭಕ್ತರು ಉಪಸ್ಥಿತರಿದ್ದರು. ಪೊಲೀಸ್ ಇಲಾಖೆ ಮತ್ತು ಸ್ಥಳೀಯ ಆಡಳಿತದಿಂದ ಸಮರ್ಪಕ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿತ್ತು.

ಒಟ್ಟಾರೆ, ಐತಿಹಾಸಿಕ ಶಂಭೋಲಿಂಗೇಶ್ವರ ರಥೋತ್ಸವವು ಭಕ್ತಿ, ಶ್ರದ್ಧೆ ಮತ್ತು ಸಾಂಸ್ಕೃತಿಕ ವೈಭವದ ನಡುವೆ ಅದ್ದೂರಿಯಾಗಿ ನೆರವೇರಿತು.

ಹುಬ್ಬಳ್ಳಿಯ ಶಿವಾ ತಂಡದಿಂದ ಗಂಗಾ ಆರತಿ

1 ನೇ ವರ್ಷದ ರಥೋತ್ಸವವು ಅಂಗವಾಗಿ ಸೋಮವಾರ ಮಧ್ಯಾಹ್ನ ಅನ್ನ ಸಂತರ್ಪಣೆ ನಂತರ ಸಂಜೆ 4 ಘಂಟೆಗೆ ಶ್ರೀ ಶಂಭೋಲಿಂಗೇಶ್ವರ ಮಹಾ ರಥೋತ್ಸವ ನಡೆಯಿತು. ಪ್ರಪ್ರಥಮ ಭಾರಿಗೆ ಹುಬ್ಬಳ್ಳಿಯ ಶಿವಾ ತಂಡದ ವತಿಯಿಂದ ಕಾಶಿ ವಿಶ್ವನಾಥನಗೆ ಸಲ್ಲುವ ಜಗತ್ ಪ್ರಸಿದ್ಧವಾದ ಗಂಗಾ ಆರತಿ ಶಂಭೋಲಿಂಗೇಶ್ವರ ರಥೋತ್ಸವಕ್ಕೆ ಸಲ್ಲಿಸಲಾಯಿತು. ಸಾವಿರಾರು ಭಕ್ತರು ಪಾಲ್ಗೊಂಡು ಪುನೀತರಾಗಿ ಭಕ್ತಿ ಭಾವದಿಂದ ನಮಿಸಿದರು.

ಭವ್ಯ ಭಾರತಕ್ಕೆ ಯುವಕರು ಕೊಡುಗೆ ನೀಡಲಿ

ಕುಂದಗೋಳ: ಭಾರತದ ಭವ್ಯ ಶಕ್ತಿ ಯುವಕರು, ಉದ್ಯೋಗ, ನಾಯಕತ್ವ, ಸಾಮಾಜಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಯುವಕರು ಪಾಲ್ಗೊಳುವ ಮೂಲಕ ಭವ್ಯ ಭಾರತಕ್ಕೆ ಕೊಡುಗೆ ನೀಡಬೇಕು ಎಂದು ಪತ್ರಕರ್ತ ಅಜೀತ ಹನಮಕ್ಕನವರ ಹೇಳಿದರು.

ಅವರು ತಾಲ್ಲೂಕಿನ ನೇಲಗುಡ್ಡ ಗ್ರಾಮದ ಶ್ರೀ ಗುರು ಕುಂಟಯ್ಯ ಸ್ವಾಮಿಗಳ 37 ನೇ ವರ್ಷದ ರಥೋತ್ಸವದ ಅಂಗವಾಗಿ ಭಾನುವಾರ ಜರುಗಿದ ಜನಜಾಗೃತಿ ಧರ್ಮಸಭೆಯಲ್ಲಿ ನಾಡು ಕಟ್ಟುವುದರಲ್ಲಿ ಯುವಕರ ಪಾತ್ರದ ಬಗ್ಗೆ ಮಾತನಾಡಿದರು.

ನಿರಾಮಯ ಫೌಂಡೇಶನ್ ಸಂಸ್ಥಾಪಕ ಡಾ. ಮಲ್ಲಿಕಾರ್ಜುನ್ ಬಾಳಿಕಾಯಿ ಭಾರತಿಯ ಪರಂಪರೆ ಬಗ್ಗೆ ಮಾತನಾಡಿ ಮಣ್ಣಿನ ಕಣ ಕಣದಲ್ಲೂ ದೇವರನ್ನ ಕಾಣುವ ಜಗತ್ತಿದ ಎಕೈಕ ದೇಶ ಭಾರತ, ನಮ್ಮ ಪರಂಪರೆ ಜಗತ್ತಿನ ಎಲ್ಲ ಸಂಶೋದನೆಗಳ ಮೂಲವಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಹನಮನಹಳ್ಳಿಯ ಶಿವಬಸವ ಮಹಾಸ್ವಾಮಿಗಳು ವಹಿಸಿದ್ದರು, ಗದಗಯ್ಯ ಕುಂದಕೂರಮಠ ನೇತೃತ್ವ ವಹಿಸಿದ್ದರು, ನೆಲಗುಡ್ಡ, ತರ್ಲಘಟ್ಟ, ಕೊಪ್ಪ ಗ್ರಾಮಗಳ ಸಕಲ ಸದ್ಭಕ್ತರು, ಯುವಕರು, ಗುರುಹಿರಿಯರು, ಶ್ರೀ ಗುರು ಕುಂಟಯ್ಯ ಸ್ವಾಮಿ ದೇವಸ್ಥಾನ ಸೇವಾ ಸಮಿತಿ ಅಧ್ಯಕ್ಷರು ಉಪಾಧ್ಯಕ್ಷರು, ಸದಸ್ಯರಿದ್ದರು.



ಕಿರುಸುದ್ದಿ

ಶಾಂತಾದುರ್ಗಾ ದೇವಿಯ ಬಂಡಿಹಬ್ಬ ಏ.30ರಂದು

ಅಂಕೋಲಾ: ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಸುಪ್ರಸಿದ್ಧ ಶ್ರೀ ಶಾಂತಾದುರ್ಗಾ ದೇವಿಯ ಬಂಡಿಹಬ್ಬ ಏ.30ರಂದು ನಡೆಯಲಿದೆ ಎಂದು ದೇವಾಲಯದ ಆಡಳಿತ ಮಂಡಳಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಬಂಡಿಹಬ್ಬದ ಪ್ರಕ್ರಿಯೆಗಳು ಏ.14ರಂದು ಅವಾರಿ ಕಾರ್ಯಕ್ರಮದೊಂದಿಗೆ ಆರಂಭವಾಗಲಿದೆ. ಏ.20ರಂದು ಅಕ್ಷಯ ತದಿಗೆ ದಿನದಿಂದ ಕುಂಬಾರಕೇರಿಯ ಕಳಸ ದೇವಾಲಯದಿಂದ ದೇವರ ಕಳಸದ ಮೆರವಣಿಗೆ ಆರಂಭವಾಗಲಿದ್ದು ಏ.27ರಂದು ದೇವರು ಕರೆಯುವ ಸಂಪ್ರದಾಯ ನಡೆಯಲಿದೆ. ಏ.30ರಂದು ಬಂಡಿ ಬಜಾರದಲ್ಲಿ ದೇವರ ಕಳಸ ಉಲಿ ಚಪ್ಪರ ಏರುವ ಮೂಲಕ ಬಂಡಿಹಬ್ಬ ನೆರವೇರಲಿದ್ದು, ಮೇ 1ರಂದು ಹರಕೆಗಳ ಸಂದಾಯ ಕಿರು ಬಂಡಿಹಬ್ಬ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಮೆರಿಕದ ಸಮ್ಮೇಳನದಲ್ಲಿ ಉಪನ್ಯಾಸ

ವಿಜಯಪುರ: ನಗರದ ಪ್ರತಿಷ್ಠಿತ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯ ಕುಲಪತಿ ಡಾ. ಅರುಣ ಇನಾಮದಾರ ಅವರು ಅಮೆರಿಕದಲ್ಲಿ ನಡೆಯಲಿರುವ ಅಮೆರಿಕನ್ ಅಕಾಡೆಮಿ ಆಫ್ ಡರ್ಮೆಟಾಲಾಜಿ ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಅಮೆರಿಕದಲ್ಲಿರುವ ಡೆನವರ್‌ನಲ್ಲಿ ಈ ಸಮ್ಮೇಳನ ಮಾರ್ಚ್ 26ರಿಂದ ಮಾರ್ಚ್ 31ರ ವರೆಗೆ ಆರು ದಿನ ನಡೆಯಲಿದೆ. ಇದೇ ವೇಳೆ, ಮಾರ್ಚ್ 25 ರಂದು ಚಿಕ್ಯಾಗೋದ ಪ್ರತಿಷ್ಠಿತ ಇಲಿನಾಯಿಸ್ ವಿಶ್ವವಿದ್ಯಾಲಯದಲ್ಲಿ ಚಿಕ್ಕ ಮಕ್ಕಳಲ್ಲಿ ಚರ್ಮ ರೋಗ ವಿಷಯ ಕುರಿತು ಇನಾಮದಾರ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಅಲ್ಲದೇ, ಬಿಎಲ್‌ಡಿಇ ಡೀಮ್ಡ್ ವಿವಿ ಜೊತೆ ಪರಸ್ಪರ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಇಲಿನಾಯಿಸ್ ವಿವಿಯ ಅಸೋಶಿಯೇಟ್ ಡೀನ್ ಜೊತೆ ಚರ್ಚೆ ನಡೆಸಲಿದ್ದಾರೆ ಎಂದು ವಿವಿ ಪ್ರಕಟಣೆಯಲ್ಲಿ ತಿಳಿಸಿದೆ.



20 ಜನರ ವಿರುದ್ಧ ಪ್ರಕರಣ ದಾಖಲು

ಶಿರಸಿ: ನಗರದ ಹೊಸಪೇಟೆ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕ್ಲಬ್ ಮೇಲೆ ಪೊಲೀಸರು ದಾಳಿ ನಡೆಸಿ 20 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕ್ಲಬ್‌ನಲ್ಲಿ ಹಣದ ಬದಲಿಗೆ ವಿವಿಧ ಮುಖ ಬೆಲೆಯ ಬಣ್ಣದ ಟೋಕನ್‌ಗಳನ್ನು ಬಳಸಿಕೊಂಡು ಇಸ್ಪೀಟ್ ಎಲೆಗಳ ಆಧಾರದ ಮೇಲೆ ಜೂಜಾಟ ನಡೆಯುತ್ತಿರುವುದು ಪತ್ತೆಯಾಯಿತು. ಶಿರಸಿ ಡಿಎಸ್ಪಿ ಗೀತಾ ಪಾಟೀಲ್ ನೇತೃತ್ವದಲ್ಲಿ ಸಿಬ್ಬಂದಿ ದಾಳಿ ನಡೆಸಿ, ಆರೋಪಿಗಳು ಟೋಕನ್‌ಗಳನ್ನು ಪಂಥವಾಗಿ ಇಟ್ಟು ಜೂಜಾಟ ಆಡುತ್ತಿರುವಾಗಲೇ ಪೊಲೀಸರು ಅವರನ್ನು ವಶಕ್ಕೆ ಪಡೆದರು. ದಾಳಿಯ ಸಮಯದಲ್ಲಿ ಒಟ್ಟು 68,078 ರೂ. ನಗದು, ವಿವಿಧ ಮುಖ ಬೆಲೆಯ ಟೋಕನ್ ಕಾರ್ಡ್‌ಗಳು ಹಾಗೂ 15 ಮೊಬೈಲ್ ಜಪ್ತಿ ಮಾಡಲಾಗಿದೆ. ಈ ಕುರಿತು ಶಿರಸಿ ಹೊಸ ಮಾರುಕಟ್ಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪ್ರಾಪ್ತನಿಂದ ಮಿನಿ ಬಸ್ ಚಾಲನೆ: ದಂಡ

ಗೋಕರ್ಣ: ಪ್ರವಾಸಿ ತಾಣದಲ್ಲಿ ಅಪ್ರಾಪ್ತನೊಬ್ಬ ಮಿನಿ ಬಸ್ ಚಾಲನೆ ಮಾಡಿದ ಪ್ರಕರಣಕ್ಕೆ ಕುಮಟಾ ನ್ಯಾಯಾಲಯ ಮಹತ್ವದ ತೀರ್ಪು ನೀಡಿದೆ.

ಬಾಲಕನಿಗೆ 25 ವರ್ಷ ಆಗುವವರೆಗೆ ವಾಹನ ಪರವಾನಗಿ ಕೊಡುವ ಹಾಗಿಲ್ಲ ಎಂದು ಸೂಚಿಸಿದ ನ್ಯಾಯಾಲಯ ಬಸ್ ಮಾಲಕನಿಗೂ 25 ಸಾವಿರ ರೂ ದಂಡ ವಿಧಿಸಿದೆ. ಇದರೊಂದಿಗೆ ಆ ಬಸ್ ಚಾಲಕ(ಮಾಲಕ) ಒಂದು ವರ್ಷದವರೆಗೆ ವಾಹನ ಚಾಲನೆ ಮಾಡುವ ಹಾಗಿಲ್ಲ ಎಂದು ಆದೇಶಿಸಿದೆ.

ಏನಿದು ಪ್ರಕರಣ : ಕಳೆದ ನಾಲ್ಕು ದಿನಗಳ ಹಿಂದೆ ಓಂ ಬೀಚ್ ರಸ್ತೆಯಲ್ಲಿ ತಮಿಳುನಾಡಿನ ಅಜಿತ ಎಂಬುವವರ ಮಿನಿ ಬಸ್‌ನ್ನ ಅಪ್ರಾಪ್ತ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು. ಕರ್ತವ್ಯದಲ್ಲಿದ್ದ ಪಿಎಸ್‌ಐ ಅನಿಲ್ ಹಾಗೂ ಸಿಬ್ಬಂದಿ ಮಂಜು ಉಪ್ಪಾರ ಈ ವಾಹನವನ್ನ ಗಮನಿಸಿ ತಕ್ಷಣ ನಿಲ್ಲಿಸಿ ವಶಕ್ಕೆ ಪಡೆದಿದ್ದರು. ನಂತರ ಪಿ.ಐ. ಶ್ರೀಧರ ಮಾರ್ಗದರ್ಶನದಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿಯನ್ನ ಸಲ್ಲಿಸಲಾಗಿತ್ತು. ನಂತರ ವಿಚಾರಣೆ ನಡೆದಿದ್ದು ಸೋಮವಾರ ತೀರ್ಪು ಹೊರಬಿದ್ದಿದೆ.

ರೈತರ ಪ್ರಬಲ ವಿರೋಧಕ್ಕೆ ಮಣಿದ ಸರ್ಕಾರ

ಕಡೆಗೂ ಚೂರು ಭೂಮಿ ಉಳಿದಾಯ್ತು

ಲಕ್ಷ್ಮೀಕಾಂತ್ ಕುಲಕರ್ಣಿ

ಯಾದಗಿರಿ: ಗುರುಮಠಕಲ್ ಮತಕ್ಷೇತ್ರದ ಕಡೇಚೂರು ವ್ಯಾಪ್ತಿಯಲ್ಲಿನ ನೂರಾರು ಎಕರೆ ಭೂಮಿಯನ್ನು ಕೈಗಾರಿಕೆ ವಸಾಹತು ಸ್ಥಾಪನೆ ಹೆಸರಲ್ಲಿ ವಶಪಡಿಸಿಕೊಳ್ಳಲು ಮುಂದಾಗಿದ್ದ ಸರ್ಕಾರ, ರೈತರ ಪ್ರಬಲವಾದ ವಿರೋಧದಿಂದ ಕೊನೆಗೂ ಹಿಂದೆ ಸರಿದಿದೆ.

ದಿಗಂತ ವಿಶೇಷ

ಕಳೆದ 2021ರಲ್ಲಿ ಕಡೇಚೂರು ಸೀಮಾಂತರ ವ್ಯಾಪ್ತಿಯಲ್ಲಿನ 3200 ಎಕರೆ ಭೂಮಿಯನ್ನು ಸರ್ಕಾರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ವಶಪಡಿಸಿಕೊಳ್ಳಲು ಮುಂದಾಗಿತ್ತು. ಮಾತ್ರವಲ್ಲ ಇದಕ್ಕಾಗಿ ಗೆಜೆಟ್ ನೋಟಿಫಿಕೇಶನ್ ಸಹ ಹೊರಡಿಸಲಾಗಿತ್ತು.

ಆದರೆ, ಹಿಂದೆ 2014ರಲ್ಲಿ ರಾಜ್ಯದಲ್ಲಿ ಆಡಳಿತದಲ್ಲಿದ್ದ ಕಾಂಗ್ರೆಸ್ ಸರ್ಕಾರ, ಇದೇ ಕಡೇಚೂರು, ಬಾಡಿಯಾಳ ಗ್ರಾಮಗಳ ವ್ಯಾಪ್ತಿಯಲ್ಲಿ 3320 ಎಕರೆ ಭೂಮಿಯನ್ನು ಕೆಎಸ್‌ಐಡಿಬಿ ವತಿಯಿಂದ ವಶಪಡಿಸಿಕೊಂಡಿತ್ತು. ಈ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿಗಳು, ಕೃಷ್ಣಾ ನದಿ ಹಾಗೂ ಪಕ್ಕದ ತೆಲಂಗಾಣದ ಹೈದರಾಬಾದ್‌ಗೆ ಸಂಪರ್ಕ ಸಾಧಿಸುವ ಸಾರಿಗೆ ವ್ಯವಸ್ಥೆ ಇರುವ ಕಾರಣ ರೈತರಿಂದ ದೊಡ್ಡ ಪ್ರಮಾಣದಲ್ಲಿ ಭೂಮಿ ವಶಪಡಿಸಿಕೊಂಡಿತ್ತು.

> ಕಡೇಚೂರು ಕೈಗಾರಿಕಾ ಪ್ರದೇಶದಲ್ಲಿ ನಮ್ಮ ಬೇಡಿಕೆಯನ್ನು ಪರಿಗಣಿಸಿ ಎರಡನೇ ಹಂತದ ಭೂ ಸ್ವಾಧೀನ ಕೈ ಬಿಟ್ಟ ರಾಜ್ಯ ಸರ್ಕಾರಕ್ಕೆ ಕ್ಷೇತ್ರದ ಜನರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಆದರೆ, ಮಾಲಿನ್ಯಕಾರಕ ಕಂಪನಿಗಳ ವಿರುದ್ಧ ನಮ್ಮ ಹೋರಾಟ ವಿಧಾನಸೌಧದ ಒಳಗೂ ಮತ್ತು ಹೊರಗೂ ನಿರಂತರವಾಗಿ ನಡೆಯಲಿದೆ.
> ■ ಶರಣಗೌಡ ಕಂದಕೂರ, ಗುರುಮಠಕಲ್ ಶಾಸಕ

ಮಾತ್ರವಲ್ಲ ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಬಾಬೂರಾವ್ ಚಿಂಚನಸೂರ ತಾವು ಪ್ರತಿನಿಧಿಸುತ್ತಿದ್ದ ಗುರುಮಠಕಲ್ ಕ್ಷೇತ್ರದ ವ್ಯಾಪ್ತಿಗೆ ಬರುವ ಕಡೇಚೂರು ಕೈಗಾರಿಕಾ ಪ್ರದೇಶದಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡಲಾಗುವುದು ಎಂದು ಬಣ್ಣ ಬಣ್ಣದ ಮಾತುಗಳನ್ನಾಡಿ ರೈತರ ಮೂಗಿಗೆ ತುಪ್ಪ ಸವರಿದ್ದು ಇದೀಗ ಇತಿಹಾಸ.

ಚಿಂಚನಸೂರ ಹೇಳಿದಂತೆ ಜವಳಿ ಪಾರ್ಕ್ ಇರಲಿ, ಅಲ್ಲಿ ಗೋಣಿ (ಸೆಣಬು) ತಟ್ಟಿನ ಉತ್ಪಾದನೆ ಘಟಕ ಸಹ ನಿರ್ಮಾಣವಾಗಲಿಲ್ಲ. ಇನ್ನೂ ಕೋಕಾಕೋಲಾ ಸೇರಿದಂತೆ ಅನೇಕ ಡ್ರಗ್ ಕಂಪನಿಗಳು ಸ್ಥಾಪನೆಯಾಗುವ ಮತ್ತು ಸ್ಥಳೀಯ ಯುವಕರಿಗೆ ಉದ್ಯೋಗಗಳನ್ನು ಸೃಷ್ಟಿಸುವ ಯಾವ ಕನಸು ಸಹ ನನಸಾಗದೆ ಕೊನೆಗೆ ಸರ್ಕಾರ ಯಾವ ಪುರುಷಾರ್ಥಕ್ಕೆ 3300 ಎಕರೆ ಭೂಮಿ ವಶ ಪಡಿಸಿಕೊಂಡಿದೆ ಎಂಬ ಜಿಜ್ಞಾಸೆ ಆ ಭಾಗದ ರೈತರಲ್ಲಿ ಮೂಡಿಸಿತ್ತು.

ಏತನ್ಮಧ್ಯೆ 2021ರಲ್ಲಿ ಮತ್ತೆ ಸರ್ಕಾರ ಕಡೇಚೂರು ವ್ಯಾಪ್ತಿಯ ರಾಚನಳ್ಳಿ, ದದ್ದಲ್, ಶೆಟ್ಟಿಹಳ್ಳಿ ಹಾಗೂ ಕಡೇಚೂರು ಗ್ರಾಮಗಳ ಸೀಮಾಂತರ ಪ್ರದೇಶಗಳಲ್ಲಿನ ಸುಮಾರು 3260 ಎಕರೆ ಭೂಮಿ ಬಲ್ಕ್ ಡ್ರಗ್ ಪಾರ್ಕ್ ಹೆಸರಲ್ಲಿ ವಶ ಪಡಿಸಿಕೊಳ್ಳಲು ರಾಜ್ಯಪತ್ರ ಹೊರಡಿಸಿತ್ತು. ಇದು ಈ ಭಾಗದ ರೈತರನ್ನು ಕೆರಳಿಸಿದ್ದಲ್ಲದೆ, ದೊಡ್ಡ ಮಟ್ಟದ ಹೋರಾಟಕ್ಕೂ ನಾಂದಿಯಾಯಿತು.

ಬಿರು ಬಿಸಿಲಲ್ಲಿ ರೈತರು ನಡೆಸುತ್ತಿದ್ದ ಹೋರಾಟದಲ್ಲಿ ಅಂದಿನ ಶಾಸಕ ದಿ.ನಾಗನಗೌಡ ಕಂದಕೂರ ತಮ್ಮ ಆರೋಗ್ಯವನ್ನು ಲೆಕ್ಕಿಸದೆ, ಸತತ ಮೂರು ಗಂಟೆ ಧರಣಿ ನಡೆಸುವ ಮೂಲಕ ಸರ್ಕಾರ ಮತ್ತು ಜಿಲ್ಲಾಡಳಿತಕ್ಕೆ ಬಿಸಿ ಮುಟ್ಟಿಸಿದ್ದರು.ಇದರಿಂದ ಎಚ್ಚೆತ್ತುಕೊಂಡಿದ್ದ ಅಂದಿನ ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರು ಶಾಸಕ ನಾಗನಗೌಡರನ್ನು ತಮ್ಮ ನಿವಾಸಕ್ಕೆ ಕರೆಸಿ ಭೂಮಿ ವಶಪಡಿಸಿಕೊಳ್ಳುವ ಸಾಧಕ-ಬಾಧಕಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು.

ವಿವಿಧ ರೈತಪರ, ಕನ್ನಡಪರ ಸಂಘಟನೆಗಳ ಹೋರಾಟದ ಫಲವಾಗಿ ರಾಜ್ಯ ಸರ್ಕಾರ ಕೊನೆಗೂ ನೂರಾರು ಎಕರೆ ಭೂಸ್ವಾಧೀನ ಪ್ರಕ್ರಿಯೆಕ್ಕೆ ಬಿಟ್ಟಿದ್ದು ಅನ್ನದಾತನ ಆಕ್ರೋಶಕ್ಕೆ ಮಣಿದಿದೆ.

ಮಾ.26ಕ್ಕೆ ರಾಮನ ಅದ್ದೂರಿ ಶೋಭಾಯಾತ್ರೆ



ಕಲಬುರಗಿ: ರಾಮನವಮಿ ಅಂಗವಾಗಿ ರಾಮನವಮಿ ಉತ್ಸವ ಸಮಿತಿಯಿಂದ 15 ಅಡಿ ಎತ್ತರದ ಪ್ರಭು ಶ್ರೀರಾಮನ ಭವ್ಯ ಮೂರ್ತಿಯ 11ನೇ ವರ್ಷದ ಶೋಭಾಯಾತ್ರೆಯೂ ಇದೇ ಮಾ.26ರಂದು ನಗರದ ಪ್ರಮುಖ ರಸ್ತೆಗಳಲ್ಲಿ ನಡೆಯಲಿದೆ ಎಂದು ರಾಮನವಮಿ ಉತ್ಸವ ಸಮಿತಿ ಸದಸ್ಯ ಸಚಿನ್ ಕಡಗಂಚಿ ತಿಳಿಸಿದರು.

ಅಂದು ಬೆಳಗ್ಗೆ 10-30ಕ್ಕೆ ನಗರದ ಹೊರವಲಯದ ರಾಮತೀರ್ಥ ಮಂದಿರದಲ್ಲಿ ಪೂಜೆ ಸಲ್ಲಿಸಿದ ಬಳಿಕ ಚೆಕ್‌ಪೋಸ್ಟ್‌ನಿಂದ ಹೊರಡುವ ಪ್ರಭು ಶ್ರೀರಾಮನ ಶೋಭಾಯಾತ್ರೆಗೆ ಶರಣಬಸವೇಶ್ವರರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಸೇರಿದಂತೆ ಜಿಲ್ಲೆಯ ವಿವಿಧ ಮಠಾಧೀಶರ ಚಾಲನೆ ನೀಡಲಿದ್ದು, ದೇವಿ ನಗರ, ಖಾದ್ರಿ ಚೌಕ್, ಶಹಾಬಜಾರ್ ನಾಕಾ, ಪ್ರಕಾಶ್ ಮಾಲ್, ಸೂಪರ್ ಮಾರ್ಕೆಟ್ ಮೂಲಕ ಜಗತ್ ವೃತ್ತದಲ್ಲಿ ವಂದನೆಗಳೊಂದಿಗೆ ಸಮಾರೋಪಗೊಳ್ಳಲಿದೆ ಎಂದರು. ಶೋಭಾಯಾತ್ರೆಯ ಮಾರ್ಗದುದ್ದಕ್ಕೂ ರಾಮಭಕ್ತರಿಂದ ಅನ್ನಸಂತರ್ಪಣೆ, ತಂಪು ಪಾನೀಯಗಳ ವ್ಯವಸ್ಥೆ ಮಾಡಲಾಗಿದ್ದು, ಸಾವಿರಾರು ಭಕ್ತರಿಗೆ ಊಟದ ಅನುಕೂಲ

> ದೊಡ್ಡಪ್ಪ ಅಪ್ಪಾರಿಂದ ಚಾಲನೆ
>
> ದಾರಿಯುದ್ದಕ್ಕೂ ಪ್ರಸಾದ ವ್ಯವಸ್ಥೆ

ಕಲ್ಪಿಸಲಾಗಿದೆ.ನಗರದ ಚೆಕ್‌ಪೋಸ್ಟ್, ದೇವಿನಗರ,ಖರ್ಗೆಸ್ಕೂಲ್,ಮಾರವಾಡಿ ಸಮಾಜದಿಂದ ಮಾಯಮಂದಿರ ಬಳಿ ಭಕ್ತರಿಗಾಗಿ ಊಟದ ವ್ಯವಸ್ಥೆ ಮಾಡಲಾಗಿದೆ. ರಾಮೋತ್ಸವದ ಹಿನ್ನಲೆ ಸುಮಾರು 3000 ಕೇಸರಿ ಭಗವಾ ಧ್ವಜಗಳಿಂದ ಸಿಂಗಾರಗೊಳಿಸಲಾಗಿದೆ. ಶೋಭಾಯಾತ್ರೆಯಲ್ಲಿ ನಾಸಿಕ್ ಡೋಲು ವಾದ್ಯ,ಲೇಜಿಮ್, ಹಲಗಿ ನಾದ, ಉಡುಪಿಯಿಂದ ಕಾಲಭೈರವ, ನಂದಿ ಹಾಗೂ ಅಘೋರಿಗಳ ತಂಡದಿಂದ ಮನಮೋಹಕ ನೃತ್ಯ ಪ್ರದರ್ಶನ ಹಾಗೂ ಪುಣೆಯ ಆರ್ ಆರ್ ಸೌಂಡ್ ಶೋಭಾಯಾತ್ರೆಗೆ ಮತ್ತಷ್ಟು ವೈಭವ ಹೆಚ್ಚಿಸಲಿವೆ.

ಸುದ್ದಿಗೋಷ್ಠಿಯಲ್ಲಿ ಸಮಿತಿ ಸದಸ್ಯರಾದ ಸುಜೀತ್ ಮಿಶ್ರಾ,ಗುರು ಸಾಗರೆ, ಸುದೀಪ್ ಚಿಂಚೋಳಿ, ಸುರೇಶ್ ಕುಮಸಿ, ವಿಶ್ವಾರಾಧ್ಯ ಪಡಶೆಟ್ಟಿ,ಆನಂದ ಕಲೋಜಿ,ಭೀಮಾ ಸೇರಿದಂತೆ ಇನ್ನಿತರರು ಇದ್ದರು.

18 ಅಡಿ ಎತ್ತರದ ರಾಜರಾಮ ಮೂರ್ತಿ ಮೆರವಣಿಗೆ

ಆದಿ ಪುರುಷ ರಾಮ ನವಮಿ ಉತ್ಸವ ಸಮಿತಿಯ ಸಂಸ್ಥಾಪಕ,ಅಧ್ಯಕ್ಷ ಮಹೇಶ್ ಗೊಬ್ಬೂರ ನೇತೃತ್ವದಲ್ಲಿ ಜಿಲ್ಲೆಯ ಮಠಾಧೀಶರ ಸಾನಿಧ್ಯದಲ್ಲಿ ಮಾರ್ಚ್ -26ರಂದು 18 ಅಡಿ ಎತ್ತರದ ಭವ್ಯ ರಾಜರಾಮ ಮೂರ್ತಿಯ ಅದ್ದೂರಿ ಮೆರವಣಿಗೆ ನಡೆಯಲಿದೆ. ಈ ಬಾರಿ ವಿಶೇಷವಾಗಿ ಸೂರ್ಯದೇವನ ಅಲಂಕಾರದೊಂದಿಗೆ ಹೊರಡಲಿರುವ ಮೆರವಣಿಗೆಯಲ್ಲಿ ಪುಣೆಯ ಫೇಮಸ್ ಡಿಜೆ, ಎಲ್‌ಇಡಿ ವಾಲ್, ಶಾರ್ಪ್ಲ ಲೈಟ್ ಜೊತೆಗೆ ಆಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ಮೆರವಣಿಗೆ ಕೊನೆಯಲ್ಲಿ ಜಗತ್ ವೃತ್ತದಲ್ಲಿ 30 ನಿಮಿಷ ಗಂಗಾ ಆರತಿ ನಡೆಯಲಿದೆ. ಮೆರವಣಿಗೆ ಸಾಗುವ ವೇಳೆ ದಾರಿಯುದ್ದಕ್ಕೂ ಶಾಸಕ ಅಲ್ಲಂಪ್ರಭು ಪಾಟೀಲ್ ಸೇರಿದಂತೆ ಅನೇಕ ರಾಮ ಭಕ್ತರಿಂದ ಅಲ್ಲಲ್ಲಿ ಅನ್ನ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ಸುದ್ದಿಗೋಷ್ಠಿಯಲ್ಲಿ ಶ್ರೀನಿವಾಸ ಸರಡಗಿ ಶ್ರೀಗಳು ಮೆರವಣಿಗೆ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ನ್ಯಾಯವಾದಿ ಚಂದ್ರಕಾಂತ ಕಾಳಗಿ, ಸಂತೋಷ ಬೆನಕನಳ್ಳಿ, ಶ್ರೀಕಾಂತ್ ರೇವಣಿ, ಅಂಬಾರಾಯ ಕಂಬಾರ್, ಮಹೇಶ್ ಯಾದವ್, ವಿಕಾಸ ಚೌಹಾಣ್, ಅಕ್ಷಯ್ ಹಿರೇಮಠ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಾ.27ರಿಂದ ಸಂಸ್ಕೃತಿ ಕುಂಭ ಮಲೆನಾಡು ಉತ್ಸವ

ಕಾರವಾರ: ಹೊನ್ನಾವರ ತಾಲೂಕಿನ ಬಂಗಾರಮಕ್ಕಿಯಲ್ಲಿ ಮಾ.27ರಿಂದ ಏ.2ರ ವರೆಗೆ ಸಂಸ್ಕೃತಿ ಕುಂಭ ಮಲೆನಾಡು ಉತ್ಸವ 2026 ನಡೆಯಲಿದೆ ಎಂದು ಬಂಗಾರಮಕ್ಕಿ ವೀರಾಂಜನೇಯ ಶ್ರೀ ಕ್ಷೇತ್ರದ ಶ್ರೀ ಮಾರುತಿ ಗುರೂಜಿ ಹೇಳಿದರು.

ಅವರು ಕಾರವಾರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಾ.27ರಂದು ಇಸ್ರೋ ಸಂಸ್ಥೆಯ ಮಾಜಿ ಅಧ್ಯಕ್ಷ ಎ.ಎಸ್ ಕಿರಣಕುಮಾರ ಉತ್ಸವ ಉದ್ಘಾಟನೆ ಮಾಡಲಿದ್ದಾರೆ. ಈ ದಿನ ವಿಜ್ಞಾನ ಪ್ರದರ್ಶನ ಮತ್ತು ಮಕ್ಕಳೊಂದಿಗೆ ವಿಜ್ಞಾನಿಗಳ ಸಂವಾದ ನಡೆಯಲಿದೆ. ಮಾ.28ರಂದು ಸಾಹಿತ್ಯೋತ್ಸವ ಕವಿಗೋಷ್ಠಿಯು ಕವಿ ಸುಬ್ಬು ಹೊಲೆಯಾರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಮಾ.29ರಂದು ಪಶ್ಚಿಮಘಟ್ಟ ರಕ್ಷಣೆಯ ಜನಾಂದೋಲನ ಹಾಗೂ ಶರಾವತಿ ಉಳಿಸಿ ಜಾಗೃತಿ ಸಮಾವೇಶ ನಡೆಯಲಿದೆ.

ಈ ಸಮಾವೇಶದಲ್ಲಿ ವಿವಿಧ ಮಠದ ಗುರೂಜಿಗಳು, ರೈತ ನಾಯಕರು ಕರಬೂರು ಶಾಂತಕುಮಾರು, ರಾಜ್ಯ ರೈತ ಸಂಘ ಹಾಘು ಹಸಿರು ಸೇನೆ ರಾಜ್ಯಾಧ್ಯಕ್ಷ ಎಚ್.ಆರ್.ಬಸವರಾಜಯ್ಯ ಭಾಗವಹಿಸಲಿದ್ದಾರೆ. ಸಮರೋಪ ಮಹಿಮಾ ಪಟೇಲ್ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಮಾ.30ರಂದು ಬೃಹತ್ ಉದ್ಯೋಗ ಮೇಳ ನಡೆಯಲಿದೆ. ಇದಕ್ಕೆ ವಿಧಾನಪರಿಷತ್ ಸದಸ್ಯ ಎಸ್ .ವಿ.ಸಂಕನೂರು, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ನಾರಾಯಣ ಗೌಡ , ಈಡೀಗ ಸಮಾಜದ ಅಧ್ಯಕ್ಷ ನಾಗರಾಜ ಗುತ್ತೇದಾರ ಆಗಮಿಸಲಿದ್ದಾರೆ. ಮಾ.31ರಂದು ಮೀನುಗಾರರ ಸಮ್ಮೇಳನ. ಏಪ್ರಿಲ್ 1ರಂದು ರೈತೋತ್ಸವ ಮತ್ತು ಪಾರಂಪರಿಕ ವೈದ್ಯರ ಸಮಾವೇಶ ನಡೆಯಲಿದೆ. ಇದರಲ್ಲಿ ವಿವಿಧ ಪಾರಂಪರಿಕ ವೈದ್ಯರು, ಜೀವವೈವಿಧ್ಯ ಮಂಡಳಿ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ. ಏ.2ರಂದು ಬೃಹತ್ ಆರೋಗ್ಯ ತಪಾಸಣೆ ದಾವಣಗೆರೆ ಎಸ್.ಎಸ್. ಆಸ್ಪತ್ರೆಯಿಂದ 30 ನುರಿತ ವೈದ್ಯರ ತಂಡದಿಂದ ನಡೆಯಲಿದೆ. ಶ್ರೀ ಕ್ಷೇತ್ರ ಬಂಗಾರಮಕ್ಕಿಯು ಅನ್ನ ದಾಸೋಹ, ಅಕ್ಷರ ದಾಸೋಹ ಮತ್ತು ಆಶ್ರಯ ದಾಸೋಹ ಸೇವೆಯ ಮೂಲಕ ಸಮಾಜದ ಹಿಂದುಳಿದ ವರ್ಗಗಳಿಗೆ ಸೇವೆ ಸಲ್ಲಿಸುತ್ತಿದೆ. ಗೋಶಾಲೆ, ಶಿಕ್ಷಣ ಸಂಸ್ಥೆಗಳು, ಮಹಿಳಾ ಸಬಲೀಕರಣ ಕಾರ್ಯಕ್ರಮ, ಆರೋಗ್ಯ ಮತ್ತು ಆಶ್ರಯ ಸೇವೆಯು ನಡೆಯುತ್ತಿದೆ ಎಂದು ಶ್ರೀ ಮಾರುತಿ ಗುರೂಜಿ ಹೇಳಿದರು.

ಉತ್ಸವದ ಎಲ್ಲ ದಿನಗಳಂದು ಕ್ಷೇತ್ರದಲ್ಲಿ ನಿತ್ಯದ ಪೂಜಾನುಷ್ಠಾನದ ಜೊತೆಗೆ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ನಡೆಯಲಿದೆ. ಉತ್ಸವದ ಕಾರ್ಯಕ್ರಮಗಳಿಗೆ ಧನಸಹಾಯ ಮಾಡುವವರು ಶ್ರೀ ವೀರಾಂಜನೇಯ ರಿಲಿಜಿಯಸ್ ಎಂಡ್ ಚಾರಿಟೇಬಲ ಟ್ರಸ್ಟ್, ಖಾತೆ ಸಂ, 120024182530, ಐ.ಎಫ್.ಸಿ ಕೋಡ್ ಸಿಎನ್‌ಆರ್‌ಬಿ 0010339,, ಕೆನರಾ ಬ್ಯಾಂಕ್, ಶಾಖೆಗೆ ರಸೊಪ್ಪಾ ಇಲ್ಲಿಗೆ ಸಂದಾಯ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ. ಉತ್ಸವಕ್ಕೆ ಎಲ್ಲ ಕಡೆಯಿಂದ ಆಗಮಿಸುವಂತೆ ಶ್ರೀ ಮಾರುತಿ ಗುರೂಜಿಯವರು ಆಹ್ವಾನಿಸಿದ್ದಾರೆ.

ಮಹದಾಯಿಗೆ ಅನುಮತಿ ನೀಡಲಿ: ಕೋನರಡ್ಡಿ



ಧಾರವಾಡ: ನೀರು ಅಮೃತಕ್ಕೆ ಸಮ. 4 ಟಿಎಂಸಿ ನೀರಿಗೆ ಮಹದಾಯಿ, ಕಳಸಾ-ಬಂಡೂರಿ ಹೋರಾಟ ಮಾಡುವ ಸ್ಥಿತಿ ಬಂತು. ಕೇಂದ್ರ ಸರ್ಕಾರದ ಅನುಮತಿ ಬಳಿಕ ಯೋಜನೆ ಅಷ್ಠಾನಗೊಳ್ಳಲಿದೆ ಎಂದು ಶಾಸಕ ಎನ್.ಎಚ್.ಕೋನರಡ್ಡಿ ಹೇಳಿದರು.

ನಗರದ ಹೊಲಯವದ ವಾಲ್ಮಿ (ನೆಲ-ಜಲ ಸಂಸ್ಥೆ)ಯಲ್ಲಿ ನಡೆದ ವಿಶ್ವ ಜಲ ದಿನಾಚರಣೆ ಉದ್ಘಾಟಿಸಿದ ಅವರು, ಮಹದಾಯಿಗೆ ಕೇಂದ್ರ ಅನುಮತಿ ನೀಡಿದರೆ, ನಾಲ್ಕು ಜಿಲ್ಲೆ, ಒಂಭತ್ತು ತಾಲೂಕಿನ ರೈತರಿಗೆ ಬಹಳಷ್ಟು ಅನುಕೂಲವಾಗಲಿದೆ ಎಂದರು.

ಡ್ಯಾಂನಲ್ಲಿ ಸಂಗ್ರಹಿಸಿದ ನೀರು, ಕಾಲುವೆ ಮೂಲಕ ಕೃಷಿ ಚಟುವಟಿಕೆಗೆ ಹರಿಸಲಿದೆ. ಕೃಷಿ ಭೂಮಿಗೆ ನೀರು ಸಾಕಾದ ಬಳಿಕ ಗೇಟ್ ಬಂದ್ ಮಾಡುವ ಸಂಕಲ್ಪ ರೈತರೇ ಮಾಡಬೇಕು. ನೀರು ಹಳ್ಳಿಗಳಿಗೆ ಹರಿಯದಂತೆ ಎಚ್ಚರಿಕೆ ವಹಿಸುವಂತೆ ಹೇಳಿದರು.

ಬೆಣ್ಣೆಹಳ್ಳ-ತುಪ್ಪರಿಹಳ್ಳದ ಅಭಿವೃದ್ಧಿಗೆ ಕಾಮಗಾರಿ ಕೈಗೊಳ್ಳಲಿದೆ. ನೀರಿದ್ದಲ್ಲಿ ಮಾತ್ರ ಕೃಷಿ. ರೈತರು ಕಾಲಕ್ಕೆ ತಕ್ಕಂತೆ ಹೊಸ ತಂತ್ರಜ್ಞಾನ ಮತ್ತು ಸೂಕ್ಷ್ಮ ನೀರಾವರಿ ಅಳವಡಿಸಿಕೊಂಡು, ಉತ್ತಮ ಬೆಳೆಗಳು ಬೆಳೆದು ಕೃಷಿ ಲಾಭ ಗಳಿಸಲು ಸಲಹೆ ನೀಡಿದರು.

ವಾಲ್ಮಿ ಸಂಸ್ಥೆ ನಿರ್ದೇಶಕ ಡಾ.ಗಿರೀಶ ಮರಡ್ಡಿ ಮಾತನಾಡಿ, ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಕೆಯೊಂದಿಗೆ ಪುಶು, ಸಸ್ಯ ಆಧಾರಿತ ಹಾಗೂ ಮೌಲ್ಯವರ್ಧಿತ ಒಕ್ಕಲುತನ ಮಾಡಿದರೆ ಮಾತ್ರವೇ ಕೃಷಿಯಲ್ಲಿ ಲಾಭ ನಿರೀಕ್ಷಿಸಲು ಸಾಧ್ಯ ಎಂದು ತಿಳಿಸಿದರು.

> ರೈತರು ಕೃಷಿ ಜಮೀನು ಮಾರಾಟ ಮಾಡಬಾರದು. ಕೃಷಿ ಜೊತೆ ಹೈನುಗಾರಿಕೆ, ಮೀನುಗಾರಿಕೆ ಇತ್ಯಾದಿ ಉಪಕಸಬು ಮೂಲಕ ಕೃಷಿಯನ್ನು ಲಾಭದ ಉದ್ಯಮ ಮಾಡಬೇಕು. ನೀರು ಮಿತವಾಗಿ ಬಳಸಬೇಕು. ಸಿರಿಧಾನ್ಯ ಬೆಳಗಳಿಗೆ ಹೆಚ್ಚು ಒತ್ತು ನೀಡಬೇಕು.
> ■ ಎನ್.ಎಚ್.ಕೋನರಡ್ಡಿ, ಶಾಸಕ

ಮಣ್ಣಿನ ಫಲವತ್ತತೆ ಸಂರಕ್ಷಿಸಿ, ಹೆಚಿಸಲು ಸಾವಯವ ಗೊಬ್ಬರ ಬಳಕೆ ಹೆಚ್ಚಿಸಿ, ರಾಸಾಯನಿಕ ಗೊಬ್ಬರ ಕಡಿಮೆ ಮಾಡಬೇಕು. ಸುಸ್ಥಿರ ನೀರಿನ ನಿರ್ವಹಣೆ, ತಂತ್ರಜ್ಞಾನದ ಶಿಕ್ಷಣ, ಸಕಾಲಕ್ಕೆ ತರಬೇತಿ ಕೃಷಿಕರಿಗೆ ಅಗತ್ಯವಿದೆ ಎಂದು ಒತ್ತಿ ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರಾದ ವಿಜಯ ಕುಲಕರ್ಣಿ, ಡಾ.ಗಿರೀಶ ಸೋನವಾಲ್ಕರ, ಸದಾಶಿವಗೌಡ ಪಾಟೀಲ, ಬಿ.ವೈ.ಬಂಡಿವಡ್ಡರ ಮತ್ತು ಡಾ.ವಿ.ಐ.ಬೆಣಗಿ ಅವರನ್ನು ಸನ್ಮಾನಿಸಲಾಯಿತು. ಇಂದುಧರ ಹಿರೇಮಠ ಸ್ವಾಗತಿಸಿದರು. ಸುರೇಶ ದೀಕ್ಷಿತ ವಂದಿಸಿದರು.

ನಕಲಿ ಅಂಕಪಟ್ಟಿ ಪ್ರಕರಣ: ಇಬ್ಬರಿಗೆ ಶಿಕ್ಷೆ

ವಿಜಯಪುರ: ನಕಲಿ ಅಂಕಪಟ್ಟಿ ಕೊಟ್ಟು ವಂಚಿಸಿದ ಆರೋಪಿಗಳ ಪೈಕಿ ಓರ್ವನಿಗೆ 2 ವರ್ಷ, ಮತ್ತೊಬ್ಬನಿಗೆ 1 ವರ್ಷ ಸಾದಾ ಕಾರಾಗೃಹ ಶಿಕ್ಷೆ ನೀಡಿ 2ನೇ ಅಪರ ಸಿಜೆ, ಜೆಎಂಎಫ್‌ಸಿ ನ್ಯಾಯಾಲಯ ಆದೇಶ ನೀಡಿದೆ.

ಜಿಲ್ಲೆಯ ಮಮದಾಪುರ ಗ್ರಾಮದ ಸಿದ್ದಪ್ಪ ಕುಲ್ಲೊಳ್ಳಿ ಪಾತ್ರೋಟ್ 2 ವರ್ಷ ಹಾಗೂ ಎಲ್.ಪಿ.ಚವ್ಹಾಣ 1 ವರ್ಷ ಶಿಕ್ಷೆಗೆ ಒಳಗಾದ ಆರೋಪಿಗಳು. ಈ ಆರೋಪಿಗಳು ಬಬಲೇಶ್ವರ ಪೊಲೀಸ್ ಠಾಣೆಯ ಹದ್ದಿನ ಮಮದಾಪೂರ ಗ್ರಾಮದಲ್ಲಿರುವ ಸರ್ಕಾರಿ ಕನ್ನಡ ಗಂಡು ಮಕ್ಕಳ ಪ್ರಾಥಮಿಕ ಶಾಲೆಯಲ್ಲಿ ಆ.27, 2012ರಂದು ಆರೋಪಿ ಸಿದ್ದಪ್ಪ ಪಾತ್ರೋಟ್ ಈತ ಕೆ.ಎಸ್.ಆರ್ .ಟಿ.ಸಿ ಕಚೇರಿ ಸಹಾಯಕ ಗ್ರೂಪ್ ಡಿ ಹುದ್ದೆಗೆ ನೇಮಕಾತಿ ಹೊಂದುವ ಸಲುವಾಗಿ ಆರೋಪಿ ಎಲ್.ಪಿ. ಚವ್ಹಾಣ ಈತನ ಸಹಾಯದಿಂದ 7ನೇ ತರಗತಿ ಅಂಕಪಟ್ಟಿಯಲ್ಲಿ ತಾನು ಪಡೆದ ಮೂಲ ಅಂಕಗಳಾದ 270ರ ಬದಲಾಗಿ 589 ಅಂಕಗಳ ಖೊಟ್ಟಿ ಅಂಕಪಟ್ಟಿಯನ್ನು ಪಡೆದು ಡಿ.ದರ್ಜೆ ಹುದ್ದೆಗೆ ಆಯ್ಕೆಯಾಗಿದ್ದು, ಆರೋಪಿತನು ತಾನು 589 ಅಂಕಗಳನ್ನು ಪಡೆದಿರುತ್ತೇನೆ ಅಂತ ಕೆ.ಎಸ್. ಆರ್.ಟಿ.ಸಿ ಕೇಂದ್ರ ಕಚೇರಿ ಬೆಂಗಳೂರು ಅವರು ಮೂಲ ದಾಖಲಾತಿಗಳ ಪರಿಶೀಲನಾ ಕಾಲಕ್ಕೆ ಸಹಿ ಮಾಡಿದ್ದು ಇರುತ್ತದೆ.

ಇದರಲ್ಲಿ ಆರೋಪಿ ಎಲ್.ಪಿ.ಚವ್ಹಾಣ ಈತ ಆರೋಪಿ ಸಿದ್ದಪ್ಪ ಪಾತ್ರೋಟ್ ಈತನಿಗೆ ಅವನು ಪಡೆದ ಮೂಲ ಅಂಕಗಳ ಬದಲಾಗಿ 589 ಅಂಕಪಟ್ಟಿಯನ್ನು ನೀಡಿ, ಆ ಕಾಲಕ್ಕೆ ಆರೋಪಿತನು ತನ್ನ ಶಾಲಾ ವಾರ್ಷಿಕ ಪರಿಣಾಮ ರಜಿಸ್ಟರ್‌ಲ್ಲಿದ್ದ ಮೂಲ ಅಂಕಗಳಿಗೆ ಬಿಳಿ ಶಾಹಿ ಹಚ್ಚಿ ಅವುಗಳ ಮೇಲೆ ಹೆಚ್ಚಿನ ಅಂಕಗಳನ್ನು ನಮೂದಿಸಿ ಸಿದ್ದಪ್ಪನಿಗೆ ಖೋಟ್ಟಿ ಅಂಕಪಟ್ಟಿ ಸೃಷ್ಟಿಸಿ ಸಹಿ ಮಾಡಿ ವಂಚಿಸಿದ ಬಗ್ಗೆ ಬಬಲೇಶ್ವರ ಪೊಲೀಸ್ ಠಾಣೆ ದಾಖಲಾಗಿತ್ತು.

ಈ ಪ್ರಕರಣದ ತನಿಖೆ ಪೂರ್ಣಗೊಳಿಸಿ ಆರೋಪಿತರ ಮೇಲೆ ಆಪಾದನಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು. ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಗೊಂಡ 2 ನೇ ಅಪರ ಸಿ.ಜೆ, ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶ ಸಂಪತ್ತಕುಮಾರ ಪ್ರಹ್ಲಾದ ಬಳೋಲಗಿಡದ ಇವರು ಅಭಿಯೋಗದ ಪರ ಹಾಜರು ಪಡಿಸಲಾದ ಸಾಕ್ಷಾಧಾರಗಳನ್ನು ಪರಿಶೀಲಿಸಿ, ಅಭಿಯೋಗವು ತನ್ನ ಪ್ರಕರಣ ರುಜುವಾತು ಪಡಿಸುವಲ್ಲಿ ಯಶಸ್ವಿಯಾಗಿದೆ ಎಂದು ತೀರ್ಮಾನಿಸಿ 1ನೇ ಆರೋಪಿತನಾದ ಸಿದ್ದಪ್ಪ ಕುಲ್ಲೊಳ್ಳಿ ಪಾತ್ರೋಟ್ ಈತನಿಗೆ 2 ವರ್ಷ ಸಾದಾ ಶಿಕ್ಷೆ ಮತ್ತು 4,000 ರೂ. ದಂಡ ಹಾಗೂ 2ನೇ ಆರೋಪಿ ಎಲ್.ಪಿ. ಚವ್ಹಾಣ ಈತನಿಗೆ ಒಂದು ವರ್ಷ ಸಾದಾ ಶಿಕ್ಷೆ ಮತ್ತು 1,000 ರೂ. ದಂಡ ವಿಧಿಸಿ, ತೀರ್ಪು ನೀಡಿದ್ದಾರೆ.

ಈ ಪ್ರಕರಣದಲ್ಲಿ ಪಿಎಸ್‌ಐ ರಮೇಶ ಅವಜಿ ಪ್ರಕರಣದ ತನಿಖೆ ಮಾಡಿ ಆಪಾದನಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಸರ್ಕಾರದ ಪರವಾಗಿ 2ನೇ ಅಪರ ಸಿ.ಜೆ, ಜೆ.ಎಂ. ಎಫ್.ಸಿ ನ್ಯಾಯಾಲಯ ಸಹಾಯಕ ಸರ್ಕಾರಿ ಅಭಿಯೋಜಕರಾದ ಎಸ್.ವಿ.ರಾಠೋಡ ಹಾಗೂ ಎಮ್.ಎನ್.ಪಾಟೀಲ ವಾದ ಮಂಡಿಸಿದ್ದರು.

ನಿಧಿ ದೋಚಿದ ಕಳ್ಳನಿಗೆ ಕಾಡುತ್ತಿದೆ ಪಾಪಪ್ರಜ್ಞೆ

ಹನುಮಸಾಗರ: ಸಮೀಪದ ಮಾವಿನ ಇಟಗಿ ಗ್ರಾಮದ ಶ್ರೀ ಸೋಮಶಂಕರಲಿಂಗೇಶ್ವರ ದೇವಸ್ಥಾನದ ನಿಧಿ ದೋಚಿದ ವ್ಯಕ್ತಿಯೋರ್ವ ಭಾನುವಾರ ಪೊಲೀಸ್ ಠಾಣೆಯಲ್ಲಿ ಶರಣಾದ ಘಟನೆ ನಡೆದಿದೆ.

ಇಳಕಲ್ಲ ನಿವಾಸಿ ಮೌಲಾಸಾಬ್ ಖಾಸಿಮ್ ಸಾಬ್ ಮುಜಾವರ (45) ಶರಣಾದ ಕಳ್ಳ. ಆರೋಪಿ ಪಂಕ್ಚರ್ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದ. ಎರಡು ವರ್ಷಗಳ ಹಿಂದೆ ನಾನು ಸೇರಿದಂತೆ ನಾಲ್ಕು ಜನರು ಒಂದುಗೂಡಿ ದೇವಸ್ಥಾನದ ನಿಧಿ ತೆಗೆದಿದ್ದು, ಆ ಸಮಯದಲ್ಲಿ 100 ಬಂಗಾರದ ನಾಣ್ಯ ಹಾಗೂ ಒಂದು ಬೆಳ್ಳಿ ಕಡಗ ಸಿಕ್ಕಿದೆ. ನಿಧಿ ಸಿಕ್ಕ ಅನಂತರ ತಮ್ಮ ಜೀವನದಲ್ಲಿ ಅನೇಕ ಸಮಸ್ಯೆಗಳಾಗಿದ್ದು, ಕುಟುಂಬದಲ್ಲಿ ಅಶಾಂತಿ, ವೈಯಕ್ತಿಕ ಕಷ್ಟ, ಆರೋಗ್ಯ ಸಮಸ್ಯೆಗಳು ತಲೆದೋರಿದೆ. ಈ ಘಟನೆಯ ಅನಂತರ ಹೃದಯ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದೇನೆ. ಇದು ದೇವರ ಶಾಪ ಎಂಬ ಭಯ ಕಾಡುತ್ತಿದೆ ಎಂದು ಶರಣಾದ ವ್ಯಕ್ತಿ ಹೇಳಿಕೊಂಡಿದ್ದಾನೆ.

ಸಿಕ್ಕ ಸಿಧಿ ದೇಗುಲದ ಕಮಿಟಿಗೆ ಹಿಂದಿರುಗಿಸೋಣ ಎಂದು ನನ್ನ ಜತೆಗಾರರನ್ನು ಮನವೊಲಿಸಲು ಪ್ರಯತ್ನಿಸಿದ್ದರೂ ಅವರು ಒಪ್ಪುತ್ತಿಲ್ಲ. ನನ್ನ ನಿಧಿ ಪಾಲನ್ನು ಸಹ ಅವರು ನನಗೆ ಕೊಟ್ಟಿಲ್ಲ. ಈ ಕುರಿತು ಕೇಳಿದರೆ ನನಗೆ ಬೆದರಿಕೆ ಹಾಕಿ ಹೊಡೆಯಲು ಬರುತ್ತಾರೆ ಎಂದು ಘಟನೆಯ ಬಗ್ಗೆ ದೇಗುಲದ ಕಮಿಟಿ ಹಾಗೂ ಪಿಎಸ್‌ಐ ಮುಂದೆ ಸ್ವ ಇಚ್ಛೆಯಿಂದ ಒಪ್ಪಿಕೊಂಡಿದ್ದಾನೆ.

ಉಳಿದ ಆರೋಪಿಗಳನ್ನು ಪೊಲೀಸರು ಪತ್ತೆ ಮಾಡಬೇಕಿದೆ. ಕದ್ದ ವಸ್ತುಗಳು ಎಲ್ಲಿವೆ ಎನ್ನುವ ಮಾಹಿತಿಯೂ ಈ ವರೆಗೆ ಲಭ್ಯವಾಗಿಲ್ಲ. ಈ ಘಟನೆ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದು, ಉಳಿದ ಆರೋಪಿಗಳ ಪತ್ತೆಗೆ ಜಾಲ ಬೀಸಿದ್ದಾರೆ. ದೇವಸ್ಥಾನದ ನಿಧಿ ದೋಚಿದ ಪ್ರಕರಣ ಇದೀಗ ಗ್ರಾಮದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಗೃಹ ಇಲಾಖೆ ಸಂಪೂರ್ಣ ನಿಷ್ಕ್ರಿಯ: ಭಾಸ್ಕರ್ ರಾವ್

ಕಲಬುರಗಿ: ರಾಜ್ಯದ ಗೃಹ ಇಲಾಖೆ ಸಂಪೂರ್ಣ ನಿಷ್ಕ್ರಿಯಗೊಂಡಿದ್ದು, ಅಧಿಕಾರಿಗಳ ವರ್ಗಾವಣೆಯಲ್ಲಿ ಭ್ರಷ್ಟಾಚಾರದ ಅಧಿಪತ್ಯ ನಡೆಯುತ್ತಿದೆ. ಕೋಟಿ ಕೋಟಿ ಹಣ ನೀಡಿ ಆಯಕಟ್ಟಿನ ಜಾಗಕ್ಕೆ ಬರುವ ಅಧಿಕಾರಿಗಳು ಜನರ ಸೇವೆ ಮಾಡುವ ಬದಲು, ತಾವು ಹೂಡಿದ ಬಂಡವಾಳವನ್ನು ವಾಪಸ್ ಪಡೆಯುವ ದಂಧೆಯಲ್ಲಿ ತೊಡಗಿದ್ದಾರೆ ಎಂದು ಬಿಜೆಪಿ ಮುಖಂಡ, ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ರಾಜ್ಯ ಸರ್ಕಾರದ ವಿರುದ್ಧ ಕೆಂಡಕಾರಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಕಾನೂನು ಸುವ್ಯವಸ್ಥೆ ಮತ್ತು ಆರ್ಥಿಕ ಸ್ಥಿತಿಗತಿಯ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿ, ರಾಜ್ಯದಲ್ಲಿ ದಿನೇ ದಿನೇ ಅಪರಾಧ ಚಟುವಟಿಕೆಗಳು



ಮಿತಿ ಮೀರುತ್ತಿದ್ದರೂ ಗೃಹ ಸಚಿವ ಪರಮೇಶ್ವರ್ ಅವರಿಗೆ ಇಲಾಖೆಯ ಮೇಲೆ ಯಾವುದೇ ಹಿಡಿತವಿಲ್ಲದಂತಾಗಿದೆ. ಇಲಾಖೆಯ ಬಗ್ಗೆ ಪ್ರಿಯಾಂಕ್ ಖರ್ಗೆ ಸೇರಿದಂತೆ ಎಲ್ಲ ಸಚಿವರು ಹೇಳಿಕೆ ನೀಡುತ್ತಿರುವುದು ಗೊಂದಲ ಮೂಡಿಸಿದೆ.

ಸಮರ್ಥ ನಾಯಕತ್ವದ ಕೊರತೆಯಿಂದಾಗಿ ಪೊಲೀಸರು ಇಂದು ರಕ್ಷಕರಾಗುವ ಬದಲು ಭಕ್ಷಕರಾಗುತ್ತಿದ್ದಾರೆ. ರಾಜ್ಯದಲ್ಲಿ ಎರಡು 'ಪವರ್ ಸೆಂಟರ್'ಗಳಿದ್ದು, ಅಧಿಕಾರ ಯಾರಿಂದ ನಡೆಯುತ್ತಿದೆ ಎಂಬುದೇ ತಿಳಿಯದಂತಾಗಿದೆ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ವಿಭಾಗ ಸಹ ಪ್ರಭಾರಿ ಶರಣಪ್ಪ ತಳವಾರ, ಪ್ರಧಾನ ಕಾರ್ಯದರ್ಶಿ ಶಿವಯೋಗಿ ನಾಗೇನಹಳ್ಳಿ, ರಾಜ್ಯ ಓಬಿಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಅವ್ವಣ್ಣಾ ಮ್ಯಾಕೇರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಬೆಣ್ಣೂರಕರ್, ಶೋಭಾ ಬಾಣಿ,ಆನಂದ ಪಾಟೀಲ, ಬಾಬುರಾವ್ ಹಾಗರಗುಂಡಗಿ ಇದ್ದರು.

ಜಾಗತಿಕ ಅಸ್ಥಿರತೆ ನಡುವೆಯೂ ಭಾರತ ಅಚಲ

ಇದೇ ವೇಳೆ ಪ್ರಧಾನಿ ಮೋದಿ ಅವರ ವಿದೇಶಿ ನೀತಿಯನ್ನು ಶ್ಲಾಘಿಸಿದ ಭಾಸ್ಕರ್ ರಾವ್, ವಿಶ್ವದ ಹಲವು ರಾಷ್ಟ್ರಗಳು ಯುದ್ಧದ ನೆರಳಿನಲ್ಲಿ ಇಂಧನ ಕೊರತೆಯಿಂದ ತತ್ತರಿಸುತ್ತಿವೆ. ಆದರೆ, ಭಾರತವು ಶೇ.70ರಷ್ಟು ಇಂಧನ ಆಮದು ಮಾಡಿಕೊಳ್ಳುತ್ತಿದ್ದರೂ, ಮುನ್ನೆಚ್ಚರಿಕೆಯಾಗಿ ಅಗತ್ಯ ವಸ್ತುಗಳ ಸಂಗ್ರಹಣೆ ಮಾಡಿಕೊಂಡಿದ್ದರಿಂದ ದೇಶದಲ್ಲಿ ಯಾವುದೇ ಆತಂಕ ಸೃಷ್ಟಿಯಾಗಿಲ್ಲ ಎಂದರು.

> ಕಾಶ್ಮೀರದಿಂದ ಕನ್ಯಾ ಕುಮಾರಿವರೆಗೆ ಬೆಲೆ ಏರಿಕೆ ಅಥವಾ ಪೆಟ್ರೋಲ್-ಡೀಸೆಲ್ ಅಭಾವವಾಗದಂತೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯಶಸ್ವಿಯಾಗಿ ನಿಭಾಯಿಸಿದೆ. ಅಂತಾರಾಷ್ಟ್ರೀಯ ಸಂಬಂಧದಲ್ಲಿ ದೇಶದ ಹಿತಾಸಕ್ತಿಯನ್ನೇ ಪರಮೋಚ್ಚವಾಗಿಟ್ಟುಕೊಂಡು ಭಾರತ ಇಂದು ಬಲಿಷ್ಠವಾಗಿ ನಿಂತಿದೆ.
> ■ ಭಾಸ್ಕರ್ ರಾವ್, ಬಿಜೆಪಿ ಮುಖಂಡ

ಆರ್ಥಿಕ ದಿವಾಳಿಯತ್ತ ರಾಜ್ಯ

ಸಿದ್ದರಾಮಯ್ಯ ಮಂಡಿಸಿದ ಬಜೆಟ್ ದೂರದೃಷ್ಟಿ ಇಲ್ಲದ ಶೂನ್ಯ ಬಜೆಟ್ ಎಂದು ಟೀಕಿಸಿದ ಅವರು, ಸಂಪನ್ಮೂಲ ಕ್ರೋಢೀಕರಣಕ್ಕೆ ಯಾವುದೇ ಆದಾಯದ ಮೂಲಗಳಿಲ್ಲದೆ ಸರ್ಕಾರ ವಿಪರೀತ ಸಾಲ ಮಾಡುತ್ತಿದೆ. ಇದು ಹೀಗೆಯೇ ಮುಂದುವರಿದರೆ ಮುಂದಿನ ದಿನಗಳಲ್ಲಿ ಕರ್ನಾಟಕ ಆರ್ಥಿಕವಾಗಿ ದಿವಾಳಿಯಾಗುವುದು ನಿಶ್ಚಿತ. ಇಡೀ ಕಾಂಗ್ರೆಸ್ ಪಕ್ಷವೇ ಕುಟುಂಬ ರಾಜಕಾರಣದ ಮೇಲೆ ನಿಂತಿದ್ದು, ದಾವಣಗೆರೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಅನ್ಯಾಯ ಮಾಡುವ ಮೂಲಕ ತನ್ನ ನೈಜ ಮುಖವಾಡ ಬಯಲು ಮಾಡಿದೆ ಎಂದರು.

ಗೋ ಹತ್ಯೆ ಮಾಡಿ ಮಾಂಸ ಕದ್ದೊಯ್ದ ದುಷ್ಟರು

ಹೊನ್ನಾವರ: ತಾಲೂಕಿನ ಕಡ್ಲೆ ಗ್ರಾಮದ ವಂದೂರಿನ ಅರಣ್ಯ ಇಲಾಖೆಯ ಪ್ರದೇಶದಲ್ಲಿ ಮೇಯಲು ಹೋದ ಗೋವನ್ನು ದುಷ್ಟರು ಹತ್ಯೆ ಮಾಡಿ ಮಾಂಸ ತೆಗೆದುಕೊಂಡು ಹೋಗಿ ಅಸ್ಥಿ ಪಂಜರ ಅರಣ್ಯ ಪ್ರದೇಶದಲ್ಲಿ ಬಿಟ್ಟು ಹೋದ ಘಟನೆ ಬೆಳಕಿಗೆ ಬಂದಿದೆ.

ವಂದೂರು ಸಮೀಪದ ಜಡಿಗದ್ದೆಯ ಅರಣ್ಯ ಇಲಾಖೆಯ ಪ್ರದೇಶದಲ್ಲಿ ಗೋವನ್ನು ವಧೆ ಮಾಡಿ ರುಂಡ ಮತ್ತು ಕಾಲಿನ ಭಾಗವನ್ನು ಪಕ್ಕದಲ್ಲಿ ಬಿಸಾಡಿ ಮಾಂಸ ಕದ್ದೊಯ್ದಿದ್ದಾರೆ. ವಂದೂರಿನ ಗಣಪತಿ ಮಹಾಬಲೇಶ್ವರ ಭಟ್ ಎನ್ನುವವರ ಮನೆಯಲ್ಲಿ 27 ಗೋವುಗಳಿದ್ದವು. ಭಾನುವಾರ ಮುಂಜಾನೆ ಮೇಯಲು ಬಿಟ್ಟ ಆಕಳು ಬರಲಿಲ್ಲ. ಸಾಯಂಕಾಲ ಸಮೀಪದ ಪ್ರದೇಶದಲ್ಲಿ ಹುಡುಕಿದರೂ ಸುಳಿವು ಸಿಗಲಿಲ್ಲ.

ಸೋಮವಾರ ಮುಂಜಾನೆ ಅರಣ್ಯ ಇಲಾಖೆ ಪ್ರದೇಶದಲ್ಲಿಗೋವಿನ ತಲೆ ಭಾಗ ನೋಡಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಚರ್ಮದ ಮೇಲ್ಪದರ ಹಾಗೂ ಕಾಲಿನ ಭಾಗ ನೋಡುತ್ತಿದ್ದಂತೆ ಇದು ವಧೆ ಮಾಡಿ ಮಾಂಸ ಸಾಗಾಟ ಮಾಡಿದ್ದಾರೆಂದು ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಸೋಮವಾರ ಮುಂಜಾನೆ ಸಾರ್ವಜನಿಕರು ಗೋ ಹತ್ಯೆಯ ಬಗ್ಗೆ ಇಲಾಖೆಗೆ ಮಾಹಿತಿ ನೀಡಿದಾಗ ಪಿಎಸ್‌ಐ ಮಂಜುನಾಥ ನಾಯ್ಕ ಪರಿಶೀಲನೆ ನಡೆಸಿದರು. ನಂತರ ಸಿಪಿಐ ಸಿದ್ದರಾಮೇಶ್ವರ, ಪಿಎಸ್‌ಐ ಮಹಾಂತೇಶ ವಾಲ್ಮಿಕಿ ಹಾಗೂ ಸಿಬ್ಬಂದಿಗಳು ಆಗಮಿಸಿ ವಿವಿಧ ಆಯಾಮದಲ್ಲಿ ತನಿಖೆ ಮುಂದುವರಿಸಿದ್ದಾರೆ.

ಕುಟುಂಬಸ್ಥರಿಂದ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಈ ಪ್ರದೇಶಕ್ಕೆ ಆಗಮಿಸಿದ ವಾಹನಗಳು, ಸಿಸಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ತನಿಖೆ ಚುರುಕುಗೊಳಿಸಿದ್ದಾರೆ. ಡಿವೈಎಸ್ಪಿ ಬಿ ಗಿರೀಶ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳಿಂದ ಘಟನೆಯ ಮಾಹಿತಿ ಪಡೆದಿದ್ದಾರೆ.

ಜನವರಿ 2025ರಲ್ಲಿ ಕೊಂಡಾಕುಳಿ ಗರ್ಭ ಧರಿಸಿದ ಗೊ ಹತ್ಯೆ ಪ್ರಕರಣ ಕಹಿ ನೆನಪು ಮಾಸುವ ಮುನ್ನ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದ್ದು ಗೋ ಪಾಲಕರಿಗೆ ಆಘಾತ ಮೂಡಿಸಿದೆ. ಆರೋಪಿಗಳನ್ನು ಬಂಧಿಸುವಂತೆ ಹಿಂದೂ ಪರ ಸಂಘಟನೆಯವರು ಪೋಲಿಸರಿಗೆ ಮನವಿ ಮಾಡಿ ಆರೋಪಿಗಳನ್ನು ಬಂಧಿಸಿ ಗುಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಲು ಆಗ್ರಹಿಸಿದ್ದಾರೆ.

ವಾಣಿಜ್ಯ ಅನಿಲ ನೋಂದಣಿ ಕಡ್ಡಾಯ

ಪುಟ 01➔ ರಾಜ್ಯದಲ್ಲಿ ಹೋಟೆಲ್ ಮೊದಲಾದ ವಾಣಿಜ್ಯ ಬಳಕೆಯ ಉದ್ದೇಶಕ್ಕಾಗಿ ಶೇ.20ರಷ್ಟು ಸಿಲಿಂಡರ್ ಪೂರೈಕೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು, ರಾಜ್ಯಕ್ಕೆ ಪ್ರತಿದಿನ 16 ಸಾವಿರ ಸಿಲಿಂಡರ್‌ಗಳು ಪೂರೈಕೆಯಾಗುತ್ತಿವೆ. ಈ ಪೈಕಿ 10 ಸಾವಿರ ಸಿಲಿಂಡರ್‌ಗಳನ್ನು ಹೋಟೆಲ್, ರೆಸ್ಟೋರೆಂಟ್‌ಗಳು ಸೇರಿದಂತೆ ಮುಂತಾದ ಆಹಾರ ಸಂಬಂಧ ಉದ್ಯಮದಲ್ಲಿ ತೊಡಗಿರುವ ಸಂಸ್ಥೆಗಳಿಗೆ ಆದ್ಯತೆ ಮೇರೆಗೆ ಪೂರೈಕೆ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಸಿಎಂ ಪತ್ರಕ್ಕೆ ಕೇಂದ್ರ ಸ್ಪಂದನೆ: ವಾಣಿಜ್ಯ ಉದ್ದೇಶದ ಸಿಲಿಂಡರ್ ಪೂರೈಕೆ ಪ್ರಮಾಣ ಹೆಚ್ಚಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರೆದಿರುವ ಪತ್ರಕ್ಕೆ ಕೇಂದ್ರ ಸರ್ಕಾರ ಸ್ಪಂದಿಸಿರುವುದು ಸಂತೋಷ. ಈ ಸಂಬಂಧ ಸೋಮವಾರ ಬೆಳಗ್ಗೆ ತೈಲ ಕಂಪನಿಗಳ ಅಧಿಕಾರಿಗಳ ಜತೆಗೆ ಸಭೆ ನಡೆಸಲಾಯಿತು. ರಾಜ್ಯಕ್ಕೆ 45 ಸಾವಿರ ವಾಣಿಜ್ಯ ಸಿಲಿಂಡರ್‌ಗಳ ಅಗತ್ಯವಿದೆ. ಮೊದಲು ರಾಜ್ಯಕ್ಕೆ ಸುಮಾರು 9 ಸಾವಿರ ಸಿಲಿಂಡರ್‌ಗಳು ಪೂರೈಕೆಯಾಗುತ್ತಿದ್ದವು. ಇದೀಗ ಅದರ ಪ್ರಮಾಣ 16 ಸಾವಿರಕ್ಕೆ ಏರಿಕೆಯಾಗಿವೆ ಎಂದು ಮಾಹಿತಿ ನೀಡಿದರು.

ಸಿಲಿಂಡರ್ ಪೂರೈಕೆ ಮೂಲಕ ಹಾಸ್ಟೆಲ್‌ಗಳಿಗೆ ಪ್ರತಿ ದಿನದ ಲೆಕ್ಕದಂತೆ 4,200, ಕ್ಯಾಂಟೀನ್‌ಗಳಿಗೆ ಹಾಗೂ ಇತರೆ ಸಂಸ್ಥೆಗಳಿಗೆ 1,200 ಹಾಗೂ ಹೋಟೆಲ್, ಡಾಬಾ, ಸೇರಿದಂತೆ ಇತರೆ ಆಹಾರ ಸಂಸ್ಕರಣಾ ಉದ್ದಿಮೆಯಲ್ಲಿ ತೊಡಗಿರುವವರಿಗೆ ಸುಮಾರು 10 ಸಾವಿರ ಸಿಲಿಂಡರ್‌ಗಳನ್ನು ಪ್ರತಿದಿನ ಪೂರೈಸಲಾಗುತ್ತದೆ. ತುರ್ತು ಅಗತ್ಯತೆಗಳಿಗೆ ಸುಮಾರು 205 ಸಿಲಿಂಡರ್‌ಗಳನ್ನು ಶೇಖರಿಸಲಾಗಿದ್ದು, ಆದ್ಯತೆ ಮೇರೆಗೆ ಅವುಗಳನ್ನು ವಿತರಿಸಲಾಗುವುದು ಎಂದರು.

ಇದೇ ವೇಳೆ ಮೇಲ್ಮನೆ ಸದಸ್ಯ ಐವನ್ ಡಿಸೋಜಾ ಅವರು, ಕೇಂದ್ರ ಸರ್ಕಾರ ಶೇ.20 ರಷ್ಟು ಮಾತ್ರ ವಾಣಿಜ್ಯ ಸಿಲಿಂಡರ್ ಪೂರೈಕೆ ಹೆಚ್ಚಿಸಿದೆ. ಆದರೆ, ಇನ್ನೂ ಶೇ.80 ರಷ್ಟು ಹೋಟೆಲ್‌ಗಳು ಮುಚ್ಚಬೇಕೆ? ಸಿಲಿಂಡರ್ ಇಲ್ಲದ ಪಕ್ಷದಲ್ಲಿ ಸೌದೆ–ಕಟ್ಟಿಗೆಯಾದರೂ ಹೋಟೆಲ್‌ನವರಿಗೆ ಪೂರೈಸಿದರೆ ಅವರು ಹೋಟೆಲ್ ನಡೆಸುತ್ತಾರೆ ಎಂದು ಹೇಳಿದರು. ಆಗ ಪರಿಸರ ಸಚಿವ ಈಶ್ವರ ಖಂಡ್ರೆ, ಗಿಡ–ಮರಗಳನ್ನು ಕಡಿಯುವ ಹಾಗಿಲ್ಲ, ಈಗಾಗಲೇ ಸ್ಪಷ್ಟವಾದ ಆದೇಶವನ್ನು ಹೊರಡಿಸಲಾಗಿದೆ ಎಂದು ಹೇಳಿದರು.

ಮಧ್ಯಪ್ರವೇಶಕ್ಕೆ ಹೈ ನಿರಾಕರಣೆ

ಪುಟ 01➔ ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ನಮ್ಮ ಸರ್ಕಾರವು ಶಕ್ತಿಮೀರಿ ಕೆಲಸ ಮಾಡುತ್ತಿದೆ. ಇದನ್ನು ನ್ಯಾಯಾಂಗ ಪರಿಶೀಲನೆಗೆ ಒಳಪಡಿಸಲಾಗದು. ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ನ್ಯಾಯಾಲಯಗಳು ಈ ವಿಚಾರದಲ್ಲಿ ಭಾಗಿಯಾಗಬಾರದು. ಹೀಗಾಗಿ ಈ ಅರ್ಜಿ ಇತ್ಯರ್ಥಪಡಿಸಲಾಗಿದೆ ಎಂದು ಪೀಠ ಹೇಳಿತು. ಇದಕ್ಕೂ ಮುನ್ನ, ತುಷಾರ್ ಮೆಹ್ತಾ ಅವರು ಪರಿಸ್ಥಿತಿ ಬದಲಾಗುತ್ತಿದ್ದು, ಭಾರತದಲ್ಲಿ ಎಲ್‌ಪಿಜಿ ಪೂರೈಕೆ ವ್ಯತ್ಯಯ ಕಡಿಮೆ ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ. ನಮ್ಮ ನಿಯಂತ್ರಣದಲ್ಲಿಲ್ಲದ ಕೆಲವು ಬೆಳವಣಿಗಳಿಂದ ಈ ಪರಿಸ್ಥಿತಿ ನಿರ್ಮಾಣವಾಗದ್ದು, ಎಲ್‌ಪಿಜಿ ಪೂರೈಕೆಯಲ್ಲಿ ಕೊರತೆಯಾಗುವುದನ್ನು ತಪ್ಪಿಸಲು ಭಾರತ ಸರ್ಕಾರ ಕೆಲಸ ಮಾಡುತ್ತಿದೆ. ಈ ವಿಚಾರವನ್ನು ಕಾರ್ಯಾಂಗಕ್ಕೆ ಬಿಡಬೇಕು. ಪ್ರತಿದಿನ ಪರಿಸ್ಥಿತಿ ಬದಲಾಗುತ್ತಿದ್ದು, ಆದ್ಯತೆ ಬದಲಾಗಬೇಕಿದೆ. ಹೋಟೆಲ್‌ಗಳಿಗೆ ಎಲ್‌ಪಿಜಿ ಪೂರೈಸಬೇಕೋ ಅಥವಾ ಮನೆಗಳಿಗೋ ಎಂಬುದು ನಮಗೆ ತಿಳಿಯದಾಗಿದೆ. ಹಲವು ವಿಚಾರಗಳು ನಮ್ಮ ನಿಯಂತ್ರಣದಲ್ಲಿಲ್ಲ ಎಂದರು. ಆಗ ಪೀಠವು ಹೋಟೆಲ್‌ಗಳಿಗೆ ಶುಭ ಸುದ್ದಿ ಇದೆಯೇ? ಹೆಚ್ಚುವರಿ ಸೂಚನೆ ಏನಾದರೂ ಇದೆಯೇ ಎಂದು ಕೇಳಿತು. ಇದಕ್ಕೆ ಮೆಹ್ತಾ ಅವರು ಸದ್ಯಕ್ಕೆ ಇಲ್ಲ ಎಂದರು. ಒಂದು ಹಂತದಲ್ಲಿ ಪೀಠವು ರಾಷ್ಟ್ರಾದ್ಯಂತ ಎಲ್‌ಪಿಜಿ ಸಿಲಿಂಡರ್ ಹಂಚಿಕೆಯ ಕುರಿತು ಕಳವಳ ವ್ಯಕ್ತವಾಗಿರುವುದರ ಕುರಿತು ಪ್ರಸ್ತಾಪಿಸಿತು. ಇದಕ್ಕೆ ಮೆಹ್ತಾ ಅವರು ಇಂಥ ವಿಚಾರಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಜತೆ ಸಮಾಲೋಚನೆ ನಡೆಸುತ್ತದೆ. ಎರಡೂ ಕಡೆಯ ಸರ್ಕಾರಗಳು ಒಂದೇ ನಿಲುವು ತಳೆಯಬೇಕಾಗುತ್ತದೆ. ಹಂಚಿಕೆದಾರರಿಂದ ಎಲ್‌ಪಿಜಿ ಪೂರೈಕೆಯಲ್ಲಿ ವಂಚನೆ ಕಂಡುಬಂದರೆ ರಾಜ್ಯ ಸರ್ಕಾರವು ಕಠಿಣ ಕ್ರಮಕ್ಕೈಗೊಳ್ಳಬೇಕು ಎಂದರು.

ಮತಪತ್ರ ಬಳಕೆಗೆ ಬಿಜೆಪಿ-ಕೈ ಜಟಾಪಟಿ

ಬೆಂಗಳೂರು: ಇವಿಎಂ ಬೇಡ, ಮತಪತ್ರ ಬೇಕು ಎಂಬ ವಿಚಾರದಲ್ಲಿ ವಿಧಾನಸಭೆಯಲ್ಲಿ ಆಡಳಿತ ಹಾಗೂ ವಿಪಕ್ಷದ ನಡುವೆ ತೀವ್ರ ಜಟಾಪಟಿ ನಡೆಯಿತು. ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ ಪರ್ಯಾಲೋಚನೆಗೆ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿ, ಸಭಾತ್ಯಾಗ ನಡೆಸಿದರು.

ವಿಧೇಯಕ ಪರ್ಯಾಲೋಚನೆಗೆ ಕೋರಿ ಮಾತನಾಡಿದ ಪ್ರಿಯಾಂಕ್ ಖರ್ಗೆ, ಎವಿಎಂ ಮೇಲೆ ವಿಶ್ವಾಸ ಕಡಿಮೆಯಾಗುತ್ತಿದೆ. ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಆಯೋಗದ ವರದಿ 58.22% ನಷ್ಟಿತ್ತು. ಆದರೆ, ರಾತ್ರಿ 11.30ಗೆ 68.02% ಆಗಿದೆ. ಅಂದರೆ ಐದು ಗಂಟೆಯಲ್ಲಿ 50 ಲಕ್ಷ ಮತ ಸೇರ್ಪಡೆಯಾಗುತ್ತದೆ. ಹರ್ಯಾಣ ಮತ್ತು ಮಧ್ಯಪ್ರದೇಶದಲ್ಲಿ ಅದೇ ರೀತಿ ಆಗಿದೆ. ಹಲವಾರು ಸಂಸ್ಥೆಗಳು ಈ ಬಗ್ಗೆ ಪ್ರಶ್ನೆ ಮಾಡಿವೆ. ಆದರೆ ಚುನಾವಣಾ ಆಯೋಗ ಈ ಬಗ್ಗೆ ಸಮರ್ಪಕ ಉತ್ತರ ಬಂದಿಲ್ಲ ಎಂದರು. ಈ ಮಸೂದೆಯಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮತಪತ್ರದ ಮೂಲಕ ಮಾಡಲು ಈ ತಿದ್ದುಪಡಿ ತರುತ್ತಿದ್ದೇವೆ. ಮತಯಂತ್ರದ ಬದಲು ಮತಪತ್ರ ಬಳಕೆ ಮಾಡಲು ಈ ಮಸೂದೆ ತರಲಾಗುತ್ತಿದೆ. ಮಸೂದೆಯಲ್ಲಿ 6 ಬದಲಾಣೆಗಳನ್ನು ತರಲಾಗುತ್ತಿದೆ ಎಂದು ವಿವರಿಸಿದರು.

ಶಾಸಕ ಸುನಿಲ್ ಕುಮಾರ್ ಮಾತನಾಡಿ, ಈ ಮಸೂದೆಯಲ್ಲಿ ಜನಸಾಮಾನ್ಯರಿಗೆ ಯಾವುದೇ ಲಾಭ ಇಲ್ಲ, ಇದರಿಂದ ಕಾಂಗ್ರೆಸ್‌ಗೆ ಮಾತ್ರ ಲಾಭ. ಬ್ರ್ಯಾಂಡ್ ಬೆಂಗಳೂರು ಘೋಷಣೆ ಮಾಡುವ ನೀವು ಸ್ಥಳೀಯ ಸಂಸ್ಥೆಗಳಲ್ಲಿ ಇವಿಎಂ ಬಿಟ್ಟು ಮತಪತ್ರ ಬಳಕೆ ಮಾಡಲು ಮುಂದಾಗಿದ್ದೀರಿ. ಬೂತ್ ಕೇಂದ್ರಗಳಿಗೆ ಹೋಗಲು ಆಗುತ್ತಿರಲಿಲ್ಲ, ಅದನ್ನು ದೂರ ಮಾಡಲು ಇವಿಎಂ ತರಲಾಗಿತ್ತು. ಇದರ ಹಿಂದೆ ದೊಡ್ಡ ಹುನ್ನಾರ ಇದ್ದಂತಿದೆ. ಸರ್ಕಾರ ಆಡಳಿತ ವ್ಯವಸ್ಥೆಯನ್ನು ದುರುಪಯೋಗ ಮಾಡಲು ಮುಂದಾದಂತೆ ಕಂಡು ಬರುತ್ತಿದೆ ಎಂದರು.

ತುಘಲಕ್ ದರ್ಬಾರ್: ಅಶೋಕ



ವಿರೋಧ ವ್ಯಕ್ತಪಡಿಸಿದ ವಿಪಕ್ಷ ನಾಯಕ ಆರ್.ಅಶೋಕ, ಇದು ತುಘಲಕ್ ದರ್ಬಾರ್ ಇದಾಗಿದೆ. ಇವಿಎಂ ತಂದವರು ಕಾಂಗ್ರೆಸ್‌ನವರೇ. ಅವರೇ ತಂದ ಇವಿಎಂನ್ನು ತೆಗೆದು ಹಾಕುತ್ತಿದ್ದಾರೆ. ಸುಪ್ರೀಂಕೋರ್ಟ್ ಈ ಇವಿಎಂನಲ್ಲೇ ಮತದಾನ ನಡೆಯಬೇಕು ಅಂದಿದೆ. ಕರ್ನಾಟಕದಲ್ಲಿ ಮತದಾನ ನಡೆಯುವಾಗ ಇವಿಎಂ ಸರಿ ಇತ್ತು. ತೆಲಂಗಾಣದಲ್ಲಿ ಇವಿಎಂ ಸರಿ ಇತ್ತು. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಪಲ್ಟಿ ಹೊಡೆಯಿತು. ಆಗ ಚರ್ಚೆ ಆರಂಭವಾಯಿತು ಎಂದು ತಿರುಗೇಟು ನೀಡಿದರು.

ದಿನ ಭವಿಷ್ಯ

ಮೇಷ
ಕಾರ್ಯಸಿದ್ಧಿ. ಯಶಸ್ಸು ಸುಲಭದಲ್ಲಿ ಸಿಗಲಿದೆ. ವ್ಯವಹಾರದಲ್ಲಿ ಪ್ರಗತಿ. ವೃತ್ತಿ ಸಂಬಂಧ ವಾಗ್ವಾದಕ್ಕೆ ಇಳಿಯದಿರಿ. ಸಹನೆಯಿಂದ ವರ್ತಿಸಿ.

ವೃಷಭ
ನಾಯಕನ ರೀತಿ ಕಾರ್ಯಾಚರಿಸಿ. ಪ್ರತಿ ವಿಷಯದಲ್ಲಿ ಮುಂದಾಳತ್ವ ವಹಿಸಿ. ಅನುಕರಣೆ ಬೇಡ. ಕೌಟುಂಬಿಕ ಅಶಾಂತಿ ನಿವಾರಣೆ, ನಿರಾಳತೆ.

ಮಿಥುನ
ವೃತ್ತಿ ಮತ್ತು ಖಾಸಗಿ ವ್ಯವಹಾರದಲ್ಲಿ ಉನ್ನತಿ. ಪ್ರೀತಿಯ ವಿಷಯದಲ್ಲಿ ನಿರಾಳತೆ ತರುವ ಬೆಳವಣಿಗೆ. ಖರ್ಚು ನಿಯಂತ್ರಣ, ಸಮಾಧಾನ.

ಕಟಕ
ಇತರರಿಗೆ ನೆರವು ನೀಡುವಲ್ಲಿ ಖುಷಿ ಕಾಣುವಿರಿ. ಕೌಟುಂಬಿಕ ಉದ್ದೇಶವೊಂದು ಈಡೇರಲಿದೆ. ಆಪ್ತರ ಸಂಗದಲ್ಲಿ ಸಂತೋಷ.

ಸಿಂಹ
ನೀವು ತಳೆವ ನಿರ್ಧಾರ ನಿರೀಕ್ಷಿತ ಫಲ ನೀಡಲಾರದು. ಹಾಗಾಗಿ ಅತಿಯಾದ ನಿರೀಕ್ಷೆ ಬೇಡ. ಅನವಶ್ಯ ಖರ್ಚು ಚಿಂತೆಗೆ ಕಾರಣವಾದೀತು.

ಕನ್ಯಾ
ಕೆಲದಿನಗಳ ಅಶಾಂತಿ ನಿವಾರಣೆಯಾಗುವ ಕಾಲ ಬಂದಿದೆ. ನೆಮ್ಮದಿ ನೀಡಬಲ್ಲ ಬೆಳವಣಿಗೆ ಉಂಟಾಗಲಿದೆ. ಕೌಟುಂಬಿಕ ಸಹಕಾರ.

ತುಲಾ
ವೃತ್ತಿ ಒತ್ತಡ ಮರೆಯಲು ಮೆಚ್ಚಿನ ಕಾರ್ಯದಲ್ಲಿ ತೊಡಗಿ. ಕೆಲವು ಬೆಳವಣಿಗೆ ಹಿತ ತಾರದು. ಏನೋ ಬೇಸರ, ಅಸಮಾಧಾನ.

ವೃಶ್ಚಿಕ
ಇತರರ ಜತೆ ಚೆನ್ನಾದ ಸಂವಹನ ಸಾಧಿಸುವಿರಿ. ವಿಶ್ವಾಸ ವೃದ್ಧಿ. ಮಹತ್ವದ ಸುದ್ದಿ ನಿರೀಕ್ಷಿಸಿದ್ದರೆ ಇಂದು ಸಿಗದು. ಸ್ವಲ್ಪ ಕಾಲ ಕಾಯಬೇಕಾಗುತ್ತದೆ.

ಧನು
ವೃತ್ತಿಯಲ್ಲಿ ಉನ್ನತಿ. ಇತರರ ಸಹಕಾರ. ಭಿನ್ನಮತ ನಿವಾರಣೆ. ಅವಿವಾಹಿತರಿಗೆ ಸಂಗಾತಿ ಹುಡುಕಾಟದಲ್ಲಿ ಯಶ. ಆರ್ಥಿಕ ಪ್ರಗತಿ.

ಮಕರ
ಹಲವು ಬಗೆಯ ಒತ್ತಡ ಏಕಕಾಲದಲ್ಲಿ ಉಂಟಾದೀತು. ಸಹನೆ ಕಳಕೊಳ್ಳದೆ ನಿಭಾಯಿಸಿ. ದುಡುಕಿನ ಮಾತು, ವರ್ತನೆ ತಪ್ಪಿಸಿರಿ.

ಕುಂಭ
ವೃತ್ತಿಪರವಾಗಿ ಯಶಸ್ವೀ ದಿನ. ಆದರೆ ಭಾವನಾತ್ಮಕವಾಗಿ ಅಶಾಂತಿ. ಆಪ್ತರ ಜತೆ ಮುನಿಸುವ ಸಂಭವ. ಆಧ್ಯಾತ್ಮದತ್ತ ಒಲವು.

ಮೀನ
ಅಂದುಕೊಂಡ ಕೆಲಸ ಸಾಧ್ಯವಾಗಲಿದೆ. ಹಣ ಗಳಿಕೆಯ ಹಾದಿ ಸುಗಮ. ಹೊಸ ವ್ಯವಹಾರದಲ್ಲಿ ಹಣ ಹೂಡಬಹುದು. ಕೌಟುಂಬಿಕ ಸಮಾಧಾನ.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 4,0,3,7

ಕೊಲ್ಲಿ ಸಂಘರ್ಷಕ್ಕೆ ಕೊಂಚ ವಿರಾಮ

ಪುಟ 01➔ ಅಮೆರಿಕ ಅಧಿಕಾರಿಗಳು ಮಾತ್ರ ಮಾತುಕತೆಗಳ ಮೂಲಕ ಪ್ರಗತಿ ಸಾಧಿಸುವ ಆಶಯ ವ್ಯಕ್ತಪಡಿಸಿದ್ದಾರೆ.

ಪ್ರಾದೇಶಿಕ ಮೂಲಸೌಕರ್ಯಗಳಿಗೆ ಬೆದರಿಕೆ: ಹಾರ್ಮುಜ್ ಜಲಸಂಧಿಯ ಮೂಲಕ ಅಂತಾರಾಷ್ಟ್ರೀಯ ಹಡಗು ಸಂಚಾರವನ್ನು ಪುನರಾರಂಭಿಸದಿದ್ದರೆ ಇರಾನ್‌ನ ವಿದ್ಯುತ್ ಜಾಲವನ್ನು ಧ್ವಂಸಗೊಳಿಸುವುದಾಗಿ ಅಮೆರಿಕ ಎಚ್ಚರಿಸಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಗರ್ ಕಲಿಬಾಫ್, ಅಮೆರಿಕದ ನೆಲೆಗಳಿಗೆ ಅಥವಾ ಪಾಶ್ಚಿಮಾತ್ಯ ಹಿತಾಸಕ್ತಿಗಳಿಗೆ ವಿದ್ಯುತ್ ಮತ್ತು ನೀರು ಸರಬರಾಜು ಮಾಡುವ ಮಧ್ಯಪ್ರಾಚ್ಯದ ಎಲ್ಲಾ ಸ್ಥಾವರಗಳ ಮೇಲೆ ಪ್ರತಿದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಯಾವುದೇ ಭೂಸೇನಾ ದಾಳಿ ನಡೆದರೆ ಪರ್ಷಿಯನ್ ಕೊಲ್ಲಿಯ ಎಲ್ಲಾ ಪ್ರವೇಶ ಮಾರ್ಗಗಳಲ್ಲಿ ಮೈನ್‌ಗಳನ್ನು (ಸುರಂಗ ಸ್ಫೋಟಕ) ಅಳವಡಿಸುವುದಾಗಿ ಇರಾನ್ ರಕ್ಷಣಾ ಮಂಡಳಿ ಎಚ್ಚರಿಕೆ ನೀಡಿದೆ.

ವಿಧಾನಸೌಧಕ್ಕೆ ಬೀಟೆ ಬಾಗಿಲು

ಪುಟ 01➔ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಈ ಬಾಗಿಲನ್ನು ಅಳವಡಿಸಿದೆ. ಬಾಗಿಲಿನಲ್ಲಿ ಮೈಸೂರು ಅರಮನೆಯಲ್ಲಿನ ಬಾಗಿಲುಗಳ ಮಾದರಿಯ ಕುಸುರಿ ಕೆತ್ತನೆ, ದ್ವಾರದ ಮೇಲ್ಭಾಗದಲ್ಲಿ ರಾಜ್ಯ ಲಾಂಛನ ಗಂಡಭೇರುಂಡ, ರಾಷ್ಟ್ರದ ಅಶೋಕ ಸ್ತಂಭ ಕಲಾಕೃತಿಗಳ ಕೆತ್ತನೆ ಮಾಡಲಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದ್ದಾರೆ.

1,448 ಸಿಲಿಂಡರ್ ವಶ

ಬೆಂಗಳೂರು: ಗೃಹಬಳಕೆ ಸಿಲಿಂಡರ್ ಅನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಿದ 1,448 ಸಿಲಿಂಡರ್‌ಗಳನ್ನು ವಶಪಡಿಸಲಾಗಿದೆ ಎಂದು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಇಲಾಖೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಬಾಗಲಕೋಟೆ 64, ಶಿವಮೊಗ್ಗ 7, ಯಾದಗಿರಿ 100, ದಾವಣಗರೆ 68 ಸೇರಿದಂತೆ ರಾಜ್ಯದಲ್ಲಿ 1,448 ಗೃಹ ಬಳಕೆಯ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ ಮಾಡಿದವರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆ 1955 ರ ಕಾಯ್ದೆ ಅಡಿ ಪ್ರಕರಣವನ್ನು ದಾಖಲಿಸಿ ವಶಪಡಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ ಇದುವರೆವಿಗೂ ಗೃಹಬಳಕೆಯ 30,51,045 ಸಿಲಿಂಡರ್, ವಾಣಿಜ್ಯ ಬಳಕೆಯ 67,641 ರಷ್ಟು ಸಿಲಿಂಡರ್‌ಗಳನ್ನು ವಿತರಣೆಯಾಗಿರುತ್ತದೆ. ಆಟೋ ಎಲ್‌ಪಿಜಿ ಸುಮಾರು 40,083 ವಾಣಿಜ್ಯ ಸಿಲಿಂಡರ್‌ಗಳಷ್ಟು (761.655 ಮೆ.ಟನ್.ಗಳು) ವಿತರಣೆಯಾಗಿರುತ್ತದೆ.

ಪ್ರತಿಪಕ್ಷ ನಾಯಕರಲ್ಲಿ ಸಚಿವ ಕೃಷ್ಣ ಬೈರೇಗೌಡ ಮನವಿ
ಅಪರಾಧೀಕರಿಸುವ ಕೃತ್ಯ ನಿಲ್ಲಿಸಿ

ವಿಧಾನಸಭೆ: ಸಮಾಜದಲ್ಲಿ ತೀರಾ ಕೆಳ ಹಂತದಲ್ಲಿರುವ ಬಡ ಜನರಿಗೆ ನೀಡುವ ಸಬ್ಸಿಡಿಯನ್ನು ತುಚ್ಛಗೊಳಿಸುವ, ಅಪರಾಧೀಕರಿಸುವ ಕೃತ್ಯವನ್ನು ನಿಲ್ಲಿಸಿ ಎಂದು ಸಚಿವ ಕೃಷ್ಣ ಬೈರೇಗೌಡ ಪ್ರತಿಪಕ್ಷ ನಾಯಕರಲ್ಲಿ ಮನವಿ ಮಾಡಿದರು.

ಆಯವ್ಯಯದ ಮೇಲಿನ ಚರ್ಚೆಯ ವೇಳೆ ಬಿಜೆಪಿ ಶಾಸಕ ವಿ. ಸುನೀಲ್ ಕುಮಾರ್, ಸಬ್ಸಿಡಿ ಸಂಸ್ಕೃತಿಗೆ ರಾಜ್ಯವನ್ನು ತಳ್ಳುತ್ತಿದ್ದೀರಾ? ಆಯವ್ಯಯದ ಶೇ.14ರಷ್ಟು ಹಣ ಸಬ್ಸಿಡಿ ಯೋಜನೆಗಳಿಗೆ ಬಳಕೆಯಾಗುತ್ತಿದೆ. ಇದರಿಂದ ದೂರಗಾಮಿ ಯೋಜನೆಗಳಿಗೆ ಹೊಡೆತ ಬೀಳಲಿದೆ. ಸಬ್ಸಿಡಿ ಬಡವರ ಕಣ್ಣೀರು ಒರೆಸಬೇಕೇ ವಿನಾ ಚುನಾವಣೆಯ ಸರಕಾಗಬಾರದು ಎಂದು ಹೇಳಿದರು.

ಅವರ ಮಾತಿನ ನಡುವೆ ಆಕ್ಷೇಪ ವ್ಯಕ್ತಪಡಿಸಿದ ಸಚಿವರು, ಬಡವರಿಗೆ ನೀಡುವ ಸಬ್ಸಿಡಿಯನ್ನು ಭಾರತದಂತೆ ಬೇರೆ ದೇಶದಲ್ಲೂ ತುಚ್ಛವಾಗಿ ಕಾಣಲಾಗುತ್ತದೆ. ಆದರೆ, ಕಳೆದ 150 ವರ್ಷಗಳ ಆರ್ಥಿಕ ಚಿಂತನೆಗಳ ಕಡೆಗೆ ಒಮ್ಮೆ ಗಮನ ಹರಿಸಿದರೆ ದೇಶವೊಂದನ್ನು ಆರ್ಥಿಕ ಹಿಂಜರಿತದಿಂದ ಪ್ರಗತಿಪಥದತ್ತ ಮುನ್ನಡೆಸಲು ಬಡವರಿಗೆ ಸಬ್ಸಿಡಿ ನೀಡುವ ಮೂಲಕ ಬೇಡಿಕೆಯ ವಲಯವನ್ನು ಬಲಪಡಿಸುವುದೊಂದೇ ಪರಿಹಾರವಾಗಿ ಕಂಡುಬಂದಿದೆ ಎಂದು ವ್ಯಾಖ್ಯಾನಿಸಿದರು.

ಸ್ವಾಭಾವಿಕವಾಗ ಎರಡು ರೀತಿಯ ಆರ್ಥಿಕ ಚಿಂತನೆಗಳು ಕಾಣಸುತ್ತವೆ. ಮೊದಲನೆಯದು ಉತ್ಪಾದಕ ವಲಯದ ಅಭಿವೃದ್ಧಿಗೆ ಸಹಾಯ ಮಾಡುವುದು, ಮತ್ತೊಂದು ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಲು ಜನಸಾಮಾನ್ಯರ ಆರ್ಥಿಕ ಸ್ಥಿತಿ, ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದು. ಉತ್ಪಾದನಾ ವಲಯಕ್ಕೆ ತೆರಿಗೆ ಕಡಿತ ಮಾಡುವ ಮೂಲಕ ನೇರವಾಗಿ ಸಹಾಯ ಮಾಡಬಹುದು. ಹೀಗೆ ಮಾಡಿದಲ್ಲಿ ಅವರ ಉಳಿತಾಯ ಹೆಚ್ಚಾಗಿ ಆ ಹಣವನ್ನು ಅವರು ಮತ್ತೆ ಉತ್ಪಾದನಾ ವಲಯದಲ್ಲಿ ಹೂಡಿಕೆ ಮಾಡಲು ಅನುಕೂಲವಾಗುತ್ತದೆ. ಅದೇ ರೀತಿ ಜನರಿಗೆ ಕನಿಷ್ಠ ಆದಾಯ



ಲಭ್ಯವಾಗುವುದನ್ನು ಖಾತರಿಪಡಿಸಿ, ಅವರೂ ಜೀವನ ಮಾಡಲು ಅವಕಾಶ ಮಾಡಿಕೊಡುವ ಮೂಲಕ ಆರ್ಥಿಕತೆಯನ್ನು ವೃದ್ಧಿಸಬಹುದಾಗಿದೆ ಎಂದು ವಿವರಿಸಿದರು.

ಒಬ್ಬ ವ್ಯಕ್ತಿ ಕೈಗೆ ಒಂದು ರೂಪಾಯಿ ಕೊಟ್ಟರೆ ಆ ಹಣ ಮಾರುಕಟ್ಟೆಯಲ್ಲಿ ಕನಿಷ್ಠ ಐದು ಬಾರಿ ಮರು ಚಲಾವಣೆಯಾಗುತ್ತದೆ. ಈ ಮೂಲಕ ಐದರಷ್ಟು ಆರ್ಥಿಕತೆಯನ್ನು ಸೃಷ್ಟಿಸುತ್ತದೆ. ಪರಿಣಾಮ ಆರ್ಥಿಕತೆಯೂ ವೃದ್ಧಿಸುತ್ತದೆ. ಬೇಡಿಕೆ ಜಾಸ್ತಿಯಾದಾಗ ಉತ್ಪಾದನಾ ವಲಯಕ್ಕೂ ಅನುಕೂಲವಾಗುತ್ತದೆ. ಉತ್ಪಾದನಾ ವಲಯವನ್ನು ಬಲಪಡಿಸಿ ಬೇಡಿಕೆ ಇಲ್ಲದೆ ಹೋದರೆ ಆರ್ಥಿಕ ಅಭಿವೃದ್ಧಿಯೂ ಕುಂಠಿತಗೊಳ್ಳುತ್ತದೆ. ಅಸಲಿಗೆ ಬೇಡಿಕೆ ಇಲ್ಲದೆ ಹೂಡಿಕೆ ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಸಮಾಜದ ಕೆಳ ಹಂತದಲ್ಲಿರುವವರು, ಬಡವರಿಗೆ ನೀಡುವ ಸಬ್ಸಿಡಿ ಅವರ ಉಳಿತಾಯ ಖಾತೆಯಲ್ಲಿ ಜಮೆಯಾಗುವುದಿಲ್ಲ. ಬದಲಾಗಿ ನಾವು ನೀಡುವ ಪ್ರತಿಯೊಂದು ರೂಪಾಯಿಯೂ ಪುನಃ ಮಾರುಕಟ್ಟೆಗೆ ಹಿಂತಿರುಗುತ್ತದೆ.

> ಹಿಮಾಚಲ ಪ್ರದೇಶದಲ್ಲಿ ಸಬ್ಸಿಡಿಗಳನ್ನು ನೀಡುವುದರಿಂದ ಅಲ್ಲಿನ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಶಾಸಕರ ವೇತನವನ್ನು ಕಡಿತಗೊಳಿಸಲಾಗಿದೆ. ಸರ್ಕಾರಿ ನೌಕರರ ವೇತನ ಕಂತಿನಲ್ಲಿ ನೀಡಲಾಗುತ್ತಿದೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಸಬ್ಸಿಡಿ ಬಗ್ಗೆ ಗಂಭೀರವಾಗಿ ಯೋಚಿಸಬೇಕಿದೆ.
> ■ ಸುರೇಶ್ ಕುಮಾರ್, ಬಿಜೆಪಿ ಶಾಸಕ

ಆ ಮೂಲಕ ಆರ್ಥಿಕತೆ ಮತ್ತಷ್ಟು ಬೆಳೆಯುತ್ತದೆ. ಇದು ನೂರಾರು ವರ್ಷಗಳ ಇತಿಹಾಸವಿರುವ ಜಾನ್ ಮೇನಾರ್ಡ್ ಕೇನ್ಸ್ ಪ್ರತಿಪಾದಿಸಿದ ಆರ್ಥಿಕತೆ.

ಯಾವ್ಯಾವ ದೇಶಗಳು ಆರ್ಥಿವಾಗಿ ಹಿಂದುಳಿದ್ದವೋ ಆ ಎಲ್ಲಾ ಈ ದೇಶಗಳು ಈ ಸಿದ್ಧಾಂತವನ್ನೇ ಅಳವಡಿಸಿಕೊಂಡು ಬೇಡಿಕಾ ವಲಯದಲ್ಲಿ ಸುಸ್ಥಿರ ಅಭಿವೃದ್ಧಿ ಸಾಧಿಸುವ ಮೂಲಕ ಆರ್ಥಿಕ ಹಿಂಜರಿತ ದಿಂದ ಪ್ರಗತಿಯ ಪಥದತ್ತ ಹೆಜ್ಜೆ ಇಟ್ಟಿವೆ. ಹೀಗಾಗಿ ಸಬ್ಸಿಡಿ ಎಂಬ ವಿಚಾರವನ್ನು ತುಚ್ಛಗೊಳಿಸುವುದು ಮತ್ತು ಅಪರಾಧೀ ಕರಿಸುವುದನ್ನು ನಿಲ್ಲಿಸಿ ಎಂದು ಮನವಿ ಮಾಡಿದರು.

ಕರ್ನಾಟಕ ರಾಜ್ಯ ತಲಾ ಆದಾಯದಲ್ಲಿ ಹಾಗೂ ಜಿಎಸ್‌ಟಿ ತೆರಿಗೆ ಸಂಗ್ರಹದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿರಲು ಸಬ್ಸಿಡಿಗಳೇ ಕಾರಣ. ಕೇಂದ್ರ ಸರ್ಕಾರ ಇತ್ತೀಚೆಗೆ ಜಿಎಸ್‌ಟಿ ತೆರಿಗೆಯನ್ನು ಸರಳೀಕರಣಗೊಳಿಸಿದಾಗ ಇತರೆ ಎಲ್ಲಾ ರಾಜ್ಯಗಳಿಗೂ ಹೋಲಿಸಿದರೆ ಕರ್ನಾಟಕದಲ್ಲಿ ಜಿಎಸ್‌ಟಿ ತೆರಿಗೆ ಸಂಗ್ರಹ ಅಷ್ಟೇನೂ ಕೊರತೆಯಾಗಿಲ್ಲ. ಗ್ಯಾರಂಟಿ ಯೋಜನೆಗಳು ಅಷ್ಟರ ಮಟ್ಟಿಗೆ ಕರ್ನಾಟಕದ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿವೆ ಎಂದು ಕೃಷ್ಣ ಬೈರೇಗೌಡ ಅಭಿಪ್ರಾಯಪಟ್ಟರು.

2028ಕ್ಕೆ ನನ್ನ ಶಕ್ತಿ ತೋರಿಸುತ್ತೇನೆ

ವಿಧಾನಸಭೆ: ರೇವಣ್ಣ ಮುಗಿದೇ ಹೋದ ಅಂದ್ಕೊಂಡಿದ್ದಾರೆ. 2028ಕ್ಕೆ ನನ್ನ ಶಕ್ತಿ ಏನೆಂಬುದನ್ನು ತೋರಿಸುತ್ತೇನೆ ಎಂದು ಜೆಡಿಎಸ್‌ನ ಹಿರಿಯ ಸದಸ್ಯ ಎಚ್.ಡಿ.ರೇವಣ್ಣ ಸವಾಲು ಹಾಕಿದರು.

ಆಯವ್ಯಯದ ಮೇಲಿನ ಚರ್ಚೆಯ ವೇಳೆ ಮಾತನಾಡಿದ ಅವರು, ದೇವೇಗೌಡರ ಕುಟುಂಬ ಪಾಪದ ಕೆಲಸ ಮಾಡಿಲ್ಲ, 2028ರ



ವಿಧಾನಸಭೆ ಚುನಾವಣೆಯಲ್ಲಿ ನಮ್ಮ ಶಕ್ತಿ ತೋರಿಸುತ್ತೇವೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದಮೇಲೆ ರಾಜಕೀಯ ದ್ವೇಷ ಹೆಚ್ಚಾಗಿದೆ ಎಂದು ಆರೋಪಿಸಿದರು. ಪ್ರತಿಪಕ್ಷಗಳನ್ನು ಉದ್ದೇಶಪೂರ್ವಕವಾಗಿ ದಮನ ಮಾಡಲಾಗುತ್ತಿದೆ. ನೀವೇ ನಮಗೆ ದಾರಿ ತೋರಿದ್ದೀರಿ. ಯಾವುದೇ ಆಧಾರವಿಲ್ಲದೆ ನನ್ನ ಮೇಲೆ ಎಫ್ಐಆರ್ ಹಾಕಲಾಯಿತು. ನನ್ನ ವಿರುದ್ಧ ಎಫ್ಐಆರ್ ದಾಖಲಿಸಲು ನನ್ನ ಒಂದು ಫೋಟೋ ಇತ್ತಾ? ಆಡಿಯೋ ಇತ್ತಾ? ಬೆಂಗಳೂರಿನಲ್ಲಿ ಎಫ್ಐಆರ್ ಹಾಕಿಸಿದರು. ಗೃಹ ಸಚಿವರು ಇಕ್ಕಟ್ಟಿನಲ್ಲಿ ಸಿಲುಕಿದ್ದಾರೆ. ಹಾಸನ ಜಿಲ್ಲೆಯಲ್ಲಿ ಇರುವುದು ಎರಡೇ ಪಕ್ಷ, ಒಂದು ದೇವೇಗೌಡರದ್ದು ಮತ್ತು ಅವರ ವಿರೋಧಿಗಳ ಪಕ್ಷ ಎಂದರು.

ಆರು ಬಾರಿ ಶಾಸಕನಾಗಿ ಮೂವತ್ತು ವರ್ಷಗಳಿಂದ ರಾಜಕೀಯ ಜೀವನದಲ್ಲಿದ್ದೇನೆ. ಏನಾದರೂ ಮಾಡಿ ರೇವಣ್ಣ ಅವರನ್ನು ಮುಗಿಸಬೇಕೆಂಬ ಹುನ್ನಾರ ಮಾಡಲಾಗುತ್ತಿದೆ. ಇನ್ನೂ 10 ಕೇಸುಗಳನ್ನು ಹಾಕಲಿ ಎದುರಿಸುತ್ತೇನೆ. ನಮಗೂ ಎಲ್ಲವೂ ಗೊತ್ತಿದೆ, ಮುಂದೆ ನಾವು ಅಧಿಕಾರಕ್ಕೆ ಬಂದಾಗ ಏನು ಮಾಡಬೇಕೆಂದು ತೋರಿಸಿಕೊಡುತ್ತಿದ್ದಾರೆ. ಹಾಸನದಲ್ಲಿ ರೇವಣ್ಣ ನಾಲ್ಕೈದು ಶಾಸಕರನ್ನು ಗೆಲ್ಲಿಸುತ್ತಾನೆಂದು ನನ್ನ ವಿರುದ್ಧ ಪಿತೂರಿ ನಡೆಯಿತು ಎಂದು ಅವರು ದೂರಿದರು.

ಕಂದಾಯ ಸಚಿವರು ಬಹಳ ಪ್ರಾಮಾಣಿಕರು, ಅವರ ಬಗ್ಗೆ ಮಾತಾಡುವುದಿಲ್ಲ. ಕುಮಾರಸ್ವಾಮಿ ಅವರಿಗೆ 40 ವರ್ಷಗಳ ಅನುಭವವಿದೆ. ಅವರು ಏನೋ ಒತ್ತುವರಿ ಮಾಡಿದ್ದಾರೆಂದು ಅವರ ಮೇಲೆ ಪ್ರಕರಣ ದಾಖಲಿಸಿದರು. ಅದರ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನೂ ರಚಿಸಲಾಯಿತು. ಈಗ ಹಾಸನ ಜಿಲ್ಲೆಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ಮಾಡಲಾಗುತ್ತಿದ್ದು, ಕಂದಾಯ ಇಲಾಖೆಯಲ್ಲಿ ಲೂಟಿಯಾಗುತ್ತಿದೆ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ಅಮಾನತ್ತು ಆದ ಅಧಿಕಾರಿಗಳನ್ನೇ ಹಾಸನ ಜಿಲ್ಲೆಗೆ ವರ್ಗಾಯಿಸಲಾಗುತ್ತಿದ್ದು, ಇದರಲ್ಲಿ ಸರ್ಕಾರವೂ ಶಾಮೀಲಾಗಿದೆಯೇ ಎಂಬ ಸಂಶಯವಿದೆ ಎಂದು ಟೀಕಿಸಿದರು.

ಏಕತೆಯಿಂದ ಎದುರಿಸಿ

ಪುಟ 01➔ **ಭದ್ರತೆ ಬಲಪಡಿಸಿದ ಸರ್ಕಾರ:** ಆಂತರಿಕ ಭದ್ರತೆಯ ದೃಷ್ಟಿಯಿಂದಲೂ ಸರ್ಕಾರ ಎಚ್ಚರಿಕೆಯಿಂದಿದೆ ಎಂದು ಮೋದಿ ಹೇಳಿದರು. ಕರಾವಳಿ, ಗಡಿಭಾಗ, ಸೈಬರ್ ಹಾಗೂ ತಂತ್ರಜ್ಞಾನ ಮೂಲಸೌಕರ್ಯಗಳ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಹೇಳಿದರು. ಈ ಸಂದರ್ಭವನ್ನು ದುರುಪಯೋಗಪಡಿಸಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಲಾಗಿದೆ. ತಪ್ಪು ಮಾಹಿತಿ ಹರಡುವಿಕೆ, ಕಾಳಸಂತೆಯಲ್ಲಿ ಸಂಗ್ರಹಣೆ ಮುಂತಾದ ಚಟುವಟಿಕೆಗಳನ್ನು ತಡೆಯಲು ಕಠಿಣ ಕ್ರಮ ಅಗತ್ಯ ಎಂದರು.

ಸಾಕಷ್ಟು ಆಹಾರ ಧಾನ್ಯ ಸಂಗ್ರಹ: ಸಂಘರ್ಷದಿಂದ ಕೃಷಿ ಕ್ಷೇತ್ರಕ್ಕೂ ಪರಿಣಾಮ ಉಂಟಾಗುವ ಸಾಧ್ಯತೆ ಇದೆ. ಆದರೆ ದೇಶದಲ್ಲಿ ಸಾಕಷ್ಟು ಆಹಾರ ಧಾನ್ಯ ಸಂಗ್ರಹವಿರುವುದರಿಂದ ಆತಂಕ ಬೇಡ ಎಂದು ಭರವಸೆ ನೀಡಿದರು. ಖಾರಿಫ್ ಬಿತ್ತನೆ ಸುಗಮವಾಗಿ ನಡೆಯಲು ಅಗತ್ಯ ಗೊಬ್ಬರ ವ್ಯವಸ್ಥೆ ಮಾಡಲಾಗಿದೆ. ಹಿಂದೆಕೂಡ ಜಾಗತಿಕ ಸಂಕಷ್ಟಗಳು ರೈತರ ಮೇಲೆ ಪರಿಣಾಮ ಬೀರದಂತೆ ಸರ್ಕಾರ ಕ್ರಮ ತೆಗೆದುಕೊಂಡಿತ್ತು ಎಂದರು.

ಎಲ್ಲಾ ರಾಷ್ಟ್ರಗಳಿಗೂ ಸವಾಲು

ಪಶ್ಚಿಮ ಏಷ್ಯಾ ಸಂಘರ್ಷವು ಜಾಗತಿಕ ಆರ್ಥಿಕತೆಯ ಮೇಲೆ ತೀವ್ರ ಪರಿಣಾಮ ಬೀರಿದೆ ಎಂದು ಪ್ರಧಾನಿ ಒಪ್ಪಿಕೊಂಡರು. ಇಂಧನವು ಆರ್ಥಿಕತೆಯ ಬೆನ್ನೆಲುಬಾಗಿರುವುದರಿಂದ ಈ ಸಂಕಷ್ಟ ಎಲ್ಲ ದೇಶಗಳಿಗೂ ಸವಾಲಾಗಿದೆ ಎಂದು ಹೇಳಿದರು. ಈ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ಅಲ್ಪಾವಧಿ, ಮಧ್ಯಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ರೂಪಿಸಿದೆ. ಪ್ರತಿ ದಿನ ಸಭೆ ನಡೆಸುವ ವಿದೇಶಾಂಗ ಸಚಿವಾಲಯ ಸಮಿತಿ ಮೂಲಕ ಆಮದು-ರಫ್ತು ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ ಎಂದು ಹೇಳಿದರು.

ಡಿಜಿಟಲ್ ಅರೆಸ್ಟ್ ಹೆಸರಲ್ಲಿ ₹5 ಕೋಟಿ ವಂಚನೆ

ಪುಟ 01➔ ಅಷ್ಟಕ್ಕೇ ನಿಲ್ಲದ ಖದೀಮರು, ಸಿಬಿಐ ಅಧಿಕಾರಿಗಳಂತೆ ವೇಷ ಧರಿಸಿ ವಿಡಿಯೋ ಕಾಲ್ ಮಾಡುವ ಮೂಲಕ ವೃದ್ಧನನ್ನು ಡಿಜಿಟಲ್ ಅರೆಸ್ಟ್ ಭೀತಿಯಲ್ಲಿ ಇರಿಸಿದ್ದರು. ನಕಲಿ ಎಫ್ಐಆರ್ ಪ್ರತಿಯನ್ನು ಕಳುಹಿಸಿ ಪೂರ್ಣವಾಗಿ ನಂಬಿಸಿದ್ದರು. ಪ್ರಕರಣದಿಂದ ಪಾರು ಮಾಡುವುದಾಗಿ ನಂಬಿಸಿದ ವಂಚಕರು, ಜ.17ರಿಂದ ಫೆ.23ರ ಅವಧಿಯಲ್ಲಿ ಹಂತ ಹಂತವಾಗಿ ಒಟ್ಟು 4.91 ಕೋಟಿ ರೂ.ಗಳನ್ನು ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದಾರೆ. ವೃದ್ಧನ ತಮ್ಮ ಜೀವನದ ಉಳಿತಾಯವನ್ನೆಲ್ಲಾ ಕಳೆದುಕೊಂಡರೂ ವಂಚಕರ ಹಸಿವು ನೀಗಿರಲಿಲ್ಲ, ಮತ್ತೆ ಹಣಕ್ಕಾಗಿ ಬೇಡಿಕೆ ಇಟ್ಟಾಗ ಅನುಮಾನಗೊಂಡು ಕೂಡಲೇ ಪೊಲೀಸರ ಮೊರೆ ಹೋಗಿದ್ದಾರೆ.

ಸೈಬರ್ ಪೊಲೀಸರ ಎಚ್ಚರಿಕೆ: ಈ ಸಂಬಂಧ ಸೆಂಟ್ರಲ್ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ತೀವ್ರಗೊಂಡಿದೆ. ಯಾವುದೇ ಸರ್ಕಾರಿ ಅಥವಾ ತನಿಖಾ ಸಂಸ್ಥೆಗಳು ವಿಡಿಯೋ ಕಾಲ್ ಮೂಲಕ ಯಾರನ್ನೂ ಬಂಧಿಸುವುದಿಲ್ಲ ಅಥವಾ ಹಣಕ್ಕೆ ಬೇಡಿಕೆ ಇಡುವುದಿಲ್ಲ, ಇಂತಹ ಕರೆಗಳು ಬಂದರೆ ಸಾರ್ವಜನಿಕರು ತಕ್ಷಣ 1930 ಸಹಾಯವಾಣಿಗೆ ಕರೆ ಮಾಡಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಬದುಕಿರುವವನಿಗೆ ಮರಣ ಪತ್ರ!

ಪುಟ 01➔ ಅರ್ಜಿದಾರ ಬಾಷಾ ಪರ ವಕೀಲೆ ಓ.ಅಶ್ವಿನಿ ಅವರು ಅರ್ಜಿದಾರರು ಜೀವಂತವಾಗಿ ಬದುಕಿದ್ದರೂ ಮರಣ ಪ್ರಮಾಣ ಪತ್ರ ನೀಡಲಾಗಿದೆ. ಅರ್ಜಿದಾರರು ಬದುಕಿದ್ದಾರೆ ಅವರ ಪಾನ್, ಆಧಾರ್ ಕಾರ್ಡ್ ಎಲ್ಲವೂ ಇದೆ ಎಂದು ಜಿಬಿಐ ಆಸ್ಪತ್ರೆಗೆ ತಿಳಿಸಿದೆ. ಆಧಾರ್ ಕಾರ್ಡ್ ಅನ್ನು ಪಡಿತರ ಚೀಟಿಗೆ ಸಂಪರ್ಕಿಸಲಾಗಿದೆ.

ಕಠಿಣ ಕ್ರಮದ ಎಚ್ಚರಿಕೆ: ಆಗ ಪೀಠವು ಜನನ ಮತ್ತು ಮರಣಗಳ ನೋಂದಣಾಧಿಕಾರಿ ಅವರು ಬುಧವಾರದೊಳಗೆ ಮರಣ ಪ್ರಮಾಣಪತ್ರ ರದ್ದುಪಡಿಸಿರುವ ಹಿಂಬರಹ ಸಲ್ಲಿಸಬೇಕು. ಇಲ್ಲವಾದಲ್ಲಿ ಸಂಬಂಧಿತ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು. ಮರಣ ಪ್ರಮಾಣ ಪತ್ರ ನೀಡಿರುವುದನ್ನು ರದ್ದುಪಡಿಸುವಂತೆ ಕಳೆದ ವರ್ಷ ಆದೇಶಿಸಲಾಗಿದೆ. ಇದನ್ನು ಪಾಲಿಸದೇ ಇರುವುದರಿಂದ ದಂಡ ಏಕೆ ವಿಧಿಸಬಾರದು ಎಂದು ಸರ್ಕಾರವನ್ನು ಪ್ರಶ್ನಿಸಿತು. ಸರ್ಕಾರದ ಪರ ವಕೀಲ ಆದಿತ್ಯ ಅವರು ಸಮಸ್ಯೆಯನ್ನು ಪರಿಹರಿಸಲಾಗುವುದು ಎಂದರು. ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯವು, ಬದುಕಿರುವ ವ್ಯಕ್ತಿಯ ಹೆಸರಿನಲ್ಲಿ ನೀಡಲಾಗಿರುವ ಮರಣ ಪ್ರಮಾಣ ಪತ್ರವನ್ನು ಹಿಂಪಡೆಯದೇ ಇರುವುದರಿಂದ ಅವರು ಅನಿವಾರ್ಯವಾಗಿ ನ್ಯಾಯಾಲಯದ ಕದತಟ್ಟುವಂತಾಗಿದೆ.

ಕಾಡಾನೆ ದಾಳಿ ತಡೆಗೆ ಬ್ಯಾರಿಕೇಡ್ ನಿರ್ಮಾಣ

ವಿಧಾನಪರಿಷತ್: ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕಾಡಂಚಿನ ರೈತರ ಜಮೀನುಗಳಿಗೆ ಕಾಡಾನೆಯು ಸೇರಿದಂತೆ ಕಾಡು ಪ್ರಾಣಿಗಳು ಬಾರದಂತೆ ತಡೆಯಲು ರೈಲ್ವೆ ಹಳಿಗಳ ಬ್ಯಾರಿಕೇಡ್ ನಿರ್ಮಾಣ, ಸೋಲಾರ್ ತಂತಿಬೇಲಿ, ಆನೆ ನಿರೋಧಕ ಕಂದಕ ನಿರ್ಮಾಣ ಮಾಡಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು. ಸದಸ್ಯ ಎಸ್.ರವಿ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಬೆಂಗಳೂರು ದಕ್ಷಿಣ ಜಿಲ್ಲೆಗೆ ಮಾನವ – ಕಾಡಾನೆ ಸಂಘರ್ಷ ತಡೆಗಟ್ಟಲು 52.5 ಕಿ.ಮೀ ರೈಲ್ವೇ ಬ್ಯಾರಿಕೇಡ್ ನಿರ್ಮಾಣ ಅವಶ್ಯವಿದ್ದು, 89.35 ಕೋಟಿ ರೂ. ಅನುದಾನದ ಅಗತ್ಯವಿದೆ. ಆರ್ಥಿಕ ಸಂಪನ್ಮೂಲದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಹಂತ-ಹಂತವಾಗಿ ಅನುಷ್ಠಾನ ಮಾಡುತ್ತೇವೆ ಎಂದು ಹೇಳಿದರು.

ಬನ್ನೇರುಘಟ್ಟ ವಿಭಾಗ ವ್ಯಾಪ್ತಿಯಲ್ಲಿ ಆನೆ ಕಾರ್ಯಪಡೆ 24/7 ಕಾರ್ಯ ನಿರ್ವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದ್ದು, ನಿಯಂತ್ರಣ ಕೊಠಡಿಗೆ ಬರುವ ಕರೆಗಳಿಗೆ ಸ್ಪಂದಿಸಿ ಕೂಡಲೇ ಕ್ರಮವಹಿಸಲಾಗುತ್ತಿದೆ ಎಂದರು.

ತುಳು ಅಧಿಕೃತ ಭಾಷೆಯಾಗಿ ಘೋಷಿಸಿ

ವಿಧಾನಸಭೆ: ತುಳು ಭಾಷೆಯನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡಬೇಕು ಎಂದು ಬಿಜೆಪಿ ಶಾಸಕ ಉಮಾನಾಥ್ ಎ. ಕೋಟ್ಯಾನ್ ಆಗ್ರಹಿಸಿದರು.

ಆಯವ್ಯಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿ, ತಲಪಾಡಿಯಿಂದ ಕಾರವಾರದವರೆಗಿನ ಕಡಲ ಕಿನಾರೆಯಲ್ಲಿ ವರ್ತುಲ ರಸ್ತೆ ನಿರ್ಮಿಸಲು ಕನಿಷ್ಠ 1500 ಕೋಟಿ ರೂ. ಅನುದಾನ ಒದಗಿಸಬೇಕು. ಕರಾವಳಿಯ ಕಡಲ ಕಿನಾರೆಯ ಬದಿಯಲ್ಲಿ ರಸ್ತೆ ನಿರ್ಮಿಸುವುದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗಲಿದೆ. ಮಾತ್ರವಲ್ಲ, ಕಡಲಕೊರೆತ ತಡೆಗಟ್ಟಲು ಸಹಾಯವಾಗಲಿದೆ. ಹೀಗಾಗಿ, ಸರ್ಕಾರ ಈ ವಿಷಯದ ಬಗ್ಗೆ ಆಸಕ್ತಿ ವಹಿಸಬೇಕು ಎಂದು ಮನವಿ ಮಾಡಿದರು.

ದೇವಸ್ಥಾನಗಳನ್ನು ಅಭಿವೃದ್ಧಿ ಮಾಡಬೇಕು. ಅಲ್ಲದೆ, ಕರಾವಳಿ ಪ್ರದೇಶದಲ್ಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಮೂಲಸೌಲಭ್ಯ ಅಭಿವೃದ್ಧಿಪಡಿಸಬೇಕು. ಕಂದಾಯ ಇಲಾಖೆಯಲ್ಲಿ ನಕ್ಷೆ ಪಡೆದುಕೊಳ್ಳಲು ಉಂಟಾಗಿರುವ ತಾಂತ್ರಿಕ ಸಮಸ್ಯೆಯನ್ನು ಕೂಡಲೇ ಪರಿಹರಿಸಬೇಕು ಎಂದು ಒತ್ತಾಯಿಸಿದರು. ವಿತ್ತ ಸಚಿವರೂ ಆಗಿರುವ ಸಿಎಂ ಅವರು ಸಾಲ ಮಾಡಿ ಬಜೆಟ್ ಮಂಡನೆ ಮಾಡಿದ್ದಾರೆ. ಆದರೆ, ಶಾಸಕರಾಗಿ ಎರಡುವರೆ ವರ್ಷ ಕಳೆದರೂ 2 ಕೋಟಿ ರೂ.ಅನುದಾನ ನೀಡಿದ್ದನ್ನು ಬಿಟ್ಟರೆ ಮೂಲ ಸೌಕರ್ಯಕ್ಕೆ ಒಂದು ನಯಾಪೈಸೆ ಹಣ ಬಿಡುಗಡೆ ಮಾಡಲಿಲ್ಲ ಎಂದರು.

ಬಿಜೆಪಿ ಚರಂತಿಮಠ, ಕೈನಿಂದ ಉಮೇಶ್ ಅಖಾಡಕ್ಕೆ

ಪುಟ 01➔ ತೆರೆದ ವಾಹನದಲ್ಲಿ ನಡೆದ ಮೆರವಣಿಗೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಅಭ್ಯರ್ಥಿ ವೀರಣ್ಣ ಚರಂತಿಮಠ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಮಾಜಿ ಉಪ ಮುಖ್ಯಮಂತ್ರಿ ಹಾಗೂ ಸಂಸದ ಗೋವಿಂದ ಕಾರಜೋಳ, ಸಂಸದ ಪಿ.ಸಿ. ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣ ಸಾ. ಭಾಂಡಗೆ, ಶಾಸಕ ಸಿದ್ದು ಸವದಿ, ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಾಜಿ ಸಚಿವ ಬಿ. ಶ್ರೀರಾಮುಲು, ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ವಿಪ ಸದಸ್ಯ ಪಿ.ಎಚ್.ಪೂಜಾರ ಮತ್ತಿತರರು ಸಾಗಿದರೆ, ಉರಿ ಬಿಸಿಲನ್ನು ಲೆಕ್ಕಿಸದೇ ಬಿಜೆಪಿ ಕಾರ್ಯಕರ್ತರು, ಮುಖಂಡರು ಕೈಯಲ್ಲಿ ಬಿಜೆಪಿ ಬಾವುಟ ಹಿಡಿದು ಘೋಷಣೆ ಕೂಗುತ್ತ ಸಾಗಿ ಪಕ್ಷದ ಶಕ್ತಿ ಪ್ರದರ್ಶನ ನಡೆಸಿದರು. ನಂತರ ನಡೆದ ಸಭೆಯಲ್ಲಿ ಮಾತನಾಡಿದ ಬಿ.ವೈ.ವಿಜಯೇಂದ್ರ, ಸಹಿತ ಪ್ರಮುಖರು ಅಭಿವೃದ್ಧಿಯೇ ನಮಗೆ ಮುಖ್ಯ ಆಧಾರ. ಅದನ್ನೇ ಆಧಾರವಾಗಿಟ್ಟುಕೊಂಡು ಮತ ಕೇಳುತ್ತೇವೆ. ನಿಶ್ಚಿತವಾಗಿ ಈ ಕ್ಷೇತ್ರದಲ್ಲಿ ನಾವು ಗೆಲುವು ಸಾಧಿಸಿ ತೋರಿಸುವುದಾಗಿ ಸವಾಲು ಹಾಕಿದರು.

ಕಾಂಗ್ರೆಸ್‌ನಿಂದ ಉಮೇಶ ಮೇಟಿ ನಾಮಪತ್ರ: ಕಾಂಗ್ರೆಸ್ ಅಭ್ಯರ್ಥಿ ಅಭ್ಯರ್ಥಿ ಉಮೇಶ ಮೇಟಿಯವರು ಸೋಮವಾರ ಭಾರೀ ಮೆರವಣಿಗೆಯೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದಲ್ಲಿ ನಾಮಪತ್ರ ಸಲ್ಲಿಸಿದರು. ಕಾಂಗ್ರೆಸ್ ಕಾರ್ಯಕರ್ತರು ಕೈಯಲ್ಲಿ ಕಾಂಗ್ರೆಸ್ ಭಾವುಟ ಹಿಡಿದುಕೊಂಡು ಪಕ್ಷದ ಅಭ್ಯರ್ಥಿ ಉಮೇಶ ಮೇಟಿಯವರ ಪರವಾಗಿ ಜೈ ಘೋಷಣೆಗಳನ್ನು ಕೂಗಿದರು.



ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ನಾಮಪತ್ರ ಸಲ್ಲಿಸಿದರು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಇದ್ದರು.

> ಕಾಂಗ್ರೆಸ್ ಸರ್ಕಾರದ ಆಡಳಿತ ಬಗ್ಗೆ ಜನರಲ್ಲಿ ಅಸಮಾಧಾನ ಹೆಚ್ಚುತ್ತಿದೆ. ಕುಟುಂಬ ರಾಜಕಾರಣದ ವಿರುದ್ಧ ಜನ ತೀರ್ಪು ನೀಡಲಿದ್ದು, ಬಾಗಲಕೋಟೆಯಲ್ಲಿ ಮೇಟಿಯವರ ಮಗ, ದಾವಣಗೆರೆಯಲ್ಲಿ ಮೊಮ್ಮಗನನ್ನು ಮನೆಗೆ ಕಳುಹಿಸುವ ಕಾಲ ಬಂದಿದೆ.
> ■ ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ದಾವಣಗೆರೆಯಲ್ಲಿ ಬೃಹತ್ ಮೆರವಣಿಗೆ

ಪುಟ 01➔ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಮಾಜಿ ಸಚಿವ ಡಾ.ಜಿ.ಎಂ. ಸಿದ್ದೇಶ್ವರ್, ಮಾಜಿ ಸಚಿವ ರೇಣುಕಾಚಾರ್ಯ, ಜೆಡಿಎಸ್ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಜತೆಗೆ ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ಟಿ. ದಾಸಕರಿಯಪ್ಪ ನಾಮಪತ್ರ ಸಲ್ಲಿಸಿದರು.

ಕಾಂಗ್ರೆಸ್‌ನಿಂದ ಸಮರ್ಥ ನಾಮಪತ್ರ: ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಎಂ. ಶಾಮನೂರು ನಾಮಪತ್ರ ಸಲ್ಲಿಕೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ವತಃ ಸಮರ್ಥ ಅವರ ಕೈ ಹಿಡಿದು ಕಚೇರಿಗೆ ಕರೆತಂದು ಬೆಂಬಲ ವ್ಯಕ್ತಪಡಿಸಿದರು. ಮೆರವಣಿಗೆಯಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕ ಪ್ರದೀಪ್ ಈಶ್ವರ್ ಸಾಥ್ ನೀಡಿದರು. ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಮಾಜಿ ಸಚಿವ ಹೆಚ್. ಆಂಜನೇಯ, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಇನ್ನಿತರರಿದ್ದರು.



ಸಾದಿಕ್ ಪೈಲ್ವಾನ್ ಬಂಡಾಯ ಉಮೇದುವಾರಿಕೆ

ಕಾಂಗ್ರೆಸ್ ಟಿಕೆಟ್ ತಪ್ಪಿದ ಹಿನ್ನೆಲೆಯಲ್ಲಿ ಅಲ್ಪಸಂಖ್ಯಾತರ ಮುಖಂಡ ಸಾದಿಕ್ ಪೈಲ್ವಾನ್ ಮತ್ತೆ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ಮೂಲಕ ಕಾಂಗ್ರೆಸ್ಸಿಗೆ ಬಂಡಾಯದ ಆಘಾತ ನೀಡಿದ್ದಾರೆ. ಅದ್ದೂರಿ ಮೆರವಣಿಗೆಯೊಂದಿಗೆ ಮಹಾ ನಗರ ಪಾಲಿಕೆಯ ಚುನಾವಣಾ ಕಚೇರಿಗೆ ಆಗಮಿಸಿದ ಸಾದಿಕ್ ಪೈಲ್ವಾನ್‌ಗೆ ಮುಸ್ಲಿಂ ಸಮುದಾಯದ ಮಹಿಳೆಯರು, ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲ ತೋರಿದರು.

ತಡೆಯಾಜ್ಞೆ ತೆರವಿನ ನಂತರ ಕಾನೂನು ಕ್ರಮ: ಸುಧಾಕರ್

ವಿಧಾನಪರಿಷತ್: ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಕಾಮಗಾರಿಗಳಲ್ಲಿ ಉಪ ಕುಲಪತಿ ಅವರು ಅಕ್ರಮ ನಡೆಸಿರುವುದು ಸಾಬೀತಾದರೆ ನ್ಯಾಯಾಲಯದ ತಡೆಯಾಜ್ಞೆ ತೆರವಾದ ನಂತರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ತಿಳಿಸಿದರು.




ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಭೋಜೆಗೌಡ ಪ್ರಶ್ನೆಗೆ ಉತ್ತರಿಸಿದ ಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಲ್ಲಿ ನಡೆದ ಕಾಮಗಾರಿಯ ಟೆಂಡರ್‌ಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿಬಂದಿದ್ದು, ಸರ್ಕಾರವೇ ಇದನ್ನು ರಕ್ಷಣೆ ಮಾಡಲಿದೆ ಎಂದರು.

ಕಾಮಗಾರಿ ಅಕ್ರಮ ನಡೆದ ಸಂಬಂಧ ಕುಲಪತಿಯೊಬ್ಬರು ನೇರವಾಗಿ ರಾಜ್ಯಪಾಲರಿಗೆ ದೂರು ಕೊಡಲಾಗಿತ್ತು. ಇದಕ್ಕೆ ಏಕ ನ್ಯಾಯಮೂರ್ತಿ ಸಮಿತಿಯನ್ನು ಮಾಡಿದ್ದರು. ಅದರ ವರದಿ ನೇರವಾಗಿ ಅವರಿಗೆ ಸಲ್ಲಿಕೆಯಾಗಿದೆ. ಈ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ, ನ್ಯಾಯಾಲಯದಲ್ಲಿ ಇದಕ್ಕೆ ತಡೆ ಹಿಡಲಾಗಿದೆ. ಪ್ರಕರಣ ನ್ಯಾಯಾಲಯದ ಹಂತದಲ್ಲಿರುವುದರಿಂದ ಹೆಚ್ಚು ಮಾತನಾಡಲಾಗುವುದಿಲ್ಲ ಎಂದರು.

ಇನ್ನೂ ಕುಲಪತಿಗಳನ್ನು ಬೇಕಂತಲೇ ಬದಲಾವಣೆ ಮಾಡಲಾಗಿದೆ. ಕೋಟ್ಯಂತರ ಭ್ರಷ್ಟಾಚಾರ ನಡೆದಿದೆ. ಹಳೆಯ ಕಟ್ಟಡ ಕಾಮಗಾರಿ ಬಗ್ಗೆ ಏಕೆ ಮಾತನಾಡಿಲ್ಲ, ಕುಲಪತಿಗಳನ್ನು ವರ್ಗಾವಣೆ ಮಾಡಿ, ಇನ್ನೊಬ್ಬರನ್ನು ತರಲಾಗಿದೆ ಎಂಬ ಭೋಜೆಗೌಡ ಆರೋಪಕ್ಕೆ ಉತ್ತರಿಸಿದ ಸಚಿವರು, ಕುಲಪತಿಗಳನ್ನು ನಾವು ಕಳುಹಿಸಿಲ್ಲ, ಅವರ ಸಮಯ 4 ವರ್ಷ ಅವಧಿ ಮುಗಿದಿತ್ತು. ಅದಕ್ಕೆ ಬದಲಾವಣೆಯಾಗಿದ್ದಾರೆ. ನ್ಯಾಯಾಲಯದಲ್ಲಿ ತಡೆಯಾಜ್ಞೆ ತೆರವಾದರೆ ಕ್ರಮ ವಹಿಸುತ್ತೇವೆ ಎಂದು ವಿವರಿಸಿದರು. ಇದಕ್ಕೆ ಮಧ್ಯ ಪ್ರವೇಶಿಸಿದ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಇದು ಭ್ರಷ್ಟಾಚಾರದ ವಿಚಾರವಾಗಿದೆ ಎಂದು ಹೇಳಿದರು.

ಕಲಾಪ ವೀಕ್ಷಣೆ



ವಿಧಾನಪರಿಷತ್‌ನಲ್ಲಿ ಸೋಮವಾರ ಶಾಲಾ - ಕಾಲೇಜು ವಿದ್ಯಾರ್ಥಿಗಳು ಕಲಾಪ ವೀಕ್ಷಿಸಿದರು.

ಬಜೆಟ್ ಭೀಷ್ಮ ಮಲಗಿದ್ದಾರೆ: ಪ್ರತಾಪ್ ಸಿಂಹ ನಾಯಕ

ವಿಧಾನಪರಿಷತ್: 17 ಬಾರಿ ಬಜೆಟ್ ಮಂಡಿಸಿರುವ ಬಜೆಟ್ ಭೀಷ್ಮ ಮಲಗಿದ್ದಾರೆ. ಅವರಿಗೆ ತಮ್ಮವರೇ ಬಾಣ ಬಿಟ್ಟಿದ್ದಾರೆ. ದಾಖಲೆಯ ಬಜೆಟ್ ಮಂಡಿಸಿರುವ ಖ್ಯಾತಿ ಪಡೆದಿರುವ ಸಿದ್ದರಾಮಯ್ಯ, ತಮ್ಮದೇ ಸರ್ಕಾರ ಮಾಡಿರುವ ಸಾಲದಿಂದಾಗಿ ಇತಿಹಾಸದಲ್ಲಿ ಸಾಲದ ರಾಮಯ್ಯ ಆಗಿ ಉಳಿಯಲಿದ್ದಾರೆ ಎಂದು ಬಿಜೆಪಿ ಸದಸ್ಯ ಪ್ರತಾಪ್ ಸಿಂಹ್ ನಾಯಕ ಲೇವಡಿ ಮಾಡಿದರು.



ಮೇಲ್ಮನೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ಇದು ನನ್ನ ಅವಧಿಯ ಕೊನೆಯ ಭಾಷಣ ಆರಂಭಿಸಿದ ಅವರು ಮಾತಿನುದ್ದಕ್ಕೂ ಕಾಂಗ್ರೆಸ್ ಸರ್ಕಾರದ ವೈಫಲ್ಯ ಹಾಗೂ ಬಜೆಟ್‌ನಲ್ಲಿರುವ ಲೋಪಗಳನ್ನು ಪ್ರಸ್ತಾಪಿಸಿದರು. 17 ಬಾರಿ ಬಜೆಟ್ ಮಂಡಿಸುವ ಸುದೈವ ಮತ್ಯಾರಿಗೂ ಸಿಗುವುದಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ಸಿಗರು ಬಜೆಟ್ ಭೀಷ್ಮ ಎಂದು ಹಾಡಿಹೊಗಳುತ್ತಿದ್ದಾರೆ. ಆದರೆ, ಬಜೆಟ್ ಮಂಡನೆ ವೇಳೆ ಕಾಂಗ್ರೆಸ್‌ನ ಯಾವೊಬ್ಬ ಶಾಸಕನೂ ಮೇಜು ಕುಟ್ಟಲಿಲ್ಲ. ಇದು ಬಜೆಟ್ ವಾಸ್ತವತೆ ಎಂದು ಟೀಕಿಸಿದರು.

ಸಿದ್ದರಾಮಯ್ಯ ಅವರು ಉತ್ತರಾಯಣ ಕಾಲ ಅಂದರೆ ಹೈಕಮಾಂಡ್ ಆದೇಶವನ್ನು ಕಾಯುತ್ತಾ ಮಲಗಿದ್ದಾರೆ, ಅವರಿಗೆ ಬಿಟ್ಟ ಬಾಣಗಳು ವಿರೋಧಿಗಳು ಅಲ್ಲ, ಸ್ವಪಕ್ಷದವರೇ. ಸಿಎಂ ಕುರ್ಚಿ ಕಿತ್ತಾಟದ ಮಾತುಗಳು ಸ್ವಪಕ್ಷೀಯರಿಂದಲೇ ಬಂದಿವೆ. ಹೇಗಾದರೂ ಮಾಡಿ ಅಧಿಕಾರ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಕಳೆದ ಡಿಸೆಂಬರ್‌ನಲ್ಲಿ ವಿಶೇಷ ಅಧಿವೇಶನ ನಡೆಸಿ, ಸ್ವಪಕ್ಷದಲ್ಲಿ ಉಂಟಾಗಿದ್ದ ರಾಜಕೀಯ ಚಟುವಟಿಕೆಗಳನ್ನು ಹತ್ತಿಕ್ಕುವುದೇ ಆಗಿತ್ತು. ಆದರೆ, ಹೈಕಮಾಂಡ್ ಸೂಚನೆಯಂತೆ ವಿಬಿ ಜಿ ರಾಮ್ ಜಿ ಕುರಿತ ಅಧಿವೇಶನ ಎಂಬುದು ಹೇಳಿಕೊಂಡಿತು. ಸರ್ಕಾರಕ್ಕೆ ಅಂತಹ ಕಾಳಜಿಯಿದ್ದರೆ, ಮೋದಿ ಅವರ 10 ವರ್ಷ ಹಾಗೂ ಮನಮೋಹನ ಸಿಂಗ್ ಅವರ 10 ವರ್ಷದ ಆಡಳಿತದ ಬಗ್ಗೆ ಚರ್ಚೆಗೆ ಈಗ 3 ದಿನ ಅಧಿವೇಶನ ಕರೆಯಲಿ ಚರ್ಚಿಸೋಣ ಎಂದು ಸವಾಲು ಹಾಕಿದರು.

ಕಿರುಸುದ್ದಿ

ಸದನದಲಿ ಸಂತಾಪ ಸೂಚನಾ ನಿರ್ಣಯ ಮಂಡನೆ

ವಿಧಾನಪರಿಷತ್ತು: ಅಕಾಲಿಕವಾಗಿ ನಿಧನರಾದ ವಿಧಾನ ಪರಿಷತ್‌ನ ಮಾಜಿ ಶಾಸಕ ಕರಿಯಣ್ಣ ಎಚ್. ಸಂಗಟಿ ಅವರಿಗೆ ಸಂತಾಪ ವ್ಯಕ್ತಪಡಿಸಿ, ಸಭಾಪತಿ ಬಸವರಾಜ ಹೊರಟ್ಟಿ ಅವರು ಸದನದಲ್ಲಿ ಸಂತಾಪ ಸೂಚನಾ ನಿರ್ಣಯ ಮಂಡಿಸಿದರು. ಈ ವೇಳೆ ಮಾತನಾಡಿದ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಜ್ಜನ ರಾಜಕಾರಣಕ್ಕೆ ಉದಾಹರಣೆಯಾಗಿದ್ದ ಕರಿಯಣ್ಣ ಸಂಗಟಿ ಅವರನ್ನು ನಾನು ಅತ್ಯಂತ ಹತ್ತಿರದಿಂದ ಅವರನ್ನು ಬಲ್ಲೆ. ಅವರನ್ನು ರಾಗಿ ಮುದ್ದೆ ಎಂದೇ ತಮಾಷೆ ಮಾಡುತ್ತಿದ್ದೆವು. ಒಬ್ಬ ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಸಂತಾಪ ವ್ಯಕ್ತಪಡಿಸಿದರು. ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹ್ಮದ್ ಮಾತನಾಡಿ, ರಾಯಚೂರು, ಕೊಪ್ಪಳ ಜಿಲ್ಲೆಯಲ್ಲಿ ಹಿರಿಯ ನಾಯಕರಾಗಿದ್ದ ಕರಿಯಣ್ಣ ಸಂಗಟಿ ಅವರ ಅಕಾಲಿಕ ನಿಧನರಿಂದ ನಾವು ಓರ್ವ ಶ್ರೇಷ್ಠ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ. ಯುವ ಕಾಂಗ್ರೆಸ್ ಸದಸ್ಯರಾಗಿ ರಾಜಕೀಯ ಜೀವನ ಆರಂಭಿಸಿದ ಅವರು ಜಿಲ್ಲಾ ಪಂಚಾಯತ್ ಸದಸ್ಯರಾಗಿ, ನಂತರ ಅಧ್ಯಕ್ಷರಾಗಿ ಸಲ್ಲಿಸಿದ ಸೇವೆ ಅನನ್ಯ ಎಂದು ಸ್ಮರಿಸಿದರು.

ವನ್ಯ ಜೀವಿ ಸಂರಕ್ಷಣಾ ಕಾಯ್ದೆ ತಿದ್ದುಪಡಿ ಸರ್ಕಾರಕ್ಕಿಲ್ಲ ಅಧಿಕಾರ

ವಿಧಾನಪರಿಷತ್: ವನ್ಯ ಜೀವಿಗಳ ಅಂಗಾಂಗ, ಟ್ರೋಫಿಗಳನ್ನು ಸರ್ಕಾರಕ್ಕೆ ನೀಡಬೇಕು ಎಂಬುದು ಕೇಂದ್ರ ಸರ್ಕಾರದ ಕಾನೂನು. ಈ ಬಗ್ಗೆ ಉಲ್ಲೇಖಿಸುವ ವನ್ಯ ಜೀವಿ (ಸಂರಕ್ಷಣಾ) ಕಾಯ್ದೆ-1972 ಗೆ ತಿದ್ದುಪಡಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರವಿದೆ. ರಾಜ್ಯಕ್ಕೆ ಅಧಿಕಾರವಿಲ್ಲ ಎಂದು ಅರಣ್ಯ ಮತ್ತು ಜೀವಿಶಾಸ್ತ್ರ ಸಚಿವ ಈಶ್ವರ ಖಂಡ್ರೆ ಹೇಳಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯ ಕುಶಾಲಪ್ಪ ಎಂ. ಪಿ. (ಸುಜಾ) ಕೇಳಿದ ಪ್ರಶ್ನೆಗೆ ಉತ್ತರಿ ಸಿದ ಅವರು, ಮಲೆನಾಡು ಭಾಗದ ರೈತರು ಮತ್ತು ಬೆಳೆಗಾರರು ಪಾರಂಪರಿಕವಾಗಿ ತಮ್ಮ ಬಳಿಯೇ ಇಟ್ಟುಕೊಂಡಿರುವ ವಸ್ತುಗಳನ್ನು ಅವರ ಬಳಿಯೇ ಇಟ್ಟುಕೊಳ್ಳಲು ಅವಕಾಶ ನೀಡುವಂತೆ ಈಗಾಗಲೇ 2 ಬಾರಿ ಕೇಂದ್ರ ಸಚಿವರನ್ನು ಭೇಟಿಯಾಗಿ ಮನವಿ ಮಾಡಲಾಗಿದೆ. ಮತ್ತೊಮ್ಮೆ ಕೇಂದ್ರ ಸಚಿವರನ್ನು ಭೇಟಿಯಾಗಲು ನಾನು ಸಿದ್ದನಿದ್ದೇನೆ ಎಂದರು. ರಾಜ್ಯ ಸರ್ಕಾರವು ವನ್ಯ ಜೀವಿಗಳ ವಸ್ತುಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ 2024ರ ಜ.10 ರಂದು ಆದೇಶಿಸಿ, 90 ದಿನಗಳ ಕಾಲವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ 192 ಜನರು, 705 ವನ್ಯ ಜೀವಿ ಅಂಗಾಂಗ, ಟ್ರೋಫಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ ಎಂದರು.



ಅರಣ್ಯ ಭೂಮಿ ಮಂಜೂರು ಮಾಡಲ್ಲ: ಈಶ್ವರ ಖಂಡ್ರೆ

ವಿಧಾನಪರಿಷತ್: ರಾಜ್ಯದಲ್ಲಿ ಮೀಸಲು ಅರಣ್ಯ, ಪರಿಭಾವಿತ ಅರಣ್ಯ ಸೇರಿದಂತೆ ಯಾವುದೇ ಅರಣ್ಯ ಭೂಮಿಯನ್ನು ಸಾರ್ವಜನಿಕರಿಗೆ ಮಂಜೂರು ಮಾಡಲು ಸಾಧ್ಯವಿಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಸದಸ್ಯ ಕಿಶೋರ್ ಕುಮಾರ್ ಪುತ್ತೂರ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಅಕ್ರಮ ಸಕ್ರಮದ ಅಡಿ ನಮೂನೆ 50, 53, 57ರಲ್ಲಿ ಜಮೀನು ಮಂಜೂರಾತಿ ಕೋರಿ ಅರ್ಜಿಗಳನ್ನು ಸಲ್ಲಿಸಲಾಗಿದೆ. ಆದರೆ ಕಂದಾಯ ಭೂಮಿ ಮಂಜೂರು ಮಾಡಲು ಬರುತ್ತದೆಯೇ ಹೊರತು ಅರಣ್ಯ ಭೂಮಿಯನ್ನು ಅಲ್ಲ ಎಂದು ತಿಳಿಸಿದರು.

ತಾತ್ಕಾಲಿಕವಾಗಿ ಶೇ.20 ಪೂರೈಕೆಗೆ ಅವಕಾಶ: ಕೆ.ಎಚ್.ಮುನಿಯಪ್ಪ

ವಾಣಿಜ್ಯ ಸಿಲಿಂಡರ್ ಪೂರೈಕೆ

ಬೆಂಗಳೂರು: ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಉಂಟಾದ ತೊಂದರೆ ಕುರಿತು ಈಗಾಗಲೇ ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದ್ದು, ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಶೇ.20 ಪೂರೈಕೆಗೆ ಅವಕಾಶ ನೀಡಲಾಗಿದೆ ಎಂದು ಆಹಾರ ಇಲಾಖೆಯ ಸಚಿವ ಕೆ.ಎಚ್.ಮುನಿಯಪ್ಪ ಸೂಚಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಣಿಜ್ಯ ಸಿಲಿಂಡರ್ ಪೂರೈಕೆಯಲ್ಲಿ ಉಂಟಾದ ತೊಂದರೆ ಕುರಿತು ಈಗಾಗಲೇ ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದ್ದು, ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಶೇ.20 ಪೂರೈಕೆಗೆ ಅವಕಾಶ ನೀಡಲಾಗಿದೆ. ಇದರ ಜೊತೆಗೆ, ಹೋಟೆಲ್ ಹಾಗೂ ಸಂಬಂಧಿತ ಉದ್ಯಮಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಲು ಕನಿಷ್ಠ ಶೇ.50 ಪೂರೈಕೆ ಅಗತ್ಯವಿದ್ದು, ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಪ್ರತಿದಿನ ಸುಮಾರು 7000 ಕಮರ್ಷಿಯಲ್ ಸಿಲಿಂಡರ್‌ಗಳನ್ನು ಹಂಚಿಕೆ ಮಾಡಲಾಗುತ್ತಿತ್ತು, ಪ್ರಸ್ತುತ ಆಟೋ ಗ್ಯಾಸ್ ಸೇರಿದಂತೆ ವಿವಿಧ ವಲಯಗಳನ್ನು ಸೇರಿಸಿ ಒಟ್ಟು 15,000-16,000 ಸಿಲಿಂಡರ್‌ಗಳ ವಿತರಣೆ ಮಾಡಲು ನಿರ್ದರಿಸಿದ್ದು, ಇದರಲ್ಲಿ ಹೋಟೆಲ್, ರೆಸ್ಟೋರೆಂಟ್, ಡಾಬಾ, ಕ್ಯಾಂಟೀನ್, ಫುಡ್ ಪ್ರೊಸೆಸಿಂಗ್ ಘಟಕಗಳು ಸೇರಿದಂತೆ ವಿವಿಧ ಸೇವಾ ವಲಯಗಳಿಗೆ ಪ್ರತಿ ದಿನ 10 ಸಾವಿರ ವಾಣಿಜ್ಯ ಸಿಲಿಂಡರ್ ಪೂರೈಕೆಯನ್ನು ಮಾಡಲಾಗುವುದು. ಅಂದರೆ ಪ್ರಸ್ತುತ ಬಳಕೆ ಮಾಡುತ್ತಿರುವ ವಾಣಿಜ್ಯ ಸಿಲಿಂಡರ್‌ನಲ್ಲಿ ಶೇ.20ರಷ್ಟು ಪೂರೈಕೆ ಮಾಡಲಾಗುವುದು ಎಂದು ಹೇಳಿದರು.



25 ದಿನಗಳಿಗೊಮ್ಮೆ ಗೃಹ ಬಳಕೆ ಸಿಲಿಂಡರ್

ನಗರದ ಭಾಗದಲ್ಲಿ ಸುಮಾರು 25 ದಿನಗಳಿಗೊಮ್ಮೆ ಗೃಹ ಬಳಕೆ ಸಿಲಿಂಡರ್ ಹಾಗೂ ಗ್ರಾಮೀಣ ಭಾಗದಲ್ಲಿ 45 ದಿನಗಳಲ್ಲಿ ಸಿಲಿಂಡರ್ ಪೂರೈಕೆ ಮಾಡಲಾಗುತ್ತದೆ. ಯಾಕೆಂದರೆ ಗ್ರಾಮೀಣ ಭಾಗದಲ್ಲಿ ಜನರಿಗೆ ಸೌಧೆ ಸೇರಿದಂತೆ ಇತರ ವ್ಯವಸ್ಥೆಗಳಿರುತ್ತದೆ. ಹಾಗಾಗಿ ಗ್ರಾಮೀಣ ಭಾಗದವರಿಗೆ 45 ದಿನಕ್ಕೊಮ್ಮೆ ಅನಿಲ ಪೂರೈಕೆ ಮಾಡಲಾಗುತ್ತದೆ. ಅದಕ್ಕೂ ಮೊದಲು ಗ್ರಾಹಕರು ಅನಿಲದ ಅಂಗಡಿಗೆ ಬರುವ ಅಗತ್ಯವಿಲ್ಲ. ಫೋನ್ ಮಾಡಿದರೆ ಮನೆ ಬಾಗಿಲಿಗೆ ಸಿಲಿಂಡರ್ ಬರಲಿದೆ ಎಂದರು.

ಇದರೊಂದಿಗೆ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳು, ಔಷಧ ಉದ್ಯಮಕ್ಕೆ, ಮೀನುಗಾರಿಕೆ, ರೇಷ್ಮೆ ಹಾಗೂ ಇತರೆ ಅಗತ್ಯ ವಲಯಗಳಿಗೆ ಪ್ರತ್ಯೇಕ ಆದ್ಯತೆ ನೀಡಿ ಸುಮಾರು 500 ಸಿಲಿಂಡರ್‌ಗಳನ್ನು ಮೀಸಲಿಡಲಾಗಿದೆ ಎಂದು ತಿಳಿಸಿದರು.

ಕಳ್ಳಸಂತೆ ನಿಯಂತ್ರಣ ಹಾಗೂ ಪಾರದರ್ಶಕತೆ ಹೆಚ್ಚಿಸುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಎಲ್ಲಾ ವಾಣಿಜ್ಯ ಅಡಿಗೆ ಅನಿಲ ಬಳಕೆದಾರರು ಒಂದು ವಾರದೊಳಗೆ ಗೈಲ್‌ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. ಇದರಿಂದ ಮುಂದಿನ ದಿನಗಳಲ್ಲಿ ಪೈಪ್ಲೈನ್ ಆಧಾರಿತ ಗ್ಯಾಸ್ ಪೂರೈಕೆಯನ್ನು ವಿಸ್ತರಿಸಲು ಸಹಾಯಕವಾಗಲಿದೆ ಎಂದರು. ವಾಣಿಜ್ಯ ಅಡಿಗೆ ಅನಿಲ ಬಳಸುವವರು ಒಂದು ವಾರದೊಳಗೆ ಕಡ್ಡಾಯವಾಗಿ ಗೇಲ್‌ನಲ್ಲಿ ನೊಂದಣಿ ಮಾಡಿಸಬೇಕು ಎಂದು ಮುನಿಯಪ್ಪ ತಿಳಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ

ಉದ್ಯೋಗ ಸೃಷ್ಟಿಗೆ ಒತ್ತು

ವಿಧಾನಪರಿಷತ್: ಹೊಸ ಹುದ್ದೆಗಳ ಸೃಷ್ಟಿ ಸೇರಿದಂತೆ ಹಲವಾರು ಸಮಸ್ಯೆಗಳ ಮಧ್ಯೆಯೂ ನಾವು ವೃಂದ, ನೇಮಕಾತಿ ಪರಿಷ್ಕರಣೆಗೆ ಸ್ವರೂಪ ನೀಡಲು ಪ್ರಯತ್ನಿಸಲಾಗುತ್ತಿದೆ. ಇನ್ನೆರಡು ತಿಂಗಳಲ್ಲಿ, ಕಳೆದ 40 ವರ್ಷಗಳಲ್ಲಿ ಆಗದಿರುವ ಕೆಲಸ ಪೂರ್ಣಗೊಳ್ಳಲಿದೆ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಎಸ್.ವಿ. ಸಂಕನೂರ ಅವರ ಆರೋಗ್ಯ ಇಲಾಖೆಯ ವೈದ್ಯರ ಸಮಸ್ಯೆಗಳ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಬಿ, ಸಿ, ಡಿ ದರ್ಜೆಯ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಮಾಡ ಲಾಗಿದ್ದು, ಎ ವರ್ಗದ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಇದು ಕಳೆದ 13 ವರ್ಷಗಳಿಂದ ಬಾಕಿ ಉಳಿದಿತ್ತು. ಗ್ರಾಮೀಣ ಸೇವೆ ಸಲ್ಲಿಸಿದ ಕುರಿತು ವಿವರಗಳು ಸೇರಿದಂತೆ ಹಲವಾರು ಮಾಹಿತಿಗಳ ಕೊರತೆ ಇತ್ತು. ಅವನ್ನೆಲ್ಲ ಸರಿ ಪಡಿಸಿ ಪಟ್ಟಿ ಬಿಡುಗಡೆ ಮಾಡಲಾಗಿದ್ದು, ಪಟ್ಟಿಯಲ್ಲಿ ದೋಷ ಇದ್ದರೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದರು.

ವರ್ಗಾವಣೆಗೆ ಕೌನ್ಸಿಲಿಂಗ್ ಮುಖಾಂತರ ಆಗಬೇಕು ಎಂದು ದಶಕಗಳ ಹಿಂದೆಯೆ ಕಾನೂನು ಮಾಡಿದ್ದರೂ ಜಾರಿಗೆ ಬಂದಿರಲಿಲ್ಲ, ಮೆಡಿಕಲ್, ಶಿಫಾರಸ್ಸಿನ ಮುಂತಾದ ರೀತಿಯಲ್ಲಿ ವರ್ಗಾವಣೆ ನಡೆಯುತ್ತಿತ್ತು. ಕಳೆದ ವರ್ಷ 5,700 ವರ್ಗಾವಣೆ ಕೌನ್ಸಿಲಿಂಗ್ ಮೂಲಕ ಮಾಡಿದ್ದೇವೆ. ಈಗ ಮತ್ತೆ ಮುಂದಿನ ತಿಂಗಳು ಕೌನ್ಸಿಲಿಂಗ್ ಮೂಲಕವೇ ಪಾರದರ್ಶಕವಾಗಿ ಮಾಡು ತ್ತೇವೆ. ನಮ್ಮ ಇಲಾಖೆ ಪಾರದರ್ಶಕವಾಗಿ ಮುನ್ನೆಡಸಲು ಎಲ್ಲ ರೀತಿಯಲ್ಲಿ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು.

ಔಷಧ ಖರೀದಿಗೆ ಟೆಂಡರ್ ಕರೆಯಲು ನಿರ್ಧಾರ

ರಾಜ್ಯದ ಔಷಧ ಉಗ್ರಾಣಗಳಲ್ಲಿ ಔಷಧಗಳ ಕೊರತೆ ಅಭಾವ ನೀಗಿಸಲು 2026-27ನೇ ಸಾಲಿನ ಔಷಧಿಗಳ ಖರೀದಿ ಸಂಬಂಧ ಬರುವ ಜೂನ್‌ನಲ್ಲಿ ಟೆಂಡರ್ ಕರೆಯಲು ನಿರ್ಧರಿಸಲಾಗಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ಮಾಹಿತಿ ನೀಡಿದರು. ಪ್ರಶ್ನೋತ್ತರ ಕಲಾಪದ ವೇಳೆ ಸದಸ್ಯೆ ಹೇಮಲತಾ ನಾಯಕ್ ಅವರು ಕಲ್ಯಾಣ ಕರ್ನಾಟಕ ಭಾಗದ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆ ಉಂಟಾಗಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕಳೆದ ವರ್ಷ 534 ಔಷಧಿಗಳ ಖರೀದಿ ಪೈಕಿ 234 ಔಷಧಿಗಳ ಟೆಂಡರ್ ಕರೆದು ಖರೀದಿಸಿ, ಆಸ್ಪತ್ರೆಗಳಿಗೆ ಔಷಧಿಗಳ ಸರಬರಾಜು ಮಾಡಲಾಗಿದೆ ಎಂದರು.

ಅಂತಿಮ ಕಂತಿನ ಬೇಡಿಕೆಗೆ ಸದನ ಒಪ್ಪಿಗೆ

ವಿಧಾನಸಭೆ: ರಾಜ್ಯ ಸರ್ಕಾರ 2025-26ನೇ ಸಾಲಿನ ಪೂರಕ ಅಂದಾಜುಗಳ ವರದಿ ಮಂಡಿಸಿದ್ದು, ಮೂರನೇ ಮತ್ತು ಅಂತಿಮ ಕಂತಿನ ಬೇಡಿಕೆಗಳ ಪ್ರಸ್ತಾವಗಳಿಗೆ ಒಟ್ಟು 14,767.89 ಕೋಟಿ ರೂ.ಗಳ ಪೂರಕ ಅಂದಾಜು ಮಂಡಿಸಲಾಗಿದೆ.

2025-26ನೇ ಸಾಲಿನ ಪೂರಕ ಅಂದಾಜುಗಳ ಮೂರನೇ ಮತ್ತು ಅಂತಿಮ ಕಂತಿನ ಬೇಡಿಕೆಗಳ ಪ್ರಸ್ತಾವಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸದನದಲ್ಲಿ ಮಂಡಿಸಿದರು.

2026ನೇ ಮಾರ್ಚ್ 31ರ ಅಂತ್ಯದೊಳಗಾಗಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಸಂಬಂಧಿಸಿದಂತೆ 467.7 ಕೋಟಿ ರೂ.ಗಳನ್ನು ಮಂಜೂರು ಮಾಡಬೇಕು. ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗೆ 12.5 ಕೋಟಿ ರೂ., ಆರ್ಥಿಕ ಇಲಾಖೆಗೆ 32 ಕೋಟಿ ರೂ., ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆಗೆ 50.10 ಕೋಟಿ ರೂ., ಒಳಾಡಳಿತ ಮತ್ತು ಸಾರಿಗೆ ಇಲಾಖೆಗಳಿಗೆ 1,024.61 ಕೋಟಿ ರೂ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 415.66 ಕೋಟಿ ರೂ.ಗಳನ್ನು ಮಂಜೂರು ಮಾಡಲು ಪ್ರಸ್ತಾಪಿಸಲಾಗಿದೆ.

ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ ಇಲಾಖೆಗೆ 300.38 ಕೋಟಿ ರೂ., ಸಹಕಾರ ಇಲಾಖೆಗೆ 120.32 ಕೋಟಿ ರೂ., ಸಮಾಜ ಕಲ್ಯಾಣ ಇಲಾಖೆಗೆ 699.77 ಕೋಟಿ ರೂ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 106.7 ಕೋಟಿ ರೂ., ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಇಲಾಖೆಗೆ 207 ಕೋಟಿ ರೂ., ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ 113 ಕೋಟಿ ರೂ., ಕಂದಾಯ ಇಲಾಖೆಗೆ 860.97 ಕೋಟಿ ರೂ., ಶಿಕ್ಷಣ ಇಲಾಖೆಗೆ 68 ಕೋಟಿ ರೂ., ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ 753.97 ಕೋಟಿ ರೂ., ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಗೆ 975.5 ಕೋಟಿ ರೂ., ಲೋಕೋಪಯೋಗಿ ಇಲಾಖೆಗೆ 533 ಕೋಟಿ ರೂ.ಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವ ಸಲ್ಲಿಸಲಾಗಿದೆ.



ಅನುದಾನಕ್ಕೆ ಬೇಡಿಕೆ

ನೀರಾವರಿ ಇಲಾಖೆಗೆ 1,227 ಕೋಟಿ ರೂ., ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ 431.27 ಕೋಟಿ ರೂ., ಕಾರ್ಮಿಕ ಮತ್ತು ಕೌಶಲಾಭಿವೃದ್ಧಿ ಇಲಾಖೆಗಳಿಗೆ 537 ಕೋಟಿ ರೂ., ಇಂಧನ ಇಲಾಖೆಗೆ 5764 ಕೋಟಿ ರೂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 31 ಕೋಟಿ ರೂ.ಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವಿಸಲಾಗಿದೆ.

ಶಾಲಾ ವಿದ್ಯಾರ್ಥಿಗಳಿಗೆ ಮೊಬೈಲ್ ಬಳಕೆ ನಿಷೇಧ

ವಿಧಾನಪರಿಷತ್ತು: ರಾಜ್ಯದಲ್ಲಿ 16 ವರ್ಷದೊಳಗಿನ ಶಾಲಾ ವಿದ್ಯಾರ್ಥಿಗಳಿಗೆ ಸಾಮಾಜಿಕ ಜಾಲತಾಣಗಳನ್ನು, ಮೊಬೈಲ್ ಬಳಕೆಯನ್ನು ನಿಷೇಧಿಸಲು ಸರ್ಕಾರ ಮಹತ್ವದ ಹೆಜ್ಜೆ ಇರಿಸಿದ್ದು, ಇದನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಪಾಲಕರ ಸಲಹೆ ಆಧರಿಸಿ ಶೀಘ್ರ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧುಬಂಗಾರಪ್ಪ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಮೇಲ್ಮನೆ ಬಿಜೆಪಿ ಸದಸ್ಯ ಪ್ರತಾಪ್ ಸಿಂಹ್ ನಾಯಕ ಹಾಗೂ ಜೆಡಿಎಸ್ ಸದಸ್ಯ ಟಿ.ಎನ್. ಜವರಾಯಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಇತ್ತೀಚೆಗೆ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳು ಒಂದೊಳ್ಳೆ ರೀತಿಯಲ್ಲಿ ಉಪಯೋಗವಾದರೆ ಸರಿ. ಆದರೆ ಹೆಚ್ಚಾಗಿ ಇದು ದುರಂತವಾಗಿ ಕಾಡುತ್ತಿದೆ. ಅಲ್ಲದೇ, ಮಕ್ಕಳ ಮನಸ್ಸಿನ ಮೇಲೆ ಘೋರ ಪರಿಣಾಮ ಬೀರುತ್ತಿದೆ ಎಂದರು.

ಇಡೀ ಭಾರತ ದೇಶದಲ್ಲಿ ಮೊದಲು ನಮ್ಮ ರಾಜ್ಯದಲ್ಲಿ ಈ ಕ್ರಮಕೈಗೊಳ್ಳಲಾಗಿದೆ. ಈ ಯೋಜನೆಯ ಮೂಲಕ ಹದಿಹರೆಯದ ವಿದ್ಯಾರ್ಥಿಗಳಲ್ಲಿ ಜೀವನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು ಹಾಗೂ ಮಾನಸಿಕ ಒತ್ತಡವನ್ನು ನಿಭಾಯಿಸುವ ಸಾಮರ್ಥ್ಯವನ್ನು ವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದರು.

ಮುಂಬರುವ ಅಧಿವೇಶನದಲ್ಲಿಯೂ ಈ ವಿಷಯವಾಗಿ ಸಮಗ್ರ ಚರ್ಚೆ ನಡೆಯಬೇಕು. ಈ ಸಂಬಂಧ ಪಾಲಕರ ಜತೆಯೂ ಸಮಾಲೋಚನೆ ನಡೆಸಿದರು.

ಮೌಲ್ಯಮಾಪನ ನಡೆಸುವ ಪ್ರಸ್ತಾವನೆ ಇಲ್ಲ: ಸಚಿವ

ವಿಧಾನಪರಿಷತ್: ತಾಲೂಕು ಮಟ್ಟದಲ್ಲಿ ಮಕ್ಕಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು. ಸಿಂಧನೂರಿನಲ್ಲಿ ಪರೀಕ್ಷಾ ಮೌಲ್ಯಮಾಪನ ಕೇಂದ್ರ ತೆರೆ ಯುವಂತೆ ಬಸನ ಗೌಡ ಬಾದರ್ಲಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಗುಣಮಟ್ಟ ಮತ್ತು ಗೌಪ್ಯತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ತಾಲೂಕು ಮಟ್ಟದಲ್ಲಿ ಮೌಲ್ಯಮಾಪನ ಕೇಂದ್ರ ತೆರೆಯುವ ಚಿಂತನೆ ಇಲ್ಲ ಎಂದು ತಿಳಿಸಿದರು. ತಾಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಮೌಲ್ಯಮಾಪಕರಿಗೆ ತೆರಳಲು ಸಮಸ್ಯೆ ಆಗುತ್ತದೆ. ಸಾರಿಗೆ ಖರ್ಚು ಹೆಚ್ಚಾಗುತ್ತದೆ. ಸಮಯ ವ್ಯರ್ಥವಾಗುತ್ತದೆ ಎಂಬ ಕಾರಣಕ್ಕೆ ಮೌಲ್ಯಮಾಪನವನ್ನು ತಾಲೂಕು ಕೇಂದ್ರಗಳಲ್ಲಿ ಸ್ಥಾಪಿಸಲು ಸಾಧ್ಯವಿಲ್ಲ. ನಮಗೆ ಗೌಪ್ಯತೆ ಕಾಪಾಡಿ ಕೊಳ್ಳುವುದು ಮುಖ್ಯ ಎಂದು ಸಚಿವರು ಸ್ಪಷ್ಟಪಡಿಸಿದರು.



ಬುಡಕಟ್ಟು ಜನರಿಗೆ ಹಕ್ಕು ಪತ್ರ ಸಿಕ್ಕಿಲ್ಲ: ಶಾಂತಾರಾಮ್

ವಿಧಾನಪರಿಷತ್: ಆಳುವ ಸರ್ಕಾರಗಳ ನಿರ್ಲಕ್ಷ್ಯದಿಂದಾಗಿ ಬುಡಕಟ್ಟು ಜನರು ಬಲವಂತವೋ, ಆಮಿಷಕ್ಕೊಳಗಾಗಿಯೋ ಮತಾಂತರಕ್ಕೆ ಒಳಗಾಗುತ್ತಿದ್ದಾರೆ. ಪರಿಣಾಮ ಅವರು ತಮ್ಮ ಬುಡಕುಟ್ಟು ಸಂಸ್ಕೃತಿಯಿಂದ ವಿಮುಖರನ್ನಾಗಿಸುವ ಪ್ರಯತ್ನಗಳು ನಿರಂತರವಾಗಿದ್ದು, ಸರ್ಕಾರ ಅದಕ್ಕೆ ಕಡಿವಾಣ ಹಾಕಬೇಕು ಎಂದು ಬಿಜೆಪಿ ಸದಸ್ಯ ಶಾಂತಾರಾಮ್ ಬುಡ್ನ ಸಿದ್ದಿ ಒತ್ತಾಯಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಅವರು, ದೇಶ ಸ್ವತಂತ್ರಗೊಂಡು ದಶಕಗಳು ಕಳೆದರೂ ಬುಡಕಟ್ಟು ಜನರಿಗೆ ಅರಣ್ಯ ಹಕ್ಕು ಕಾಯ್ದೆಯ ಅಡಿ ಹಕ್ಕು ಪತ್ರಗಳು ಸಿಕ್ಕಿಲ್ಲ. ಈ ಕಾಯ್ದೆಯ ಅಡಿ ಕೆಲವರಿಗೆ ಅರಣ್ಯ ಹಕ್ಕು ಸಿಕ್ಕಿದ್ದರೂ, ಅವರ ಹೆಸರಲ್ಲಿ ಪಹಣಿ ಬಂದಿಲ್ಲ, ಪರಿಣಾಮ ಗಂಗಾ ಕಲ್ಯಾಣ ಯೋಜನೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ. ಸೂಕ್ತ ದಾಖಲೆಗಳಿಲ್ಲದ ಕಾರಣ ಪಕ್ಕಾ ಮನೆಗಳೂ ಸಿಗದೇ ಅವರು, ಇಂದಿಗೂ ಟಾರ್ಪಲಿನ್ ಟೆಂಟ್‌ಗಳಲ್ಲಿ ಜೀವನ ಸಾಗಿಸುವಂತಾಗಿದೆ ಎಂದರು.

ರಾಜ್ಯದ ಅಭಿವೃದ್ಧಿಗೆ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿಲ್ಲ | ಸರ್ಕಾರದ ವಿರುದ್ಧ ಬಿಜೆಪಿ ಶಾಸಕ ಸುನೀಲ್ ಕುಮಾರ್ ಟೀಕೆ

ಸರ್ಕಾರಿ ಯೋಜನೆ ಅನುಷ್ಠಾನದಲ್ಲಿ ತಾಳಮೇಳವೇ ಬರುತ್ತಿಲ್ಲ

ವಿಧಾನಸಭೆ: ರಾಜ್ಯ ಸರ್ಕಾರದಲ್ಲಿ ಯೋಜನೆ, ಅನುದಾನ ಮತ್ತು ಅನುಷ್ಠಾನದ ನಡುವೆ ತಾಳಮೇಳವೇ ಬರುತ್ತಿಲ್ಲ, ಒಂದಕ್ಕೊಂದು ಸಂಬಂಧವೇ ಇಲ್ಲದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯವ್ಯಯ ಮಂಡಿಸಿದ್ದಾರೆ ಎಂದು ಬಿಜೆಪಿ ಶಾಸಕ ಸುನೀಲ್ ಕುಮಾರ್ ಟೀಕಿಸಿದರು.

ಆಯವ್ಯಯದ ಮೇಲಿನ ಚರ್ಚೆಯ ವೇಳೆ ಮಾತನಾಡಿ, ಆಯವ್ಯಯದಲ್ಲಿರುವ ಅಂಕಿ ಅಂಶಗಳ ಬಗ್ಗೆಯೇ ಅನುಮಾನವಿದೆ. ಮುಖ್ಯಮಂತ್ರಿಯವರು ಒಂದು ಲೆಕ್ಕ ಹೇಳಿದರೆ, ಮಾಧ್ಯಮದಲ್ಲಿ ಇನ್ನೊಂದು ಸಂಖ್ಯೆ ಬಂದಿದೆ. ಅದಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ನೀಡಿದ ಸ್ಪಷ್ಟೀಕರಣದಲ್ಲಿ ಬೇರೆಯದೇ ಸಂಖ್ಯೆಯಿದೆ. ಆದ್ದರಿಂದ ಈ ಅಂಕಿ ಅಂಶಗಳ ಬಗ್ಗೆ ಗೊಂದಲವಿದೆ ಎಂದರು.

ಆಯವ್ಯಯದಲ್ಲಿ 74,000 ಕೋಟಿ ರೂ.ಗಳನ್ನು ಬಂಡವಾಳ ವೆಚ್ಚಕ್ಕೆ ಖರ್ಚು ಮಾಡುವುದಾಗಿ ಹೇಳಿದ್ದಾರೆ. ಅದೇ ರೀತಿ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವ ಘೋಷಣೆ ಮಾಡಲಾಗಿದೆ. ಆದರೆ, ಅದಕ್ಕೆ ಅನುದಾನ ಮೀಸಲಿಟ್ಟಿಲ್ಲ. ಹೋರಾಟದ ದಿಕ್ಕು ತಪ್ಪಿಸುವುದಕ್ಕಾಗಿ ಈ ಭರವಸೆ ನೀಡಲಾಗಿದೆ. ಅನುದಾನ ನೀಡದ್ದನ್ನು ನೋಡಿದರೆ ನೇಮಕಾತಿ ಮಾಡುವುದರ ಬಗ್ಗೆ ಅನುಮಾನ ಬರುತ್ತಿದೆ. ಅದೇ ರೀತಿ ವೇತನ ಆಯೋಗದ ಶಿಫಾರಸ್ಸು ಒಪ್ಪುತ್ತೇವೆ ಎನ್ನುವವರು ಅದಕ್ಕೆ ಬೇಕಾಗಿರುವ 20,000 ಕೋಟಿ ರೂ.ಗಳನ್ನು ಎಲ್ಲಿ ಹೊಂದಾಣಿಕೆ ಮಾಡುತ್ತೀರಿ ಎಂದು ಹೇಳಿಲ್ಲ. ಕೇಂದ್ರದ ವಿಬಿ ಜಿ ರಾಮ್ ಜಿ ಯೋಜನೆಯನ್ನು ವಿರೋಧಿಸುವ ರಾಜ್ಯ ಸರ್ಕಾರ ಮನರೇಗಾ ಯೋಜನೆಗೆ ಅನುದಾನ ಮೀಸಲಿಟ್ಟಿಲ್ಲ ಎಂದು ಉಲ್ಲೇಖಿಸಿದರು.



ರಾಜ್ಯದಲ್ಲಿ ಸುಮಾರು 38,000 ಕೋಟಿ ರೂ. ಬಾಕಿ ಬಿಲ್ ಪಾವತಿಸಬೇಕಿದೆ. ಅದಕ್ಕೆ ಅನುದಾನ ಎಲ್ಲಿದೆ? ಎರಡು ತಿಂಗಳು ಬಿಟ್ಟು ಹೋಗಿರುವ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಎಲ್ಲಿ ಜೋಡಿಸುತ್ತೀರಿ ಎಂದು ತಿಳಿಸಿಲ್ಲ. ಮೇಲ್ನೋಟಕ್ಕೆ ಕಂಡುಬಂದಿರುವ ಹತ್ತಾರು ಯೋಜನೆಗಳಿಗೆ ಅನುದಾನ ಇಟ್ಟಿಲ್ಲ. ಆದ್ದರಿಂದ ನೀವು ಇಂದಿರಾ ಕಿಟ್‌ನ ಜೊತೆಗೆ ಎಲ್ಲರಿಗೂ ಒಂದೊಂದು ಚೊಂಬು ಕೂಡ ನೀಡಿ ಎಂದು ಲೇವಡಿ ಮಾಡಿದರು.

ಸಾಮಾನ್ಯ ಜನರಿಗೆ ಆಯವ್ಯಯ ಎಂದರೆ ಸಾಲ, ಲೆಕ್ಕಾಚಾರ ಇದನ್ನೆಲ್ಲ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಈ ಸರ್ಕಾರದ ಯೋಜನೆಗಳೇನು? ಅದಕ್ಕೆಷ್ಟು ಅನುದಾನ ಇಟ್ಟಿದ್ದಾರೆ? ಅದರಲ್ಲಿ ಎಷ್ಟು ಅನುಷ್ಠಾನವಾಗಿದೆ ಇದನ್ನಷ್ಟೇ ಅರ್ಥ ಮಾಡಿಕೊಳ್ಳುತ್ತಾರೆ. ಆದರೆ, ಇದಕ್ಕೆ ಒಂದಕ್ಕೊಂದು ಸಂಬಂಧ ಇಲ್ಲದ ವಾತಾವರಣ ಸೃಷ್ಟಿ ಮಾಡಿದೆ. ಸರ್ಕಾರ ತರಾತುರಿಯಲ್ಲಿ ಜಾತಿಗಣತಿ ಮಾಡಲು ಆಯೋಗ ರಚಿಸಿ ಒಂದು ತಿಂಗಳೊಳಗೆ ಸಮೀಕ್ಷೆ ಮುಗಿಸಿ ವರದಿ ನೀಡಲು ಸೂಚಿಸಿತು. ಏಳು ತಿಂಗಳಾದರೂ ವರದಿ ನೀಡಿಲ್ಲ. ಈ ಬಗ್ಗೆ ಆಯವ್ಯಯ ದಲ್ಲಿ ಅಥವಾ ರಾಜ್ಯಪಾಲರ ಭಾಷಣದಲ್ಲಿ ಒಂದು ಸಾಲೂ ಉಲ್ಲೇಖಿಸಿಲ್ಲ. 500 ಕೋಟಿ ರೂ. ವೆಚ್ಚ ಮಾಡಿ ಮಾಡಿದ ಸಮೀಕ್ಷೆಯ ವರದಿಯನ್ನು ಮತ್ತೆ 50 ರೂ. ಹೆಚ್ಚುವರಿ ಇಟ್ಟು ಕಸದ ಬುಟ್ಟಿಗೆ ಸೇರಿಸಲಾಗುತ್ತದೆ ಎಂದು ಟೀಕಿಸಿದರು.

ವ್ಯಾಕರಣತಜ್ಞ ಸಿದ್ದರಾಮಯ್ಯ

ಸಿದ್ದರಾಮಯ್ಯ ಅವರನ್ನು ಆರ್ಥಿಕ ತಜ್ಞ ಎಂದು ಕರೆಯಲಾಗುತ್ತದೆ. ಅವರನ್ನು ಆರ್ಥಿಕ ತಜ್ಞ ಎಂದು ಹೇಳುವ ಜೊತೆಗೆ ವ್ಯಾಕರಣ ತಜ್ಞ ಎಂದೂ ಕರೆಯಬಹುದು. ಯಾಕೆಂದರೆ ಈ ಬಾರಿ ಆಯವ್ಯಯದಲ್ಲಿ ಅವರು ಹೊಸ ಹೊಸ ಶಬ್ದಗಳನ್ನು ಉಲ್ಲೇಖಿಸಿದ್ದಾರೆ. ತೆರಿಗೆಯ ಟ್ರಿಸ್ಟಿ, ಟ್ರೋಟಿಂಗ್ ಎಕಾನಮಿ, 11ಜಿ, ಫಲಧಾರೆ, ಭೀಷ್ಮ ತತ್ತ್ವ, ಬೆಂಕಿಯನ್ನು ಬೆಳಕಾಗಿಸುವುದು ಎಂಬಿತ್ಯಾದಿ ಪದಗಳಿವೆ. ಮುಂದಿನ ಬಾರಿ ಆಯವ್ಯಯ ಮಂಡಿಸುವಾಗ ನಮಗೆ ಡಿಕ್ಷನರಿ ಕೊಟ್ಟುಬಿಡಿ ಎಂದು ಕಾಲೆಳೆದರು.

> ರಾಷ್ಟ್ರೀಯ ಶಿಕ್ಷಣ ನೀತಿಯನ್ನು ತಿರಸ್ಕರಿಸಿರುವ ಸರ್ಕಾರ ರಾಜ್ಯ ಶಿಕ್ಷಣ ನೀತಿಯನ್ನು ತರುವುದಾಗಿ ಹೇಳಿ ಮೂರು ವರ್ಷಗಳಾದರೂ ಇನ್ನೂ ಜಾರಿಗೆ ತಂದಿಲ್ಲ. ರಾಜ್ಯದ ವಿದ್ಯಾರ್ಥಿಗಳು ಯಾವ ನೀತಿಯ ಆಧಾರದಲ್ಲಿ ಶಿಕ್ಷಣ ಪಡೆಯಬೇಕೆಂಬ ಸ್ಪಷ್ಟತೆ ಇಲ್ಲದಂತಾಗಿದೆ.
> ■ **ಸುನೀಲ್ ಕುಮಾರ್,** ಬಿಜೆಪಿ ಶಾಸಕ

ಜಾಹೀರಾತು ನೀತಿ ಮರು ಪರಾಮರ್ಶಿಸಲಿ

ವಿಧಾನಪರಿಷತ್: ಹೊಸ ಜಾಹೀರಾತು ನೀತಿಗೆ ಒಪ್ಪಿಗೆ ಸೂಚಿಸಿರುವ ಸಚಿವ ಸಂಪುಟ ನಿರ್ಣಯವನ್ನು ಮರು ಪರಿಶೀಲಿಸಬೇಕು ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಶಿವಕುಮಾರ್ ಕೆ. ಒತ್ತಾಯಿಸಿದರು. ಮೇಲ್ಮನೆಯಲ್ಲಿ ಆಯವ್ಯಯದ ಕುರಿತು ಮಾತನಾಡಿ, ಇಂದಿನ ದಿನಗಳಲ್ಲಿ ವಸ್ತು ನಿಷ್ಠ ಹಾಗೂ ಪ್ರಾಮಾಣಿಕವಾಗಿ ಮುದ್ರಣ ಮಾಧ್ಯಮಗಳ ನಿರ್ವಹಣೆ ಕಷ್ಟಕರ. ಹೀಗಾಗಿ ಸರ್ಕಾರ ರೂಪಿಸಿರುವ ಹೊಸ ಜಾಹೀರಾತು ನೀತಿಯಿಂದಾಗಿ ಸಮಾಜವನ್ನು ಜಾಗೃತಗೊಳಿಸುವಲ್ಲಿ ಪ್ರಾಮಾಣಿಕವಾಗಿ ದುಡಿಯುತ್ತಿರುವ ಪತ್ರಿಕೆಗಳಿಗೆ ಸಮಸ್ಯೆಯಾಗುತ್ತದೆ.
ಈ ಕುರಿತಂತೆ ಸರ್ಕಾರ ತನ್ನ ನಿರ್ಧಾರವನ್ನು ಮತ್ತೊಮ್ಮೆ ಪರಾಮರ್ಶಿಸಬೇಕು. ಹಿರಿಯ ಪತ್ರಕರ್ತರಿಗೆ ಮಾಶಾಸನಕ್ಕೆ ಅನೇಕ ನಿಬಂಧನೆಗಳನ್ನು ವಿಧಿಸಲಾಗಿದೆ. ಮಾಶಾಸನಕ್ಕೆ ಸ್ವಂತ ಮನೆ ಇರಬಾರದು ಎಂಬ ಷರತ್ತು ವಿಧಿಸಿದೆ. ಹಾಗಾದರೆ ಪತ್ರಕರ್ತರು ಜೋಪಡಿಯಲ್ಲಿರಬೇಕೆ? ಈ ಹಿಂದೆ ನೆಹರೂ, ಇಂದಿರಾ ಗಾಂಧೀ ಅವರ ಆಡಳಿತದಲ್ಲಿ ಅನೇಕ ಪತ್ರಕರ್ತರಿಗೆ ನವದೆಹಲಿಯಲ್ಲಿ ಮನೆ ನೀಡಲಾಗಿತ್ತು ಎಂದರು.

ಸಂಪಾದಕೀಯ

ಸುದೀರ್ಘ ಜನಸೇವಕ!

ನರೇಂದ್ರ ಮೋದಿಯವರು ತಮ್ಮ ಹಲವಾರು ದಾಖಲೆಗಳ ಕಿರೀಟಕ್ಕೆ ಮತ್ತೊಂದು ಗರಿ ಸೇರಿಸಿಕೊಂಡಿದ್ದು, ಸುದೀರ್ಘ ಅವಧಿಗೆ ಸರಕಾರದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ ವಿನೂತನ ದಾಖಲೆಯೂ ಈಗ ಅವರದಾಗಿದೆ. ಮಾರ್ಚ್ 22ರ ಭಾನುವಾರದ ವೇಳೆಗೆ ಅವರು 8931 ದಿನಗಳ ಸುದೀರ್ಘ ಕಾಲ ಸರಕಾರದ ಮುಖ್ಯಸ್ಥರಾಗಿ ಅಧಿಕಾರ ನಿರ್ವಹಿಸಿದ ಸಾಧನೆ ಮಾಡಿದ್ದು, ಇದು ಈ ಹಿಂದೆ ಸಿಕ್ಕಿಂನ ಮಾಜಿ ಮುಖ್ಯಮಂತ್ರಿ ಪವನ್ ಕುಮಾರ್ ಚಾಮ್ಲಿಂಗ್ 8930



ದಿನಗಳ ಕಾಲ ಅಧಿಕಾರದಲ್ಲಿದ್ದ ಸಾಧನೆಯನ್ನು ಮೀರಿದಂತಾಗಿದೆ. 2007ರ ಅಕ್ಟೋಬರ್ 21ರಂದು ಗುಜರಾತಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನರೇಂದ್ರ ಮೋದಿಯವರು, ಅಲ್ಲಿ 13 ವರ್ಷಗಳ ಕಾಲ ರಾಜ್ಯಭಾರ ನಡೆಸಿ, ಅಲ್ಲಿಂದ ಬಳಿಕ 2014ರ ಮೇ 26ರಂದು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. 2014, 2019 ಮತ್ತು 2024ರ ಮೂರೂ ಲೋಕಸಭಾ ಚುನಾವಣೆಗಳಲ್ಲಿ ಗೆಲುವು ಸಾಧಿಸಿ ನಿರಂತರ ಮೂರು ಅವಧಿಗೆ ಪ್ರಧಾನಿಯಾಗಿ ಕಾರ್ಯನಿರ್ವಹಿಸುತ್ತಿರುವ ಹೆಗ್ಗಳಿಕೆಯೂ ಅವರದಾಗಿದೆ. ಲೋಕಸಭೆಯಲ್ಲಿ ಪೂರ್ಣ ಬಹುಮತ ಪಡೆದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿ ಎಂಬ ಶ್ರೇಯಸ್ಸೂ ಮೋದಿಯವರದಾಗಿದೆ.

ಸರಕಾರವೊಂದು ಅಥವಾ ಸರಕಾರಿ ಮುಖ್ಯಸ್ಥರೊಬ್ಬರು ಅತ್ಯಲ್ಪಾವಧಿಯಲ್ಲೇ 'ಆಡಳಿತ ವಿರೋಧಿ ಅಲೆ' ಎದುರಿಸುವ ನಿದರ್ಶನಗಳು ಸಾಕಷ್ಟಿರುವಾಗ ಮೋದಿಯವರು ಇಷ್ಟೊಂದು ದೀರ್ಘ ಕಾಲ ಆಡಳಿತದಲ್ಲಿ ಮುಂದುವರಿದುಕೊಂಡು ಬಂದಿರುವುದು ಸಾಮಾನ್ಯ ಸಾಧನೆಯೇನಲ್ಲ. ಆರಂಭದಲ್ಲಿ ಗುಜರಾತಿನ ಜನರು ಹಾಗೂ ಈಗ ದೇಶದ ಜನರು ಮೋದಿಯವರ ಮೇಲಿಟ್ಟಿರುವ ಪ್ರೀತಿ, ವಿಶ್ವಾಸಕ್ಕೆ ಇದು ಸಾಕ್ಷಿಯೆನ್ನಬಹುದು. ಮುಖಂಡನೊಬ್ಬ ಜನತೆಯ ಕಲ್ಯಾಣಕ್ಕೆ ಶ್ರಮಿಸದ ಹೊರತು ಹೀಗೆ ನಿರಂತರವಾಗಿ ಜನರ ವಿಶ್ವಾಸ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಅಂತಿರುವಾಗ ಮೋದಿಯವರು ಈಗಲೂ ಜನರ ವಿಶ್ವಾಸ ಉಳಿಸಿಕೊಂಡಿರಬೇಕಾದರೆ, ಅವರು ನೀಡಿದ ಸುಶಾಸನವೇ ಅದಕ್ಕೆ ಕಾರಣ. ಮೋದಿಯವರು ಅನುಷ್ಠಾನಿಸಿರುವ ಹಲವಾರು ಕಾರ್ಯಕ್ರಮಗಳು ದೇಶದ ಅಭಿವೃದ್ಧಿಗೆ ಕಾರಣವಾಗಿವೆ, ಜನರ ಜೀವನಮಟ್ಟವನ್ನು ಸುಧಾರಿಸಿವೆ, ಜನತೆಯ ಸಂಕಷ್ಟಗಳನ್ನು ನಿವಾರಿಸಿವೆ. ದೇಶದ ಹಲವಾರು ಬಿಕ್ಕಟ್ಟುಗಳನ್ನು ಸಮರ್ಥವಾಗಿ ನಿಭಾಯಿಸಿದ ಹಿರಿಮೆ ಮೋದಿಯವರದು.

ದೇಶೀಯವಾಗಿಯಷ್ಟೇ ಅಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಮೋದಿಯವರು ಈಗ ಜನಪ್ರಿಯ ನಾಯಕರಾಗಿದ್ದಾರೆ. ಜಾಗತಿಕವಾಗಿ ಭಾರತಕ್ಕೆ ಒಂದು ಘನತೆ ತಂದುಕೊಟ್ಟ ಕೀರ್ತಿ ಮೋದಿಯವರಿಗೆ ಸಲ್ಲಬೇಕಾಗಿದೆ. ಯಾವುದೇ ದೇಶ, ಯಾವುದೇ ರಾಷ್ಟ್ರ ಮುಖಂಡ ಈಗ ಮೋದಿಯವರ ಮಾತಿಗೆ ಕಿವಿಗೊಡುವ, ಅವರ ಅಭಿಪ್ರಾಯಕ್ಕೆ ಮನ್ನಣೆ ನೀಡುವ ಪರಿಸ್ಥಿತಿಯೀಗ ಸೃಷ್ಟಿಯಾಗಿದೆ. ಒಟ್ಟಿನಲ್ಲಿ ಭಾರತವು ವಿಶ್ವಗುರುವಾಗುವ ನಿಟ್ಟಿನಲ್ಲಿ ಮೋದಿ ಕೊಡುಗೆ ಮಹತ್ವದ್ದಾಗಿದೆ.

ಗೆಲ್ಲುವವನು ಗುಣಶಾಲಿ

ಸಭಾ ಜಿತಾ ವಸ್ತ್ರವತಾ ಮಿಷ್ಟಾಶಾ ಗೋಮಾತಾ ಜಿತಾ ।
ಅಧ್ವಾಜಿತೋ ಯಾನವತಾ ಸರ್ವಂ ಶೀಲವತಾ ಜಿತಾ ॥ – ಮಹಾಭಾರತ

ಉಡುಗೆಯಿದ್ದವನು ಸಭೆಯನ್ನು ಜಯಿಸುತ್ತಾನೆ. ಹಸುಗಳು ಇದ್ದವನು ಸಿಹಿ ತಿನಿಸುಗಳ ಆಸೆಯನ್ನು ಗೆಲ್ಲುತ್ತಾನೆ. ವಾಹನವಿದ್ದವನು ದಾರಿಯನ್ನು ಗೆಲ್ಲುತ್ತಾನೆ. ಗುಣಶಾಲಿಯು ಎಲ್ಲವನ್ನೂ ಗೆಲ್ಲುತ್ತಾನೆ – ಎಂಬುದು ಶ್ಲೋಕಾರ್ಥ.

ಬಟ್ಟೆಯಿಂದೇನು ಮಹಾ! ಅದರಿಂದೇನಾಗಲಿಕ್ಕಿದೆ? ಮಾನ ಮುಚ್ಚಲು ಬಟ್ಟೆಯಿದ್ದರೆ ಸಾಕು ಎನ್ನುವವರು ಕೆಲವರಿದ್ದಾರೆ. ಹಾಗಂದುಕೊಳ್ಳಬಾರದು. ತೊಟ್ಟ ಬಟ್ಟೆಯನ್ನೇ ನೋಡಿ ಗೌರವ ಕೊಡುವವರಿದ್ದಾರೆ. ಅದಕ್ಕಾಗಿ ಕವಿಯೊಬ್ಬ ಹೇಳುತ್ತಾನೆ. 'ಕಿಂ ವಾಸಸ್ಯೈವಂ ನ ವಿಚಾರಣೀಯಮ್' ಅಂದರೆ ಉಡುವ ಉಡುಪಿನಿಂದೇನು? ಎಂದು ಚರ್ಚೆ ಮಾಡಬಾರದಂತೆ. ಯೋಗ್ಯತೆಗೆ ಉಡುಗೆಯೂ ಮುಖ್ಯವೆಂದು ದೃಷ್ಟಾಂತದೊಂದಿಗೆ ಋಜುವಾತು ಪಡಿಸುತ್ತಾನೆ. ಸಮುದ್ರ ಮಥನ ಮಾಡಿ ವಿಷ ಬಂದಾಗ ಚರ್ಮಾಂಬರಧಾರಿಯಾದ ಶಿವನಿಗೆ ಕೊಟ್ಟನಂತೆ. ಮುಂದೆ ಲಕ್ಷ್ಮಿ ಬಂದಾಗ ಪೀತಾಂಬರಧಾರಿಯಾದ ವಿಷ್ಣುವಿಗೆ ಇತ್ತನಂತೆ. ಧರಿಸುವ ಆಕರ್ಷಕ ಉಡುಪುಗಳು ಲಾಭವನ್ನುಂಟು ಮಾಡುತ್ತವೆ. ಗೌರವವನ್ನು ತಂದುಕೊಡುತ್ತವೆ.

ಇಂದೂ ಕೂಡ ತೊಟ್ಟ ಬಟ್ಟೆಯನ್ನು ನೋಡಿ ಗೌರವ ಕೊಡುವವರಿದ್ದಾರೆ. ಸಾರ್ವಜನಿಕ

ಶ್ಲೋಕ ಸಾಗರ
◆ ಡಾ. ಸೋಂದಾ ಭಾಸ್ಕರ ಭಟ್

ಸಭೆಸಮಾರಂಭಗಳಲ್ಲಿ, ಕಾರ್ಯಕ್ರಮಗಳಲ್ಲಿ ಉತ್ತಮ ಪೋಷಾಕನ್ನು ಧರಿಸಿದ್ದರೆ ಆದರಾತಿಥ್ಯ ಹೆಚ್ಚು. ವಿದ್ವತ್ ಶಾಲನ್ನು ಹೊದ್ದು ಸಭೆಯನ್ನು ಪ್ರವೇಶಿಸಿದರೆ ಜ್ಞಾನಿಯೆಂದೇ ಗೌರವಿಸುತ್ತಾರೆ. ಸಭೆಯಲ್ಲಿದ್ದವರನ್ನೆಲ್ಲ ಗೆದ್ದಂತೆ ತೊಡುವ ಬಟ್ಟೆಗೂ ಗೌರವವಿದೆಯೆಂಬುದನ್ನು ಮರೆಯಬಾರದು. ಎಲ್ಲಿ? ಹೇಗೆ? ಹೋಗಬೇಕು? ಯಾವ ಉಡುಗೆ ಧರಿಸಿ ಹೋಗಬೇಕು. ಇತ್ಯಾದಿ ವಸ್ತ್ರಸಂಹಿತೆ ಪ್ರಜ್ಞೆ ಇದ್ದರೆ ಒಳ್ಳೆಯದು. ದೇವಸ್ಥಾನದಂತಹ ಭಕ್ತಿ ಕೇಂದ್ರಕ್ಕೆ ಹೋಗುವಾಗ ಅರ್ಧ ಚಡ್ಡಿ, ಮುಕ್ಕಾಲು ಚಡ್ಡಿ, ಚಿಕ್ಕ ಬಟ್ಟೆ ಇವುಗಳು ಗೌರವವನ್ನು ತಂದುಕೊಡುವುದಿಲ್ಲ; ಸಂಸ್ಕೃತಿಯೂ ಅಲ್ಲ, ಸಂಸ್ಕೃತಿಗೆ ಪೂರಕ ಉಡುಪು ಎಲ್ಲೆಡೆಯೂ ಗೌರವಕ್ಕೆ ಕಾರಣವಾಗುತ್ತದೆ. ಯಾರು ಹಸು ಸಾಕುತ್ತಾರೋ ಅವರ ಮನೆಯಲ್ಲಿ ಹಾಲು, ಮೊಸರು, ಬೆಣ್ಣೆ, ತುಪ್ಪಗಳಿಗೆ ಕೊರತೆಯಿರದು. ಹೆಚ್ಚಿನ ತಿನಿಸುಗಳಿಗೆ ಇವುಗಳು ಬೇಕೇ ಬೇಕು. ಸಿಹಿಯಾದ ಖಾದ್ಯ ತಯಾರಿಕೆಗೆ ತುಪ್ಪ ತೀರಾ ಅವಶ್ಯಕ. ಮನೆಯಲ್ಲಿ ತುಪ್ಪವೊಂದಿದ್ದರೆ ಯಾವುದೇ ಸಮಯದಲ್ಲಿ ವೈವಿಧ್ಯಮಯ ಸಿಹಿ ತಿಂಡಿಗಳನ್ನು ಮಾಡಿ ಸವಿಯಲು ಸಾಧ್ಯ.

ವಾಹನವೊಂದಿದ್ದರೆ ಬೇಕಾದಲ್ಲಿಗೆ ಹೋಗಬಹುದು. ಬೇಕಾದ ಸಮಯ, ಸಂದರ್ಭಕ್ಕೆ ಹೋಗಬಹುದು. ಇದರಿಂದ ನಡೆಯುವ ಆಯಾಸವೂ ತಪ್ಪುವುದು. ದೂರದೂರದ ಮಾರ್ಗವನ್ನು ಬಿಂಬಿಸುವುದಕ್ಕೆ ವಾಹನ ತುಂಬ ಉಪಯೋಗಿ. ಕಡಿಮೆ ಸಮಯದಲ್ಲಿ ಹೆಚ್ಚು ದೂರ ಕ್ರಮಿಸಬಹುದು. ಹೆಚ್ಚು ಕಾರ್ಯಕ್ರಮಗಳಿಗೆ ಹೋಗಬಹುದು. ಸಮಯವನ್ನು ಉಳಿಸುವುದಕ್ಕೂ, ಆಯಾಸವನ್ನು ಕಡಿಮೆ ಮಾಡುವುದಕ್ಕೂ ವಾಹನ ಅತ್ಯಂತ ಉಪಯುಕ್ತ. ಮೇಲೆ ಹೇಳಿದ ಸಂದರ್ಭಗಳಲ್ಲಿ ಅವುಗಳಿಗೆ ಸಂಬಂಧಿಸಿದ ಸನ್ನಿವೇಶವನ್ನು ಜಯಿಸಿ ಯಶಸ್ವಿಯಾಗುವುದನ್ನು ಹೇಳಲಾಗಿದೆ. ಇವುಗಳಿಗೆಲ್ಲಕ್ಕಿಂತಲೂ ಮುಖ್ಯವಾದದ್ದು ಶೀಲ. ಶೀಲವೆಂದರೆ ಉತ್ತಮ ಗುಣನಡತೆ. ಮನುಷ್ಯರಲ್ಲಿ ಇದೊಂದು ಸರಿಯಾಗಿದ್ದರೆ ಎಲ್ಲವನ್ನೂ ಜಯಿಸಬಹುದು. ಉತ್ತಮ ಗುಣ ನಡತೆಗೆ ಮನಸೋಲದವರು ವಿರಳ. ಇದೊಂದರಿಂದಲೇ ಎಲ್ಲವನ್ನೂ ಸಾಧ್ಯ ಮಾಡಲು ಆಗುವಾಗ ನಾವೆಲ್ಲ ಪ್ರಯತ್ನಪೂರ್ಣವಾಗಿ ಶೀಲವಂತರಾಗಬೇಕು.

ಎಲ್‌ಪಿಜಿಗೆ ಪರ್ಯಾಯ–ಗೋಬರ್‌ಗ್ಯಾಸ್

ಧರಣಿ ಮಂಡಲ
◆ ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com

ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಕಾವಿಗೆ ಇಲ್ಲಿಯ ವಿರೋಧಪಕ್ಷದವರು ರಸ್ತೆಯಲ್ಲಿ ಸೌದೆ ಒಲೆ ಹಚ್ಚಿ ಚಹಾ ತಯಾರಿಸಿ ಕುಡಿಯುತ್ತಿದ್ದಾರೆ. ಕೇಂದ್ರ ಸರ್ಕಾರ ಹಾಗೂ ಪ್ರಧಾನ ಮಂತ್ರಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಬಿದಿಗಿಳಿದು ಪ್ರತಿಭಟಿಸುತ್ತಿದ್ದಾರೆ. ನಮ್ಮ ದೇಶಕ್ಕೆ ತೈಲೋತ್ಪನ್ನಗಳು ವಿದೇಶಗಳಿಂದಲೇ ಇಂದಿಗೂ ಪೂರೈಕೆ ಆಗಬೇಕು ಎನ್ನುವುದು ಇವರಿಗೆ ತಿಳಿಯದ ಸಂಗತಿಯೇನಲ್ಲ. ಭಾರತ ಇಂದಿಗೂ ತೈಲೋತ್ಪನ್ನ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿಲ್ಲ. ಈಗ ಮಧ್ಯಪ್ರಾಚ್ಯವು ಯುದ್ಧದಿಂದ ಧಗಧಗಿಸುತ್ತಿರೋದು ಚಿಕ್ಕ ಮಕ್ಕಳಿಗೂ ತಿಳಿದ ವಿಚಾರ. ಯುದ್ಧದ ತೀವ್ರತೆ ಯುದ್ಧದಲ್ಲಿ ಪಾಲ್ಗೊಂಡ ದೇಶಗಳಷ್ಟೇ ಅಲ್ಲದೇ, 'ನಮಗೆ ಯುದ್ಧ ಬೇಡ ಬುದ್ಧ ಬೇಕು' ಎಂದು ತಟಸ್ಥವಾಗಿ ಉಳಿದುಕೊಂಡ ದೇಶಗಳನ್ನೂ ಸಹ ಬಿಟ್ಟಿಲ್ಲ. ತೈಲವನ್ನು ಉತ್ಪಾದಿಸುವ ದೇಶಗಳೇ ಯುದ್ಧದ ಹೊಡೆತಕ್ಕೆ ತತ್ತರಿಸುತ್ತಿವೆ. ಅರಬ್ ದೇಶಗಳಲ್ಲಿನ ಕೆಲವು ಪ್ರಮುಖ ತೈಲ ಸಂಸ್ಕರಣಾ ಘಟಕಗಳು ದಾಳಿಯಲ್ಲಿ ಧ್ವಂಸಗೊಂಡಿವೆ. ಇದರ ಪರಿಣಾಮ ರಫ್ತು ಮಾಡೋದು ಪಕ್ಕಕ್ಕಿರಲಿ ಅವರ ಬಳಕೆಗೂ ಪೆಟ್ರೋಲಿಯಂ ಉತ್ಪನ್ನಗಳು ಸಿಗೋದು ಕಷ್ಟಕರವಾಗಿದೆ. ಇಂತಹ ಸಂದರ್ಭದಲ್ಲಿ ಕಚ್ಚಾ ತೈಲವನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಭಾರತದಂತಹ ದೇಶಗಳ ಪರಿಸ್ಥಿತಿ ಬಿಗಡಾಯಿಸುವುದು ಸಹಜ. ಇಂತಹ ಪರಿಸ್ಥಿತಿಯಲ್ಲಿ ಎಲ್‌ಪಿಜಿ, ಪೆಟ್ರೋಲ್, ಡೀಸೆಲ್ ಸೇರಿದಂತೆ ಎಲ್ಲಾ ರೀತಿಯ ತೈಲೋತ್ಪನ್ನಗಳಿಗೆ ದೇಶದಲ್ಲಿ ಅಭಾವವಾಗುವುದು ಸಾಮಾನ್ಯ. ಇಷ್ಟೆಲ್ಲಾ ತೊಂದರೆಗಳು ಎದುರಾಗಿದ್ದಾಗಿಯೂ ಕೇಂದ್ರ ಸರ್ಕಾರದ ಮುಂದಾಲೋಚನೆ ಹಾಗೂ ಕೈಗೊಂಡಿರುವ ಕೆಲವು ರಾಜತಾಂತ್ರಿಕ ನಿಲುವುಗಳ ಕಾರಣದಿಂದ ಇತರೆ ಕೆಲವು ದೇಶಗಳಿಗೆ ಹೋಲಿಸಿದರೆ ಇದರ ಬಿಸಿ ಅಷ್ಟಾಗಿ ಭಾರತಕ್ಕೆ ಮುಟ್ಟಿಲ್ಲ. ಒಂದರ್ಥದಲ್ಲಿ ಭಾರತೀಯರಾದ ನಾವು ಸಾಕಷ್ಟು ಸುರಕ್ಷಿತರಾಗಿದ್ದೇವೆ. ಇತಹ ಸಂದರ್ಭದಲ್ಲಿ ವಿರೋಧ ಪಕ್ಷದವರು ಕೇಂದ್ರ ಸರ್ಕಾರಕ್ಕೆ ನೈತಿಕ ಬೆಂಬಲ ನೀಡಬೇಕೆ ವಿನಃ ಜನಸಾಮಾನ್ಯರ ನಡುವೆ ಸುಳ್ಳು ಸುದ್ದಿಗಳನ್ನು ಹರಡುತ್ತಾ, ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟಲು ಪ್ರಯತ್ನಿಸುವುದು ಸರಿಯಲ್ಲ. ಎಲ್‌ಪಿಜಿ ಅಥವಾ ಇತರೆ ಪೆಟ್ರೋಲಿಯಂ ಉತ್ಪನ್ನಗಳನ್ನು ಉತ್ಪಾದಿಸಬಲ್ಲ ಯಾವುದಾದರೂ ತಂತ್ರಜ್ಞಾನ, ಯಂತ್ರೋಪಕರಣಗಳು ವಿರೋಧ ಪಕ್ಷದ ಬತ್ತಳಿಕೆಯಲ್ಲಿದ್ದರೆ ದಯವಿಟ್ಟು ಅವುಗಳನ್ನು ಕೇಂದ್ರ ಸರ್ಕಾರಕ್ಕೆ ಹಸ್ತಾಂತರಿಸುವ ಮೂಲಕ ಈ ಸಮಸ್ಯೆಗೆ ಪರಿಹಾರವನ್ನು ನೀಡಿ ದೇಶವಾಸಿಗಳಿಗೆ ನೆರವಾಗಬೇಕು.

ಇಂದಿನ ತೈಲೋತ್ಪನ್ನಗಳ ಅಭಾವದ ಎಲ್ಲಾ ಸಮಸ್ಯೆಗಳಿಗೆ ಪ್ರಮುಖ ಕಾರಣ ಇರಾನ್ ಸಮುದ್ರ ಮಾರ್ಗದ ಮೂಲಕ ತೈಲ ಸಾಗಾಟಕ್ಕೆ ಅಡಚಣೆಯನ್ನು ಉಂಟು ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಚಾರ. ತೈಲೋತ್ಪನ್ನಗಳನ್ನು ಹೊತ್ತು ಸಾಗುವ ಹೊರ್ಮುಜ್ ಜಲಸಂಧಿ ಬಂದ್ ಆಗಿದೆ. ಇರಾನ್‌ನ ಈ ಧೋರಣೆಯಿಂದ ಹಲವು ದೇಶಗಳ ಆರ್ಥಿಕ ಸ್ಥಿತಿ ಪಾತಾಳ ಮುಟ್ಟಿದೆ. ಭಾರತವೂ ಸೇರಿದಂತೆ ವಿಶ್ವದೆಲ್ಲೆಡೆ ಗ್ಯಾಸ್, ಪೆಟ್ರೋಲ್, ಡೀಸೆಲ್ ಮತ್ತು ಎಲ್ಲಾ ಪೆಟ್ರೋಲಿಯಂ ಉತ್ಪನ್ನಗಳಿಗೆ ಹಾಹಾಕಾರ ಉಂಟಾಗಿದೆ. ಭಾರತದ ಇಂಧನ ಭವಿಷ್ಯದ ಬಗ್ಗೆ ಚರ್ಚೆ ನಡೆಯುವಾಗ ಬಹುಶಃ ನಮ್ಮ ದೃಷ್ಟಿ ಎಲ್‌ಪಿಜಿ, ನೈಸರ್ಗಿಕ ಅನಿಲ ಅಥವಾ ಜಾಗತಿಕ ಇಂಧನ ಮಾರುಕಟ್ಟೆಯತ್ತ ಹೋಗುತ್ತದೆ. ಇದರ ಬದಲಿಗೆ ಸ್ವದೇಶಿ ಚಳುವಳಿಯ ಹರಿಕಾರರಾದ ರಾಜೀವ್ ದೀಕ್ಷಿತ್ ಹೇಳಿದ ಸ್ವಾವಲಂಬಿ ಗ್ರಾಮೀಣ ವ್ಯವಸ್ಥೆಯತ್ತ ಯಾರ ಕಣ್ಣು ಹೊರಳುವುದೇ ಇಲ್ಲ. ಗ್ರಾಮಗಳು ತಮ್ಮ ಅಗತ್ಯಗಳನ್ನು ತಮ್ಮಲ್ಲೇ ದೊರೆಯುವ ಸಂಪನ್ಮೂಲಗಳಿಂದ ಪೂರೈಸಿಕೊಳ್ಳುವ ಮೂಲಕ ತಮ್ಮ ಗ್ರಾಮಗಳನ್ನಷ್ಟೇ ಅಲ್ಲದೆ ದೇಶವನ್ನು ಸ್ವಾವಲಂಬಿಯನ್ನಾಗಿಸುವ ನಿಟ್ಟಿನಲ್ಲಿ ಯಾರೂ ಯೋಚಿಸುವುದೇ ಇಲ್ಲ. ಇಂಧನ ಕ್ಷೇತ್ರದಲ್ಲಿಯೂ ಇದೇ ತತ್ವ ಅನ್ವಯಿಸುತ್ತದೆ. ತೀರ ಇತ್ತೀಚಿನವರೆಗೂ ಭಾರತದ ಗ್ರಾಮೀಣ ಜೀವನದಲ್ಲಿ ಬೆರಣಿ, ಮರದ ಇಂಧನ, ಕೃಷಿ ಅವಶೇಷಗಳು, ತೆಂಗಿನ ಚಿಪ್ಪುಗಳು ಮತ್ತು ಬಯೋಗ್ಯಾಸ್ ಘಟಕಗಳು ಸಾಮಾನ್ಯವಾಗಿದ್ದವು. ಇದು ಕೇವಲ ಅಡುಗೆಗಾಗಿ ಬಳಸುವಂತಹ ಇಂಧನವಾಗಿರಲಿಲ್ಲ. ಅದೊಂದು ಸಂಪೂರ್ಣ ಶೂನ್ಯ ಖರ್ಚಿನ ಮತ್ತು ತ್ಯಾಜ್ಯ ನಿರ್ವಹಣೆಯ ಒಂದು ಜೀವನ ಪದ್ಧತಿಯ ಭಾಗವಾಗಿತ್ತು. ಗೋಮಯ ಅಥವಾ ಆಹಾರ ತ್ಯಾಜ್ಯವನ್ನು ಬಯೋಗ್ಯಾಸ್ ಘಟಕದಲ್ಲಿ ಹಾಕಿದರೆ ಮಿಥೇನ್ ಅನಿಲ ದೊರೆಯುತ್ತಿತ್ತು. ಈ ಅನಿಲ ಅಡುಗೆಯ ಉರುವಲಾಗಿ ಬಳಕೆಯಾಗುತ್ತಿತ್ತು. ಉಳಿದ ಸ್ಲರಿ ಅಥವಾ ತ್ಯಾಜ್ಯ ಉತ್ತಮ ಸಾವಯವ ಗೊಬ್ಬರವಾಗಿ ಕೃಷಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿತ್ತು.

ವಿಜ್ಞಾನಿಗಳು ಹೇಳುವ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಸುಮಾರು 450 ರಿಂದ 500 ಮಿಲಿಯನ್ ಟನ್ ಬಯೋಮಾಸ್ ಸಂಪನ್ಮೂಲಗಳು ಲಭ್ಯವಿದೆ. ಕೃಷಿ ಅವಶೇಷಗಳು, ಕಬ್ಬಿನ ಗ್ಯಾಸ್, ಅಕ್ಕಿ ಹುಲ್ಲು, ತೆಂಗಿನ ಚಿಪ್ಪು, ಪಶು ಮಲ ಮೂತ್ರ ಸೇರಿದಂತೆ ದೊರೆಯುವ ಎಲ್ಲಾ ರೀತಿಯ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಂಡಿದ್ದೇ ಆದಲ್ಲಿ ಗ್ರಾಮೀಣ ಭಾರತದಲ್ಲಿ ದೊಡ್ಡಮಟ್ಟದ ಇಂಧನ ಸ್ವಾವಲಂಬನೆ ಸಾಧ್ಯ. ನಿರಂತರ ನಡೆಯುತ್ತಿರುವ ಗೋವುಗಳ ಹತ್ಯೆಯ ನಂತರವೂ ಇವರು ಹೇಳುವಂತೆ ಸದ್ಯಕ್ಕೆ ದೇಶದಲ್ಲಿ ದೊರೆಯುವ ಗೋಸಂಪತ್ತಿನಿಂದ ಅನಿಲ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧ್ಯವಿರುವುದು ಅಂಕಿ ಅಂಶಗಳಿಂದ ದೃಢಪಡುತ್ತದೆ. ಸಗಣಿ ಗೊಬ್ಬರದಿಂದ ಉತ್ಪತ್ತಿಯಾಗುವ ಗೋಬರ್ ಗ್ಯಾಸನ್ನು ಇಂಧನ ಮತ್ತು ಬೆಳಕಿಗೆ ಪರ್ಯಾಯವಾಗಿ ಬಳಸುವುದರೊಂದಿಗೆ ಪರಿಸರವನ್ನು ಕಾಪಾಡಬಹುದಾಗಿದೆ.

ಒಂದು ಸಮೀಕ್ಷೆಯ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಗೆ ಸರಾಸರಿ 8 ಘನ ಅಡಿ ಬಯೋಗ್ಯಾಸ್ ಒಂದು ದಿನದ ಊಟ ತಯಾರಿಸಲು ಮತ್ತು 3 ರಿಂದ 4 ಘಂಟೆ ದೀಪಗಳನ್ನು ಬೆಳಗಿಸಲು ಬೇಕಾಗುತ್ತದೆ. 4 ರಿಂದ 5 ಜನರಿರುವ ಪರಿವಾರಕ್ಕೆ 35 ಘನ ಅಡಿ ಗ್ಯಾಸ್‌ನ ಅವಶ್ಯಕತೆ ಇದೆ. ಒಂದು ಹಸು 7 ರಿಂದ 8 ಕೆ.ಜಿ ಮತ್ತು ಒಂದು ಜೋಡಿ ಎತ್ತು 12 ರಿಂದ 15 ಕೆ.ಜಿ. ಗೊಬ್ಬರವನ್ನು ಪ್ರತಿದಿನ ಕೊಡುತ್ತದೆ. 35 ಘನ ಅಡಿ ಗ್ಯಾಸ್ ತಯಾರಿಕೆಗೆ 25 ಕೆ.ಜಿ.ಯಷ್ಟು ಗೊಬ್ಬರದ ಅವಶ್ಯಕತೆ ಇದೆ. ಈ ರೀತಿ 4 ರಿಂದ 5 ಜನರಿರುವ ಪರಿವಾರಕ್ಕೆ ಒಂದು ಹಸು ಅಥವಾ ಎರಡು ಎತ್ತುಗಳು ಅಡುಗೆ ಅನಿಲ ಮತ್ತು ಬೆಳಕಿನ ಅಭಾವವನ್ನು ನೀಗುತ್ತವೆ.

ತಾಜಾ ಗೋಮಯವನ್ನು ಅಡಿಗೆ ಅನಿಲ ಉತ್ಪಾದಕ ಘಟಕದಲ್ಲಿ ದ್ರಾವಣ ಮಾಡಿ ಹಾಕಿದಾಗ ಗೋಮಯದಲ್ಲಿ ಸೂಕ್ಷ್ಮ ಜೀವಾಣುಗಳು ಅನಿಲ ಉತ್ಪಾದನೆಯನ್ನು ಮಾಡುತ್ತವೆ. ಇಂತಹ ಅನಿಲದಿಂದ ಅಡುಗೆ ಮಾಡುವುದರಿಂದ ವಾತಾವರಣ ಕಲುಷಿತವಾಗುವುದನ್ನು ತಪ್ಪಿಸಬಹುದಾಗಿದೆ. ಈಗಾಗಲೇ ಹೇಳಿದಂತೆ ಈ ಅನಿಲವನ್ನು ದೀಪ ಬೆಳಗಲು, ಆಯಿಲ್ ಎಂಜಿನ್ ನಡೆಸಲು, ವಿದ್ಯುತ್ ಉತ್ಪಾದನೆಗೂ ಬಳಸಬಹುದು. ಹೇಳಬೇಕೆಂದರೆ ಸಗಣಿಯಿಂದ ಉತ್ಪತ್ತಿಯಾಗುವ ಈ ಅನಿಲದಿಂದ ಹೆಚ್ಚಿನ ಉಳಿತಾಯವಾಗುತ್ತದೆ. ವಿಪರ್ಯಾಸವೆಂದರೆ ಬಹುಭಾಗ ನಗರವಾಸಿಗಳ ಇಂಧನದ ಮತ್ತು ಅಡಿಗೆ ಅನಿಲದ ಬೇಡಿಕೆಯನ್ನು ಪೂರೈಸಲು ಅಡಿಗೆ ಅನಿಲ ಮತ್ತು ಇಂಧನವನ್ನು ವಿದೇಶಿ ವಿನಿಮಯ ನೀಡಿ ಆಮದು ಮಾಡಿಕೊಳ್ಳಲಾಗುತ್ತಿದೆ.

ನಮ್ಮಲ್ಲಿರುವ ಗೋಸಂಪತ್ತಿನಿಂದ ದೊರೆಯುವ ಸಗಣಿಯ ಕೆಲ ಭಾಗ ಪರಿಸರ ಹಾಗೂ ಇತರ ಬಳಕೆಗಳಿಗೆ, ಅಡುಗೆ ಮತ್ತು ಇಂಧನಕ್ಕೆ ಪರ್ಯಾಯವಾಗಿ ಬಳಸಿದ್ದೇ ಆದಲ್ಲಿ ದೇಶದ ಬಹುಪಾಲು ಇಂಧನ ಮತ್ತು ಅಡುಗೆ ಅನಿಲದ ಬೇಡಿಕೆಯನ್ನು ಯಾವುದೇ ವೆಚ್ಚವಿಲ್ಲದೆ ನೀಗಿಸಬಹುದು. ಇದರಿಂದ ದೇಶದಲ್ಲಿ ಅಡುಗೆ ಮತ್ತು ಇನ್ನಿತರ ಕಾರ್ಯಗಳಿಗಾಗಿ ಆಗುತ್ತಿರುವ ಬೆಲೆ ಕಟ್ಟಲಾಗದಷ್ಟು ಕಟ್ಟಿಗೆ ಮತ್ತು ಇದ್ದಿಲಿನ ಬಳಕೆ ಕಡಿಮೆಯಾಗಿ ಅರಣ್ಯ ನಾಶ ತಪ್ಪುತ್ತದೆ ಹಾಗೂ ಪರಿಸರ ಹಾಳಾಗುವುದು ನಿಲ್ಲುತ್ತದೆ. ಮುಖ್ಯವಾಗಿ ಇಂಧನ ಮತ್ತು ಅಡುಗೆ ಅನಿಲದ ಆಮದು ಕಡಿಮೆಯಾಗಿ ದೇಶದ ಹಣ ದೇಶದಲ್ಲೇ ಉಳಿಯುವುದರಿಂದ ಬೇರೆ ರಚನಾತ್ಮಕ ಕಾರ್ಯಗಳನ್ನು ನಡೆಸಲು ಸಹಾಯವಾಗುತ್ತದೆ.

ಈ ರೀತಿ ಪ್ರತಿ ಪರಿವಾರ, ಪ್ರತಿ ಹಳ್ಳಿಯೂ ಇಂಧನದಿಂದ ಸ್ವಾವಲಂಬಿಯಾದರೆ ದೇಶವೇ ತೈಲ ಕ್ಷೇತ್ರದಲ್ಲಿ ಸ್ವಾವಲಂಬಿಯಾಗುತ್ತದೆ. ಸದ್ಯ ಬಳಸುತ್ತಿರುವ ತೈಲದ ಹಣವನ್ನು ಇನ್ನಿತರ ಅಭಿವೃದ್ಧಿ ಬೆಳವಣಿಗೆಗೆ ಬಳಸಿಕೊಂಡಲ್ಲಿ ದೇಶವು ಪ್ರಗತಿ ಪಥದತ್ತ ಸಾಗಬಹುದಾಗಿದೆ. ಒಂದರ್ಥದಲ್ಲಿ ಭಾರತದ ಹೊಲ ಗದ್ದೆಗಳಲ್ಲಿ, ಪಶು ಸಂಪತ್ತಿನಲ್ಲಿ ಮತ್ತು ಕೃಷಿ ವ್ಯವಸ್ಥೆಯಲ್ಲಿ ಅಪಾರ ಪ್ರಮಾಣದ ಇಂಧನ ಸಂಪತ್ತು ಅಡಗಿದೆ. ಅದನ್ನು ಗುರುತಿಸಿ ಬಳಸುವುದು ನಮ್ಮ ಮುಂದಿನ ಹೆಜ್ಜೆಯಾಗಬೇಕು. ಸ್ವಾವಲಂಬನೆ ಎಂದರೆ ಹೊಸ ಸಂಪನ್ಮೂಲಗಳನ್ನು ಹುಡುಕುವುದು ಮಾತ್ರವಲ್ಲ, ನಮ್ಮದೇ ಭೂಮಿಯಲ್ಲಿ ಇರುವ ಸಂಪತ್ತನ್ನು ಅರಿತು ಬಳಸುವುದೇ ನಿಜವಾದ ಸ್ವಾವಲಂಬನೆ.

ಮೋದಿಯವರ ಸಮರ್ಥ 'ತೈಲ ರಾಜತಾಂತ್ರಿಕತೆ'

◆ ಅರವಿಂದ ಶೆಣೈ

ಕೊಲ್ಲಿಯಲ್ಲಿ ಸಮರ ವ್ಯಾಪಿಸಿ, ವಿಶ್ವಾದ್ಯಂತ ತೈಲ ಬಿಕ್ಕಟ್ಟು ಏರ್ಪಟ್ಟಿರುವ ಮಧ್ಯೆಯೇ ಕೆಲ ದಿನಗಳ ಹಿಂದೆ ಶಿವಾಲಿಕ್ ಮತ್ತು ನಂದಾದೇವಿ ಹೆಸರಿನ ಎರಡು ಎಲ್‌ಪಿಜಿ ಟ್ಯಾಂಕರ್‌ಗಳು ಗುಜರಾತಿಗೆ ಬಂದಿಳಿದವು. ಅವೆರಡರಲ್ಲಿದ್ದ ಒಟ್ಟು ಅಡುಗೆ ಅನಿಲ 92,712 ಮೆಟ್ರಿಕ್ ಟನ್. ಅದರ ಬೆನ್ನಿಗೇ 81000 ಮೆಟ್ರಿಕ್ ಟನ್ ಕಚ್ಚಾ ತೈಲ ಹೊತ್ತ ಮತ್ತೊಂದು ಹಡಗು ಕೂಡಾ ಭಾರತಕ್ಕೆ ಬಂದಿಳಿಯಿತು. ಪರ್ಷಿಯನ್ ಗಲ್ಫ್ ಸಾಗರದಲ್ಲಿ ಇನ್ನೂ ಕೆಲವು ಭಾರತದ ಹಡಗುಗಳು ಸ್ವದೇಶಕ್ಕೆ ಬರಲು ಸಿದ್ಧವಾಗುತ್ತಿವೆ. ಅವು 2 ಲಕ್ಷ ಮೆಟ್ರಿಕ್ ಟನ್ ಎಲ್‌ಎನ್‌ಜಿ ಮತ್ತು 16.7 ಲಕ್ಷ ಮೆಟ್ರಿಕ್ ಟನ್ ಕಚ್ಚಾ ತೈಲ ಹೊಂದಿವೆ. ಇದರ ಜತೆಗೇ ಹೊರ್ಮುಜ್ ಜಲಸಂಧಿಯನ್ನು ದಾಟಲು ಕಾದಿರುವ ಹಡಗುಗಳಲ್ಲಿ 3 ಲಕ್ಷ ಮೆಟ್ರಿಕ್ ಟನ್ ಅಡುಗೆ ಅನಿಲವಿದೆ.

ಕಳೆದ ವಾರವಷ್ಟೇ ಭಾರತವು ರಷ್ಯಾದಿಂದ 30 ಮಿಲಿಯ ಬ್ಯಾರೆಲ್ ಕಚ್ಚಾತೈಲ ಖರೀದಿಸಿದೆ. ಚೀನಾದೆಡೆಗೆ ಕಚ್ಚಾ ತೈಲ ಕೊಂಡೊಯ್ಯುತ್ತಿದ್ದ 7 ನೌಕೆಗಳನ್ನು ನಡುದಾರಿಯಲ್ಲಿ ಭಾರತದತ್ತ ತಿರುಗಿಸಲಾಯಿತು. ಪ್ರಧಾನಿ ನರೇಂದ್ರ ಮೋದಿಯವರು ದೇಶದಲ್ಲಿ ತೈಲ ಮತ್ತು ಅಡುಗೆ ಅನಿಲ ಕೊರತೆಯಾಗಬಾರದೆಂಬ ಕಾರಣಕ್ಕಾಗಿ ಕೈಗೊಂಡ ರಾಜತಾಂತ್ರಿಕ ಕ್ರಮಗಳ ಫಲವಾಗಿ ಈ ನೌಕೆಗಳು ಚೀನಾದ ದಾರಿ ಬಿಟ್ಟು ಭಾರತದತ್ತ ಪಯಣಿಸಿದವು.

ಜಗತ್ತು ಯುದ್ಧಗ್ರಸ್ತವಾದಾಗ ಉಂಟಾಗುವ ಇಂಧನ ಬಿಕ್ಕಟ್ಟು ಯಾವುದೇ ರಾಷ್ಟ್ರಕ್ಕೂ ದೊಡ್ಡ ಸವಾಲೇ ಆಗಿದೆ. ಕೊಲ್ಲಿಯಲ್ಲಿ ಈಗ ನಡೆಯುತ್ತಿರುವ ಸಮರವು ಜಗತ್ತಿನಾದ್ಯಂತ ಇಂಧನ ಮಾರುಕಟ್ಟೆಯಲ್ಲಿ ಕೋಲಾಹಲ ಎಬ್ಬಿಸಿದೆ. ಹೊರ್ಮುಜ್ ಜಲಸಂಧಿ ಬಹುತೇಕವಾಗಿ ಮುಚ್ಚಲ್ಪಟ್ಟಿರುವುದರಿಂದ ತೈಲ ಪೂರೈಕೆಗೆ ತಡೆ ಉಂಟಾಗಿ ಜಾಗತಿಕ ತೈಲ ಬೆಲೆ ಗಗನಕ್ಕೇರಿದ್ದು, ಅಡುಗೆ ಅನಿಲ ಪೂರೈಕೆ ಕುಂಠಿತಗೊಂಡಿದೆ.

ಶೇ. 85ರಷ್ಟು ಕಚ್ಚಾ ತೈಲವನ್ನು ಕೊಲ್ಲಿ ರಾಷ್ಟ್ರಗಳಿಂದಲೇ ಆಮದು ಮಾಡಿಕೊಳ್ಳುತ್ತಿರುವ ಭಾರತದ ಪಾಲಿಗೆ ಇದು ಭಾರೀ ದೊಡ್ಡ ಬಿಕ್ಕಟ್ಟೇ ಸರಿ. ಇದು ಹಣದುಬ್ಬರ, ತೈಲ ಕೊರತೆ ಹಾಗೂ ಆ ಕಾರಣವಾಗಿ ಆರ್ಥಿಕ ಹಿನ್ನಡೆಗೆ ಕಾರಣವಾಗುವಂತಹ ಪರಿಸ್ಥಿತಿ. ಆದರೆ ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ಸರಕಾರವು ಈ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ಬಹುತೇಕ ಯಶಸ್ಸು ಕಂಡಿದೆ. ಜನಕೇಂದ್ರಿತ ನೀತಿಗಳ ಮೂಲಕ ಈ ತೈಲ ಬಿಕ್ಕಟ್ಟು ಜನರ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಂಡಿದೆ. ಪ್ರಧಾನಿ ಮೋದಿಯವರ ದೂರದೃಷ್ಟಿಯ ಫಲವಾಗಿ ಭಾರತವು ಈಗ 35 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ಪೆಟ್ರೋಲಿಯಂ ಮೀಸಲು ಸಂಗ್ರಹವನ್ನು ಹೊಂದಿದೆ. ಸರಕಾರದ ಈ ನೀತಿಯ ಕಾರಣದಿಂದಾಗಿ ದೇಶದಲ್ಲಿರುವ 26000 ಎಲ್‌ಪಿಜಿ ಔಟ್‌ಲೆಟ್‌ಗಳು, 100000 ಪೆಟ್ರೋಲಿಯಂ ಬಂಕ್‌ಗಳು ಮತ್ತು 9000 ಸಿಎನ್‌ಜಿ ಸ್ಟೇಷನ್‌ಗಳು ಈಗಲೂ ಕಾರ್ಯಾಚರಿಸುವಂತಾಗಿವೆ.

ಫೆಬ್ರವರಿ ಅಂತ್ಯದಲ್ಲಿ ಪಶ್ಚಿಮ ಏಷ್ಯಾ ಸಮರ ಸ್ಫೋಟಗೊಂಡಿದ್ದು, ಕೆಲವೇ ದಿನಗಳಲ್ಲಿ ಹೊರ್ಮುಜ್ ಜಲಸಂಧಿ ಮುಚ್ಚಲ್ಪಟ್ಟಿತು. ಈ ಜಲಸಂಧಿಯ ಮೂಲಕ ಜಗತ್ತಿನ ಶೇ. 20ರಷ್ಟು ತೈಲ ಸಾಗಣೆ ನಡೆಯುತ್ತದೆ. ಭಾರತದ ಪಾಲಿನ ಎಲ್‌ಪಿಜಿ ಕೂಡಾ ಈ ದಾರಿಯ ಮುಖಾಂತರವೇ ಸಾಗಿಬರುವುದು. ಈ ದಾರಿಯಲ್ಲಿ ಭಾರತಕ್ಕೆ ದಿನಂಪ್ರತಿ 2.5 ಮಿಲಿಯ ಬ್ಯಾರೆಲ್‌ಗಳಷ್ಟು ತೈಲ ಪೂರೈಕೆಯಾಗುತ್ತಿತ್ತು. ಶೇ. 60ರಷ್ಟು ಎಲ್‌ಪಿಜಿ ಕೂಡಾ ಇಲ್ಲಿಂದಲೇ ಬರುತ್ತಿತ್ತು. ಇರಾಕ್, ಸೌದಿ ಅರೇಬಿಯಾ, ಯುಎಇ ಮತ್ತು ಕುವೈಟ್ ಭಾರತಕ್ಕೆ ತೈಲ ರಫ್ತು ಮಾಡುವ ರಾಷ್ಟ್ರಗಳು.

ಜಾಗತಿಕವಾಗಿ ತೈಲ ಬೆಲೆ ಏರಿಕೆಯಿಂದಾಗಿ ಭಾರತದ ಆಮದು ವೆಚ್ಚ ಹೆಚ್ಚುವಂತಾಗಿದೆ. ಇದು ದೇಶದ ಜಿಡಿಪಿ ಮೇಲೆ ಪ್ರತಿಕೂಲ ಪರಿಣಾಮ ಬೀರಬಲ್ಲುದು. ತೈಲದ ಮೇಲೆ ಶೇ. 10ರಷ್ಟು ಹೆಚ್ಚುವರಿ ದರ ಉಂಟಾದರೂ ಅದು ಭಾರತದ ಜಿಡಿಪಿ ಪ್ರಗತಿಯನ್ನು ಶೇ. 0.25 ದಷ್ಟು ಕುಗ್ಗಿಸುತ್ತದೆ.

2012–13ರ ಎಲ್‌ಪಿಜಿ ಸಬ್ಸಿಡಿ ಬಿಕ್ಕಟ್ಟಿನ ವೇಳೆ ಯುಪಿಎ ಸರಕಾರದಡಿಯಲ್ಲಿ ಅಡುಗೆ ಅನಿಲ ಪೂರೈಕೆಯಲ್ಲಿ ಭಾರೀ ಕೊರತೆ ಉಂಟಾಗಿತ್ತು. ಜನರಿಗೆ ಗ್ಯಾಸ್ ಸಿಲಿಂಡರ್ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಬ್ಲ್ಯಾಕ್‌ಮಾರ್ಕೆಟ್ ದಂಧೆ ಜೋರಾಗಿತ್ತು. ಸಬ್ಸಿಡಿ ಸಿಲಿಂಡರ್‌ಗಳನ್ನು ಕಮರ್ಷಿಯಲ್ ಬಳಕೆಗೆ ಸ್ಥಳಾಂತರಿಸಲಾಗಿತ್ತು.

ದೂರದೃಷ್ಟಿ ಯೋಜನೆ

ಆದರೆ ಈಗ ಹಾಗಲ್ಲ, ಸಮರ ಸ್ಫೋಟಗೊಂಡ ಕೂಡಲೇ ಮೋದಿ ಸರಕಾರದ ಸ್ಪಂದನೆಯು ಕ್ಷಿಪ್ರವಾಗಿತ್ತು. ದಿನಬಳಕೆಯ ಎಲ್‌ಪಿಜಿಗೆ ಕೊರತೆಯಾಗದಂತೆ ನೋಡಿಕೊಳ್ಳಲು ಆದ್ಯತೆ ನೀಡಲಾಯಿತು. ಇದು ದಶಕಗಳ ಕಾಲದ ಯೋಜನೆ ಮತ್ತು ಕಾರ್ಯತಂತ್ರದ ಪರಿಣಾಮ. ಜತೆಗೇ ಎಲ್ಲ ರಾಷ್ಟ್ರಗಳೊಂದಿಗೂ ಸೌಹಾರ್ದ ಸಂಬಂಧ ಕಾಯ್ದುಕೊಳ್ಳುವ ಮೋದಿ ರಾಜತಾಂತ್ರಿಕತೆಯ ಫಲ. ಮಾರ್ಚ್ ಮೊದಲ ವಾರದಲ್ಲಿ ಸ್ವತಃ ಪ್ರಧಾನಿಯವರೇ ಕೊಲ್ಲಿ ರಾಷ್ಟ್ರಗಳ ಮುಖಂಡರೊಡನೆ ಮಾತುಕತೆ ನಡೆಸಿದರು. ಸೌದಿ ದೊರೆ ಮೊಹಮ್ಮದ್ ಬಿನ್ ಸುಲ್ತಾನ್, ಯುಎಇ ಅಧ್ಯಕ್ಷ, ಬಹ್ರೇನ್ ದೊರೆ, ಜೋರ್ಡಾನ್ ದೊರೆ, ಕುವೈತ್‌ನ ಶೇಖ್, ಕತಾರಿನ ದೊರೆ ಮೊದಲಾದವರೊಡನೆ ಮಾತುಕತೆ ನಡೆಸಿದರು. ಭಾರತವು ಶಾಂತಿ ಮತ್ತು ಸ್ಥಿರತೆಯನ್ನು ಬಯಸುತ್ತದೆ ಎಂಬುದು ಇವರೊಡನೆ ಮೋದಿ ಸಾರಿದ ಸಂದೇಶ.



ಎಲ್ಲಾ ಗಲ್ಫ್ ರಾಷ್ಟ್ರಗಳೊಂದಿಗೆ ಸಂಬಂಧ ಸುಧಾರಿಸಲು ಮೋದಿ ಸರಕಾರವು ಆರಂಭದಿಂದಲೇ ಆದ್ಯತೆ ಕೊಟ್ಟಿತ್ತು. ಮೋದಿಯವರು ಕೊಲ್ಲಿ ರಾಷ್ಟ್ರಗಳಿಗೆ ಕೆಲವಾರು ಬಾರಿ ಭೇಟಿ ನೀಡಿದ್ದರು. ಕೊಲ್ಲಿ ರಾಷ್ಟ್ರಗಳ ಮುಖಂಡರಿಗೆ ಭಾರತದಲ್ಲಿ ಆತಿಥ್ಯ ನೀಡಿದ್ದರು. ಹಾಗಾಗಿಯೇ ಎಲ್ಲಾ ಕೊಲ್ಲಿ ರಾಷ್ಟ್ರಗಳೂ ಈಗ ಭಾರತವನ್ನು ಗೌರವಿಸುತ್ತವೆ.

ಕೆಲವರು ಭಾರತದ ನೀತಿಯನ್ನು ಹಳೆಯ ಅಲಿಪ್ತ ನೀತಿ ಎಂದು ಟೀಕಿಸುವುದಿದೆ. ಆದರೆ ಅವರಿಗೆ ನೂತನ ಜಗತ್ತಿನ ವಾಸ್ತವಿಕತೆಯ ಅರಿವಿಲ್ಲ ಎಂದೇ ಹೇಳಬೇಕಾಗುತ್ತದೆ. ಪ್ರಸ್ತುತ ಸನ್ನಿವೇಶದಲ್ಲಿ ದೇಶವೊಂದು ತನ್ನ ಸ್ವಹಿತಾಸಕ್ತಿ ಕಾಯ್ದುಕೊಳ್ಳಲು ಆದ್ಯತೆ ನೀಡಬೇಕಾಗುತ್ತದೆ. ಅದನ್ನು ಸಮಾಧಾನದಿಂದ ಹಾಗೂ ಲೆಕ್ಕಾಚಾರದಿಂದ ಮಾಡಬೇಕಾಗುತ್ತದೆ. ಮೋದಿಯವರು ಅದನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ.

ಕೊಲ್ಲಿ ರಾಷ್ಟ್ರಗಳೊಂದಿಗೆ ಮೋದಿ ಸರಕಾರವು ವ್ಯವಹರಿಸಿದ ರೀತಿಯು ಎಷ್ಟು ಪರಿಣಾಮಕಾರಿ ಎಂಬುದಕ್ಕೆ ಅಂಕಿಅಂಶಗಳೇ ಸಾಕ್ಷಿ. 2014ರಿಂದ ಈ ರಾಷ್ಟ್ರಗಳ ಜತೆ ದ್ವಿಪಕ್ಷೀಯ ವ್ಯವಹಾರ ದ್ವಿಗುಣಗೊಂಡಿದೆ. ಭಾರತದ ಇಂಧನ ವಲಯದಲ್ಲಿ ಯುಎಇ ಈಗ ಪ್ರಮುಖ ಹೂಡಿಕೆದಾರ.

ಅಡುಗೆ ಅನಿಲ ಬೆಲೆ ನಿಯಂತ್ರಣ

ಯುದ್ಧದಿಂದಾಗಿ ಜಾಗತಿಕವಾಗಿ ತೈಲ ಬೆಲೆ ಏರಿಕೆಯಾದಾಗಲೂ ಸರಕಾರವು ಆ ಹೊರೆಯನ್ನು ಜನರ ಮೇಲೆ ಹೇರುವ ಬದಲಾಗಿ ತೈಲ ಮಾರುಕಟ್ಟೆ ಕಂಪೆನಿಗಳಿಗೆ ತಾನೇ ಸಬ್ಸಿಡಿ ಒದಗಿಸಿತು. ಇತ್ತೀಚೆಗೆ ಅನಿವಾರ್ಯವಾಗಿ ಮನೆಬಳಕೆಯ ಸಿಲಿಂಡರಿಗೆ ರೂ. 60 ಹೆಚ್ಚಳ ಮಾಡಲಾಯಿತು. ಉಜ್ವಲ ಯೋಜನೆಯಡಿ ಈಗಲೂ ರೂ.300ಕ್ಕೆ ಸಿಲಿಂಡರ್ ಸಿಗುತ್ತಿದೆ.

ಭಾರತದ ಪೆಟ್ರೋಲಿಯಂ ಮೀಸಲು ಸಂಗ್ರಹವು ಮೋದಿ ಆಡಳಿತದಡಿಯಲ್ಲಿ 40 ದಿನಗಳ ಬೇಡಿಕೆ ಪೂರೈಸುವಷ್ಟು ಹೆಚ್ಚಿದೆ. ಹಿಂದಿನ ಕಾಂಗ್ರೆಸ್ ಆಡಳಿತದವಧಿಯಲ್ಲಿ ಇದು ಶೂನ್ಯವಾಗಿತ್ತು. ಕಾಂಗ್ರೆಸ್ ಆಳ್ವಿಕೆಯಡಿಯಲ್ಲಿ ಜಾಗತಿಕವಾಗಿ ಯಾವುದೇ ಬಿಕ್ಕಟ್ಟು ಇರದಿದ್ದರೂ 2014ರಲ್ಲಿ ಸಿಲಿಂಡರ್ ಬೆಲೆ ದಿಲ್ಲಿಯಲ್ಲಿ 1241 ರೂ., ಮುಂಬಯಿಯಲ್ಲಿ ರೂ. 1264, ಮತ್ತು ಕೊಲ್ಕತಾದಲ್ಲಿ ರೂ. 1270 ಇದ್ದಿತು.

ಕೊಲ್ಲಿ ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಮೋದಿ ಸರಕಾರವು ದೂರದೃಷ್ಟಿ ಪ್ರಯೋಗಿಸಿ, ಯಾವುದೇ ಒಂದು ರಾಷ್ಟ್ರವನ್ನಷ್ಟೇ ಅವಲಂಬಿಸದೆ, ಹಲವು ರಾಷ್ಟ್ರಗಳಿಂದ ತೈಲ ಆಮದು ಮಾಡುವ ಪ್ರಕ್ರಿಯೆಗೆ ತೊಡಗಿತು. ಯಾವುದೇ ದೇಶದಿಂದ ತೈಲ ಆಮದಿನ ಮಿತಿಯನ್ನು ಶೇ. 25ಕ್ಕೆ ಸೀಮಿತಗೊಳಿಸಿದ್ದು, ಸುಮಾರು 40 ದೇಶಗಳಿಂದ ತೈಲ ಆಮದಿಗೆ ಗಮನ ಕೊಡಲಾಗಿದೆ. ರಷ್ಯಾ, ಅಮೆರಿಕ, ಬ್ರೆಜಿಲ್, ಸೌದಿ ಅರೇಬಿಯಾ, ವೆನೆಜುವೆಲಾ ಮುಂತಾಗಿ ಅಟ್ಲಾಂಟಿಕ್ ವಲಯದಿಂದಲೂ ತೈಲ ಆಮದಿಗೆ ಚಾಲನೆ ನೀಡಲಾಗಿದೆ. 2026ರ ವೇಳೆಗೆ ಭಾರತದ ತೈಲ ಆಮದಿನ ಶೇ. 40ರಷ್ಟು ಮಾತ್ರ ಹೊರ್ಮುಜ್ ಜಲಸಂಧಿಯಿಂದಾಗಿ ಬರುತ್ತಿದೆ. ಉಳಿದ ಶೇ.60ರಷ್ಟು ತೈಲ ಬೇರೆ ದಾರಿಯಾಗಿ ಬರುತ್ತಿವೆ. ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸುತ್ತಿದ್ದು, ಇದು ಜಾಗತಿಕ ತೈಲ ಮಾರುಕಟ್ಟೆಯನ್ನು ಸಮತೋಲನದಲ್ಲಿಡಲೂ ಸಫಲವಾಗಿದೆ. ಇದೇವೇಳೆ, ಪೆಟ್ರೋಲಿಗೆ ಎಥನಾಲ್ ಬೆರೆಸುವ ಕ್ರಮಗಳ ಮೂಲಕ ದೇಶೀ ಸ್ವಾವಲಂಬನೆಯ ಉಪಕ್ರಮಕ್ಕೂ ಕೈಹಚ್ಚಲಾಗಿದೆ.

ಮೋದಿ ಸರಕಾರದ ಉಪಕ್ರಮಗಳಿಂದಾಗಿ ಹಣದುಬ್ಬರ ಸಮಸ್ಯೆಯಿಂದ ದೇಶ ಪಾರಾಗಿದೆ. ತೈಲ ಹಣದುಬ್ಬರ ಕೂಡಾ ನಿಯಂತ್ರಣದಲ್ಲೇ ಉಳಿದಿದೆ. ನೆರೆಯ ಕೆಲವು ದೇಶಗಳು ತೈಲ ಪಡಿತರ ವ್ಯವಸ್ಥೆಗೆ ಕೈಹಚ್ಚಿರಬೇಕಾದರೆ ಭಾರತವಿನ್ನೂ ಅಂತಹ ಕ್ರಮಕ್ಕೆಳಸಿಲ್ಲ. ಜಾಗತಿಕ ರೇಟಿಂಗ್ ಸಂಸ್ಥೆ ಮೂಡಿ ಕೂಡಾ ಭಾರತದ ಇಂಧನ ಭದ್ರತೆಯನ್ನು ಶ್ಲಾಘಿಸಿದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಆದ್ಯತೆಯಾಗಿಟ್ಟುಕೊಂಡು ಮೋದಿ ಸರಕಾರ ವ್ಯವಹರಿಸುತ್ತಿದ್ದ ನಾಗರಿಕ ಹಿತಾಸಕ್ತಿಗೆ ಗಮನ ಕೊಟ್ಟಿದೆ.

ತೈಲ ಬಿಕ್ಕಟ್ಟನ್ನು ಭಾರತವು ಗಂಭೀರವಾಗಿ ಎದುರಿಸದಿರಲು ಕಳೆದೊಂದು ದಶಕದಿಂದ ಸರಕಾರ ಕೈಗೊಂಡ ಇನ್ನಿತರ ಕ್ರಮಗಳೂ ಕಾರಣವಾಗಿದೆ. 9 ಲಕ್ಷಕ್ಕೂ ಅಧಿಕ ರೈತರು ಈಗ ನೀರಾವರಿಗೆ ತೈಲಾಧಾರಿತ ಪಂಪ್ ಸೆಟ್ ಬದಲಿಗೆ ಸೋಲಾರ್ ಆಧಾರಿತ ವಿದ್ಯುತ್ ಬಳಸುತ್ತಿದ್ದಾರೆ. ಸುಮಾರು ಶೇ.20ರಷ್ಟು ಪೆಟ್ರೋಲ್‌ಗೆ ಕಬ್ಬಿನಿಂದ ತೆಗೆದ ಎಥನಾಲ್ ಬೆರೆಸಲಾಗುತ್ತಿದೆ. ಯುರೋಪ್ ಕೇವಲ ರಷ್ಯಾದ ತೈಲದ ಮೇಲಷ್ಟೇ ಅವಲಂಬಿತವಾಗಿದ್ದರೆ ಭಾರತವು ಹಲವು ರಾಷ್ಟ್ರಗಳಿಂದ ತೈಲ ಆಮದು ಮಾಡಿಕೊಳ್ಳತೊಡಗಿದೆ. ಅಮೆರಿಕದ ನಿರ್ಬಂಧದ ಹೊರತಾಗಿಯೂ ಭಾರತವು ತನ್ನ ಹಿತಾಸಕ್ತಿಯ ದೆಸೆಯಿಂದ ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಲಿಲ್ಲ.

ವಿವಿಧ ರಾಷ್ಟ್ರಗಳು ಕೊಲ್ಲಿ ಯುದ್ಧದ ಕಾರಣದಿಂದ ತೈಲ ಬಿಕ್ಕಟ್ಟು ಎದುರಿಸುತ್ತಿರಬೇಕಾದರೆ, ಭಾರತವು ಈ ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸುತ್ತಿರಬೇಕಾದರೆ ಅದಕ್ಕೆ ಕಾರಣ – ಮೋದಿಯವರ ತೈಲ ರಾಜತಾಂತ್ರಿಕತೆ.

ಲಕ್ಷಾಂತರ 'ತರುಣರಿಗೆ' ಜೆಸಿಬಿ ನ್ಯಾಯ ಒದಗಿಸಿತೇ?

◆ ಪೃಥ್ವಿರಾಜ್ ಕುಲಕರ್ಣಿ



ಅಂದು ಹೋಳಿ! ಎಲ್ಲೆಲ್ಲೂ ಹಬ್ಬದ ಸಡಗರ. ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರಗಳು ನೆರವೇರುತ್ತಿದ್ದವು. ಜನರು ಬಣ್ಣದಲ್ಲಿ ಮುಳುಗೇಳುತ್ತಿದ್ದರು. ಆದರೆ ಅಲ್ಲೊಂದು ಕಡೆ ಸುಮಾರು 20–25ಜನರು ಕೈಯಲ್ಲಿ ಹಾಕಿ ಸ್ಟಿಕ್, ಮಾರಕಾಸ್ತ್ರಗಳನ್ನು ಹಿಡಿದು ಯುವಕನೊಬ್ಬನಿಗೆ ಕಾಯುತ್ತಿದ್ದರು. 2 ತಾಸಿನ ಹಿಂದೆ ದಿಲ್ಲಿಯ ಉತ್ತಮನಗರದ 12 ವರ್ಷದ ಮುಗ್ಧ ಬಾಲಕಿ ಕೈಯಲ್ಲಿ ಬಣ್ಣ ತುಂಬಿದ ಬಲೂನ್ ಹಿಡಿದು ಹೋಳಿ ಆಡುತ್ತಿದ್ದಳು. ಮನೆಯ ಅಂಗಳದಲ್ಲಿ ನಿಂತಿದ್ದ ತನ್ನ ಅಜ್ಜನತ್ತ ಬಾಲಕಿ ಅಜ್ಜನತ್ತ ಬಲೂನ್ ಬಿಟ್ಟಳು. ಅದು ಒಂದು ಜೀವವನ್ನೇ ತೆಗೆದುಕೊಳ್ಳುತ್ತದೆ ಎಂಬುದು ಅಕ್ಷರಶಃ ಅವಳಿಗೆ ಗೊತ್ತಿರಲಿಲ್ಲ.

ಅದೇ ಬೀದಿಯಲ್ಲಿ ಮುಸ್ಲಿಂ ಮಹಿಳೆಯೊಬ್ಬಳು ಹಾದು ಹೋಗುತ್ತಿದ್ದಳು. ಬಾಲಕಿ ಬಿಟ್ಟ ಬಲೂನ್ ನೆಲಕ್ಕೆ ಪುಟಿದು ಮುಸ್ಲಿಂ ಮಹಿಳೆಯ ಮೇಲೆ ಬಣ್ಣ ಹಾರಿತು. ಬಾಲಕಿಯನ್ನು ಬೈಯ್ಯತೊಡಗಿದ ಮಹಿಳೆ ಜಗಳಕ್ಕಿಳಿದಳು. ಬಿಡಿಸಲು ಬಂದವರಿಗೂ ಬೈದಳು. ಒಂದು ಪುಟ್ಟ ಜಗಳ. ಸಾಮಾನ್ಯ ಮನುಷ್ಯರಾಗಿದ್ದರೆ 'ನೋಡಿಕೊಂಡು ಆಡಮ್ಮಾ' ಅನ್ನುತ್ತಿದ್ದರು. ಆದರೆ ಅಲ್ಲಿಗೆ ನಿಲ್ಲದ ಜಗಳ ಮುಸ್ಲಿಂ ಮಹಿಳೆಯ ಮನೆಯವರನ್ನು ಕರೆತಂದಿತು. ಬಾಯಿಗೆ ಬಾಯಿ ಹತ್ತಿತು, ಕೈಕೈ ಮಿಲಾಯಿಸುವ ಹಂತಕ್ಕೂ ಹೋಯಿತು. ನೆರೆದ ಮುಸ್ಲಿಮರು ಬಾಲಕಿಯ ಮನೆಯವರನ್ನು ಥಳಿಸಿದರು. ಮನೆಯೊಳಗೆ ಕೂಡಿಸಿ ಹೊರಗಿನಿಂದ ಗೇಟುಗಳನ್ನು ಹಾಕಿದರು.

ಇತ್ತ ವಿಷಯದ ತಿಳಿಯದೇ ಅದೇ ಮನೆಯ ತರುಣ್ ಎಂಬ ಯುವಕ ಹೋಳಿ ಸಡಗರದಲ್ಲಿ ಮುಳುಗಿದ್ದ. ಮನೆಗೆ ಬರುವಷ್ಟರಲ್ಲಿ ಸುಮಾರು 15ಕ್ಕೂ ಹೆಚ್ಚು ಮುಸ್ಲಿಂ ಯುವಕರು ಗೇಟಿನ ಮುಂದೆ ಕಾಯುತ್ತ ನಿಂತಿದ್ದರು. ಬಂದ ತಕ್ಷಣಕ್ಕೆ ತರುಣನನ್ನು ಥಳಿಸಲಾರಂಭಿಸಿದರು. ರಾಡಿನಿಂದ ಬಡಿದರು. ವಿಲವಿಲ ಒದ್ದಾಡುತ್ತಿದ್ದ ಆ ತರುಣನ ಉಸಿರು ನಿಂತಿತು. ಒಂದಿಷ್ಟು ಬಣ್ಣ ಮೈಗೆ ಚೆಲ್ಲಿತು ಎಂಬ ಕಾರಣಕ್ಕೆ ಒಂದು ಜೀವವೇ ಹೋಗುತ್ತದೆಂದರೆ!? ತರುಣನ ಹತ್ಯೆಯ ಸುದ್ದಿ ಕ್ಷಣದಲ್ಲಿ ಹರಡಿತು. ಹಿಂದು ಸಂಘಟನೆಗಳು ಹೋರಾಟಕ್ಕಿಳಿದರು. ಅಲ್ಲಿಗೆ ಖ್ಯಾತ ನ್ಯಾಯವಾದಿ ಜೆ. ಸಾಯಿ ದೀಪಕ್ ಅವರ you can proudly criticize RSS and BajarangDal until the day a mob comes to your door, screaming for your head ಎಂಬ ಮಾತು ನೆನಪಿಗೆ ಬಂತು. ಜನರ ಆಕ್ರೋಶಕ್ಕೆ ಸರ್ಕಾರ ನಲುಗಿತು. ತ್ವರಿತ ಕ್ರಮ ಕೈಗೊಂಡ ಸ್ಥಳೀಯ ಆಡಳಿತ ಆರೋಪಿಗಳ ಅಕ್ರಮ ಮನೆಗಳನ್ನು ಕೆಡವಿತು. ಆದರೆ ಜೆಸಿಬಿಯಿಂದ ಸಂಪೂರ್ಣ ಶಿಕ್ಷೆ ನೀಡಿದಂತಾಯಿತೇ? ಆರೋಪಿಗಳ ಮೇಲೆ ಸೆಕ್ಷನ್ (302) ಕೊಲೆ ಆರೋಪದಡಿ ಕೇಸು ದಾಖಲಿಸಲಾಯಿತು. ಜನರ ಪ್ರತಿಭಟನೆಯ ನಂತರ sc/st prevention of atrocities act ಸೇರಿಸಲಾಯಿತು. ಇದು ಅವಶ್ಯವಾಗಿತ್ತು. ಏಕೆಂದರೆ ಅಲ್ಲಿ ನಡೆದಿದ್ದು ಜಾತಿ ಆಧಾರಿತ ಹತ್ಯೆ. ಹಾಗಾಗಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 103(02) ಅನ್ನು ಕೂಡ ಇದರಲ್ಲಿ ಸೇರಿಸಬೇಕಿತ್ತು. ಆದರೆ ಅದಾಗಲಿಲ್ಲ.

ಧರ್ಮಾಧರಿತ ಹತ್ಯೆಗಳಿಗಾಗಿಯೇ ಈ ಹೊಸ ಕಾಯ್ದೆಯನ್ನು ಜಾರಿಗೆ ತರಲಾಗಿತ್ತು. ವೈಯಕ್ತಿಕ ದ್ವೇಷದಿಂದ ಹತ್ಯೆ ಮಾಡಿದರೆ ಅದು ಕೊಲೆ. ಆ ಕೊಲೆಯಲ್ಲಿ ಇನ್ನಷ್ಟು ಜನರು ಸೇರಿಕೊಂಡರೆ ಗುಂಪು ಹತ್ಯೆ. ಆದರೆ ತರುಣನ ಕೇಸಿನಲ್ಲಿ ನಡೆದಿದ್ದು Mob lynching. ಭಾರತೀಯ ನ್ಯಾಯ ಸಂಹಿತೆಯ 103(02) ಪ್ರಕಾರ ಇದು ಅಕ್ಷರಶಃ Mob lynching. ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 103(02) ಒಂದು ಗುಂಪು (mob) ಕಾನೂನು ಕೈಗೆ ತೆಗೆದುಕೊಂಡು ಅನುಮಾನ, ಕೋಪ, ಜಾತಿ/ಧರ್ಮ ಅಥವಾ ವದಂತಿಗಳ ಆಧಾರದ ಮೇಲೆ ಕೊಲ್ಲುವುದನ್ನು ಗುಂಪುಹತ್ಯೆ ಎನ್ನುತ್ತದೆ. ಇಲ್ಲಿ ಆಗಿದ್ದು ಕೂಡ ಅದೇ. ಆದರೆ ಎಡಪಂಥೀಯ ಮಾಧ್ಯಮಗಳು ಪ್ರಕರಣದ ದಿಕ್ಕು ತಪ್ಪಿಸಲು, ತರುಣ್ ಮತ್ತು ಆರೋಪಿಗಳ ನಡುವೆ ಮೊದಲಿನಿಂದಲೂ ಜಗಳವಿತ್ತು. ಇದು ಜಾತಿ ಆಧರಿತ ಕೊಲೆ ಅಲ್ಲ ಅನ್ನುತ್ತಿದ್ದಾರೆ. ಆದರೆ ಕೊಲೆ ನಡೆದಿದ್ದು ಹೋಳಿಯ ಬಣ್ಣ ತಾಗಿದಕ್ಕೆ! ಅದು ಸಾಮಾನ್ಯ ದ್ವೇಷವೇ? ಇತರ ಅನೇಕ ಪ್ರಕರಣಗಳಲ್ಲಿ ಹಿಂದು ಹಬ್ಬಗಳಲ್ಲಿ ಅನ್ಯ ಕೋಮಿನ ಜನರು ಕಲ್ಲೆಸೆದು ನೆಮ್ಮದಿ ಹಾಳು ಮಾಡುತ್ತಲೇ ಬಂದಿದ್ದಾರಲ್ಲ? ಭಾರತದಲ್ಲಿ ಶಿವಾಜಿ ಜಯಂತಿ ಮಾಡಿದಾಗ ಕಲ್ಲೆಸೆಯಲಾಗುತ್ತದೆ, ರಾಮನವಮಿ ಮೆರವಣಿಗೆ ವೇಳೆ ದಂಗೆಗಳಾಗುತ್ತವೆ. ಹಿಂದು ಹಬ್ಬಗಳಲ್ಲಿ ದಾಂಧಲೆಗಳು ನಡೆಯುತ್ತಲೇ ಬಂದಿವೆ. ಭಾರತ ಟಿ20 ವಿಶ್ವಕಪ್ ಗೆದ್ದಾಗ ಪಟಾಕಿ ಸಿಡಿಸಿದ್ದಕ್ಕಾಗಿ ಉಜ್ಜೈನಿಯ ಮುಸ್ಲಿಂ ಗುಂಪೊಂದು ಹಿಂದುಗಳ ಮೇಲೆ ಹಲ್ಲೆ ಮಾಡಿದೆ. ಯಾವ ಪುರುಷಾರ್ಥಕ್ಕಾಗಿ ಇದೆಲ್ಲಾ ಮಾಡುತ್ತಾರೆ ಎಂಬುದು ತಿಳಿಯದ ವಿಚಾರವೇನಲ್ಲ. ಅಮೆರಿಕ, ದುಬೈ ಇತ್ಯಾದಿ ದೇಶಗಳಲ್ಲಿ ಹಿಂದುಗಳು ನೆಮ್ಮದಿಯಾಗಿ ಹಬ್ಬದ ಆಚರಣೆ ಮಾಡುತ್ತಾರೆ. ಹಲವು ದೇಶಗಳ ಸರ್ಕಾರಗಳು ಹಿಂದುಗಳ ಹಬ್ಬಕ್ಕೆ ರಜೆಯನ್ನೂ ನೀಡುತ್ತವೆ. ಆದರೆ ಭಾರತದಲ್ಲೇ ಹಿಂದುಗಳು ನೆಮ್ಮದಿಯಿಂದ ಹಬ್ಬ ಹುಣ್ಣಿಮೆಗಳನ್ನು ಆಚರಿಸುವಂತಿಲ್ಲ. ಬಾಂಗ್ಲಾದೇಶದಲ್ಲಿ ಹಿಂದುಗಳ ರಕ್ಷಣೆಗಾಗಿ ಕೈಚಾಚಬೇಕಾಗುತ್ತದೆ. ಭಾರತದಲ್ಲಿ ಹಿಂದುಗಳು ಬಹುಸಂಖ್ಯಾತರಾಗಿದ್ದರೂ ರಕ್ಷಣೆಗಾಗಿ ಕೈಚಾಚುವ ಪರಿಸ್ಥಿತಿ ಬರುತ್ತಿದೆ.

"100 ಹಿಂದು ಕುಟುಂಬಗಳಿರುವ ಸ್ಥಳದಲ್ಲಿ ಒಂದು ಮುಸ್ಲಿಂ ಕುಟುಂಬ ಆರಾಮಾಗಿರಬಹುದು. ಆದರೆ 100 ಮುಸ್ಲಿಂ ಕುಟುಂಬಗಳಿರುವಲ್ಲಿ ಒಂದು ಹಿಂದು ಕುಟುಂಬ ಸುರಕ್ಷಿತವಾಗಿರುವರೇ?" ಎಂಬ ಯೋಗಿಯವರ ಮಾತಿನಲ್ಲಿ ಎಷ್ಟೊಂದು ಸತ್ಯ ಅಡಗಿದೆ ಅನ್ನಿಸುತ್ತದೆ. ನಮ್ಮ ಕರ್ನಾಟಕದಲ್ಲೇ ಕೆಲವು ಭಾಗಗಳ ಕೆಲವು ಏರಿಯಾಗಳಲ್ಲಿ ಗಣೇಶನ ಮೆರವಣಿಗೆ ಮಾಡುವಂತಿಲ್ಲ. ಮಾಡಿದರೂ ಆಜಾನ್ ಆಗುವ ಸಮಯಕ್ಕೆ ಬಂದ್ ಮಾಡಬೇಕಾಗುತ್ತದೆ. ಸೂಕ್ಷ್ಮ ಪ್ರದೇಶದ ಪ್ರತಿಯೊಂದು ಏರಿಯಾದಲ್ಲಿ ಇಂಥವರ ಗುಂಪೊಂದು ಇರುತ್ತದೆ. ತಕ್ಷಣಕ್ಕೆ ಇಡೀ ಗುಂಪು ಸಕ್ರೀಯವಾಗುತ್ತದೆ. ಅದಕ್ಕೆ ದೆಹಲಿಯ ತರುಣ್ ಹತ್ಯೆ ಕೂಡ ಇಂಥವರಿಂದಲೇ ನಡೆದಿದೆ. ಕಠಿಣ ಕಾನೂನಿನ ಮೂಲಕ ಅದನ್ನು ನಿಗ್ರಹಿಸಬೇಕಾಗಿದೆ. ತರುಣ್ ಹತ್ಯೆಗೈದವರ ಮೇಲೆ ಎಸ್‌ಸಿ ಕಾಯ್ದೆ ಒಂದೇ ಅಲ್ಲ, Mob lynching ಕೂಡ ದಾಖಲಾಗಬೇಕು.

ಇರಾನ್‌ನಿಂದ ಹಾರ್ಮುಜ್ ಜಲಸಂಧಿ ದಾಟುವ ಹಡಗುಗಳಿಗೆ 2 ಮಿಲಿಯನ್ ಡಾಲರ್ ಸುಂಕ ವಸೂಲಿ!

ಇಂಧನ ಮಾರುಕಟ್ಟೆಯಲ್ಲಿ ತಲ್ಲಣ

ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿರುವ ಬೆನ್ನಲ್ಲೇ, ಇರಾನ್ ಸರ್ಕಾರ ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸುವ ಆಯ್ದ ಹಡಗುಗಳಿಗೆ ಪ್ರತಿ ಪ್ರಯಾಣಕ್ಕೆ 2 ಮಿಲಿಯನ್ ಡಾಲರ್ (ಅಂದಾಜು 18.8 ಕೋಟಿ.ರೂ.) ಭಾರೀ ಸುಂಕ ವಿಧಿಸಲು ನಿರ್ಧರಿಸಿದೆ. ಈ ಕ್ರಮ, ಜಾಗತಿಕ ಹಡಗು ಸಾರಿಗೆ ಮತ್ತು ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಸಿದೆ.

ಹೊಸ ಕಡಲ ನಿಯಮ, ಸಾರ್ವಭೌಮ ಆಡಳಿತ: ಇರಾನ್ ಸಂಸತ್ತಿನ ರಾಷ್ಟ್ರೀಯ ಭದ್ರತಾ ಸಮಿತಿಯ ಸದಸ್ಯರಾದ ಅಲಾದ್ದೀನ್ ಬೊರೌಜೆರ್ಡಿ, ದಶಕಗಳ ನಂತರ ಜಲಸಂಧಿಯಲ್ಲಿ ಹೊಸ 'ಸಾರ್ವಭೌಮ ಆಡಳಿತ' ಜಾರಿಗೆ ತರಲಾಗಿದೆ ಎಂದು ತಿಳಿಸಿದ್ದಾರೆ. ನಡೆಯುತ್ತಿರುವ ಯುದ್ಧದ ವೆಚ್ಚಗಳನ್ನು ಸರಿದೂಗಿಸಲು ಮತ್ತು ಜಲಸಂಧಿಯ ಮೇಲಿನ ತನ್ನ ಭೌಗೋಳಿಕ ಅಧಿಕಾರ ಪ್ರದರ್ಶಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇರಾನ್‌ನ ಶಕ್ತಿಯನ್ನು ಜಗತ್ತಿಗೆ ತೋರಿಸಲು ಇದು ಅನಿವಾರ್ಯ ಎಂದಿದ್ದಾರೆ.

ಜಲಸಂಧಿಯ ಕಾರ್ಯಾಚರಣೆ ಹೇಗಿದೆ?: ಇರಾನ್ ವಿದೇಶಾಂಗ ಸಚಿವ ಸೆಯ್ಯದ್ ಅಬ್ಬಾಸ್ ಅರಾಘ್ಚಿ, ಸಾಮಾಜಿಕ ಜಾಲತಾಣಗಳಲ್ಲಿ ಸ್ಪಷ್ಟನೆ ನೀಡಿ, ಹಾರ್ಮುಜ್ ಜಲಸಂಧಿಯನ್ನು ಅಧಿಕೃತವಾಗಿ ಮುಚ್ಚಲಾಗಿಲ್ಲ ಎಂದು ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ವಿಮಾ ಕಂಪನಿಗಳು ಯುದ್ಧದ ಭೀತಿಯಿಂದಾಗಿ ಹಡಗುಗಳಿಗೆ ವಿಮೆ ನೀಡಲು ಹಿಂದೇಟು ಹಾಕುತ್ತಿರುವುದರಿಂದ ಸಂಚಾರ ತಗ್ಗಿದೆಯೇ ಹೊರತು ಇರಾನ್‌ನಿಂದಲ್ಲ ಎಂದು ಅವರು ವಾದಿಸಿದ್ದಾರೆ. ಆದರೆ ಅಮೆರಿಕ, ಇರಾನ್‌ನ ಇಂಧನ ಅಥವಾ ಪರಮಾಣು ಮೂಲಸೌಕರ್ಯಗಳ ಮೇಲೆ ದಾಳಿ ನಡೆಸಿದರೆ ಜಲಸಂಧಿಯನ್ನು ತಕ್ಷಣವೇ ಸಂಪೂರ್ಣವಾಗಿ ಮುಚ್ಚಲಾಗುವುದು ಎಂದು ಟೆಹ್ರಾನ್ ಎಚ್ಚರಿಕೆ ನೀಡಿದೆ.

ಜಾಗತಿಕ ಇಂಧನ ಬಿಕ್ಕಟ್ಟು, ಭಾರತದ ಮೇಲಿನ ಪರಿಣಾಮ: ಹಾರ್ಮುಜ್ ಜಲಸಂಧಿ ಜಗತ್ತಿನ ಕಚ್ಚಾ ತೈಲ ಪೂರೈಕೆಯ ಶೇ.20 ರಷ್ಟು ಭಾಗವನ್ನು ನಿರ್ವಹಿಸುವ ಅತ್ಯಂತ ನಿರ್ಣಾಯಕ ಮಾರ್ಗ. ಪ್ರಸ್ತುತ ಸಂಘರ್ಷದಿಂದಾಗಿ ಜಾಗತಿಕ ತೈಲ ಬೆಲೆಗಳಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ವಿಶೇಷವಾಗಿ ಇರಾನ್‌ನ ದಾಳಿಯಿಂದಾಗಿ ಕತಾರ್‌ನ ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ರಫ್ತು ಸಾಮರ್ಥ್ಯದ ಶೇ.17 ರಷ್ಟು ಹಾನಿಯಾಗಿದೆ ಎಂದು ವರದಿಯಾಗಿದೆ.

ಕತಾರ್ ಮೇಲಿನ ಅವಲಂಬನೆ: ಭಾರತ ತನ್ನ ಅನಿಲ ಅಗತ್ಯದ ಸುಮಾರು ಶೇ.47ರಷ್ಟು ಪಾಲನ್ನು ಕತಾರ್‌ನಿಂದಲೇ ಆಮದು ಮಾಡಿಕೊಳ್ಳುತ್ತದೆ. ಈ ಮಾರ್ಗದಲ್ಲಿನ ಅಡೆತಡೆಗಳು ಭಾರತದ ರಸಗೊಬ್ಬರ ಉತ್ಪಾದನೆ ಮತ್ತು ಕೈಗಾರಿಕಾ ಇಂಧನ ಪೂರೈಕೆಯ ಮೇಲೆ ನೇರ ಪರಿಣಾಮ ಬೀರುತ್ತಿವೆ. ಈಗಾಗಲೇ ದೇಶದ ಹಲವು ಯೂರಿಯಾ ಸ್ಥಾವರಗಳು ಅನಿಲ ಕೊರತೆಯಿಂದಾಗಿ ಅರ್ಧ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇರಾನ್ ನಿಲುವೇನು?: ಫೆಬ್ರವರಿ 28 ರಂದು ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿದ ನಂತರ ಈ ಯುದ್ಧ ಆರಂಭವಾಯಿತು. ಅಂದಿನಿಂದ ಇರಾನ್ ಪ್ರತಿರೋಧ ತೋರುತ್ತಿದ್ದು, ಜಾಗತಿಕ ಪೂರೈಕೆ ಸರಪಳಿಯ ಮೇಲೆ ತನ್ನ ನಿಯಂತ್ರಣ ಸಾಧಿಸಲು ಪ್ರಯತ್ನಿಸುತ್ತಿದೆ. ಮುಕ್ತ ನೌಕಾಯಾನಕ್ಕೆ ಮುಕ್ತ ವ್ಯಾಪಾರದ ಗೌರವ ಸಿಗಬೇಕು ಎಂಬುದು ಇರಾನ್‌ನ ನಿಲುವಾಗಿದೆ.



ಮಿಲಿಟರಿ ಕಾರ್ಯಾಚರಣೆ, ಸಾವು-ನೋವು

ಹಾರ್ಮುಜ್ ಜಲಸಂಧಿಗೆ ಸಂಬಂಧಿಸಿದ ಗಡುವನ್ನು ವಿಸ್ತರಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ ನಡೆಸಲು ಉದ್ದೇಶಿಸಿದ್ದ ಮಿಲಿಟರಿ ದಾಳಿಯನ್ನು ಐದು ದಿನಗಳ ಕಾಲ ಮುಂದೂಡಿರುವುದಾಗಿ ಸೋಮವಾರ ಘೋಷಿಸಿದ್ದಾರೆ.ವಿದ್ಯುತ್ ಸ್ಥಾವರಗಳ ಮೇಲಿನ ದಾಳಿಗೆ ವಿರಾಮ ನೀಡಲಾಗಿದ್ದರೂ, ಇಸ್ರೇಲ್ ಟೆಹ್ರಾನ್‌ನ ಮೂಲಸೌಕರ್ಯ ಗುರಿಗಳ ಮೇಲೆ ವ್ಯಾಪಕ ದಾಳಿ ಮುಂದುವರಿಸಿದೆ. ಅದೇ ವೇಳೆ, ಇರಾನ್ ನಡೆಸಿದ ದಾಳಿಯನ್ನು ತಡೆಯಲು ತನ್ನ ವಾಯು ರಕ್ಷಣಾ ವ್ಯವಸ್ಥೆ ಪ್ರಯತ್ನಿಸುತ್ತಿದೆ ಎಂದು ಯುನೈಟೆಡ್ ಅರಬ್ ಎಮಿರೇಟ್ಸ್ ವರದಿ ಮಾಡಿದೆ. ಫೆಬ್ರವರಿ 28 ರಂದು ಸಂಘರ್ಷ ಆರಂಭವಾದಾಗಿನಿಂದ ಇರಾನ್‌ನಲ್ಲಿ 1,500 ಮತ್ತು ಲೆಬನಾನ್‌ನಲ್ಲಿ 1,000 ಕ್ಕೂ ಹೆಚ್ಚು ಜನರು ಸೇರಿದಂತೆ ಒಟ್ಟು 2,000 ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಕನಿಷ್ಠ 13 ಅಮೆರಿಕನ್ ಸೈನಿಕರು ಸಹ ಪ್ರಾಣ ಕಳೆದುಕೊಂಡಿದ್ದಾರೆ.

ಜಾಗತಿಕ ಆರ್ಥಿಕ ಪರಿಣಾಮ

ಜಾಗತಿಕ ತೈಲ ಸಾರಿಗೆಯ ಶೇ. 20 ರಷ್ಟು ಪಾಲನ್ನು ನಿರ್ವಹಿಸುವ ಹಾರ್ಮುಜ್ ಜಲಸಂಧಿಯ ದಿಗ್ಬಂಧನದಿಂದಾಗಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ. 55 ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ ಸುಮಾರು 113 ಡಾಲರ್ ತಲುಪಿದೆ. ಇದು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಆಹಾರ ಮತ್ತು ಇಂಧನ ಬೆಲೆಗಳ ಏರಿಕೆಗೆ ಕಾರಣವಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಪೂರೈಕೆ ಕೊರತೆಯಿಂದಾಗಿ ದಕ್ಷಿಣ ಕೊರಿಯಾದ ಎಲ್‌ಜಿ ಕೆಮ್ ನಂತಹ ಪ್ರಮುಖ ಕಂಪನಿಗಳು ಕೈಗಾರಿಕಾ ಘಟಕಗಳನ್ನು ಮುಚ್ಚಿವೆ.

ನ್ಯಾಟೋ ನಿಲುವು

ಇಂಧನ ಮಾರ್ಗಗಳನ್ನು ಸುರಕ್ಷಿತಗೊಳಿಸಲು ದಕ್ಷಿಣ ಕೊರಿಯಾ ಅಮೆರಿಕ ನೇತೃತ್ವದ ಕಡಲ ಒಕ್ಕೂಟವನ್ನು ಸೇರಿಕೊಂಡಿದೆ ಮತ್ತು ಹಾರ್ಮುಜ್ ಜಲಸಂಧಿಯ ಬಳಿ ನೌಕಾಪಡೆಗಳನ್ನು ನಿಯೋಜಿಸಿದೆ. ಇದರೊಂದಿಗೆ, ಗುಪ್ತಚರ ಮಾಹಿತಿ ಮತ್ತು ಗಸ್ತಿನಲ್ಲಿ ಅಮೆರಿಕದೊಂದಿಗೆ ಸಮನ್ವಯ ಸಾಧಿಸಲು ನ್ಯಾಟೋ ಸಮ್ಮತಿಸಿದೆ.

ಭಾರತೀಯ ಎಲ್‌ಪಿಜಿ ಟ್ಯಾಂಕರ್‌ಗಳ ಸಂಚಾರ



ಹೊಸದಿಲ್ಲಿ: ಶಿಪ್ ಟ್ರ್ಯಾಕಿಂಗ್ ದತ್ತಾಂಶಗಳ ಪ್ರಕಾರ, 'ಪೈನ್ ಗ್ಯಾಸ್' ಮತ್ತು 'ಜಗ್ ವಸಂತ್' ಎಂಬ ಎರಡು ಭಾರತೀಯ ಧ್ವಜದ ಎಲ್‌ಪಿಜಿ ಟ್ಯಾಂಕರ್‌ಗಳು ಸೋಮವಾರ ಹಾರ್ಮುಜ್ ಜಲಸಂಧಿಯ ಮೂಲಕ ತಮ್ಮ ಪ್ರಯಾಣ ಆರಂಭಿಸಿವೆ.

ಸಂಚಾರ ವಿವರ: ಇರಾನ್ ಅಧಿಕಾರಿಗಳಿಂದ ಗುರುತು ಪರಿಶೀಲನೆಯನ್ನು ಸುಗಮಗೊಳಿಸಲು ಈ ಹಡಗುಗಳು ಇರಾನ್‌ನ ಲಾರಾಕ್ ಮತ್ತು ಖೇಶ್ಮ್ ದ್ವೀಪಗಳ ಬಳಿ ಸಂಚರಿಸುತ್ತಿರುವುದು ಕಂಡುಬಂದಿದೆ. ಪ್ರಾದೇಶಿಕ ಸಂಘರ್ಷದ ಕಾರಣ ಪರ್ಷಿಯನ್ ಕೊಲ್ಲಿಯಲ್ಲಿ ಸಿಲುಕಿಕೊಂಡಿದ್ದ 22 ಭಾರತೀಯ ಧ್ವಜದ ಹಡಗುಗಳಲ್ಲಿ ಇವೂ ಸೇರಿವೆ. ಈ ಹಿಂದೆ 'ಎಂಟಿ ಶಿವಾಲಿಕ್' ಮತ್ತು 'ಎಂಟಿ ನಂದಾದೇವಿ' ಹಡಗುಗಳು ಗುಜರಾತ್ ಬಂದರುಗಳಿಗೆ ಯಶಸ್ವಿಯಾಗಿ ಆಗಮಿಸಿ ಸುಮಾರು 92,712 ಟನ್ ಇಂಧನ ತಲುಪಿಸಿದ್ದವು. ಅಲ್ಲದೆ, ಮಾರ್ಚ್ 18 ರಂದು 'ಜಗ್ ಲಾಡ್ಕಿ' ತೈಲ ಟ್ಯಾಂಕರ್ 80,886 ಟನ್ ಕಚ್ಚಾ ತೈಲದೊಂದಿಗೆ ಮುದ್ರಾ ಬಂದರು ತಲುಪಿತ್ತು.

ಉಳಿದಿರುವ ಹಡಗುಗಳು : ಪ್ರಸ್ತುತ 24 ಭಾರತೀಯ ಹಡಗುಗಳು ಯುದ್ಧ ವಲಯದಲ್ಲಿ ಉಳಿದುಕೊಂಡಿವೆ. ಇವುಗಳಲ್ಲಿ 22 ಹಡಗುಗಳು ಜಲಸಂಧಿಯ ಪಶ್ಚಿಮ ಭಾಗದಲ್ಲಿದ್ದು, 611 ನಾವಿಕರನ್ನು ಹೊಂದಿವೆ. ಉಳಿದ ಹಡಗುಗಳಲ್ಲಿ ಕಚ್ಚಾ ತೈಲ ಟ್ಯಾಂಕರ್‌ಗಳು, ಎಲ್‌ಎನ್‌ಜಿ ವಾಹಕಗಳು ಮತ್ತು ಕಂಟೇನರ್ ಹಡಗುಗಳು ಸೇರಿವೆ. ಒಟ್ಟಾರೆಯಾಗಿ ಸುಮಾರು 500 ಜಾಗತಿಕ ಟ್ಯಾಂಕರ್‌ಗಳು ಪ್ರಸ್ತುತ ಪರ್ಷಿಯನ್ ಕೊಲ್ಲಿಯೊಳಗೆ ಸಿಲುಕಿಕೊಂಡಿವೆ. ಭಾರತ ತನ್ನ ಶೇ.85–95 ರಷ್ಟು ಎಲ್‌ಪಿಜಿ ಮತ್ತು ಶೇ.30 ರಷ್ಟು ನೈಸರ್ಗಿಕ ಅನಿಲ ಆಮದಿಗಾಗಿ ಈ ಜಲಸಂಧಿಯನ್ನೇ ಅವಲಂಬಿಸಿದೆ. ಕಚ್ಚಾ ತೈಲದ ವ್ಯತ್ಯಯವನ್ನು ಇತರ ಮೂಲಗಳಿಂದ ಭಾಗಶಃ ಸರಿದೂಗಿಸಲಾಗಿದ್ದರೂ, ಕೈಗಾರಿಕಾ ಮತ್ತು ವಾಣಿಜ್ಯ ಬಳಕೆದಾರರಿಗೆ ಅನಿಲ ಪೂರೈಕೆ ಕಡಿತಗೊಂಡಿದೆ.

ಕಾಶ್ಮೀರದಿಂದ ಚಿನ್ನ, ಬೆಳ್ಳಿ ಆಭರಣ ರವಾನೆ

ಕಾಶ್ಮೀರ : ಸಮರಸಂತ್ರಸ್ತ ಇರಾನ್‌ನ ಜನರಿಗೆ ಕಾಶ್ಮೀರದಿಂದ ಹಣ ಮಾತ್ರವಲ್ಲ ಚಿನ್ನ, ಬೆಳ್ಳಿ ಆಭರಣಗಳು, ಜಾನುವಾರುಗಳು, ಸಾಂಪ್ರದಾಯಿಕ ತಾಮ್ರದ ವಸ್ತುಗಳ ಸಹಿತ ನೆರವಿನ ಮಹಾಪೂರ ಹರಿಯತೊಡಗಿದೆ. ಕಾಶ್ಮೀರದ ಬದ್ಗಾಮ್ ಹಾಗೂ ಬಾರಾಮುಲ್ಲಾ ಜಿಲ್ಲೆಗಳ ಜನರು ಪಶ್ಚಿಮ ಏಷ್ಯಾ ಸಂಘರ್ಷದಿಂದ ಸಂತ್ರಸ್ತ ಇರಾನಿಯರಿಗೆ ಈ ರೀತಿ ನೆರವಿನ ಹಸ್ತ ಚಾಚಿದ್ದಾರೆ. ಭಾರತದಕಾಶ್ಮೀರವಾಸಿಗಳ ದಯಾಳುತನವನ್ನು ನಾವು ಯಾವತ್ತೂ ಮರೆಯೆವು ಎಂದು ಟೆಹ್ರಾನ್ ಕೃತಜ್ಞತೆ ವ್ಯಕ್ತಪಡಿಸಿದೆ. ಈದುಲ್ ಫಿತರ್ ಹಬ್ಬಾಚರಣೆ ಸಂದರ್ಭ , ಶಿಯಾ ಬಾಹುಳ್ಯದ ಬದ್ಗಾಮ್, ಬಾರಾಮುಲ್ಲಾ ಜಿಲ್ಲೆಗಳ ಸ್ವಯಂಸೇವಕರ ತಂಡವೊಂದು, ಮಿಲಿಟರಿ ದಾಳಿಗಳಿಂದ ಸಂತ್ರಸ್ತ ಇರಾನ್‌ನ ಜನತೆಗೆ ನೆರವಾಗುವನ್ವಯ ಮನೆ ಮನೆ ಭೇಟಿ ನೀಡಿದೆ. ಜನರು ಕೂಡ ಹಣ ಮಾತ್ರವಲ್ಲ, ಚಿನ್ನ-ಬೆಳ್ಳಿ ಆಭರಣಗಳು, ಗೋವುಗಳು ಮತ್ತು ಸಾಂಪ್ರದಾಯಿಕ ತಾಮ್ರದ ವಸ್ತುಗಳನ್ನೂ ಸಂತ್ರಸ್ತರ ನಿಧಿಗೆ ದಾನ ಮಾಡಿದ್ದಾರೆ. ಇರಾನ್‌ನ್ನು ಮತ್ತೆ ಕಟ್ಟುವುದಕ್ಕಾಗಿ ಹಣ, ಬಂಗಾರಗಳ ಕೊಡುಗೆಯಾಗಿ ನೀಡಿರುವ ಭಾರತೀಯರ ಮಾನವೀಯತೆ, ದಯಾಪರತೆಗೆ ಭಾರತದಲ್ಲಿನ ಇರಾನ್ ರಾಯಭಾರಿ ಸಾಮಾಜಿಕ ಜಾಲತಾಣದಲ್ಲಿ ಫೋಟೋ ಸಹಿತ ಕೃತಜ್ಞತೆ ಸಲ್ಲಿಸಿದ್ದಾರೆ.



ಗಂಡನ ನೆನಪಿನ ಸ್ಮರಣಿಕೆ ದಾನ

ಪಿಟಿಐ ಮೂಲಗಳ ಪ್ರಕಾರ ಮನೆ ಮನೆ ಭೇಟಿ ಅಭಿಯಾನದಲ್ಲಿ ಉಭಯ ಜಿಲ್ಲೆಗಳ ಹೆಂಗಸರು, ಗಂಡಸರು ,ಮಕ್ಕಳು ಪಾಲ್ಗೊಂಡಿದ್ದರು. ಈ ಸಂದರ್ಭ ಹಲವು ಮಹಿಳೆಯರು ತಮ್ಮ ಬಂಗಾರದೊಡವೆಗಳನ್ನೇ ಸ್ವಯಂಸೇವಕರ ದಾನ ಸಂಗ್ರಹ ಡಬ್ಬಿಗಳಿಗೆ ಸುರಿದಿದ್ದಾರೆ. ಕಾಶ್ಮೀರಿ ವಿಧವೆಯೋರ್ವರು ತಮ್ಮ ಗತ ಪತಿಯ ನೆನಪಿಗಾಗಿ 28ವರ್ಷಗಳಿಂದ ಜೋಪಾನ ಕಾಯ್ದುಕೊಂಡು ಬಂದಿದ್ದ ಬಂಗಾರದ ಸ್ಮರಣಿಕೆಯನ್ನೂ ಸಂತ್ರಸ್ತ ಇರಾನಿಯರಿಗೆ ದಾನ ಮಾಡಿದ್ದಾರೆ. ಪ್ರತಿಯಾಗಿ, ಗೌರವಾನ್ವಿತ ಸೋದರಿಯ ಕಣ್ಣೀರು ಮತ್ತು ಪರಿಶುದ್ಧ ಭಾವನೆಗಳು ಇರಾನ್‌ನ ಜನತೆ ಪಾಲಿಗೆ ಮಹಾನ್ ನೆಮ್ಮದಿಯ ಸೆಲೆಯಾಗಲಿದೆ ಮತ್ತು ಯಾವತ್ತೂ ಅವಿಸ್ಮರಣೀಯವಾಗಿರುವುದು ಎಂದು ರಾಯಭಾರಿಯ ಪೋಸ್ಟ್‌ನಲ್ಲಿ ಬಣ್ಣಿಸಲಾಗಿದೆ. ಕೆಲವು ಜನರು ತಮ್ಮ ಜಾನುವಾರುಗಳನ್ನು ಕೊಡುಗೆಯಾಗಿ ನೀಡಿದರೆ, ಮಕ್ಕಳು ತಮ್ಮ ಉಳಿತಾಯಗಳು ಮತ್ತು ಈದ್ ಹಣವನ್ನೂ ದಾನ ಮಾಡಿದ್ದಾರೆ. ಬದ್ಗಾಮ್ ಶಾಸಕ ಮುಂತಝೀರ್ ಮೆಹ್ದಿ ತಮ್ಮ ಒಂದು ತಿಂಗಳ ವೇತನವನ್ನು ಪರಿಹಾರ ಪ್ರಯತ್ನಗಳಿಗೆ ದಾನ ನೀಡಿದ್ದಾರೆ. ಇಸ್ರೇಲ್ ಮತ್ತದರ ಬೆಂಬಲಿಗ ರಾಷ್ಟ್ರಗಳು ಇರಾನ್ ವಿರುದ್ಧ ಸಾರಿರುವ ಅಕ್ರಮ ಸಮರದಿಂದ ಅಪಾರ ಹಾನಿ ಸಂಭವಿಸಿದೆ. ಇಂತಹ ಸಂಕಷ್ಟ ಸನ್ನಿವೇಶದಲ್ಲಿ ನಾಗರಿಕ ಜಗತ್ತು ಇರಾನ್‌ನ ಸಂತ್ರಸ್ತ ಜನರಿಗೆ ನೆರವಾಗಬೇಕು, ಇದಷ್ಟೆ ಸಾಧ್ಯ ಎಂದು ಶ್ರೀನಗರದ ರೈನವಾರಿ ಪ್ರದೇಶದ ನಿವಾಸಿ ಐಜಾಝ್ ಅಹಮದ್ ಹೇಳುತ್ತಾರೆ.

ಇರಾನ್ ಮಾಧ್ಯಮಗಳಿಂದ ತೀವ್ರ ವ್ಯಂಗ್ಯ

ಟೆಹ್ರಾನ್: ಇರಾನ್‌ನ ವಿದ್ಯುತ್ ಜಾಲದ ಮೇಲೆ ದಾಳಿ ನಡೆಸುವ ನಿರ್ಧಾರವನ್ನು ಅಮಾನತುಗೊಳಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕ್ರಮವನ್ನು ಅಮೆರಿಕದ ಹಿಂಜರಿಕೆ ಎಂದು ಇರಾನ್‌ನ ಸರ್ಕಾರಿ ಮಾಧ್ಯಮಗಳು ಕರೆದು ವ್ಯಂಗವಾಡಿದೆ.

ಇದು ರಾಷ್ಟ್ರೀಯ ಪ್ರತಿರೋಧಕ್ಕೆ ಸಂದ ಜಯ ಎಂದು ವ್ಯಾಖ್ಯಾನಿಸಿವೆ.

ಮಿಲಿಟರಿ ಪ್ರತಿರೋಧದ ಪ್ರತಿಪಾದನೆ: ಇರಾನ್‌ನ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ಮಾಡುವುದನ್ನು ಐದು ದಿನಗಳ ಕಾಲ ಮುಂದೂಡುವುದಾಗಿ ಅಮೆರಿಕ ಘೋಷಿಸಿರುವುದನ್ನು ಟೆಹ್ರಾನ್‌ನ ಮಾಧ್ಯಮಗಳು ಅಪಹಾಸ್ಯ ಮಾಡಿವೆ. ಪ್ರೆಸ್ ಟಿವಿ ಮತ್ತು ಐಆರ್‌ಐಬಿ ವರದಿಗಳ ಪ್ರಕಾರ, ಈ ಮುಂದೂಡುವಿಕೆ ರಾಜತಾಂತ್ರಿಕ ಸೌಜನ್ಯದಿಂದ ಬಂದಿದ್ದಲ್ಲ, ಬದಲಿಗೆ ಇರಾನ್‌ನ ಪ್ರಬಲ ಮಿಲಿಟರಿ ಎಚ್ಚರಿಕೆಯಿಂದಾಗಿ ಅಮೆರಿಕ ಅನಿವಾರ್ಯವಾಗಿ ಈ ನಿರ್ಧಾರ ತೆಗೆದುಕೊಂಡಿದೆ.

ಮಾತುಕತೆ ನಡೆಯುತ್ತಿಲ್ಲ! : ಅಮೆರಿಕದೊಂದಿಗೆ ಯಾವುದೇ ನೇರ ಅಥವಾ ಪರೋಕ್ಷ ಮಾತುಕತೆಗಳು ನಡೆಯುತ್ತಿಲ್ಲ ಎಂದು ಹಿರಿಯ ಭದ್ರತಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಟ್ರಂಪ್ ಅವರ ಐದು ದಿನಗಳ ಗಡುವು ಕೇವಲ ದಾಳಿಯ ಮುಂದುವರಿದ ಯೋಜನೆಯ ಭಾಗವಾಗಿದ್ದು, ಇರಾನ್ ಪೂರ್ಣ ಪ್ರಮಾಣದ ರಕ್ಷಣಾತ್ಮಕ ಪ್ರತಿಕ್ರಿಯೆಗೆ ಸಿದ್ಧವಾಗಿದೆ ಎಂದು ಅವರು ಎಚ್ಚರಿಸಿದ್ದಾರೆ.

ಮಾಧ್ಯಮ- ರಾಜಕೀಯ ಪ್ರತಿಕ್ರಿಯೆಗಳು : ಮೆಹ್ರ್ ನ್ಯೂಸ್ ಮತ್ತು ಟೆಹ್ರಾನ್ ಟೈಮ್ಸ್ ಸೇರಿದಂತೆ ವಿವಿಧ ಸಂಸ್ಥೆಗಳು ಅಮೆರಿಕದ ಈ ತಂತ್ರವನ್ನು ಬೊಗಳೆ ಮತ್ತು ರಾಜತಾಂತ್ರಿಕತೆಯ ಹೆಸರಿನಲ್ಲಿ ಮಾಡುತ್ತಿರುವ ಹಿಂಜರಿಕೆ ಎಂದು ಕರೆದಿವೆ. ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿ ಸಮಿತಿಯ ವಕ್ತಾರ ಇಬ್ರಾಹಿಂ ರೆಜಾಯಿ, ಈ ವಿರಾಮವನ್ನು ಅಮೆರಿಕಕ್ಕೆ ಉಂಟಾದ ಸೋಲು ಎಂದು ಬಣ್ಣಿಸಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಬಗ್ಗೆ ಇರಾನ್ ನೀಡಿದ್ದ ಎಚ್ಚರಿಕೆ ಮತ್ತು ಪ್ರಾದೇಶಿಕ ಇಂಧನ ಮೂಲಸೌಕರ್ಯಗಳ ಮೇಲಿನ ಸಂಭಾವ್ಯ ದಾಳಿಯ ಭೀತಿಯಿಂದಾಗಿ ಟ್ರಂಪ್ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಇರಾನ್ ಮಾಧ್ಯಮಗಳು ಅಭಿಪ್ರಾಯಪಟ್ಟಿವೆ.

ಕಾರ್ಯತಂತ್ರ: ಇಂಧನ ಪೂರೈಕೆ ಜಾಲ ಇಂದಿಗೂ ಯುದ್ಧದ ಭಾಗವಾಗಿ ಉಳಿದಿದೆ ಮತ್ತು ಅಮೆರಿಕದ ಯಾವುದೇ ದಾಳಿಗೆ ತಕ್ಕ ಪ್ರತಿಕ್ರಿಯೆ ನೀಡಲಾಗುವುದು, ಎಂದು ಇರಾನ್ ಮಾಧ್ಯಮಗಳು ಹೇಳಿವೆ. ಅಮೆರಿಕ ಆಡಳಿತ ಉಲ್ಲೇಖಿಸಿದ ಯಾವುದೇ ಫಲಪ್ರದ ಸಂಭಾಷಣೆಗಳ ಬಗ್ಗೆ ಇರಾನ್ ಮೂಲಗಳು ವ್ಯಂಗ್ಯವಾಡಿವೆ.

ಕಿರುಸುದ್ದಿ

ಅಯೋಧ್ಯೆಗೆ 450 ಕೆಜಿ ಪ್ರಸಾದ ರವಾನೆ

ಹೊಸದಿಲ್ಲಿ: ಇಲ್ಲಿನ ಶ್ರೀ ಕೃಷ್ಣ ಜನ್ಮಭೂಮಿ ದೇವಾಲಯದ ಪ್ರಸಾದವನ್ನು ರಾಮನವಮಿಗಾಗಿ ಅಯೋಧ್ಯೆ ರಾಮ ಮಂದಿರಕ್ಕೆ ಕಳುಹಿಸಲಾಗಿದೆ. ಶ್ರೀ ಕೃಷ್ಣ ಜನ್ಮಭೂಮಿ ಸೇವಾ ಸಂಸ್ಥೆಯ ಕಾರ್ಯದರ್ಶಿ ಕಪಿಲ್ ಶರ್ಮಾ ಮಾತನಾಡಿ, ದೇವಾಲಯ ಸಂಕೀರ್ಣದಿಂದ 440 ಕೆಜಿ ಕೊತ್ತಂಬರಿ, 10 ಕೆಜಿ. ಲಡ್ಡು, ಬಟ್ಟೆ, ಹಣ್ಣು ಮತ್ತು ಇತರ ವಸ್ತುಗಳನ್ನು ರವಾನಿಸಲಾಗಿದೆ.

10,000 ಎಸಿ ಇ-ಬಸ್ ನಿಯೋಜನೆಗೆ ನಿರ್ಧಾರ

ಹೊಸದಿಲ್ಲಿ: ಪಿಎಂ-ಇ-ಬಸ್ ಸೇವಾ ಯೋಜನೆಯಲ್ಲಿ 2027ರ ಅಂತ್ಯದ ವೇಳೆಗೆ 26 ರಾಜ್ಯಗಳು /ಕೇಂದ್ರಾಡಳಿತ ಪ್ರದೇಶಗಳ 116 ನಗರಗಳಿಗೆ 10,000 ಹವಾನಿಯಂತ್ರಿತ ಇ-ಬಸ್‌ಗಳನ್ನು ಒದಗಿಸಲಾಗುವುದು. ಬಳಿಕ ಇನ್ನೂ 35,000 ಇ-ಬಸ್‌ಗಳನ್ನು ಒದಗಿಸಲು ಹೊಸ ಯೋಜನೆ ಪ್ರಾರಂಭಿಸಲಾಗುವುದು ಎಂದು ಸರ್ಕಾರ ಸೋಮವಾರ ರಾಜ್ಯಸಭೆಗೆ ತಿಳಿಸಿದೆ.

ಹಳದಿ ಲೋಹ, ಬೆಳ್ಳಿ ಬೆಲೆಯಲ್ಲಿ ಭಾರೀ ಕುಸಿತ

ಹೊಸದಿಲ್ಲಿ: ಚಿನ್ನ ಮತ್ತು ಬೆಳ್ಳಿ ಬೆಲೆಗಳಲ್ಲಿ ಸೋಮವಾರ ತೀವ್ರ ಕುಸಿತ ಕಂಡುಬಂದಿದ್ದು, ಜಾಗತಿಕ ಅಸ್ಥಿರತೆಯ ನಡುವೆ ಹೂಡಿಕೆದಾರರು ಲಾಭಾಂಶ ವಸೂಲಿಗೆ ಮುಂದಾದ ಕಾರಣ ಕೆಲವೇ ಗಂಟೆಗಳಲ್ಲಿ ಮಾರುಕಟ್ಟೆ ಮೌಲ್ಯದಲ್ಲಿ ಸುಮಾರು 2 ಟ್ರಿಲಿಯನ್ ಡಾಲರ್ ನಷ್ಟವಾಗಿದೆ.

ಮಾರುಕಟ್ಟೆ ಕುಸಿತದ ವಿವರ: ಎಂಸಿಎಕ್ಸ್ ಮಾರುಕಟ್ಟೆಯಲ್ಲಿ ದೇಶೀಯ ಚಿನ್ನದ ದರ ಶೇ.6.5 ರಷ್ಟು ಇಳಿಕೆಯಾಗಿ ಪ್ರತಿ 10 ಗ್ರಾಂಗೆ 1,35,100 ರೂ. ತಲುಪಿದೆ. ಇದರೊಂದಿಗೆ, ಜನವರಿ 29 ರಂದು ದಾಖಲಾಗಿದ್ದ 1.93 ಲಕ್ಷ ರೂ.ಗಳ ಗರಿಷ್ಠ ಮಟ್ಟದಿಂದ ಶೇ.30 ರಷ್ಟು ಕುಸಿತವನ್ನು ದಾಖಲಿಸಿದಂತಾಗಿದೆ. ಬೆಳ್ಳಿ ಬೆಲೆ ಶೇ. 8.97 ರಷ್ಟು ಕುಸಿದು ಪ್ರತಿ ಕೆಜಿಗೆ 2,06,441 ರೂ.ಗೆ ತಲುಪಿದ್ದು, ದಾಖಲೆಯ ಮಟ್ಟದಿಂದ ಒಟ್ಟು ಶೇ.50ಕ್ಕಿಂತ ಹೆಚ್ಚು ಕುಸಿತ ಕಂಡಿದೆ.



ಆರ್ಥಿಕ ಕಾರಣಗಳು: ಅಮೆರಿಕನ್ ಡಾಲರ್ ಬಲವರ್ಧನೆ ಮತ್ತು ಬ್ರೆಂಟ್ ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 110 ಡಾಲರ್ ದಾಟಿರುವುದು ಈ ಮಾರುಕಟ್ಟೆ ಏರಿಳಿತಕ್ಕೆ ಕಾರಣ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಸಾಮಾನ್ಯವಾಗಿ ಭೌಗೋಳಿಕ ರಾಜಕೀಯ ಬಿಕ್ಕಟ್ಟುಗಳು ಚಿನ್ನದಂತಹ ಸುರಕ್ಷಿತ ಹೂಡಿಕೆಗಳಿಗೆ ಬೆಂಬಲ ನೀಡುತ್ತವೆ, ಆದರೆ ಡಾಲರ್ ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ಬಾಂಡ್‌ಗಳಿಕೆ ಮಾರುಕಟ್ಟೆಯನ್ನು ನಿಯಂತ್ರಿಸಿವೆ. ವಿಶ್ಲೇಷಕರು ಪ್ರಸ್ತುತ ಪರಿಸ್ಥಿತಿಯನ್ನು ಕುಸಿತಕ್ಕಿಂತ ಮಾರುಕಟ್ಟೆಯ 'ತಿದ್ದುಪಡಿ ಹಂತ'ಎಂದು ಬಣ್ಣಿಸಿದ್ದಾರೆ.

ಜೆಪಿಸಿಗೆ ಕಾರ್ಪೊರೇಟ್ ಕಾನೂನು ತಿದ್ದುಪಡಿ ಬಿಲ್

ಹೊಸದಿಲ್ಲಿ: ಲೋಕಸಭೆ ಸೋಮವಾರ ಕಾರ್ಪೊರೇಟ್ ಕಾನೂನುಗಳ (ತಿದ್ದುಪಡಿ) ಮಸೂದೆ, 2026 ಅನ್ನು ವಿವರವಾದ ವಿಶ್ಲೇಷಣೆ ಮತ್ತು ಶಿಫಾರಸುಗಳಿಗಾಗಿ ಉಭಯ ಸದನಗಳ ಸದಸ್ಯರನ್ನೊಳಗೊಂಡ ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಒಪ್ಪಿಸಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಲಹೆಯ ಮೇರೆಗೆ ಸ್ಪೀಕರ್ ಓಂ ಬಿರ್ಲಾ ಈ ಪ್ರಸ್ತಾವನೆಯನ್ನು ಧ್ವನಿ ಮತಕ್ಕೆ ಹಾಕಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಯಿತು. ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಮತ್ತು ಡಿಎಂಕೆ ಪಕ್ಷಗಳ ವಿರೋಧ ಪಕ್ಷದ ಸದಸ್ಯರು ಈ ಮಸೂದೆಯನ್ನು ವಿರೋಧಿಸಿದ್ದರು. ಕಂಪನಿಗಳು ತಮ್ಮ ಲಾಭದ ಶೇ. 2ರಷ್ಟು ಹಣವನ್ನು ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಗೆ (ಸಿಎಸ್‌ಆರ್) ಪಾವತಿಸಬೇಕೆಂಬ ಕಡ್ಡಾಯ ನಿಯಮವನ್ನು ಈ ಮಸೂದೆ ಸಡಿಲಗೊಳಿಸುತ್ತದೆ ಎಂದು ಅವರು ಆರೋಪಿಸಿದ್ದರು. ಆದರೆ ಈ ಆರೋಪಗಳನ್ನು ನಿರಾಕರಿಸಿದ ಸಚಿವರು, ತಿದ್ದುಪಡಿಗಳು ಕೇವಲ ನಿವ್ವಳ ಲಾಭದ ಮಾನದಂಡಗಳಿಗೆ ಸಂಬಂಧಿಸಿವೆಯೇ ಹೊರತು ಸಂಪೂರ್ಣ ಸಿಎಸ್‌ಆರ್ ನಿಯಮಕ್ಕಲ್ಲ ಎಂದು ಸ್ಪಷ್ಟಪಡಿಸಿದರು. ಈ ಮಸೂದೆ, 'ಸೀಮಿತ ಹೊಣೆಗಾರಿಕೆ ಪಾಲುದಾರಿಕೆ (ಎಲ್‌ಎಲ್‌ಪಿ) ಕಾಯ್ದೆ, 2008' ಮತ್ತು ಕಂಪನಿ ಕಾಯ್ದೆಗೆ ತಿದ್ದುಪಡಿ ತರುವ ಉದ್ದೇಶ ಹೊಂದಿದೆ. ಸಣ್ಣ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್‌ಗಳಿಗೆ ವ್ಯವಹಾರವನ್ನು ಇನ್ನಷ್ಟು ಸುಲಭಗೊಳಿಸುವುದು ಹಾಗೂ ಸಣ್ಣಪುಟ್ಟ ಕಾರ್ಪೊರೇಟ್ ಅಪರಾಧಗಳನ್ನು ದಂಡನೆಯಿಂದ ಮುಕ್ತಗೊಳಿಸುವುದು ಇದರ ಮುಖ್ಯ ಗುರಿಯಾಗಿದೆ.

ರಷ್ಯಾ ಜತೆ ಪಾಲುದಾರಿಕೆ ಇನ್ನಷ್ಟು ದೃಢ: ಜೈಶಂಕರ್

ಹೊಸದಿಲ್ಲಿ: ರಷ್ಯಾದೊಂದಿಗಿನ ತನ್ನ ಪಾಲುದಾರಿಕೆಯನ್ನು ಗಾಢವಾಗಿಸುವ ಭಾರತದ ಬದ್ಧತೆಯನ್ನು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಸೋಮವಾರ ಪುನರುಚ್ಚರಿಸಿದರು. ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆ ನಡುವೆ ಎರಡೂ ದೇಶಗಳ ನಡುವಿನ ಸಹಕಾರವು ವಿಸ್ತರಿಸುತ್ತಿದೆ ಎಂದು ಹೇಳಿದರು. ಭಾರತ ಮತ್ತು ರಷ್ಯಾ ಹೊಸ ದ್ವೈಪಾಕ್ಷಿಕ ಕಾರ್ಯಸೂಚಿಯತ್ತ ಎಂಬ ಶೀರ್ಷಿಕೆಯ ಸಮಾವೇಶವನ್ನು ಉದ್ದೇಶಿಸಿ ವರ್ಚುವಲ್ ಭಾಷಣದಲ್ಲಿ ಮಾತನಾಡಿದ ಅವರು, ವಿದೇಶಾಂಗ ವ್ಯವಹಾರಗಳ ಸಚಿವರು ಪ್ರಮುಖ ಅಂತಾರಾಷ್ಟ್ರೀಯ ಗುಂಪುಗಳಲ್ಲಿ ಬಲವಾದ ಸಹಯೋಗದ ಮಹತ್ವವನ್ನು ಹೇಳಿದರು. ಭಾರತ ಮತ್ತು ರಷ್ಯಾ ನಿಯಮಿತವಾಗಿ ಉನ್ನತ ಮಟ್ಟದ ಸಂವಹನ ಮತ್ತು ಹಂಚಿಕೆಯ ಕಾರ್ಯತಂತ್ರದ ಹಿತಾಸಕ್ತಿಗಳ ಮೂಲಕ ನಿಕಟವಾಗಿ ತೊಡಗಿಸಿಕೊಂಡಿವೆ ಎಂದು ಹೇಳಿದರು.

ಬ್ರಿಕ್ಸ್‌ನಲ್ಲಿ ನಾಯಕತ್ವದ ಪಾತ್ರವನ್ನು ವಹಿಸುತ್ತಿರುವುದರಿಂದ ಭಾರತವು ರಷ್ಯಾದೊಂದಿಗೆ ಹೆಚ್ಚು ನಿಕಟವಾಗಿ ಕೆಲಸ ಮಾಡಲು ಉತ್ಸುಕವಾಗಿದೆ ಎಂದು ಜೈಶಂಕರ್ ಹೇಳಿದರು. ವಿಕಸನಗೊಳ್ಳುತ್ತಿರುವ ಬಹುಧ್ರುವೀಯ ವ್ಯವಸ್ಥೆಯು ಬ್ರಿಕ್ಸ್, ಎಸ್‌ಸಿಒ, ಜಿ20 ಮತ್ತು ಯುಎನ್ ಸೇರಿದಂತೆ ಹೆಚ್ಚಿನ ಸಹಕಾರದ ಅಗತ್ಯವನ್ನು ಹೊಂದಿದೆ. ಭಾರತವು ತನ್ನ ಬ್ರಿಕ್ಸ್ ಅಧ್ಯಕ್ಷತೆಯಲ್ಲಿ, ಮಾನವೀಯತೆ-ಮೊದಲ ಮತ್ತು ಜನಕೇಂದ್ರಿತ ವಿಧಾನದೊಂದಿಗೆ, ಹಂಚಿಕೆಯ ಸವಾಲುಗಳನ್ನು ಎದುರಿಸಿ ರಷ್ಯಾದೊಂದಿಗೆ ನಿಕಟವಾಗಿ ಕೆಲಸ ಮಾಡಲು ಎದುರು ನೋಡುತ್ತಿದೆ ಎಂದು ಜೈಶಂಕರ್ ಹೇಳಿದರು.

ಲ್ಯಾಂಡಿಂಗ್ ವೇಳೆ ಅಪಘಾತ: ಪೈಲಟ್, ಕೋ-ಪೈಲಟ್ ಸಾವು

ನ್ಯೂಯಾರ್ಕ್: ನ್ಯೂಯಾರ್ಕ್‌ನ ಲಾಗಾರ್ಡಿಯಾ ವಿಮಾನ ನಿಲ್ದಾಣದಲ್ಲಿ ಏರ್ ಕೆನಡಾ ಪ್ರಾದೇಶಿಕ ಜೆಟ್ ವಿಮಾನ ಲ್ಯಾಂಡಿಂಗ್ ವೇಳೆ ಅಗ್ನಿಶಾಮಕ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಪೈಲಟ್ ಮತ್ತು ಕೋ-ಪೈಲಟ್ ಮೃತಪಟ್ಟಿದ್ದಾರೆ. ಮೃತಪಟ್ಟ ಇಬ್ಬರು ಸಿಬ್ಬಂದಿ ಕೆನಡಾ ಮೂಲದವರಾಗಿದ್ದಾರೆ.

ವಿಮಾನದಲ್ಲಿದ್ದ 39 ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕೆಲವರ ಸ್ಥಿತಿ ಗಂಭೀರವಾಗಿದೆ. ಅಗ್ನಿಶಾಮಕ ವಾಹನದಲ್ಲಿದ್ದ ಇಬ್ಬರು ಪೋರ್ಟ್ ಅಥಾರಿಟಿ ಉದ್ಯೋಗಿಗಳು ಸಹ ಗಾಯಗೊಂಡಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಾಂಟ್ರಿಯಲ್‌ನಿಂದ ಆಗಮಿಸಿದ ಜ್ಯಾಜ್ ಏವಿಯೇಷನ್‌ನ ಬಾಂಬಾರ್ಡಿಯರ್ ಸಿಆರ್‌ಜೆ ವಿಮಾನ, ಯುನೈಟೆಡ್ ಏರ್‌ಲೈನ್ಸ್ ವಿಮಾನವೊಂದರ ತಾಂತ್ರಿಕ ಸಮಸ್ಯೆಗೆ ಸ್ಪಂದಿಸಲು ರನ್‌ವೇ ದಾಟುತ್ತಿದ್ದ ತುರ್ತು ವಾಹನಕ್ಕೆ ಡಿಕ್ಕಿ ಹೊಡೆದಿದೆ.

ತಮಿಳುನಾಡಿನಲ್ಲಿ ವಿಧಾನಸಭಾ ಚುನಾವಣೆಗೆ ಎನ್‌ಡಿಎ ಸ್ಥಾನ ಹಂಚಿಕೆ ಅಂತಿಮ

ಎಐಎಡಿಎಂಕೆ 178ರಲ್ಲಿ, ಬಿಜೆಪಿ 23ರಲ್ಲಿ ಸ್ಪರ್ಧೆ

ಚೆನ್ನೈ: ತಮಿಳುನಾಡಿನ ಮುಂಬರುವ ವಿಧಾನಸಭಾ ಚುನಾವಣೆಗೆ ಸೀಟು ಹಂಚಿಕೆಯನ್ನು ಎನ್‌ಡಿಎ ಅಂತಿಮಗೊಳಿಸಿದೆ. ಇದರಂತೆ ವಿಧಾನಸಭೆಯ 234 ಕ್ಷೇತ್ರಗಳ ಪೈಕಿ 178 ಸ್ಥಾನಗಳಿಗೆ ಎಡಿಎಂಕೆ ಸ್ಪರ್ಧಿಸಲಿದೆ. ಬಿಜೆಪಿ 27 ಸ್ಥಾನಗಳಲ್ಲಿ ಸ್ಪರ್ಧಾ ಕಣಕ್ಕಿಳಿಯಲಿದೆ. ಇತರ ಮಿತ್ರಪಕ್ಷಗಳಲ್ಲಿ ಪಿಎಂಕೆ 18 ಸ್ಥಾನಗಳಿಗೂ, ಎಎಂಎಂಕೆ 11 ಸ್ಥಾನಗಳಿಗೂ ಸ್ಪರ್ಧಿಸಲಿದೆ.

ಸೀಟು ಹಂಚಿಕೆಗೆ ಸಂಬಂಧಿಸಿ ಮಿತ್ರಕೂಟದ ಮಿತ್ರಪಕ್ಷಗಳೊಳಗೆ ಹಿತವಾದ ಮಾತುಕತೆ ನಡೆಯಿತು ಮತ್ತು ಮಿತ್ರಪಕ್ಷಗಳು ಸ್ಪರ್ಧಿಸಬೇಕಾದ ಸೀಟುಗಳ ಸಂಖ್ಯೆಯನ್ನು ಅಧಿಕೃತವಾಗಿ ಅಂತಿಮಗೊಳಿಸಲಾಯಿತು. ಇತರ ಮಿತ್ರಪಕ್ಷಗಳೊಂದಿಗೆ ಮಾತುಕತೆ ನಡೆದಿದೆ. ಅವುಗಳಿಗೆ ಹಂಚಿಕೆಯಾಗುವ ಸೀಟುಗಳ ಸಂಖ್ಯೆಯನ್ನು ಶೀಘ್ರದಲ್ಲೇ ಘೋಷಿಸಲಾಗುವುದು. ಎನ್‌ಡಿಎ ಒಂದು ವಿಜಯೀ ಮಿತ್ರಕೂಟವಾಗಿದ್ದು, ಎಲ್ಲಾ ಸೀಟುಗಳನ್ನೂ ಗೆಲ್ಲಲಿದೆ ಮತ್ತು ಎಡಿಎಂಕೆ ಸರಕಾರ ರಚಿಸಲಿದೆ ಎಂದು ಎಡಿಎಂಕೆ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ (ಇಪಿಎಸ್) ಹೇಳಿದ್ದಾರೆ.

ನಾವು ದಿಲ್ಲಿಗೆ ಹೋದರೇ ಸಿಎಂ ಸ್ಟಾಲಿನ್‌ಗ್ಯಾಕೆ ಭಯ ?: ಎಡಿಎಂಕೆಯು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದು, ಮಿತ್ರಪಕ್ಷ ನಾಯಕರನ್ನು ಕಾಣಲು ನಾವು ದಿಲ್ಲಿಗೆ ಪಯಣಿಸುವಾಗೆಲ್ಲ ಮುಖ್ಯವಾಗಿ ಸಿಎಂ ಎಂ.ಕೆ.ಸ್ಟಾಲಿನ್ ತೀರಾ ನಿಂದನಾತ್ಮಕ ಹೇಳಿಕೆಗಳನ್ನು ನೀಡುತ್ತಾರೆ. ನಾವು ದಿಲ್ಲಿಗೆ ಭೇಟಿ ಕೊಟ್ಟರೆ ಮುಖ್ಯಮಂತ್ರಿ ಸ್ಟಾಲಿನ್‌ರಿಗೆ ಯಾಕೆ ಭಯವೆಂಬುದು ಗೊತ್ತಿಲ್ಲ. ಮಿತ್ರಕೂಟದ ಪಾಲುದಾರರು ಪರಸ್ಪರ ಭೇಟಿಯಾಗುವುದು ಸಹಜ. ಹಾಗಿದ್ದರೆ ಕನಿಮೋಳಿ ರಾಹುಲ್ ಗಾಂಧಿಯನ್ನು ಭೇಟಿ ಮಾಡಲು ದಿಲ್ಲಿಗೆ ಹೋದ್ದು ಯಾಕೆ ಎಂದವರು ಸುದ್ದಿಗಾರರಿಗೆ ಮರುಪ್ರಶ್ನೆ ಹಾಕಿದರು. ಮಿತ್ರಕೂಟ ಸರಕಾರ ಸಾಧ್ಯತೆ ಕುರಿತ ಪ್ರಶ್ನೆಗೆ, ಎಡಿಎಂಕೆ ತನ್ನ ಸ್ವಂತ ಬಲದಲ್ಲೇ ಸರಕಾರ ರಚಿಸುವುದು ಶತ:ಸಿದ್ಧ ಎಂದು ಉತ್ತರಿಸಿದರು.



30 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟ

ತಮಿಳುಗಾ ವೆಟ್ಟ್ರಿ ಕಳಗಂ (ಟಿವಿಕೆ) ಮುಂಬರುವ 2026ರ ಪುದುಚೇರಿ ವಿಧಾನಸಭಾ ಸಾರ್ವತ್ರಿಕ ಚುನಾವಣೆಗೆ 30 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆ. ತಮಿಳುಗಾ ವೆಟ್ರಿ ಕಳಗಂ ಪಕ್ಷವು ಏಪ್ರಿಲ್ 9 ರಂದು ನಿಗದಿಯಾಗಿರುವ ಪುದುಚೇರಿ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸುತ್ತಿದ್ದು, ಮೇ 4ರಂದು ಮತ ಎಣಿಕೆ ನಡೆಯಲಿದೆ.

ರಸ್ತೆ ಸ್ಥಿತಿಗತಿಗಳ ಮೇಲೆ ನಿಗಾವಹಿಸಲು ಹೊಸ ಯೋಜನೆ

ರಾಹೆಗಳಲ್ಲಿ ಎಐ ಡ್ಯಾಶ್‌ಕ್ಯಾಮ್

ಹೊಸದಿಲ್ಲಿ: ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಸುಮಾರು 40,000 ಕಿಮೀ ಉದ್ದದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅತ್ಯಾಧುನಿಕ ಕೃತಕ ಬುದ್ಧಿಮತ್ತೆ-ಚಾಲಿತ ಡ್ಯಾಶ್ ಕ್ಯಾಮ್ ಮೇಲ್ವಿಚಾರಣಾ ವ್ಯವಸ್ಥೆ ಪರಿಚಯಿಸಲು ಸಜ್ಜಾಗಿದೆ. ಇದು ಉತ್ತಮ ರಸ್ತೆ ನಿರ್ವಹಣೆಯತ್ತ ಒಂದು ಪ್ರಮುಖ ಹೆಜ್ಜೆಯಾಗಿದೆ. ತಂತ್ರಜ್ಞಾನ-ಚಾಲಿತ ಪ್ರಯತ್ನದ ಭಾಗವಾಗಿ ಘೋಷಿಸಲಾದ ಈ ಯೋಜನೆಯು ನಿರ್ವಹಣಾ ದಕ್ಷತೆಯನ್ನು ಸುಧಾರಿಸುವ, ಸುರಕ್ಷತಾ ಮಾನದಂಡಗಳನ್ನು ಹೆಚ್ಚಿಸುವ ಗುರಿ ಹೊಂದಿದೆ. ಅದೇರೀತಿ ಭಾರತದಾದ್ಯಂತ ದತ್ತಾಂಶ-ಬೆಂಬಲಿತ ಸ್ವಯಂಚಾಲಿತ ಕಣ್ಗಾವಲು ಸಾಧನಗಳನ್ನು ಬಳಸಿಕೊಂಡು ರಸ್ತೆ ಪರಿಸ್ಥಿತಿಗಳ ಟ್ರ್ಯಾಕಿಂಗ್ ಅನ್ನು ಸಕ್ರಿಯಗೊಳಿಸುವ ಗುರಿ ಹೊಂದಿದೆ.



ಎಐ ಡ್ಯಾಶ್‌ಕ್ಯಾಮ್ ಮಾನಿಟರಿಂಗ್ ಸಿಸ್ಟಮ್ ಎಂದರೇನು?: ಡ್ಯಾಶ್‌ಕ್ಯಾಮ್ ಅನಾಲಿಟಿಕ್ಸ್ ಸರ್ವೀಸಸ್ (ಡಿಎಎಸ್) ಎಂದು ಕರೆಯಲಾಗುವ ಈ ಹೊಸ ವ್ಯವಸ್ಥೆಯು ಕೃತಕ ಬುದ್ಧಿಮತ್ತೆ (ಎಐ) ಮತ್ತು ಯಂತ್ರ ಕಲಿಕೆ (ಎಂಎಲ್) ಗಳನ್ನು ಬಳಸಿಕೊಂಡು ಹೆದ್ದಾರಿ ಪರಿಸ್ಥಿತಿಗಳನ್ನು ಮೇಲ್ವಿಚಾರಣೆ ಮಾಡುತ್ತದೆ. ಈ ಯೋಜನೆ ಅನ್ವಯದಲ್ಲಿ, ಮಾರ್ಗ ಗಸ್ತು ವಾಹನಗಳಲ್ಲಿ (ಆರ್‌ಪಿವಿಗಳು) ಹೆಚ್ಚಿನ ರೆಸಲ್ಯೂಶನ್ ಡ್ಯಾಶ್‌ಬೋರ್ಡ್ ಕ್ಯಾಮೆರಾಗಳನ್ನು ಅಳವಡಿಸಲಾಗುವುದು. ಇದು ಹೆದ್ದಾರಿಯ ಉದ್ದಕ್ಕೂ ನಿಯಮಿತ ಸಮೀಕ್ಷೆಗಳನ್ನು ನಡೆಸಲಿದೆ.

ಕ್ಯಾಮೆರಾದಲ್ಲಿ ದತ್ತಾಂಶ ಸೆರೆ: ಈ ಕ್ಯಾಮೆರಾಗಳು ನಿರಂತರವಾದ ವಿಡಿಯೋ ಮತ್ತು ಚಿತ್ರ ದತ್ತಾಂಶವನ್ನು ಸೆರೆಹಿಡಿಯುತ್ತವೆ. ನಂತರ ಅದನ್ನು ಕೃತಕ ಬುದ್ಧಿಮತ್ತೆ-ಚಾಲಿತ ಮಾದರಿಗಳ ಮೂಲಕ ಅದನ್ನು ಸಂಗ್ರಹಿಸಿಕೊಳ್ಳಲಾಗುತ್ತದೆ. ಈ ವ್ಯವಸ್ಥೆಯನ್ನು 30ಕ್ಕೂ ಹೆಚ್ಚು ರೀತಿಯ ರಸ್ತೆ ದೋಷಗಳು ಮತ್ತು ವೈಪರೀತ್ಯಗಳನ್ನು ಸ್ವಯಂಚಾಲಿತವಾಗಿ ಗುರುತಿಸಲು ವಿನ್ಯಾಸಗೊಳಿಸಲಾಗಿದೆ. ಇದು ಸ್ವಯಂಚಾಲಿತ ತಪಾಸಣೆ ಮಾಡುವ ಅಗತ್ಯವನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ. ಸಮಸ್ಯೆಯನ್ನು ವೇಗವಾಗಿ ಪತ್ತೆಹಚ್ಚಲು ಅನುವು ಮಾಡಿಕೊಡುತ್ತದೆ.

ಕೃತಕ ಬುದ್ಧಿಮತ್ತೆ-ಚಾಲಿತ ವ್ಯವಸ್ಥೆಯು ಪ್ರಾಥಮಿಕವಾಗಿ ಗುಂಡಿಗಳು, ಬಿರುಕುಗಳು ಮತ್ತು ಮೇಲ್ಮೈ ಉದುರುವಿಕೆ ಸೇರಿದಂತೆ ಪಾದಚಾರಿ ಪರಿಸ್ಥಿತಿಗಳ ಮೇಲೆ ಕೇಂದ್ರೀಕರಿಸುತ್ತದೆ. ಇದಲ್ಲದೆ, ಇದು ಲೇನ್ ಗುರುತುಗಳು, ಕ್ರ್ಯಾಶ್ ಅಡೆತಡೆಗಳು, ಬೀದಿ ದೀಪಗಳು ಮತ್ತು ಸಂಕೇತಗಳಂತಹ ರಸ್ತೆ ಮೂಲಸೌಕರ್ಯಗಳನ್ನು ಮೇಲ್ವಿಚಾರಣೆ ಮಾಡುತ್ತದೆ.

ಕಿರುಸುದ್ದಿ

ಯುವಕ ಮೃತ್ಯು

ಸಿಂಧನೂರು: ರೀಲ್ಸ್ ಮಾಡುವ ಉದ್ದೇಶದಿಂದ ಸ್ನೇಹಿತರಿಗೆ ವಿಡಿಯೋ ಮಾಡಲು ಹೇಳಿ ಈಜಲು ನದಿಗೆ ಹಾರಿದ ಯುವಕನೋರ್ವನಿಗೆ ತಲೆಗೆ ತೀವ್ರ ಪೆಟ್ಟು ಬಿದ್ದು ಮೃತಪಟ್ಟ ಘಟನೆ ತಾಲೂಕಿನ ಮುಕ್ಕುಂದಾ ಗ್ರಾಮದಲ್ಲಿ ಭಾನುವಾರ ಸಂಜೆ ನಡೆದಿದೆ. ಮೃತ ಯುವಕವನ್ನು ಸಿಂಧನೂರಿನ ಗಂಗಾನಗರದ ಅಮನ್ ಖಾನ್ (22) ಎಂದು ಗುರುತಿಸಲಾಗಿದೆ.



ಭಾನುವಾರ ಅಮನ್ ಖಾನ್ ಮೂವರು ಸ್ನೇಹಿತರೊಂದಿಗೆ ಮುಕ್ಕುಂದಾ ಹತ್ತಿರದ ನದಿಗೆ ಹೋಗಿದ್ದನು ಎನ್ನಲಾಗಿದೆ. ಮಧ್ಯಾಹ್ನ ಊಟ ಮುಗಿಸಿದ ನಂತರ ಸಂಜೆ ವೇಳೆಗೆ ಸ್ನೇಹಿತರೊಂದಿಗೆ ನದಿ ತಟದಲ್ಲಿ ರೀಲ್ಸ್ ಮಾಡಲು ಮುಂದಾಗಿದ್ದಾನೆ. ತನ್ನ ಗೆಳೆಯನಿಗೆ ವಿಡಿಯೋ ಮಾಡಲು ಹೇಳಿ ನದಿಗೆ ಜಿಗಿದಿದ್ದಾನೆ. ನೀರಿನಾಳದಲ್ಲಿನ ಗುಂಡು ಕಲ್ಲಿಗೆ ತಲೆ ಬಡಿದಿದ್ದು, ತೀವ್ರವಾಗಿ ಪೆಟ್ಟಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಆತನ ಸ್ನೇಹಿತರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆಂದು ತಿಳಿದು ಬಂದಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಸಿಂಧನೂರಿನ ಸಾರ್ವಜನಿಕ ಆಸ್ಪತ್ರೆಗೆ ತರಲಾಗಿದೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ನಿ ಹತ್ಯೆಗೈದ ಪತಿ

ಬೆಳಗಾವಿ: ಪ್ರೀತಿಸಿ ಕುಟುಂಬಸ್ಥರ ವಿರೋಧದ ನಡುವೇ ಅಂತರ್ಜಾತಿ ವಿವಾಹವಾಗಿ 15 ವರ್ಷ ಪ್ರೀತಿಸಿದವಳನ್ನು ಸಣ್ಣ ಕಾರಣಕ್ಕೆ ಹೆಂಡತಿಯನ್ನೇ ಪತಿ ಕಲ್ಲಿನಿಂದ ಜಜ್ಜಿ ನಡು ರಸ್ತೆಯಲ್ಲೇ ಹತ್ಯೆಗೈದಿರುವ ಘಟನೆಯೊಂದು ಬೆಳಗಿಗೆ ಬಂದಿದೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಗೋವನಕೊಪ್ಪ ಗ್ರಾಮದ ನಿವಾಸಿ, ಶಿವಕ್ಕ ಬಸವರಾಜ್ ಜೋಡಳ್ಳಿ (33) ಕೊಲೆಯಾದ ಮಹಿಳೆ. ಬಸವರಾಜನ ಕೊಲೆ ಮಾಡಿದ ಆರೋಪಿ ಪತಿ. ಮೊದಲನೇ ಪತಿಯ ಅಕಾಲಿಕ ಮರಣದ ನಂತರ ಶಿವಕ್ಕ ಬಸವರಾಜನನ್ನು ಪ್ರೀತಿಸಿ ರಿಜಿಸ್ಟರ್ ಮದುವೆಯಾಗಿದ್ದರು. ಆದರೆ, ಕಳೆದ ಐದಾರು ವರ್ಷಗಳಿಂದ ಕುಟುಂಬದಲ್ಲಿನ ಗಲಾಟೆಗಳು ಹೆಚ್ಚಾಗಿ ಶಿವಕ್ಕ ತನ್ನಿಬ್ಬರು ಮಕ್ಕಳೊಂದಿಗೆ ನರಗುಂದದ ಮಠವೊಂದರಲ್ಲಿ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು. ಮತ್ತೊಂದೆಡೆ, ಬಸವರಾಜ ಮೊದಲ ಮಗಳನ್ನು ತನ್ನ ತಾಯಿ ಬಳಿ ಇಟ್ಟು ಡ್ರೈವರ್ ಕೆಲಸ ಮಾಡಿ ಜೀವನ ನಡೆಸುತ್ತಿದ್ದ ಎನ್ನಲಾಗಿದೆ.ಆರೋಪಿ ಬಸವರಾಜ ಅಪರೂಪಕ್ಕೆ ಗೋವನಕೊಪ್ಪ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತಿದ್ದನು. ಇತ್ತ ಶಿವಕ್ಕ ನರಗುಂದಕ್ಕೆ ಶಿಫ್ಟ್ ಆಗಿದ್ದು, ಅಲ್ಲಿಂದ ಕಳೆದ ಮೂರು ದಿನಗಳ ಹಿಂದಷ್ಟೇ ಊರಿಗೆ ಬಂದಿದ್ದಳಂತೆ. ತನ್ನ ಮೊದಲ ಹೆಣ್ಣುಮಗಳ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ನಡುವೆ ಮತ್ತೆ ಗಲಾಟೆ ನಡೆದಿದೆ. ತನ್ನ ತಂದೆಯ ಮನೆಯಲ್ಲಿ ವಾಸವಾಗಿದ್ದ ಶಿವಕ್ಕನನ್ನು ಹಾಸಿಗೆಯಲ್ಲಿಂದ ಎಳೆದುಕೊಂಡು ಬಂದು ನಡುರಸ್ತೆಯಲ್ಲೇ ಕಲ್ಲಿನಿಂದ ಜಜ್ಜಿ ಕೊಲೆ ಮಾಡಿದ್ದಾನೆ. ಪತ್ನಿಯನ್ನು ಕೊಲೆ ಮಾಡಿದ ಆರೋಪಿಯನ್ನು ಬೈಲಹೊಂಗಲ ಪೊಲೀಸರು ಬಂಧಿಸಿ ತನಿಖೆ ಮುಂದುವರಿಸಿದ್ದಾರೆ.

ಜೀವ ಬೆದರಿಕೆ

ಹುಬ್ಬಳ್ಳಿ: ವ್ಯಕ್ತಿಯೊಬ್ಬ ಯುವತಿಗೆ ಮದುವೆ ಮಾಡಿಕೊಳ್ಳುಂತ ಪಿಡಿಸಿದಲ್ಲದೇ, ಚಾಕುವಿನಿಂದ ಇರಿದು ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿದ ಘಟನೆ ಹಳೇ ಹುಬ್ಬಳ್ಳಿಯ ವೆಂಕಟೇಶ್ವರ ಕಾಲೋನಿಯಲ್ಲಿ ನಡೆದಿದೆ. ಮಹಿಳೆಗೆ ಆರೋಪಿ ಮನೋಜ ಬದ್ದಿ ಎಂಬಾತ ಜೀವ ಬೆದರಿಕೆ ಹಾಕಿದ್ದಾನೆ. ಕಳೆದ ಆರು ತಿಂಗಳಿನಿಂದ ಯುವತಿಗೆ ಆರೋಪಿ ಮದುವೆ ಮಾಡಿಕೊಳ್ಳಬೇಕು ಎಂದು ಒತ್ತಾಯ ಮಾಡಿದ್ದಾನೆ. ಇತ್ತೀಚೆಗೆ ಯುವತಿ ಕಾಲೇಜ್ ಹೋಗುವಾಗ ಹಿಂಬಾಲಿಸಿ ಚಾಕುವಿನಿಂದ ಚುಚ್ಚಿ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ. ಅಷ್ಟೇ ಅಲ್ಲದೇ ಯುವತಿ ಕೈ ಹಿಡಿದು ಎಳೆದಾಡಿ ದೌರ್ಜನ್ಯ ಮಾಡಿದ್ದಾನೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈಳಿಗೆಯಿಂದ ಮಹಿಳೆಗೆ ಹಲ್ಲೆ: ಅಕ್ಕಪಕ್ಕದ ಮನೆಯವರ ನಡುವೆ ಕ್ಷುಲ್ಲಕ ಕಾರಣಕ್ಕೆ ನಡೆದ ಗಲಾಟೆಯಲ್ಲಿ ಮಹಿಳೆಗೆ ಈಳಿಗೆಯಿಂದ ಹಲ್ಲೆ ಮಾಡಿದ ಪ್ರಕರಣ ಕುರಿತು ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಸಲ್ಮಾ ಬಿ. ಎಂಬುವರು ಗಾಯಗೊಂಡಿದ್ದಾರೆ. ಜಿಲಾನಿ ಬೇಪಾರಿ ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ. ಮಂಟೂರ ರೋಡ ಅರಳಿಕಟ್ಟಿ ಓಣಿ ನಿವಾಸಿಗಳಾಗಿದ್ದು, ಜಿಲಾನಿ ಆಗಾಗ ತಂಟೆ ತಗೆಯುತ್ತಿದ್ದು, ಬೈದಾಡುತ್ತಿದ್ದಾಗ ಪ್ರಶ್ನೆ ಮಾಡಿದ್ದಕ್ಕೆ ಮನೆಯಲ್ಲಿ ಹರಿತವಾದ ಈಳಿಗೆಯಿಂದ ಹಲ್ಲೆ ಮಾಡಿದ್ದು, ಮೂಗಿಗೆ ಗಂಭೀರವಾಗಿ ಗಾಯವಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ

ಚಾಕು ಇರಿತ: ಕ್ಷುಲ್ಲಕ ಕಾರಣಕ್ಕೆ ಮೂವರು ಸೇರಿ ಓರ್ವನಿಗೆ ಹಲ್ಲೆ ಮಾಡಿದಲ್ಲದೆ, ಚಾಕುವಿನಿಂದ ಇರಿದ ಘಟನೆ ಗೋಪನಕೊಪ್ಪದ ಗವಿಸಿದ್ದೇಶ್ವರ ಕಾಲೋನಿಯಲ್ಲಿ ನಡೆದಿದ್ದು, ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಎಜಾಜ್ ಹುಸೇನ್ ಮಾಮಜಿ(33) ಗಾಯಗೊಂಡಿದ್ದಾನೆ. ಅಮಿನ್ ಕೆ ಎಂಬಾತ ಸೇರಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ. ಪತ್ನಿ ಜೊತೆ ಸಲುಗೆಯಿಂದ ಮಾತಾಡಿದ್ದನ್ನು ತಪ್ಪಾಗಿ ತಿಳಿದುಕೊಂಡು ರವಿವಾರ ಮಧ್ಯಾಹ್ನ ಮನೆಗೆ ನುಗ್ಗಿ ಹಲ್ಲೆ ಮಾಡಿದ್ದು, ಚಾಕುವಿನಿಂದ ಇರಿದಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳ ಅಭಯ

ನದಿ ತಿರುವು ಯೋಜನೆ ವಿರುದ್ಧ ಹೋರಾಟಕ್ಕೆ ಬೆಂಬಲ

ಗೋಕರ್ಣ: ಜಿಲ್ಲೆಯ ನದಿ ತಿರುವು ಯೋಜನೆಗಳ ವಿರುದ್ಧದ ಹೋರಾಟ ಮತ್ತು ಅರಣ್ಯವಾಸಿಗಳ ಭೂಮಿ ಹಕ್ಕಿನ ಹೋರಾಟಗಾರರಿಗೆ ಶ್ರೀರಾಮಚಂದ್ರಾಪುರ ಮಠವು ಕಾನೂನಾತ್ಮಕ ಹೋರಾಟಕ್ಕೆ ಸದಾ ಬೆಂಬಲಿಸಲಿದೆ ಎಂದು ಶ್ರೀ ರಾಮಚಂದ್ರಾಪುರ ಮಠದ ಜಗದ್ಗುರು ಶ್ರೀ ರಾಘವೇಶ್ವರ ಭಾರತಿ ಮಹಾಸ್ವಾಮಿಗಳು ಅಭಯ ನೀಡಿದರು.



ಸೋಮವಾರ ಅಶೋಕೆ ಮೂಲ ಮಠದಲ್ಲಿ ನಡೆದ ಜಿಲ್ಲೆಯ ನದಿ ತಿರುವು ಯೋಜನೆಗಳ ವಿರುದ್ಧದ ಹೋರಾಟ ಮತ್ತು ಅರಣ್ಯವಾಸಿಗಳ ಭೂಮಿ ಹಕ್ಕಿನ ಕುರಿತು ಮಾರ್ಗದರ್ಶನ ವಿಶೇಷ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲಾ ನದಿಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಈಗಾಗಲೇ ನಡೆದ ಹೋರಾಟದ ಜೊತೆ ಮುಂದೆಯೂ ಯೋಜನೆಗಳು ನಿಲ್ಲುವವರೆಗೂ ನಾವು ಹಿಂದೆ ಸರಿಯಬಾರದು ಎಂದು ಹೇಳಿದರು.

ಶ್ರೀರಾಮನೇ 14 ವರ್ಷ ಅರಣ್ಯವಾಸ ಮಾಡಿದ್ದರಿಂದ ಆತನೂ ಅರಣ್ಯವಾಸಿಗಳ ಪಟ್ಟಿಗೆ ಸೇರುತ್ತಾನೆ. ಹಾಗಾಗಿ ರಾಮಚಂದ್ರಾಪುರ ಮಠವು ಸದಾ ನಿಮ್ಮ ರಕ್ಷಣೆಗೆ ಒಂದು ಹೆಜ್ಜೆ ಮುಂದಿರುತ್ತದೆ ಎಂದು ಅಭಯ ನೀಡಿದರು.

ಕಾನೂನುಗಳು ಜನರನ್ನು ಪೀಡಿಸಲು ಇರುವುದಲ್ಲ, ಬದಲಾಗಿ ಜನರ ಒಳಿತಿಗಾಗಿ ಇರಬೇಕು. ಕಾನೂನಿನ ವ್ಯಾಖ್ಯಾನ ಕೂಡ ಜನರ ಪರವಾಗಿಯೇ ಇರಬೇಕೇ ಹೊರತು ಅವರ ವಿರುದ್ಧವಾಗಿರಬಾರದು . ಇರುವ ಕಾನೂನಿನ ಅಡಿಯಲ್ಲೇ ಅರಣ್ಯವಾಸಿಗಳಿಗೆ ಅವಕಾಶಗಳಿದ್ದರೂ ಸರ್ಕಾರ ಏಕೆ ಸ್ಪಂದಿಸುತ್ತಿಲ್ಲ ಎಂಬುದು ದೊಡ್ಡ ಪ್ರಶ್ನೆಯಾಗಿದೆ ಎಂದು ಅವರು ವಿಷಾದಿಸಿದರು.

ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಮಾತನಾಡಿ, ಜಿಲ್ಲೆಯ ಅರಣ್ಯವಾಸಿಗಳು ಕೇವಲ ಬದುಕಿಗಾಗಿ ಮತ್ತು ವಾಸಕ್ಕಾಗಿ ಸರಾಸರಿ ಎರಡು ಗುಂಟೆಯಷ್ಟು ಅಲ್ಪ ಭೂಮಿಯನ್ನು ಅವಲಂಬಿಸಿದ್ದಾರೆ. ಆದರೆ, ಸರ್ಕಾರದ ಇಚ್ಛಾಶಕ್ತಿಯ ಕೊರತೆ ಮತ್ತು ಆಡಳಿತಾತ್ಮಕ ವೈಫಲ್ಯದಿಂದಾಗಿ ಸಲ್ಲಿಕೆಯಾದ 84,354 ಅರ್ಜಿಗಳಲ್ಲಿ ಕೇವಲ ಶೇ.2.9ರಷ್ಟು ಕುಟುಂಬಗಳಿಗೆ ಮಾತ್ರ ಮನ್ನಣೆ ದೊರೆತಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯ ಮೂರನೇ ಒಂದು ಭಾಗದಷ್ಟು ಇರುವ ಅರಣ್ಯವಾಸಿಗಳು ಇಂದು ಒಕ್ಕಲೆಬ್ಬಿಸುವ ಭೀತಿಯಲ್ಲಿ ಆತಂತ್ರರಾಗಿದ್ದಾರೆ. ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಹಂತ ಹಂತವಾಗಿ ಒಕ್ಕಲೆಬ್ಬಿಸುವುದಾಗಿ ಅಫಿಡವಿಟ್ ಸಲ್ಲಿಸಿರುವುದು ದಿನನಿತ್ಯದ ಆತಂಕಕ್ಕೆ ಕಾರಣವಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಅರಣ್ಯ ಹಕ್ಕು ಹೋರಾಟ ಸಮಿತಿಯ ಪ್ರಮುಖರಾದ ಮಹಾಬಲೇಶ್ವರ ನಾಯ್ಕ ಬೇಡ್ಕಣಿ, ರಾಜೇಶ್ ಮಿತ್ರ ನಾಯ್ಕ ಅಂಕೋಲ, ಅರವಿಂದ ಗೌಡ ಅಂಕೋಲ, ಸೀತಾರಾಮ ನಾಯ್ಕ ಬುಗರಿಬೈಲ್, ನಾಗರಾಜ ಮುರಾರಿ ಕೊಡಗದ್ದೆ, ಲಕ್ಷ್ಮಣ ನಾಯ್ಕ ದೊಡ್ಡಳ್ಳಿ, ದೇವರಾಜ ಕ್ಯಾದಗಿ, ನಾಗಪತಿ ಗೌಡ, ಸೀತಾರಾಮ ಗೌಡ ಹುಕ್ಕಳ್ಳಿ, ಹರಿಹರ ನಾಯ್ಕ ಓಂಕಾರ, ಮಲ್ಲೇಶಿ ಸಂತೋಳ್ಳಿ ಮುಂತಾದ ಗ್ರೀನ್ ಕಾರ್ಡ್ ಪ್ರಮುಖರ ಉಪಸ್ಥಿತರಿದ್ದರು. ಶ್ರೀಮಠದ ಪ್ರಮುಖರಾದ ಜಿಪಂ ಮಾಜಿ ಸದಸ್ಯ ಎನ್.ವಿ.ಹೆಗಡೆ ಮುತ್ತಿಗೆ ಸ್ವಾಗತಿಸಿದರು. ನಿತಿನ್ ಹೆಗಡೆ ಮುತ್ತಿಗೆ ಪ್ರಾಸ್ತಾವಿಕ ಮಾತನಾಡಿದರು.

> **ನದಿ ತಿರುವು ಪ್ರಕೃತಿ ವಿರೋಧಿ**
>
> ನದಿ ತಿರುವು ಯೋಜನೆಗಳು ಪ್ರಕೃತಿ ವಿರೋಧಿಯಾಗಿದ್ದು, ನದಿಗಳ ಹರಿವನ್ನು ಬದಲಿಸುವುದು ಜೀವಕ್ಕೆ ಕುತ್ತು ತರುವ ಕೆಲಸ. ಯಾರೋ ನೀರು ಕುಡಿಯಲಿ ಎನ್ನುವ ಕಾರಣಕ್ಕೆ ಇನ್ನೊಬ್ಬರ ಬದುಕನ್ನು ಕಿತ್ತುಕೊಳ್ಳುವುದು ಧರ್ಮವಲ್ಲ. ಯೋಜನೆಗಳ ಹೆಸರಿನಲ್ಲಿ ಸರ್ಕಾರವೇ ಲಕ್ಷಾಂತರ ಹೆಕ್ಟೇರ್ ಅರಣ್ಯ ನಾಶ ಮಾಡುತ್ತಿದೆ.ಆದರೆ ತಲೆತಲಾಂತರದಿಂದ ಅರಣ್ಯದಲ್ಲಿ ಬದುಕು ಕಟ್ಟಿಕೊಂಡಿರುವ ಬಡವರ ಹಕ್ಕಿಗೆ ಇನ್ನೂ ತಾರ್ಕಿಕ ಅಂತ್ಯ ಕಾಣದೆ ಇರುವುದು ಆಘಾತಕಾರಿಯಾಗಿದೆ ಎಂದು ರಾಘವೇಶ್ವರ ಭಾರತಿ ಮಹಾಸ್ವಾಮಿಗಳು ಹೇಳಿದರು.

ಸಂಭ್ರಮದಿಂದ ನಡೆದ ಗುರು ವಿರೂಪಾಕ್ಷೇಶ್ವರ ಮಹಾರಥೋತ್ಸವ

ಉಪ್ಪಿನಬೆಟಗೇರಿ: ಧಾರವಾಡ ತಾಲೂಕಿನ ಸುಕ್ಷೇತ್ರ ಉಪ್ಪಿನಬೆಟಗೇರಿ ಪವಾಡ ಪುರುಷ ಜಗದ್ಗುರು ಶ್ರೀ ಗುರು ವಿರೂಪಾಕ್ಷೇಶ್ವರ ಮಹಾರಥೋತ್ಸವ ಸೋಮವಾರ ಸಾಯಂಕಾಲ 5 ಗಂಟೆಗೆ ವಿಜೃಂಭಣೆಯಿಂದ ನಡೆಯಿತು.

ದೇವಸ್ಥಾನದ ಅರ್ಚಕ ಈರಯ್ಯ ಗೌರಿಮಠ ಹಾಗೂ ವೀರಯ್ಯ ಸಾಲಿಮಠ ಅವರಿಂದ ಶ್ರೀ ಗುರು ವಿರುಪಾಕ್ಷೇಶ್ವರ ಕರ್ತೃ ಗದ್ದುಗೆಗೆ ರುದ್ರಾಭೀಷಕ ಹಾಗೂ ವಿಶೇಷ ಪೂಜೆ ನೆರವೇರಿತು. ಶ್ರೀಮಠದ ಪೀಠಾಧಿಕಾರಿ ಶ್ರೀ ಕುಮಾರ ವಿರೂಪಾಕ್ಷ ಸ್ವಾಮೀಜಿಯವರ ನೇತೃತ್ವದಲ್ಲಿ ಶ್ರೀ ಗುರು ವಿರೂಪಾಕ್ಷೇಶ್ವರ ಉತ್ಸವ ಮೂರ್ತಿಗೆ ಮಮದಾಪೂರ ಮುರುಘೇಂದ್ರ ಶಿವಯೋಗಿಗಳ ವಿರಕ್ತಮಠದ ಶ್ರೀ ಅಭಿನವ ಮುರುಘೇಂದ್ರ ಪೂಜ್ಯರಿಂದ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ಜನಸ್ತೋಮ ಉತ್ಸಾಹದಿಂದ ರಥ ಎಳೆದರು. ಭಕ್ತಾದಿಗಳು ರಥಕ್ಕೆ ಲಿಂಬೆಹಣ್ಣು, ಬಾಳೆಹಣ್ಣು, ಉತ್ತತ್ತಿಗಳನ್ನು ಸಮರ್ಪಿಸಿ ಹರ ಹರ ವಿರೂಪಾಕ್ಷೇಶ್ವರ ಮಹಾರಾಜ ಕೀ ಜೈ ಎನ್ನುವ ಜಯ ಘೋಷಣೆ ಮೊಳಗಿತು. ರಥವು ಪಾದಗಟ್ಟಿವರೆಗೆ ಸಾಗಿ ಮೂಲ ಮಠಕ್ಕೆ ತಲುಪಿತು.


ಮಠದ ಪೀಠಾಧಿಕಾರಿ ಕುಮಾರ ವಿರೂಪಾಕ್ಷ ಸ್ವಾಮೀಜಿಯವರ ನೇತೃತ್ವದಲ್ಲಿ ಎಲ್ಲಾ ಕಾರ್ಯಕ್ರಮ ನಡೆದವು. ಜಾತ್ರೆಗೆ ಆಗಮಿಸಿದ ಸುತ್ತಮುತ್ತಲಿನ ಭಕ್ತರಿಗೆ ದೇವಸ್ಥಾನ ಶ್ರೀ ವಿರಕ್ತಮಠದ ಜಾತ್ರಾ ಸಮಿತಿ ಹಾಗೂ ಜನರು ದಾಸೋಹಕ್ಕೆ ನೀಡಿದ ಕಾಣಿಕೆಯಿಂದ ರೊಟ್ಟಿ, ಕಾಳಿನ ಪಲ್ಯ, ಬುಂದೆ ಹಾಗೂ ಅನ್ನ ಪ್ರಸಾದ ನಡೆಯಿತು.

ಈ ಸಂದರ್ಭದಲ್ಲಿ ಮಣಕವಾಡ ಅನ್ನದಾನೇಶ್ವರ ದೇವಮಂದಿರ ಮಹಾಮಠದ ಅಭಿನಯ ಮೃತ್ಯುಂಜಯ ಸ್ವಾಮೀಜಿ, ಮಮದಾಪುರ ಶಿವಯೋಗಿಗಳ ವಿರಕ್ತಮಠದ ಅಭಿನವ ಮುರುಘೇಂದ್ರ ಸ್ವಾಮೀಜಿ, ಅಂಕಲಗಿ ಕುಂದರಗಿ ಅಡವಿಸಿದ್ದೇಶ್ವರ ಮಠದ ಡಾ.ಅಮರಸಿದ್ದೇಶ್ವರ ಸ್ವಾಮೀಜಿ, ಶ್ರೀ ನೀಲಕಂಠೇಶ್ವರ ಸ್ವಾಮೀಜಿ ಬೈಲಹೊಂಗಲ, ಶ್ರೀ ಮಾತೋಶ್ರೀ ಲಲಿತಮ್ಮ ತಾಯಿ ಆರೋಢ ಮಠ ಕಲ್ಲೂರ ಸೇರಿದಂತೆ ಇನ್ನಿತರ ಹರಗುರು ಚರಮೂರ್ತಿಗಳ ಸಾನ್ನಿಧ್ಯದಲ್ಲಿ ನೆರವೇರಿತು. ಗರಗ ಹಾಗೂ ಧಾರವಾಡ ಪೊಲೀಸ್‌ರು ರಥೋತ್ಸವಕ್ಕೆ ಸೂಕ್ತ ಭದ್ರತೆ ನೀಡಿದ್ದರು.



ಕಿಡಿಗೇಡಿಗಳಿಂದ ಗುಡ್ಡಕ್ಕೆ ಬೆಂಕಿ: ಆತಂಕ

ಅಂಕೋಲಾ: ತಾಲೂಕಿನ ನದಿಭಾಗ ಸಮುದ್ರ ತೀರ ಸಮೀಪದ ಗುಡ್ಡಕ್ಕೆ ಬೆಂಕಿ ಹೊತ್ತಿಕೊಂಡು ಗಿಡ ಮರಗಳಿಗೆ ಬೆಂಕಿ ವ್ಯಾಪಿಸಿದ ಘಟನೆ ಸೋಮವಾರ ಸಂಜೆ ನಡೆದಿದ್ದು, ಸ್ಥಳೀಯ ಜನರು ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಿದ್ದರಿಂದ ಅಗ್ನಿಶಾಮಕ ಸಿಬ್ಬಂದಿಗಳು ಆಗಮಿಸಿ ಸ್ಥಳೀಯ ಜನರ ಸಹಕಾರದಿಂದ ಬೆಂಕಿ ನಿಯಂತ್ರಣಕ್ಕೆ ತಂದಿದ್ದಾರೆ.



ಗುಡ್ಡದ ಮೇಲೆ ಸಿಗರೇಟ್ ಸೇದಲು ಇಬ್ಬರು ಹೋಗಿದ್ದನ್ನು ಸ್ಥಳೀಯರು ನೋಡಿದ್ದು, ಅವರೇ ಬೆಂಕಿ ಹಚ್ಚಿ ಹೋಗಿರುವ ಕುರಿತಂತೆ ಆರೋಪಗಳು ಕೇಳಿ ಬರುತ್ತಿವೆ.

ಗುಡ್ಡದ ಮೇಲಿರುವ ಒಣ ಪೊದೆಗಳಿಗೆ ಬೆಂಕಿ ಹೊತ್ತಿಕೊಂಡು ಗಾಳಿಯ ವೇಗಕ್ಕೆ ಸುತ್ತ ಮುತ್ತಲಿನ ಪರಿಸರದಲ್ಲಿ ವ್ಯಾಪಿಸತೊಡಗಿದ್ದರಿಂದ ಕ್ಷಣ ಕಾಲ ಭೀತಿಯ ವಾತಾವರಣಕ್ಕೆ ಕಾರಣವಾಯಿತು.

ಅಗ್ನಿಶಾಮಕ ದಳದ ಸಿಬ್ಬಂದಿಗಳ ಜೊತೆಗೆ ಕರಾವಳಿ ಕಾವಲು ಪಡೆಯ ಸುಜನ್ ನಾಯಕ, ಕೆ.ಎನ್.ಡಿ ಸಿಬ್ಬಂದಿ ಪ್ರಶಾಂತ ಪಿರನಕರ್, ಸ್ಥಳೀಯ ವಿಘ್ನೇಶ್ವರ ನಾಯ್ಕ, ರೋಷನ ಖಾರ್ವಿ, ಪ್ರಜ್ವಲ ಖಾರ್ವಿ, ರವೀಶ ಖಾರ್ವಿ ಬೆಂಕಿ ಆರಿಸುವ ಕಾರ್ಯಾಚರಣೆ ನಡೆಸಿದರು.

ಗುಡ್ಡ ಪ್ರದೇಶಕ್ಕೆ ಅಗ್ನಿಶಾಮಕ ವಾಹನ ಸಂಚಾರ ಸಾಧ್ಯವಾಗದ ಕಾರಣ ಅಗ್ನಿ ನಿಯಂತ್ರಕ ಸಿಲಿಂಡರುಗಳನ್ನು ಬಳಸಿ ಬೆಂಕಿ ಆರಿಸಲಾಯಿತು.

ನದಿಬಾಗ ಕಡಲ ತೀರದ ಸುತ್ತ ಮುತ್ತಲಿನ ಪರಿಸರದಲ್ಲಿ ಕಿಡಿಗೇಡಿಗಳ ಹಾವಳಿ ಹೆಚ್ಚುತ್ತಿದ್ದು ಕೆಲವು ದಿನಗಳ ಹಿಂದೆ ಕುಡಿಯುವ ನೀರಿನ ಘಟಕದ ಗಾಜನ್ನು ಒಡೆದು ಪುಡಿ ಮಾಡಲಾಗಿತ್ತು. ಕಡಲ ತೀರ ಪ್ರದೇಶದಲ್ಲಿ ಸರಾಯಿ ಸೇವನೆ, ಸುತ್ತ ಮುತ್ತಲಿನ ಗುಡ್ಡಗಳ ಮೇಲೆ ಸಿಗರೇಟು ಮಾದಕ ವಸ್ತುಗಳ ಸೇವನೆಯಂತ ಕೃತ್ಯಗಳು ಹೆಚ್ಚಿವೆ ಎಂಬ ಆರೋಪಗಳು ಕೇಳಿ ಬಂದಿದೆ.

ಧಾರವಾಡದಲ್ಲಿ ಸೇವಾ ಭಾರತಿ ಟ್ರಸ್ಟ್ ವತಿಯಿಂದ ಬೃಹತ್ ರಕ್ತದಾನ ಶಿಬಿರ

ಧಾರವಾಡ : ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಹಾಗೂ ಭಗತ್ ಸಿಂಗ್, ಸುಖದೇವ್, ಹಾಗೂ ರಾಜಗುರು ಬಲಿದಾನ ದಿನದ ಅಂಗವಾಗಿ ಸೇವಾ ಭಾರತಿ ಟ್ರಸ್ಟ್, ರಾಷ್ಟ್ರೋತ್ಥಾನ ರಕ್ತ ನಿಧಿ, ಧಾರವಾಡ ಜಿಲ್ಲಾ ಆಸ್ಪತ್ರೆಯ ಸಹಯೋಗದೊಂದಿಗೆ ಧಾರವಾಡ ಲಿಂಗಾಯತ ಭವನದಲ್ಲಿ ಬೃಹತ್ ರಕ್ತದಾನ ಶಿಬಿರವನ್ನು ಸೋಮವಾರ ಆಯೋಜನೆ ಮಾಡಲಾಗಿತ್ತು.

ರಕ್ತದಾನ ಶಿಬಿರದಲ್ಲಿ ಸ್ವಯಂ ಪ್ರೇರಣೆಯಿಂದ 1070 ಜನ ಯುವಕರು, ಸ್ಥಳೀಯ ಜನರು ಭಾಗವಹಿಸಿ ರಕ್ತದಾನ ಮಾಡುವ ಮೂಲಕ ಸಾರ್ಥಕತೆ ಮೆರೆದರು. ಇದೇ ವೇಳೆ ಸೇವಾ ಭಾರತಿ ಟ್ರಸ್ಟ್ ವತಿಯಿಂದ ರಕ್ತದಾನ ಮಾಡಿದ ಎಲ್ಲರಿಗೂ ಅಭಿನಂದನಾ ಪತ್ರ ವಿತರಣೆ ಮಾಡಲಾಯಿತು.

ರಕ್ತದಾನ ಶಿಬಿರದ ಸಾನ್ನಿಧ್ಯವನ್ನು ನಯಾನಗರದ ಶ್ರೀ ಗುರು ಅಭಿನವ ಸಿದ್ದಲಿಂಗ ಸ್ವಾಮೀಜಿ, ಮನಗುಂಡಿಯ ಬಸವಾನಂದ ಸ್ವಾಮೀಜಿ, ಗರಗ ಕಲ್ಮಠದ ಆತ್ಮರಾಮ ಸ್ವಾಮೀಜಿ ವಹಿಸಿದ್ದರು. ಈ ವೇಳೆ ಸೇವಾ ಭಾರತಿ ಟ್ರಸ್ಟ್



ಉತ್ತರ ಪ್ರಾಂತ ಟ್ರಸ್ಟಿ ಮಂಜುನಾಥ ಮಕ್ಕಳಗೇರಿ, ಸೇವಾ ಭಾರತಿ ಟ್ರಸ್ಟಿ ಶ್ರೀಧರ ನಾಡಿಗೇರ, ದತ್ತಮೂರ್ತಿ ಕುಲಕರ್ಣಿ ಸೇರಿದಂತೆ ಇತರರಿದ್ದರು.

ಶಂಕರಪಂಚಮಿ ಉತ್ಸವ ಆಮಂತ್ರಣ ಪತ್ರಿಕೆ ಲೋಕಾರ್ಪಣೆ

ಸಿದ್ದಾಪುರ: ಶ್ರೀ ರಾಮದೇವಮಠ ಗೋ ಸ್ವರ್ಗದಲ್ಲಿ ಏ.20ರಿಂದ ಮೂರು ದಿನ ನಡೆಯುತ್ತಿರುವ ಶಂಕರ ಪಂಚಮಿ ಉತ್ಸವ ಆಹ್ವಾನ ಪತ್ರಿಕೆಯನ್ನು ಶ್ರೀ ರಾಮಚಂದ್ರಾಪುರಮಠ ಮಹಾಸಂಸ್ಥಾನದ ಶ್ರೀ ರಾಘವೇಶ್ವರಭಾರತೀ ಶ್ರೀಗಳು ಶ್ರೀ ರಾಮದೇವಮಠದಲ್ಲಿ ಭಾನುವಾರ ಲೋಕಾರ್ಪಣೆ ಮಾಡಿದರು. ಶಾಸನತಂತ್ರದ ಅಧ್ಯಕ್ಷ ಮೋಹನ ಭಾಸ್ಕರ ಹೆಗಡೆ, ಶಂಕರಪಂಚಮಿ ಪ್ರಧಾನ ಶ್ರೀ ಸಂಯೋಜಕ, ಗೋಸ್ವರ್ಗ ಗೌರವಾಧ್ಯಕ್ಷ ಆರ್.ಎಸ್.ಹೆಗಡೆ ಹರಗಿ, ಮಹಾಮಂಡಲದ ಕಾರ್ಯದರ್ಶಿ ಮಹೇಶ ಚಟ್ನಳ್ಳಿ, ವಿವಿಧ ವಿಭಾಗಗಳ ಪ್ರಮುಖರಾದ ಜಿ.ಕೆ.ಹೆಗಡೆ ಗೋಳಗೋಡ, ಶಾಂತಾರಾಮ ಹಿರೇಮನೆ, ತಿಮ್ಮಪ್ಪ ಗುಡ್ಡೆದಿಂಬ, ವೀಣಾ ಭಟ್ಟ ಶಿರಸಿ, ಜಿ.ಎಸ್.ಭಟ್ಟ ಕಲ್ಲಾಳ, ಸತೀಶ



ಆಲ್ಮನೆ, ಕಂಜಾಕ್ಷಿ ಹೆಗಡೆ, ರಾಘವೇಂದ್ರ ಮುಸವಳ್ಳಿ, ರಮಾನಂದ ತಲವಾಟ, ರಾಜಲಕ್ಷ್ಮಿ ಹೆಗಡೆ ಮತ್ತಿತರರು ಇದ್ದರು.

39.16 ಲಕ್ಷ ರೂ. ಪುರಸಭೆ ಉಳಿತಾಯ ಬಜೆಟ್ ಮಂಡನೆ

ಹಗರಿಬೊಮ್ಮನಹಳ್ಳಿ: ಪುರಸಭೆಯ 2026-27ನೇ ಸಾಲಿನಲ್ಲಿ 39.16.000 ಸಾವಿರ ಉಳಿತಾಯ ಬಜೆಟ್‌ಅನ್ನು ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ಮಂಡಿಸಿದರು.

ಸೋಮವಾರ ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ 2026-27ನೇ ಸಾಲಿನ ಬಜೆಟ್ ಸಭೆಯಲ್ಲಿ ಆಯವ್ಯಯದ ಯಾವ ಯಾವ ವಿಭಾಗಕ್ಕೆ ಹಂಚಿಕೆಯಾದ ಖರ್ಚು ವೆಚ್ಚಗಳ ವರದಿ ಮಂಡಿಸಿದರು. 40.13.63.000 ರೂ. ಒಟ್ಟು ಅಂದಾಜು ಪಾವತಿ ಮೊತ್ತದಲ್ಲಿ ಹಂಚಿಕೆಯಾಗಿ 39.16.000 ಅಂದಾಜು ಮೊತ್ತ ಉಳಿತಾಯ ಆಗಿದೆ ಎಂದು ಬಜೆಟ್ ಮಂಡಿಸಿ ಸಭೆಯಲ್ಲಿ ಅನುಮೋದನೆ ಪಡೆದರು. ಪುರಸಭೆ ಸದಸ್ಯ ಗಣೇಶ್ ನಾಯ್ಕ್ ಮಾತನಾಡಿ, ಜನ ಸಾಮಾನ್ಯರಿಗೆ ಅನುಕೂಲ ಕಲ್ಪಿಸಲು ಪುರಸಭೆಯಲ್ಲಿ ಸಿಗುವ ಸಾಲ ಸೌಲಭ್ಯ, ರಾಟಿ ಮತ್ತಿತರ ಸೌಲಭ್ಯ ನೀಡುವಾಗ ಅಧಿಕಾರಿಗಳು ಸದಸ್ಯರ ಗಮನಕ್ಕೆ ತರುತ್ತಿಲ್ಲ ವಾರ್ಡ್‌ನ ಸದಸ್ಯರ ಗಮನಕ್ಕೆ ಇಲ್ಲದೇ ಸೌಲಭ್ಯ ನೀಡಿದರೆ ಸದಸ್ಯರಾಗಿ ನಮ್ಮದೇನೂ ಕೆಲಸ ಪುರಸಭೆ ಅಧಿಕಾರಿ ಬಸವರಾಜ ಅವರನ್ನು ಪ್ರಶ್ನಿಸಿದರು. ಇದಕ್ಕೆ ಸದಸ್ಯ ಜೋಗಿ ಹನುಮಂತಪ್ಪ ಮಾತನಾಡಿ, ವಾರ್ಡ್‌ನ ಸದಸ್ಯರ ಗಮನಕ್ಕೆ ನೀವು ನೀವೇ ಸೌಲಭ್ಯ ನೀಡುವಂತಿದ್ದರೆ ಸದಸ್ಯರ ಹಕ್ಕುಗಳನ್ನು ಡಸ್ಟ್ ಬಿನ್ ಹಾಕುತ್ತೀರಾ ಎಂದು ಧ್ವನಿಗೂಡಿಸಿದ



ಈ ಬಗ್ಗೆ ಗಣೇಶ್ ಮತ್ತು ಹನುಮಂತಪ್ಪ ಅವರಿಗೆ ತಿಳಿಸಿರುವುದಾಗಿ ಅಧಿಕಾರಿ ಬಸವರಾಜ ಪ್ರತಿಕ್ರಿಯಿಸಿದರು. ಒಂದೆರಡು ವಾರ್ಡ್‌ಗಳಲ್ಲಿ ಅಲ್ಲ ಎಲ್ಲಾ ವಾರ್ಡಿನ ಸದಸ್ಯರಿಗೂ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ ಎಲ್ಲಾ ವಾರ್ಡಿನ ಜನರಿಗೂ ಸರ್ಕಾರಿ ಸೌಲಭ್ಯಗಳು ಸಮರ್ಪಕವಾಗಿ ಸಿಗುವಂತಾಗಬೇಕು ಎಂದು ಸದಸ್ಯ ಬಿ.ಡಿ.ಗಂಗಾಧರ ಕಿಡಿ ಕಾರಿದರು.

ಅಧ್ಯಕ್ಷ ಎಂ ಮರಿರಾಮಣ್ಣ ಮೊಬೈಲ್ ಸಂದೇಶ ಕಳುಹಿಸಲಾಗಿದೆ. ಮನೆ ಮನೆಗೆ ಮಾಹಿತಿ ಕೊಟ್ಟಿದ್ದಾರೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯ ಗಂಗಾಧರ ಇವರನ್ನು ಸಮರ್ಥನೆ ಮಾಡಿಕೊಳ್ಳಬೇಡಿ ಎಂದರು. ಯೋಜನೆಗಳ ಬಗ್ಗೆ ಮಾಹಿತಿ ತಿಳಿಸಿದರೆ ವಾರ್ಡಿನಲ್ಲಿರುವ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಸದಸ್ಯರಿಗೆ ಸಹಕಾರಿಯಾಗುತ್ತದೆ ಎಂದು ಜೋಗಿ ಹನುಮಂತಪ್ಪ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಾಧಿಕಾರಿ ಎಂ.ಕೆ. ಮುಗಳಿ ಮಾತನಾಡಿ, ವಿದ್ಯಾರ್ಥಿಗಳ ಸ್ಕಾಲರ್ಶಿಪ್, ಬಡವರಿಗೆ ವೈಯಕ್ತಿಕ ಸಾಲ ಸೌಲಭ್ಯ, ಮುಂತಾದ ಸೌಲಭ್ಯಗಳ ಪಟ್ಟಿಯನ್ನು ನನ್ನ ಬಳಿಯೇ ನೀಡಿ ಎಂದು ಸದಸ್ಯರಿಗೆ ತಿಳಿಸಿದರು. ಆರ್ಯವೈಶ್ಯ ಸಮಾಜದ ಸೀತಾರಾಮ ಶೆಟ್ಟಿ ಮತ್ತು ಸವಿತಾ ಸಮಾಜದ ಸಂಜೀವ್ ಕುಮಾರ್ ಅವರಿಗೆ ಆರ್ಥಿಕ ನೆರವು ನೀಡಲು ಸಭೆಯಲ್ಲಿ ಒಪ್ಪಿಗೆ ಸೂಚಿಸಲಾಯಿತು.

ಪುರಸಭೆ ಉಪಾಧ್ಯಕ್ಷೆ ಸರೇಗಾರ್ ನೇತ್ರಾವತಿ ಹುಚ್ಚಪ್ಪ, ಸದಸ್ಯರಾದ ನವೀನ್‌ಕುಮಾರ್, ಅಜೀಜ್ ಉಲ್ಲಾ, ಮಂಜುಳಾ ಕೃಷ್ಣ ನಾಯಕ್, ಪವಾಡಿ ಹನುಮಂತಪ್ಪ, ಮಂಗಳ ಅಂಗಡಿ, ನಾಗರಾಜ್ ಜನ್ನು, ರೇಷ್ಮಾ ಇತರರಿದ್ದರು.

'ನೃತ್ಯ ಸಾಕ್ಷಾತ್ಕಾರ' ಭರತನಾಟ್ಯ ಕಾರ್ಯಕ್ರಮ

ಹುಬ್ಬಳ್ಳಿ: ನಾಟ್ಯಾಂಜಲಿ ನೃತ್ಯ ಕಲಾ ಕೇಂದ್ರದ ವತಿಯಿಂದ ನಗರದ ಸವಾಯಿ ಗಂಧರ್ವ ಕಲಾ ಮಂದಿರದಲ್ಲಿ ಭಾನುವಾರ ವಿದುಷಿ ಡಾ. ಶೃತಿ ಹೆಗಡೆ ಹಾಗೂ ವಿದುಷಿ ಪ್ರಿಯಾಂಕಾ ಪಾವಟೆ ಇವರು ಪ್ರಸ್ತುತ ಪಡಿಸಿದ 'ನೃತ್ಯ ಸಾಕ್ಷಾತ್ಕಾರ' ಭರತನಾಟ್ಯ ಕಾರ್ಯಕ್ರಮ ಯಶಸ್ವಿಯಾಗಿ ಮೂಡಿಬಂತು. ಕಲಾವಿದರು ಪುಷ್ಪಾಂಜಲಿ, ಗಣೇಶ ಸ್ತುತಿ, ದುರ್ಗಾ ಸ್ತುತಿ, ಅಷ್ಟ ಲಕ್ಷ್ಮೀ, ಸರಸ್ವತಿ ಸ್ತುತಿ, ದೇವರನಾಮ, ತಿಲ್ಲಾನ ನೃತ್ಯ ಬಂಧಗಳನ್ನು ಪ್ರದರ್ಶಿಸಿದರು. ತದನಂತರ ಪ್ರದೀಪ ಭಟ್ಟ ಅವರ ರಚನೆಯ ''ಮೋಹಿನಿ ಭಸ್ಮಾಸುರ'' ನೃತ್ಯ ರೂಪಕವನ್ನು ಅತ್ಯಂತ ಸುಂದರವಾಗಿ ಪ್ರದರ್ಶಿಸಿದರು. ನೃತ್ಯ ಗುರು ಡಾ. ಸಹನಾ ಭಟ್ಟ ಅವರಿಗೆ ಸಲ್ಲಿಸಿದ ಗುರುವಂದನಾ ಕಾರ್ಯಕ್ರಮವನ್ನು ಖ್ಯಾತ ಹೃದ್ರೋಗ ತಜ್ಞ ಡಾ. ವಿಜಯಲಕ್ಷ್ಮೀ ಬಾಳೆಕುಂದ್ರಿ ಉದ್ಘಾಟಿಸಿದರು, ಬ್ರಿಗೇಡಿಯರ್ ಸುಧೀಂದ್ರ ಇಟ್ನಾಳ ಅವರು ಅತಿಥಿಯಾಗಿ ಪಾಲ್ಗೊಂಡಿದ್ದರು. ಹಿಮ್ಮೇಳದಲ್ಲಿ ಡಾ. ಸಹನಾ ಭಟ್ಟ, ಬಾಲಸುಬ್ರಹ್ಮಣ್ಯ ಶರ್ಮಾ, ಪಂಚಮ ಉಪಾಧ್ಯಾಯ, ರಘುಸಿಂಹ, ಅರುಣ್ ಕುಮಾರ್ ಅವರು ಇದ್ದರು.



ಭಾರತದ ಹಣಕಾಸು ವಲಯ ಸ್ಥಿರ: ಪ್ರೊ.ಖಾನ್

ಧಾರವಾಡ: ಉದಾರೀಕರಣ, ಡಿಜಿಟಲ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಜಾಗತೀಕರಣದ ಪರಿಣಾಮ ಭಾರತೀಯ ಹಣಕಾಸು ವಲಯವು ಹೆಚ್ಚು ಸ್ಥಿರ ಮತ್ತು ಸ್ಪರ್ಧಾತ್ಮಕವಾಗಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎ.ಎಂ.ಖಾನ್ ಹೇಳಿದರು.

ನಗರದ ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗ, ಕೆನರಾ ಬ್ಯಾಂಕ್ ಸಹಯೋಗದಲ್ಲಿ ಕವಿವಿಯ ಸುವರ್ಣ ಮಹೋತ್ಸವ ಭವನದಲ್ಲಿ 'ಭಾರತೀಯ ಹಣಕಾಸು ವಲಯದ ಸುಧಾರಣೆಗಳು' ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಭವಿಷ್ಯದಲ್ಲಿ ಹೊಸ ಸವಾಲುಗಳನ್ನು ಎದುರಿಸಲು ನವೀನ ವಿಧಾನಗಳು ಹಾಗೂ ಪರಿಣಾಮಕಾರಿ ನೀತಿ ಅತ್ಯಗತ್ಯವಾಗಿವೆ. ವಿದೇಶಿ ಬಂಡವಾಳ ಮತ್ತು ವಿದೇಶಿ ವಿನಿಮಯ ಮಾರುಕಟ್ಟೆಗಳು ಭಾರತದ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಸದ್ಯ ಆಧುನಿಕ ಯುಗದಲ್ಲಿ ಕೃತಕ ಬುದ್ಧಿಮತ್ತೆ ಬ್ಯಾಂಕಿಂಗ್ ವಲಯದಲ್ಲಿ ಪಾತ್ರ ನಿರ್ವಹಿಸುತ್ತಿದೆ. ಗ್ರಾಹಕ ಸೇವೆ, ಮೋಸ ಪತ್ತೆ ಹಚ್ಚುವ ವ್ಯವಸ್ಥೆ, ಡೇಟಾ ವಿಶ್ಲೇಷಣೆ ಅಂತಹ ಸೇವೆ ನೀಡುತ್ತಿದೆ.



ಆದರೆ, ಸೈಬರ್ ಅಪರಾಧಗಳ ಪ್ರಮಾಣವು ಹೆಚ್ಚುತ್ತಿದೆ ಎಂದು ಬೇಸರಿಸಿದರು.

ಪುಣೆಯ ಗೋಖಲೆ ರಾಜಕೀಯ ಮತ್ತು ಅರ್ಥಶಾಸ್ತ್ರ ಸಂಸ್ಥೆಯ ಉಪಕುಲಪತಿ ಪ್ರೊ. ಉಮಾಕಾಂತ ದಾಸ ಮಾತನಾಡಿ, ಹಣಕಾಸು ವಲಯದ ಸುಧಾರಣೆ ಮತ್ತು ನೀತಿ ಸವಾಲುಗಳ ಕುರಿತು ಅಭಿಪ್ರಾಯ ಹಂಚಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ಕವಿವಿಯ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಬಿ.ಎಚ್.ನಾಗೂರ ಮಾತನಾಡಿ, ಬ್ಯಾಂಕಿಂಗ್ ಸ್ಥಿರತೆ ದೇಶದ ಆರ್ಥಿಕ ಬೆಳವಣಿಗೆಗೂ ಸಹ ಮೂಲ ಆಧಾರವಾಗಿದೆ. ಡಿಜಿಟಲ್ ಹಣಕಾಸು ವ್ಯವಸ್ಥೆ ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿದೆ ಎಂದರು.

ಹೂಡಿಕೆ, ಷೇರು ವ್ಯಾಪಾರ, ವಿನಿಮಯ ದರಗಳ ಸ್ಥಿರತೆ ದೇಶದ ಆರ್ಥಿಕ ಸ್ಥಿತಿ ಬಲಪಡಿಸುತ್ತವೆ. ಮೊಬೈಲ್ ಬ್ಯಾಂಕಿಂಗ್, ಯು.ಪಿ.ಐ ಆನ್‌ಲೈನ್ ವ್ಯವಹಾರಗಳು, ಡಿಜಿಟಲ್ ಕರೆನ್ಸಿ, ಹಣಕಾಸು ಸೇವೆಗಳನ್ನು ಸುಲಭ, ವೇಗ ಮತ್ತು ಸಮಗ್ರವಾಗಿ ನೀಡುತ್ತಿವೆ ಎಂದರು.

ವಿವಿಧ ತಾಂತ್ರಿಕ ಗೋಷ್ಠಿಗಳಲ್ಲಿ 30ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಸಂಶೋಧಕರು ಮಂಡಿಸಿದರು. ಕಾರ್ಯಕ್ರಮದಲ್ಲಿ ಪ್ರೊ. ಎಸ್ .ಟಿ.ಬಾಗಲಕೋಟಿ, ಡಾ.ಎನ್.ಎಸ್.ಮಗದೂರ. ಡಾ.ಎಸ್.ಬಿ.ನಾರಿ, ಡಾ.ಮನೋಜ ಡೊಳ್ಳಿ, ಡಾ. ಆರ್.ಎನ್.ಕದಮ್, ಡಾ.ಎಚ್.ಎಚ್.ಭರಡಿ ಇದ್ದರು.

ಅಪಾರ ಭಕ್ತರ ಮಧ್ಯೆ ನಡೆದ ರಥೋತ್ಸವ

ಉಪ್ಪಿನಬೆಟಗೇರಿ: ಹತ್ತಿರದ ಧಾರವಾಡ ತಾಲೂಕಿನ ಅಮ್ಮಿನಬಾವಿ ಗ್ರಾಮದ ಸಂಸ್ಥಾನ ಪಂಚಗೃಹ ಹಿರೇಮಠದ ಕರ್ತೃ ಪುರುಷರಾದ ಮಹಾತಪಸ್ವಿ ಶ್ರೀಗುರುಶಾಂತಲಿಂಗ ಶಿವಯೋಗಿಗಳ ವಾರ್ಷಿಕ ರಥೋತ್ಸವ ಸೋಮವಾರ ಅಪಾರ ಭಕ್ತರ ಜಯಘೋಷದ ಮಧ್ಯೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ವಿಶೇಷವಾಗಿ ಪುಷ್ಪಗಳಿಂದ ಅಲಂಕರಿಸಲಾಗಿದ್ದ ರಥಕ್ಕೆ ಅಮ್ಮಿನಬಾವಿ ಪಂಚಗೃಹ ಹಿರೇಮಠದ ಹಿರಿಯ ಶ್ರೀಗಳಾದ ಶಾಂತಲಿಂಗ ಶಿವಾಚಾರ್ಯರ ಸನ್ನಿಧಾನದಲ್ಲಿ ಕಿರಿಯ ಶ್ರೀಗಳಾದ ಅಭಿನವ ಶಾಂತಲಿಂಗ ಶಿವಾಚಾರ್ಯರು ಪೂಜೆ ಸಲ್ಲಿಸಿದರು.

ಸವದತ್ತಿ ಮೂಲಿಮಠದ ಶ್ರೀಮಲ್ಲಿಕಾರ್ಜುನ ಶಿವಾಚಾರ್ಯರು, ಮೊರಬ ಜಡಿಮಠದ ಶ್ರೀಮಹೇಶ್ವರ ಶಿವಾಚಾರ್ಯರು, ಕಲಬುರ್ಗಿ ಜಿಲ್ಲೆ ಬೆಳಗುಂಪಾ ಬೃಹನ್ಮಠದ ಶ್ರೀಅಭಿನವ ಪರ್ವತೇಶ್ವರ ಶಿವಾಚಾರ್ಯರು, ವಿಜಯನಗರ ಜಿಲ್ಲೆ ಹಂಪಸಾಗರ ನವಲಿಹಿರೇಮಠದ ಶ್ರೀಅಭಿನವ ಶಿವಲಿಂಗರುದ್ರಮುನಿ ಶಿವಾಚಾರ್ಯರು, ಚಿಕ್ಕಮಗಳೂರು ಜಿಲ್ಲೆ ಬೇರುಗಂಡಿ ಬೃಹನ್ಮಠದ ಶ್ರೀರೇಣುಕ ಮಹಾಂತ ಶಿವಾಚಾರ್ಯರು, ಬೆಳಗಾವಿ ಜಿಲ್ಲೆ ಕಡವಿಶಿವಾಪೂರ ಹಿರೇಮಠದ ಶ್ರೀಜಡೆತಲೆ ಮರುಳಸಿದ್ಧ ಶಿವಾಚಾರ್ಯರು, ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ಕರಡಿಮಜಲು, ಡೊಳ್ಳು, ಸಂಬಾಳ ಸೇರಿ ವಿವಿಧ ಜನಪದ ವಾದ್ಯ-ಮೇಳಗಳೊಂದಿಗೆ ಆರಂಭಗೊಂಡ ರಥೋತ್ಸವವು ಸಂಸ್ಥಾನ ಪಂಚಗೃಹ ಹಿರೇಮಠದಿಂದ ಹೊರಟು ಇಸ್ಲಾಂ ಧರ್ಮೀಯರ ಪ್ರಾರ್ಥನಾ ಮಂದಿರ, ಅಮ್ಮಿನಬಾವಿ ಮುಖ್ಯಪೇಟೆ ರಸ್ತೆಯಲ್ಲಿ ಸಂಚರಿಸಿ ಕರಡಿಗುಡ್ಡ ರಸ್ತೆಗೆ ಹೊಂದಿಕೊಂಡ ಈಶ್ವರ ದೇವಾಲಯದವರೆಗೆ ಹೋಗಿ ಮರಳಿ ಅದೇ ಮಾರ್ಗವಾಗಿ ಸಂಸ್ಥಾನ ಪಂಚಗೃಹ ಹಿರೇಮಠವನ್ನು ತಲುಪಿತು.



ದಾರಿಯುದ್ದಕ್ಕೂ ಭಕ್ತರು ಅಲಂಕೃತ ರಥಕ್ಕೆ ಉತ್ತತ್ತಿ, ಬಾಳೆಹಣ್ಣು ಎಸೆದು ತಮ್ಮ ಭಕ್ತಿ ಸಮರ್ಪಣೆ ಮಾಡುವುದು ಸಾಮಾನ್ಯವಾಗಿತ್ತು. ಜೊತೆಗೆ ಜನರು ತಮ್ಮ ಮನೆಯ ಮೇಲೆ ಹತ್ತಿ ಪುಷ್ಪವೃಷ್ಟಿಮಾಡಿ ಜಯಘೋಷ ಹೇಳಿ ಗಮನಸೆಳೆದರು. ಅಮ್ಮಿನಬಾವಿ, ಮರೇವಾಡ, ತಿಮ್ಮಾಪೂರ, ಕರಡಿಗುಡ್ಡ, ಕವಲಗೇರಿ, ಚಂದನಮಟ್ಟಿ, ಹಾರೋಬೆಳವಡಿ ಸೇರಿದಂತೆ ಹಲವಾರು ಗ್ರಾಮಗಳೂ ಸೇರಿದಂತೆ ಹುಬ್ಬಳ್ಳಿ-ಧಾರವಾಡ ಮಹಾನಗರದಿಂದಲೂ ಅಪಾರ ಸಂಖ್ಯೆಯ ಭಕ್ತಸ್ತೋಮ ಈ ರಥೋತ್ಸವದಲ್ಲಿ ಪಾಲ್ಗೊಂಡು ಶ್ರೀಗುರುಶಾಂತಲಿಂಗ ಶಿವಯೋಗಿಗಳ ಸಂಭ್ರಮದ ರಥೋತ್ಸವಕ್ಕೆ ಸಾಕ್ಷಿಯಾದರು.

CHANGE OF NAME

I, **YAMANAJI RAO MARUTIRAO KAMBALEKAR** (old name) Resident of Basav Nagar, Mahalingapur Tq: Mudhol Dist: Bagalkot, Karnataka - 587313, have changed my name as **YAMANAJIRAO MARUTIRAO KAMBLEKAR** (new name) henceforth I will be called and recognized by new name for all future purposes, dated: 23/03/2026.

CHANGE OF NAME

I, **SHESHANK PATIL** (old name) Resident of MIG - 139, 5th Cross, Navanagar, Hubballi - Dharwad City - 580025, Karnataka, India, have changed my name as **SHESHANK KIRAN PATIL** (new name) henceforth I will be called and recognized by new name for all future purposes, dated: 23/03/2026.

CHANGE OF NAME

BASAVESH UMESH HIREMATH (Old Name) Resident of 4th Cross, Vinayak Nagar, Ijari Lakmapur, Haveri - 581110, Karnataka, have changed my name as **BASAVESH HIREMATH** (New Name) for all purposes affidavit Dtd.: 23-03-2026 sworn before notary **M. C. Maradi**.

CHANGE OF NAME

I, **SAFIYA SHAIKH** (Old Name) Resident of #3487, Mavinkatta, Manki, Taluk: Honnavar, Dist.: Uttara Kannada, Karnataka State, Pin Code : 581348 India, have changed my name as **SAFIYA KATPADI** (New Name) for all purposes affidavit Dtd.: 23-03-2026 sworn before notary **S. G. Hegde**.

ಕ್ರಿಮಿ.ನಂ: 51/2026
ಮಾ॥ 1ನೇ ಹೆಚ್ಚುವರಿ ನ್ಯಾಯಾಧೀಶರು ವ ಜೆಎಮ್‌ಎಫ್‌ಸಿ ಬಸವನ ಬಾಗೇವಾಡಿ ಇವರ ನ್ಯಾಯಾಲಯದಲ್ಲಿ

1) ಚಂದ್ರಶೇಖರ ತಂ. ನಾಗಪ್ಪ ಗೌರಿ —ಅರ್ಜಿದಾರ

ವಿರುದ್ಧ

1) ತಹಶೀಲ್ದಾರರು, ಜನನ ಮರಣ ನೋಂದಣಾಧಿಕಾರಿಗಳು ಬಸವನ ಬಾಗೇ ವಾಡಿ —ಎದುರುದಾರ

ಪತ್ರಿಕಾ ಪ್ರಕಟಣೆ

ಸದರ ಮೇಲ್ಕಾಣಿಸಿದ ಅರ್ಜಿಯಲ್ಲಿಯ ಶಾಯಿಯಾದ ಪಾರ್ವತೆವ್ವ ಗಂ.ನಾಗಪ್ಪ ಗೌರಿ ಇವರು ದಿನಾಂಕ: 01-04-1989 ರಂದು ಕೋಲ್ಹಾರ ತಾಲೂಕಿನ ಕೋಲ್ಹಾರ ಪಟ್ಟಣದಲ್ಲಿ ಮೃತಪಟ್ಟಿದ್ದು, ಸದರಿಯವರ ಮರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರನು ಈ ಅರ್ಜಿಯನ್ನು ದಾಖಲಿಸಿರುತ್ತಾರೆ. ಆದ್ದರಿಂದ ಸದರಿ ಅರ್ಜಿದಾರನ ತಾಯಿಯ ಮರಣದ ಬಗ್ಗೆ ಮರಣ ನೋಂದಣಾಧಿಕಾರಿಗಳ ರಜಿಸ್ಟರ್‌ದಲ್ಲಿ ದಾಖಲಿಸುವ ಕುರಿತು, ಯಾರಾದರೂ ಯಾವುದೇ ರೀತಿಯ ತಂಟೆ, ವ ತಕರಾರು ಇದ್ದಲ್ಲಿ ಅಂತವರು ಹಾಜರಾಗಲು ಮಾನ್ಯ ನ್ಯಾಯಾಲಯದವರು ದಿನಾಂಕ:28-04-2026 ರಂದು ಬೆಳಗ್ಗೆ 11 ಘಂಟೆಗೆ ಮುದ್ದತ್ ನೇಮಿಸಿದ್ದು ಇರುತ್ತದೆ. ತಾವಾಗಲೀ ತಮ್ಮ ವಕೀಲರ ಮುಖಾಂತರವಾಗಲೀ ಈ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಪ್ರಕರಣವನ್ನು ತಮ್ಮ ಗೈರ ಹಾಜರಾತಿಯಲ್ಲಿ ನಿರ್ಣಯಿಸಲಾಗುವದು. ಈ ಹೊತ್ತು ದಿನಾಂಕ : 18-03-2026 ರಂದು ನ್ಯಾಯಾಲಯದ ಆದೇಶದ ಮೇರೆಗೆ ನನ್ನ ಸಹಿ ಹಾಗೂ ನ್ಯಾಯಾಲಯದ ಮುದ್ರೆಯೊಂದಿಗೆ ಕೊಡಲ್ಪಟ್ಟಿತು.

ಬಸವನಬಾಗೇವಾಡಿ
ದಿನಾಂಕ: 00-01-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-
ಶಿರಸ್ತೇದಾರರು.(ಆಡಳಿತ)
ಮಾ॥ 1ನೇ ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ ಬಸವನಬಾಗೇವಾಡಿ ಇವರ ನ್ಯಾಯಾಲಯದಲ್ಲಿ
ಸಹಿ/-
ಶ್ರೀ.ಎನ್.ಎಸ್.ಬಿರಾದಾರ ಅರ್ಜಿದಾರನ ಪರ ವಕೀಲರು

IN THE COURT OF THE HON'BLE IV ADDITIONAL CIVIL JUDGE, CUM J.M.F.C. AT BALLARI
Cri. M.C. NO. 74/2026

Between : M. SADA SHIVAIAH SWAMY and another.....Petitioners

And

The Tahasildar cum Register of Births and Deaths, Taluk Office, Ballari ...Respondent

NOTICE TO WHOM SO EVER IT MAY CONCERNED

To,
Respondent:The Tahasildar cum Register of Births and Deaths, Taluk Office, Ballari
WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners grandfather death certificate by name CHENNAIAH S/o Late. BASAIAH, who died on 09-06-1952 at Rayapura Village, Rupanagudi Hobli, Ballari Taluk and District.
You are here by directed to appear in this court in person or by a pleader duly instructed on 27/04/2026 at about 11.00 am in the before this court to show cause against the above petitions filling wherein the petition will be heard and determined ex-parte. Given under my hand and seal of the court on this day of 23rd day of March- 2026.

By order of the court.
Chief Ministerial officer
Hon'ble IV.A.C.J & J.M.F.C. Court
Ballari.
VISHWANATHASHARMA P G S
Advocate for the Petitioner

ಮಿಸಲ್ ಮಿಸಲೇನಿಯಸ್ ನಂ. 107/2026
ಮಾ. ಜೆ.ಎಂ.ಎಫ್.ಸಿ. ನರಗುಂದ ಇವರ ನ್ಯಾಯಾಲಯ

ಅರ್ಜಿದಾರರು: ಮಂಜಪ್ಪ ತಂದೆ ಹನಮಪ್ಪ ಹಡಪದ, ವಯಾ: 34 ವರ್ಷ, ಉದ್ಯೋಗ : ಶೇತ್ಕಿ, ಸಾ॥ ಅರಿಷಿಣಗೋಡಿ ತಾ॥ ನರಗುಂದ ಜಿ॥ ಗದಗ, ಹಾಲಿವಸ್ತಿ ಹೊಸೂರ ತಾ॥ ಬದಾಮಿ ಜಿ॥ ಬಾಗಲಕೋಟ

ವಿರುದ್ಧ

ಎದುರುದಾರರು: ಜನನ-ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರ ನರಗುಂದ

ಸಾರ್ವಜನಿಕ ತಿಳುವಳಿಕೆ ನೋಟೀಸು

ಅರ್ಜಿದಾರನ ತಾಯಿಯಾದ ಶರವ್ವ ಕೋಂ ಹನಮಪ್ಪ ಹಡಪದ ಇವರು ನರಗುಂದ ತಾಲೂಕ ಅರಿಷಿಣಗೋಡಿ ಗ್ರಾಮದ ಅರ್ಜಿದಾರನ ಮನೆಯಲ್ಲಿ ದಿನಾಂಕ :19-01-2005 ರಂದು ನಿಧನರಾಗಿದ್ದು, ಸದರ ದಿನಾಂಕವನ್ನು ಎದುರುದಾರನಲ್ಲಿ ದಾಖಲಿಸಿಕೊಳ್ಳುವಂತೆ ಆದೇಶ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.
ಸದರ ಪ್ರಕರಣವು ದಿನಾಂಕ: 27-04-2026 ರಂದು ಇದ್ದು ಮೇಲ್ಕಂಡ ಪ್ರಕರಣದಲ್ಲಿ ಯಾರಿಗಾದರು ಹಕ್ಕು ಹಿತಾಸಕ್ತಿ ಇದ್ದಲ್ಲಿ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಾಲಯವು ನಿಗದಿಪಡಿಸಿದ ದಿನದಂದು ಅಂದರೆ ದಿನಾಂಕ: 27-04-2026 ರಂದು ಬೆಳಗ್ಗೆ 10-30 ಘಂಟೆಗೆ ಸ್ವತಃ ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಇಲ್ಲದಿದ್ದರೆ ನಿಮ್ಮ ಗೈರು ಹಾಜರಾತಿಯಲ್ಲಿ ಏಕಪಕ್ಷೀಯವಾಗಿ ವಿಚಾರಣೆ ನಡೆಸಿ ಮಾನ್ಯ ನ್ಯಾಯಾಲಯವು ಕಾನೂನಿನ ಪ್ರಕಾರ ಮುಂದಿನ ಆದೇಶ ಮಾಡುತ್ತದೆ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.
ಈ ದಿವಸ ದಿ: 18-03-2026 ರಂದು ಕೋರ್ಟಿನ ಮೊಹರಿನೊಂದಿಗೆ ಕೊಡಲಾಗಿದೆ.

ನರಗುಂದ
13-3-2026

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಜೆ.ಎಮ್.ಎಫ್.ಸಿ ನ್ಯಾಯಾಲಯ ನರಗುಂದ
ಎಚ್.ಪಿ.ಮುದ್ದನಗೌಡ್ರ
(ವಕೀಲರು ನರಗುಂದ)

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 482 /2026

ಅರ್ಜಿದಾರರು ಜಿಹೋಪದಾರ ಮೆಹಬೂಬ್ ಬಾಷ ತಂದೆ ಲೇಟ್ ಹುಸೇನ್‌ಸಾಬ್ ಪಿ, ವಯಸ್ಸು: 40 ವರ್ಷ, ವಾಸ: 18ನೇ ವಾರ್ಡ್, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ಸ್ಕೋರ್ ಕಾಲೋನಿ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ಮತ್ತು ಇತರರು

ವಿರುದ್ಧ

ಎದುರುದಾರರು:ಮಾನ್ಯ ಮುಖ್ಯಾಧಿಕಾರಿಗಳು, ಜನನ ಮತ್ತು ಮರಣ ನೋಂದಣಾಧಿಕಾರಿಗಳು ಪುರಸಭೆ, ಸಂಡೂರು.

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1 ರಿಂದ 9 ರವರ ತಾಯಿಯಾದ ಇಮ್ಮಾಂಬೀ ಗಂಡ ಹುಸೇನ್‌ಸಾಬ್ ಪಿ ಇವರು ದಿನಾಂಕ:02-08-2020ರಂದು 18ನೇ ವಾರ್ಡ್, ಸ್ಕೋರ್ ಕಾಲೋನಿ, ಸಂಡೂರು ಪಟ್ಟಣ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 25-04-2026 ಬೆಳಗ್ಗೆ 11:00 ಗಂಟೆಗೆ ಮುದ್ದತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ:18-03-2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಉಮ್ಮಾರ್ ಫಾರುಕ್ ಎಸ್
ಅರ್ಜಿದಾರರ ಪರ ವಕೀಲರು ಸಂಡೂರು

CHANGE OF NAME

I, **SRUSHTI** (old name) Resident of # 1321, Vithoba Galli, Soundalga, Belgaum, Karnataka, 591241, have changed my name as **SRUSHTI SUDESH BAGADI** (new name) henceforth I will be called and recognized by new name for all future purposes, dated: 23/03/2026.

CHANGE OF NAME

I, **PATIL SUSHAMA BABANRAO** (old name) Resident of Near Chandreshwar Temple Chandur, Chikodi, District: Belagavi,State: Karataka, Pin Code: 591213, have changed my name as **SUSHMA BHARAT PATIL** (new name) henceforth I will be called and recognized by new name for all future purposes, dated: 23/03/2026.

CHANGE OF NAME

I, **JASMEEN ITAGI (Old Name)**, have changed my name and hereafter be known and called as **JASMEEN MOHAMMEDNAWAZ JALIHAL (New Name)** for all purposes. R/o Bankers Colony, 2nd Cross, Gadag, Dist:Gadag, State:Karnataka. Submitted an affidavit dtd: 19.03.2026 through M.M. Hiremath, Notary, Gadag.

CHANGE OF NAME

I, **HANUMANTHAPPA UPPAR** (old name) Resident of #37, Dodda Oni, Near Maruti Temple, Nagashettikoppa, Keshwapur, Hubli, Dharwad, Karnataka, Pin Code: 580023, have changed my name as **HANUMANTAPPA HEMANNA UPPAR** (new name) henceforth I will be called and recognized by new name for all future purposes, dated: 23/03/2026.

CHANGE OF NAME

I, **GULNAZ WADATTI** (old name) Resident of 4th Cross Shivagiri Dharwad - 580001, have changed my name as **GULNAZ MOHAMED SADIQUE WADDATTI** (new name) henceforth I will be called and recognized by new name for all future purposes, dated: 23/03/2026.

CHANGE OF NAME

I, **SUNIL HANUMANTAPPA MUDDI** (old name) Resident of Niralagi, Guilagundi, Haveri, State: Karnataka, Pin Code: 581108, have changed my name as **SUNIL MUDDI** (new name) henceforth I will be called and recognized by new name for all future purposes, dated: 23/03/2026.

ಪಿ&ಎಸ್. ಸಿ. ನಂ : 2/2026
ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ. ಹಾವೇರಿ ಇವರ ನ್ಯಾಯಾಲಯದಲ್ಲಿ.

ಅರ್ಜಿದಾರರು :) ಶ್ರೀಮತಿ ಲಕ್ಷ್ಮೀಬಾಯಿ ಕೋಂ ವಿಠ್ಠಪ್ಪ ಕೀರ್ತೆಪ್ಪನವರ, ಸಾ॥ ಗೌಳಿ ಗಲ್ಲಿ, ಹಾವೇರಿ, ಹಾಗೂ ಇನ್ನೊಬ್ಬರು

ವಿರುದ್ಧ

ಎದುರುಗಾರರು: ಯಾರೂ ಇಲ್ಲ

ಇಸಿಯಾರ ನಾಮಾ

ಈ ಪ್ರಕರಣದಲ್ಲಿ ಅರ್ಜಿದಾರರು ಈ ಮೂಲಕ ಪತ್ರಿಕೆ ಪ್ರಕಟಣೆ ಮೂಲಕ ಹೊರಡಿಸುವ ನೋಟಿಸು ಏನೆಂದರೆ ಸದರಿ ಅರ್ಜಿದಾರರು ಪೋತಿ ವಿಠ್ಠಲ ತಂದೆ ಕೀರ್ತೆಪ್ಪ ಕೀರ್ತೆಪ್ಪನವರ ಇವರ ಹೆಸರಿನಲ್ಲಿ ದಿ. ಹಾವೇರಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ ಲಿ. ಹಾವೇರಿ ಇವರಲ್ಲಿ ಪ್ರಸ್ತುತ ಅರ್ಜಿಯ ಪ್ಯಾರಾ ನಂ 4ರ ಕೋಷ್ಟಕದಲ್ಲಿ ಕಾಣಿಸಿದಂತೆ ಹಣ ಜಮಾ ಇಟ್ಟಿದ್ದು, ಸದರಿ ಹಣವನ್ನು ಪಡೆದುಕೊಳ್ಳಲು, ಅರ್ಜಿದಾರ ನಂ. 1 ಮತ್ತು 2ನೇದವರು ಮಾತ್ರ ಪೋತಿ ವಿಠ್ಠಲ ತಂದೆ ಕೀರ್ತೆಪ್ಪ ಕೀರ್ತೆಪ್ಪನವರ ಇವರ ಸರಳ ವ ಸಮೀಪದ ವಾರಸುದಾರರು ಅಂತಾ ನಿರ್ಣಯಿಸಿ ಸಕ್ಸೇಷನ್ ಸರ್ಟಿಫಿಕೇಟ್ (ಉತ್ತರಾಧಿಕಾರಿ ಪ್ರಮಾಣ ಪತ್ರ) ಪಡೆಯುವ ಕುರಿತು ಮೇಲ್ಕಾಣಿಸಿದ ಪ್ರಕರಣವನ್ನು ದಾಖಲಿಸಿದ್ದು ಸದರ ವಿಷಯವಾಗಿ ಯಾರಾದರೂ ತಕರಾರು ವಗೈರೆ ಮಾಡುವವರು ಇದ್ದರೆ ಮಾನ್ಯ ನ್ಯಾಯಾಲಯದಲ್ಲಿ ತಾರೀಖ: 16-04-2026 ರಂದು ಬೆಳಗ್ಗೆ 11:00 ಗಂಟೆಗೆ ತಾವಾಗಲಿ ಅಥವಾ ತಮ್ಮ ಪರ ವಕೀಲರ ಪರವಾಗಿ ಆಗಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ನ್ಯಾಯಾಲಯದವರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾರದೂ ಯಾವುದೇ ರೀತಿ ತಕರಾರು ಇರುವುದಿಲ್ಲ ಅಂತಾ ಪರಿಗಣಿಸಿ ಮುಂದಿನ ಆದೇಶ ಮಾಡುವವರು ತಿಳಿಯಿರಿ.
ಈ ಇಸ್ತಿಹಾರ ನಾಮೆಯನ್ನು ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 23-03-2026 ರಂದು ಕೊಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಸಿ.ಜೆ.ಎಂ. ಹಾವೇರಿ ಇವರ ನ್ಯಾಯಾಲಯ
ಸಹಿ/-ಶ್ರೀ ಎಸ್.ಸಿ. ತರ್ಲಿ
ಅರ್ಜಿದಾರರ ಪರ ವಕೀಲರು ಹಾವೇರಿ

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-3/ಕೆಎಂಎಆರ್‌ಸಿ/2025-26/6712 ದಿನಾಂಕ: 12-03-2026.

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರಿಂದ ಸಿ.ಆ.ಪಿ.ಎಂ.ಐ.ಜಡ್ (ಕೆ.ಎಂ.ಇ.ಆರ್.ಸಿ.) ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ತಯಾರಿಸಲು ನೊಂದಾಯಿತರಾದ ಯೋಜನಾ ಸಮಾಲೋಚಕರುಗಳನ್ನು ನೇಮಿಸಲು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ **https:kppp.karnataka.gov.in** ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಸದರಿ ಕಾಮಗಾರಿಗಳ ವಿವರ ಈ ಕೆಳಗೆನಂತಿವೆ – **PWD/2025-26/SE1109, PWD/2025-26/SE1117, PWD/2025-26/SE1118, PWD/2025-26/SE1111, PWD/2025-26/SE1112, PWD/2025-26/SE1113, PWD/2025-26/SE1119, PWD/2025-26/SE1114, PWD/2025-26/SE1120, PWD/2025-26/SE1121, PWD/2025-26/SE1122, PWD/2025-26/SE1123, PWD/2025-26/SE1124, PWD/2025-26/SE1125, PWD/2025-26/SE1126, PWD/2025-26/SE1127, PWD/2025-26/SE1128, PWD/2025-26/SE0821**

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08392 266123) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ದಾಖಲೆಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿದ ದಿನಾಂಕ ಮತ್ತು ಸಮಯ: **ದಿನಾಂಕ: 20-03-2026 ರಿಂದ 01-04-2026 ರ 16.00 ಗಂಟೆವರೆಗೆ.** ಆ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ: **24-03-2026 ರಂದು 11.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಇ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **30-03-2026 ರಂದು 16.00 ಗಂಟೆಯ ವರೆಗೆ.** ಈ)ಇ-ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **01-04-2026 ರಂದು 16.00 ಗಂಟೆಯ ವರೆಗೆ.** ಉ)ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ.: **02-04-2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು.** ಊ)ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯವನ್ನು, ಪ್ರತ್ಯೇಕವಾಗಿ ತಾಂತ್ರಿಕ ಬಿಡ್ ಅನುಮೋದನೆಯಾದ ಯೋಜನಾ ಸಮಾಲೋಚಕರಿಗೆ ತಿಳಿಸಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1174/ಕೆಎಸ್‌ಎಂಸಿಎ/2025-26

CHANGE OF NAME

I, **ABDUL RAUF SOLLAPUR** (old name) Resident of Momin Mohalla Bankapur, Tq: Shiggaon, Dist: Haveri - 581202, have changed my name as **ABDUL ROF SOLLAPUR** (new name) henceforth I will be called and recognized by new name for all future purposes, dated: 23/03/2026.

CHANGE OF NAME

I, **ANUSHA NIDAGUNDI** (old name) Resident of Malagoudra Oni, Ron Gadag, Karataka 582209, have changed my name as **ANUSHA ANDANAYYA NIDAGUNDI** (new name) henceforth I will be called and recognized by new name for all future purposes, dated: 23/03/2026.

CHANGE OF NAME

I, **SYEDA SABA** (old name) Resident of #51/C, Gokul Dham, Subhash Nagar, Old Hubli, Hubli, Dharwad, State: Karnataka, Pin Code: 580024,, have changed my name as **SYEDA SABA INAMDAR** (new name) henceforth I will be called and recognized by new name for all future purposes, dated: 23/03/2026.

ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಮುಧೋಳ ಇವರ ನ್ಯಾಯಾಲಯದಲ್ಲಿ..
ಅಸಲ ದಾವಾ ನಂ.165/2025

1. ಶ್ರೀಮತಿ. ಭಾಗವ್ವ ಗಂಡ. ವಾಸಪ್ಪ ಲಮಾಣಿ. ಹಾಗೂ ಇತರರು...... ವಾದಿಯರು

ವಿರುದ್ಧ:

1.ಸೋಮಪ್ಪ ತಂದೆ. ಮಶನಪ್ಪ ಲಮಾಣಿ, ಹಾಗೂ ಇತರರು. -ಪ್ರತಿವಾದಿಯರು.

ಇವರಿಗೆ,

1. ಬಸಪ್ಪ ತಂದೆ. ಶಂಕರೆಪ್ಪ ಲಮಾಣಿ, ವಯಾ: 58 ವರ್ಷ, ಉದ್ಯೋಗ: ಒಕ್ಕಲುತನ, ಸಾಕೀನ: ಚಿಕ್ಕೂರ. ತಾ: ಮುಧೋಳ, ಜಿ: ಬಾಗಲಕೋಟೆ. 2. ಶ್ರೀಮತಿ. ಕೋಟಾ ಗಂಡ. ರಾಮು ಲಮಾಣಿ. ವಯಾ: 25 ವರ್ಷ, ಉದ್ಯೋಗ: ಮನೆಗೆಲಸ ಸಾಕೀನ: ಮುಚಖಂಡಿ ತಾಂಡಾ, ತಾ:: ಜಿ: ಬಾಗಲಕೋಟೆ.
3. ಶ್ರೀಮತಿ. ರುಕ್ಮವ್ವ ಗಂಡ. ಭೀಮಪ್ಪ ಲಮಾಣಿ, ವಯಾ: 65 ವರ್ಷ. ಉದ್ಯೋಗ: ಮನೆಗೆಲಸ. 4. ಶ್ರೀಮತಿ. ಭೀಮವ್ವ ಗಂಡ. ದ್ಯಾವಪ್ಪ ಲಮಾಣಿ, ವಯಾ: 60 ವರ್ಷ, ಉದ್ಯೋಗ: ಮನೆಗೆಲಸ, 5. ಧರ್ಮಪ್ಪ ತಂದೆ. ದ್ಯಾವಪ್ಪ ಲಮಾಣಿ, ವಯಾ: 50 ವರ್ಷ, ಉದ್ಯೋಗ: ಒಕ್ಕಲುತನ.
6. ಮುದಕಪ್ಪ ಊರ್ಫ ತಾಪರೆಪ್ಪ ತಂದೆ. ದ್ಯಾವಪ್ಪ ಲಮಾಣಿ, ವಯಾ: 45 ವರ್ಷ, ಉದ್ಯೋಗ: ಒಕ್ಕಲುತನ, 7. ಲಕ್ಷ್ಮಣ ತಂದೆ. ದ್ಯಾವಪ್ಪ ಲಮಾಣಿ, ವಯಾ: 40 ವರ್ಷ, ಉದ್ಯೋಗ: ಒಕ್ಕಲುತನ, 8. ಮಲ್ಲಪ್ಪ ತಂದೆ. ದುಂಡಪ್ಪ ಲಮಾಣಿ, ವಯಾ: 55 ವರ್ಷ, ಉದ್ಯೋಗ: ಒಕ್ಕಲುತನ,
9. ಮುತ್ತಪ್ಪ ತಂದೆ. ದುಂಡಪ್ಪ ಲಮಾಣಿ, ವಯಾ 45 ವರ್ಷ, ಉದ್ಯೋಗ: ಒಕ್ಕಲುತನ, 10. ಹಣಮಂತ ತಂದೆ. ದುಂಡಪ್ಪ ಲಮಾಣಿ. ವಯಾ: 40 ವರ್ಷ, ಉದ್ಯೋಗ: ಒಕ್ಕಲುತನ, ಅ.ನಂ.3 ರಿಂದ 10 ಇವರು ಸಾಕೀನ: ಚಿಕ್ಕೂರ, ತಾ:: ಮುಧೋಳ, ಜಿ: ಬಾಗಲಕೋಟೆ. 11. ಶ್ರೀಮತಿ. ಶಾಂತವ್ವ ಗಂಡ, ಲೋಕಪ್ಪ ಲಮಾಣಿ, ವಯಾ: 60 ವರ್ಷ, ಉದ್ಯೋಗ: ಮನೆಗೆಲಸ, 12. ಹಾಮಪ್ಪ ತಂದೆ. ಲೋಕಪ್ಪ ಲಮಾಣಿ, ವಯಾ: 30 ವರ್ಷ, ಉದ್ಯೋಗ: ಒಕ್ಕಲುತನ, 13. ಶಾಲಪ್ಪ ತಂದೆ, ತಾವರೆಪ್ಪ ಲಮಾಣಿ, ವಯಾ: 65 ವರ್ಷ, ಉದ್ಯೋಗ: ಒಕ್ಕಲುತನ, ಮೂವರೂ ಸಾಕೀನ: ಚಿಕ್ಕೂರ. ತಾ: ಮುಧೋಳ, ಜಿ: ಬಾಗಲಕೋಟೆ.
14. ಶ್ರೀಮತಿ. ಸೋಮವ್ವ ಗಂಡ. ರಾಮಪ್ಪ ಲಮಾಣಿ. ವಯಾ: 55 ವರ್ಷ, ಉದ್ಯೋಗ: ಮನೆಗೆಲಸ, ಸಾಕೀನ ತಗ್ಗಿ, ತಾ:: ಬೀಳಗಿ, ಜಿ:: ಬಾಗಲಕೋಟೆ.
15.ಶ್ರೀಮತಿ. ಗಿರಿಯವ್ವ ಗಂಡ. ಹಣಮಪ್ಪ ಲಮಾಣಿ, ವಯಾ: 55 ವರ್ಷ, ಉದ್ಯೋಗ: ಮನೆಗೆಲಸ, ಸಾಕೀನ: ನರಸಾಪುರ ತಾಂಡಾ, ತಾ: ಬದಾಮಿ, ಜಿ: ಬಾಗಲಕೋಟೆ.
16. ಶ್ರೀಮತಿ. ಲಕ್ಷ್ಮವ್ವ ಗಂಡ. ಕರಿಯಪ್ಪ ಲಮಾಣಿ, ಸಾಕೀನ: ನರಸಾಪುರ ತಾಂಡಾ, ವಯಾ: 50 ವರ್ಷ, ಉದ್ಯೋಗ: ಒಕ್ಕಲುತನ, ತಾ:: ಬದಾಮಿ. ಜಿ: ಬಾಗಲಕೋಟೆ.
17 ಶ್ರೀಮತಿ ಲಕ್ಷ್ಮವ್ವ ಗಂಡ, ದೀಲಪ್ಪ ಲಮಾಣಿ. ವಯಾ: 48 ವರ್ಷ, ಉದ್ಯೋಗ: ಮನೆಗೆಲಸ, ಸಾಕೀನ: ತೆಗ್ಗಿ, ತಾ:: ಬೀಳಗಿ, ಜಿ: ಬಾಗಲಕೋಟೆ. 18. ರಮೇಶ ತಂದೆ. ಸೋಮಪ್ಪ ಲಮಾಣಿ, ವಯಾ: 35 ವರ್ಷ, ಉದ್ಯೋಗ: ಒಕ್ಕಲುತನ,
19. ಸಂತೋಷ ತಂದೆ ಶಿಟ್ಟೆಪ್ಪ ಲಮಾಣಿ, ವಯಾ: 36 ವರ್ಷ, ಉದ್ಯೋಗ: ಒಕ್ಕಲುತನ. 20. ಸುನಲವ್ವ ತಂದೆ. ಶಿಟ್ಟೆಪ್ಪ ಲಮಾಣಿ, ವಯಾ: 23 ವರ್ಷ, ಉದ್ಯೋಗ: ಮನೆಗೆಲಸ, 21. ಶಾರವ್ವ ತಂದ. ಶಿಟ್ಟೆಪ್ಪ ಲಮಾಣಿ ವಯಾ: 21 ವರ್ಷ, ಉದ್ಯೋಗ: ಮನೆಗೆಲಸ, ಅ.ನಂ.17 ರಿಂದ 20 ಇವರು ಸಾಕೀನ: ಚಿಕ್ಕೂರ, ತಾ:: ಮುಧೋಳ, ಜಿ: ಬಾಗಲಕೋಟೆ 22. ಶ್ರೀಮತಿ. ಸುಮ್ಮವ್ವ ಗಂಡ. ಹಾಲಪ್ಪ ಲಮಾಣಿ, ವಯಾ: 48 ವರ್ಷ, ಉದ್ಯೋಗ: ಮನೆಗೆಲಸ, ಸಾಕೀನ: ತೆಗ್ಗಿ, ತಾ:: ಬೀಳಗಿ, ಜಿ:: ಬಾಗಲಕೋಟೆ.
23. ರಂಕ್ರೆಪ್ಪ ತಂದೆ. ಶಿವಪ್ಪ ಲಮಾಣಿ, ವಯಾ: 63 ವರ್ಷ, ಉದ್ಯೋಗ: ಒಕ್ಕಲುತನ, ಸಾಕೀನ: ಚಿಕ್ಕೂರ, ತಾ:: ಮುಧೋಳ, ಜಿ:: ಬಾಗಲಕೋಟೆ 24. ಸುಜಾತಾ ತಂದೆ. ಮುತ್ತಪ್ಪ ಲಮಾಣಿ, ವಯಾ: 18 ವರ್ಷ, ಉದ್ಯೋಗ: ಮನೆಗೆಲಸ, ಸಾಕೀನ: ಚಿಕ್ಕೂರ, ತಾ:: ಮುಧೋಳ, ಜಿ:: ಬಾಗಲಕೋಟೆ. 25. ಮನು ತಂದೆ. ಶಿವಪ್ಪ ಲಮಾಣಿ, ವಯಾ: 32 ವರ್ಷ, ಉದ್ಯೋಗ: ಒಕ್ಕಲುತನ, ಸಾಕೀನ: ಚಿಕ್ಕೂರ ತಾ:: ಮುಧೋಳ, ಜಿ: ಬಾಗಲಕೋಟೆ.
26. ಶ್ರೀಮತಿ. ಶೀಲವ್ವ ಗಂಡ. ಗೇಮು ಲಮಾಣಿ, ವಯಾ: 52 ವರ್ಷ, ಉದ್ಯೋಗ: ಮನೆಗೆಲಸ, ಸಾಕೀನ: ಜಲಗೇರಿ ತಾಂಡಾ ತಾ:: ಬದಾಮಿ, ಜಿ:: ಬಾಗಲಕೋಟೆ. 27. ಶ್ರೀಮತಿ. ಶಾರಾದಾ ಗಂಡ. ರಾಮಪ್ಪ ಲಮಾಣಿ, ವಯಾ: 32 ವರ್ಷ, ಉದ್ಯೋಗ: ಮನೆಗೆಲಸ, 28. ಹಣಮಂತ ತಂದೆ. ಬೋಜಪ್ಪ ಲಮಾಣಿ, [illegible]

CHANGE OF NAME

I, **SHEKHARGOUDA PATIL** (old name) Resident of Plot No: 64, Melgeri Plot, Byadgi, Dt: Haveri 581106, have changed my name as **SHEKHARGOUDA SIDDANAGOUDA PATIL** (new name) henceforth I will be called and recognized by new name for all future purposes, dated: 23/03/2026.

CHANGE OF NAME

I, **BIBI SAKINA** (Old name) R/o: Abu House, Bunder Road, Navayat Colony, Bhatkal 581320, Uttara Kannada, Karnataka, have changed my name as **BIBI SAKINA MOHAMMED FAROOQUE GAWAI W/O: MOHAMED FAROOQUE GAWAI** (new name) henceforth I will be called and recognized by new name for all future purposes, dated: 23/03/2026.

ಎಮ್. ಸಿ. ನಂ.80/2025
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು, ಶಿಗ್ಗಾಂವ ಇಂದು ಸವಣೂರ ಇವರ ನ್ಯಾಯಾಲಯದಲ್ಲಿ,

ವಾದಿ :1. ಶ್ರೀ ರಮೇಶ ತಂದೆ ಶಂಕ್ರಪ್ಪ ಲಮಾಣಿ

ವಿರುದ್ಧ

ಪ್ರತಿವಾದಿ : ಶ್ರೀ ಗೀತಾ ಕೋಂ ರಮೇಶ ಲಮಾಣಿ ಸಾ॥ ಅಲ್ಲಿಪೂರ, ತಾ॥ ಸವಣೂರ

ಪತ್ರಿಕಾ ಪ್ರಕಟಣೆ

ಈ ಮೂಲಕ ಪತ್ರಿಕಾ ಪ್ರಕಟಣೆ ಮುಖಾಂತರ ತಿಳಿಸುವುದೇನೆಂದರೆ, ಅರ್ಜಿದಾರರು ನಿಮ್ಮ ಮೇಲೆ ಮೇಲ್ಕಂಡ ಪ್ರಕರಣದಲ್ಲಿ ಈ ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರ ದಾವೆಯ ಮುದ್ದತ್ತು ದಿನಾಂಕ 24-04-2026ರಂದು ನಿಗಧಿಪಡಿಸಿದ್ದು ಆ ದಿನ ಬೆಳಗ್ಗೆ11-00 ಗಂಟೆಗೆ ನ್ಯಾಯಾಲಯದ ಮುಂದೆ ನೀವಾಗಲಿ ನಿಮ್ಮ ಪರವಾಗಿ ವಕೀಲರ ಮೂಲಕ ಹಾಜರಾಗಿ ನಿಮ್ಮ ತಕರಾರು ಇದ್ದರೆ ಸಲ್ಲಿಸಬೇಕು. ಇಲ್ಲವಾದಲ್ಲಿ ಏಕತರ್ಫಿ ಆದೇಶ ಮಾಡಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ, ನನ್ನ ಸಹಿ ಮಾಡಿ ಇಂದು ದಿ: 23-03-2026 ರಂದು ಕೊಡಲ್ಪಟ್ಟಿತು.

ಸ್ಥಳ: ಸವಣೂರ
ದಿನಾಂಕ : 23-03-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಶಿರಸ್ತೆದಾರರು,
ಹಿರಿಯ ದಿವಾಣಿ ನ್ಯಾಯಾಲಯ
ಶಿಗ್ಗಾಂವ, ಇಂದು ಸವಣೂರ
ಸಹಿ/-(ಎ. ಬಿ. ಪುರತಿಡ್ಡಿ)
ಅರ್ಜಿದಾರರ ಪರ ವಕೀಲರು.

ಮಾನ್ಯ ಘನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಸಂಡೂರು
ಸಿಆರ್.ಎಲ್.ಎಮ್.ಸಿ. ಸಂಖ್ಯೆ : 472 /2026

ಆರ್ಜಿದಾರರು :1)ಯಲ್ಲಮ್ಮ ಗಂಡ ದಿವಂಗತ ಹೂಲೆಪ್ಪ, ವಯಸ್ಸು: 70 ವರ್ಷ ವಾಸ: ಸೋಮಲಾಪುರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.
2) ಹನುಮಕ್ಕ ಗಂಡ ದುರುಗಪ್ಪ, ವಯಸ್ಸು: 68 ವರ್ಷ, ವಾಸ: ಬನ್ನಿಕಲು ಗುಡಿ ಹತ್ತಿರ, ಕೋರಣಗಲ್ಲು ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ.

ವಿರುದ್ಧ

ಎದುರುದಾರರು:ಮಾನ್ಯ ತಹಶೀಲ್ದಾರರು ಜನನ ಮತ್ತು ಮರಣ ನೋಂದಣಾಧಿಕಾರಿಗಳು, ಸಂಡೂರು.

ನೋಟಿಸ್

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರ 1 ಮತ್ತು 2ರವರ ತಂದೆಯವರಾದ ಕೊಮಾರಪ್ಪ ತಂದೆ ಈರಪ್ಪ ಇವರು ದಿನಾಂಕ: 10-03-1996 ರಂದು ಸೋಮಲಾಪುರ ಗ್ರಾಮ, ಸಂಡೂರು ತಾಲೂಕು, ಬಳ್ಳಾರಿ ಜಿಲ್ಲೆ ನಮ್ಮ ಮನೆಯಲ್ಲಿ ಸ್ವಾಭಾವಿಕ ಮರಣ ಹೊಂದಿರುವುದರಿಂದ ಸದರಿಯವರು ಮರಣ ಪ್ರಮಾಣ ಪತ್ರಕ್ಕೆ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿರುತ್ತಾರೆ. ಆದುದ್ದರಿಂದ ಸದರಿ ಮರಣ ಪ್ರಮಾಣ ಪತ್ರ ದಾಖಲಿಸಲು ಯಾರದರು ಯಾವುದೇ ರೀತಿಯ ತಂಟೆ ತಕರಾರು ಇದ್ದಲ್ಲಿ ಅವರ ಹಾಜರಾತಿಗೆ ದಿನಾಂಕ: 30-04-2026 ಬೆಳಗ್ಗೆ 11:00 ಗಂಟೆಗೆ ಮುದ್ದುತ್ತು ನೇಮಿಸಿದ್ದು, ಸದರಿ ದಿನಾಂಕದಂದು ಖುದ್ದಾಗಿ ತಾವಾಗಲೀ ಅಥವಾ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸಬಹುದು. ಇದಕ್ಕೆ ತಪ್ಪಿದಲ್ಲಿ ನ್ಯಾಯಾಲಯ ಏಕತರ್ಫಿ ಮುಂದಿನ ಆದೇಶ ಕೈಗೊಳ್ಳಲಾಗುವುದು. ನ್ಯಾಯಾಲಯದ ಮೊಹರುನೊಂದಿಗೆ ದಿನಾಂಕ: 18-03-2026 ರಂದು ನೀಡಲಾಯಿತು.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
ಹೆಚ್.ಕುಮಾರಸ್ವಾಮಿ
ಅರ್ಜಿದಾರರ ಪರ ವಕೀಲರು ಸಂಡೂರು

ನಗರಸಭೆ ಕಾರ್ಯಾಲಯ ಹಾವೇರಿ ಜಿಲ್ಲಾ: ಹಾವೇರಿ
CITY MUNICIPAL COUNCIL HAVERI

ವೆಬ್ ಸೈಟ್ : www.havericity.mrc.gov.in ಇ-ಮೇಲ್ : itstaff_ulb_haveri@yahoo.com
ದೂರವಾಣಿ ಕಛೇರಿ : 08375-232444 ಸಹಾಯವಾಣಿ : 080-23108108

ಕ್ರ.ಸಂ:ನಸಹಾ/ತಾ.ವಿ/ಪಹಿ/ /2025-26 ದಿನಾಂಕ : 17-03-2026

ಟೆಂಡರ್ ಪ್ರಕಟಣೆ

ಈ ಮೂಲಕ ಯಾವತ್ತೂ ಗುತ್ತಿಗೆದಾರರಿಗೆ/ ಪೂರೈಕೆದಾರರಿಗೆ ತಿಳಿಯ ಪಡಿಸುವುದೇನೆಂದರೆ, ಇ-ಪ್ರಕ್ಯೂರಮೆಂಟ್ ಮೂಲಕ 15ನೇ ಹಣಕಾಸು ಯೋಜನೆಯ ಅನುದಾನದ ಬಡ್ಡಿ ಮೊತ್ತ ರೂ.12.00 ಲಕ್ಷದ ಕಾಮಗಾರಿಯ ಕುರಿತು ಟೆಂಡರ್‌ನ್ನು ಕರೆಯಲಾಗಿದೆ. ಆಸಕ್ತವುಳ್ಳ ಗುತ್ತಿಗೆದಾರರು ತಮ್ಮ-ತಮ್ಮ ದರಗಳನ್ನು, ಈ ಕೆಳಕಾಣಿಸಿದ ವೆಬ್‌ಸೈಟ್ ಮೂಲಕ ನಮೂದಿಸಬಹುದಾಗಿದೆ. kppp.karnataka.gov.in ನಲ್ಲಿ ನೋಡಿ ತಿಳಿದುಕೊಳ್ಳಬಹುದಾಗಿದೆ.

ಸಹಿ/-
ಪೌರಾಯುಕ್ತರು, ನಗರಸಭೆ, ಹಾವೇರಿ.

Dipr/hvr/837/2025-26

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಲೋ.ಇ, ಉಡುಪಿ ವಿಭಾಗ – ಉಡುಪಿ – 576101.

ದೂರವಾಣಿ & ಫ್ಯಾಕ್ಸ್: (0820) 2531802

ನಂ : ಪಿಡಬ್ಲ್ಯೂಡಿ:ಯುಡಿಎನ್: ಎನ್‌ಐಟಿ: 55:2025-26: ಎಇ-2 ದಿ: 23.03.2026

ಅಲ್ಪಾವಧಿ ಸರ್ವೀಸ್ ಟೆಂಡರ್ ಪ್ರಕಟಣೆ

2025-26ನೇ ಸಾಲಿನಲ್ಲಿ ಅನುಮೋದನೆಯಾದ ಕುಂದಾಪುರ ತಾಲೂಕು ತೀರ್ಥಹಳ್ಳಿ-ಕುಂದಾಪುರ ರಾಜ್ಯ ಹೆದ್ದಾರಿಯಲ್ಲಿಯ ಕಿ.ಮೀ.75.68 ರಲ್ಲಿ (ಕಂಡ್ಲೂರು)ಯ ಸೇತುವೆ ಕಾಮಗಾರಿಗೆ ವಿಸ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಲು ರೂ. 46.00 ಲಕ್ಷದ (ಜಿ.ಎಸ್.ಟಿ ಹೊರತುಪಡಿಸಿ) DPR ಉಪಕಾಮಗಾರಿಗೆ Registered Empanelled Consultant for DPR under KPWD ರವರಿಂದ 'ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್' "kppp.karnataka.gov.in" ಮುಖಾಂತರ ಟೆಂಡರನ್ನು, ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್ - 2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ "kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02.04.2026ರ ಸಂಜೆ 5.30ರ ವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

ವಾಸಾಇ/ಸನಿಉ/ಕೆಎಸ್‌ಎಂಸಿಎ/809/25-26 ದಿ: 23.03.2026

ಸಹಾಯಕ ನಿರ್ದೇಶಕರ ಕಾರ್ಯಾಲಯ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ

ಗದಗ ರಸ್ತೆ, ಜಿಲ್ಲಾ ಕ್ರೀಡಾಂಗಣ, ಕೊಪ್ಪಳ

ದೂರವಾಣಿ :**08539-230121** email :adysskoppal@gmail.com

ಸಂಖ್ಯೆ: ಸನಿ/ಯುಸಕ್ರೀಇ/ಕ್ರೀಊಪೂ/ಕೊ/ಸಿಆರ್-48(ಎ)/2025-26/1008 ದಿನಾಂಕ: 23.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ಗದಗ ರಸ್ತೆ, ಕೊಪ್ಪಳ ಕರ್ನಾಟಕ ಇವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕೆಳಕಾಣಿಸಿದ ಕ್ರೀಡಾ ವಸತಿ ಶಾಲೆ/ನಿಲಯದ ಕ್ರೀಡಾಪಟುಗಳ ದೈನಂದಿನ ಊಟೋಪಹಾರ ಸರಬರಾಜು ಮಾಡಲು ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಲು ಕೆಪಿಪಿಪಿ ಪೋರ್ಟಲ್ ಮೂಲಕ ಕೆಳಕಾಣಿಸಿದ ಟೆಂಡರ್ ಆಹ್ವಾನಿಸಿದೆ.

ಟೆಂಡರ್‌ನ ವಿವರ : (1) ಕ್ರೀಡಾ ವಸತಿ ಶಾಲೆ/ನಿಲಯ, ಕೊಪ್ಪಳ ಕೊಪ್ಪಳ ಜಿಲ್ಲೆ. ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) : **ರೂ.58,50,000=00** ಇ.ಎಂ.ಡಿ ಮೊತ್ತ (ರೂಗಳಲ್ಲಿ) : **ರೂ.1,17,000/-** (2) ಟೆಂಡರ್ ಆಹ್ವಾನಿಸುವ ದಿನಾಂಕ : **24.03.2026 ಸಮಯ: 12.00 ಅಪರಾಹ್ನ** (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : **07.04.2026 ಸಮಯ: 4.00 ಸಾಯಂಕಾಲ** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **09.04.2026 ಸಮಯ: 4.00 ಸಾಯಂಕಾಲ** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ : ತದ ನಂತರ ತಿಳಿಸಲಾಗುವುದು.

ಕ್ರ ಸಂ	ವಿವರಗಳು	ಕ್ರೀಡಾಪಟುಗಳ ಸಂಖ್ಯೆ (ಅಂದಾಜು)	ಒಬ್ಬ ಕ್ರೀಡಾಪಟುವಿಗೆ ದಿನ ಒಂದಕ್ಕೆ ನಿಗಧಿಪಡಿಸಿದ ಗರಿಷ್ಠ ಮೊತ್ತ (ರೂಗಳಲ್ಲಿ)	ವಾರ್ಷಿಕ ಅಂದಾಜು 325 ದಿನಗಳಿಗೆ ಆಹಾರ ಪೂರೈಕೆಗೆ ತಗಲುವ ಒಟ್ಟು ವೆಚ್ಚ (ರೂಗಳಲ್ಲಿ)
1	5ನೇ ತರಗತಿಯಿಂದ 10ನೇ ತರಗತಿವರೆಗಿನ ಕ್ರೀಡಾಪಟುಗಳು	80	225/-	58,50,000=00
	ಒಟ್ಟು	80		58,50,000=00

ಆಸಕ್ತ ಟೆಂಡರ್‌ದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು ಹಾಗೂ ಟೆಂಡರ್ ದಾಖಲೆಗಳನ್ನು ಉಚಿತವಾಗಿ ಮೇಲ್ಕಂಡ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು.

ಸಹಿ/- ಸಹಾಯಕ ನಿರ್ದೇಶಕರು
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಕೊಪ್ಪಳ ಜಿಲ್ಲೆ.

ವಾ.ಸಾ.ಇ/ಕೊಪ್ಪಳ/765/ದೇಶಪಾಂಡೆಪಬ್ಲಿಸಿಟಿ/2025-26

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ,

ವಿದ್ಯುತ್ ವಿಭಾಗ, ಕೆ.ಆರ್.ವೃತ್ತ, ಬೆಂಗಳೂರು.

ಸಂ:ಕಾ.ಇಂ.(ವಿ)/ಲೋ.ಇ./ವಿದ್ಯುತ್/2025-26/3032 ದಿನಾಂಕ:23.03.2026

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು ಇವರ ವತಿಯಿಂದ ಈ ಕೆಳಕಂಡ ಕಾಮಗಾರಿಗಳನ್ನು KW-3 STD ಷರತ್ತಿಗೊಳಪಟ್ಟಂತೆ ಕೆ.ಪಿ.ಪಿ.ಪಿ. ಮೂಲಕ ಅಲ್ಪಾವಧಿ ಎರಡನೇ ಕರೆಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಕೆಳಕಂಡಂತಿವೆ.

Sl. No.	WORK INDENTS	Work Value (Rs.in Lakhs)
1	PWD/2025-26/EL/WORK_INDENT29344 Call-2 (Others)	59.31
2	PWD/2025-26/EL/WORK_INDENT29169 Call-2 (Others)	63.28

ಮೇಲಿನ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಛಿಸುವವರು ವೆಬ್‌ಸೈಟ್: **https:// kppp.karnataka.gov.in** ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು **ದಿನಾಂಕ:23.03.2026 ರಿಂದ 30.03.2026, 16.00 ಗಂಟೆಯವರೆಗೆ** ಹಾಗೂ ಭರ್ತಿ ಮಾಡಿದ ಟೆಂಡರ್ ಹಿಂತಿರುಗಿಸುವ **ದಿನಾಂಕ: 30.03.2026 ರಂದೆ 16.00 ಗಂಟೆಯವರೆಗೆ** ನಿಗದಿಪಡಿಸಲಾಗಿದೆ. ಟೆಂಡರ್ ವಿವರಗಳನ್ನು, Karnataka Public Procurement Portal ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ)
ಲೋಕೋಪಯೋಗಿ ವಿದ್ಯುತ್ ವಿಭಾಗ, ಬೆಂಗಳೂರು.
ವಾಸಾಸಂಇ/ಉನಿ-ಸಿ.ಪಿ/6392/ಕೆಎಸ್‌ಎಂಸಿಎ/2025-26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-1/ಟೆಂಡರ/2025-26/8841 ದಿನಾಂಕ: 20/03/2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ ಅಡಿ 1 ಕಾಮಗಾರಿ ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ರೂ. 400.00 ಲಕ್ಷ ಇರುವ ಕಾಮಗಾರಿಗೆ ಟೆಂಡರ್ ಆವ್ಹಾನಿಸಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ : 26-03-2026 ರಂದು (11.00 ಗಂಟೆಗೆ) 2) ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 27-03-2026 (ಸಾಯಂಕಾಲ 5.30 ಗಂಟೆಯವರೆಗೆ) 3) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 30-03-2026 (ಸಾಯಂಕಾಲ 5.00 ಗಂಟೆಯವರೆಗೆ) 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 01-04-2026 (ಸಾಯಂಕಾಲ 4.30 ಗಂಟೆಗೆ)
5) ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ" 6) ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-2133/KSMCA/2025-26

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

KARNATAKA RURAL INFRASTUCTURE DEVELOPMENT LTD.

(Formerly Karnataka Land Army Corporation Limited)
No.1106, 10th Main Road, RPC Layout, Vijayanagar, Bengaluru - 560040

ಸಂ: ಕಾಪಾಅ-4/ಕೆಆರ್‌ಐಡಿಎಲ್/ಟೆಂಡರ್/2025-26/1287 ದಿನಾಂಕ:23.03.2026

ಇ-ಟೆಂಡರ್ ಅಧಿಸೂಚನೆ

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (KRIDL) ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಕಾರ್ಯಪಾಲಕ ಇಂಜಿನಿಯರ್, BBMP ವಿಭಾಗ-4 ಅವರು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (KPPP) ಮೂಲಕ ಎರಡು ಕವರ್ ಪದ್ಧತಿಯ ಇ-ಟೆಂಡರ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಟೆಂಡರ್ ಸೂಚನೆ ಸಂಖ್ಯೆ (KRIDL/2025-26/RD/WORK_INDENT 43, 45 and 46) ಅಡಿಯಲ್ಲಿ ಪ್ರತಿ ಕಾಮಗಾರಿಯ ಅಂದಾಜು ಯೋಜನಾ ವೆಚ್ಚ ರೂ.995.00 ಲಕ್ಷಗಳು ಹಾಗೂ EMD ಮೊತ್ತ ರೂ.13.50 ಲಕ್ಷಗಳು ಆಗಿರುತ್ತದೆ. ಆಸಕ್ತ ಗುತ್ತಿಗೆದಾರರು/ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು KPPP ವೆಬ್‌ಸೈಟ್ https://kppp.karnataka.gov.in ಮೂಲಕ ಮಾತ್ರ ಟೆಂಡರ್ ವಿವರಗಳನ್ನು ವೀಕ್ಷಿಸಿ, ಡೌನ್‌ಲೋಡ್ ಮಾಡಿ ಹಾಗೂ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.
ಟೆಂಡರ್ ವೇಳಾಪಟ್ಟಿ ಕೆಳಗಿನಂತಿದೆ:

ಟೆಂಡರ್ ಪ್ರಕಟಣೆಯ ದಿನಾಂಕ	23.03.2026
ಆನ್‌ಲೈನ್ ಪ್ರಶ್ನೆಗಳಿಗಾಗಿ ಕೊನೆಯ ದಿನಾಂಕ	30.03.2026, 17:30
ಪ್ರಿ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ	02.04.2026, 11:30
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	13.04.2026, 15:00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	15.04.2026, 15:30
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	22.04.2026, 15:30

ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in.** ವೆಬ್‌ಸೈಟ್‌ಗೆ ಭೇಟಿ ನೀಡಿ

ಸಹಿ/- ಕಾರ್ಯಪಾಲಕ ಅಭಿಯಂತರರು-4,
ಕೆ.ಆರ್.ಐ.ಡಿ.ಎಲ್, ಬೆಂಗಳೂರು

ಡಿಐಪಿಆರ್/ಸಿಪಿ/6400/ಸಿಸಿಎಲ್/2025-26

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು ದಕ್ಷಿಣ ಜಿಲ್ಲೆ
ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ-562159

Phone: 080-27274108/27276074, E-Mail: ka.ramanagara.dudc@gmail.com

ಸಂ.: ರಾಜಿನಕೋ/ಎಂಯುಎನ್(1)/3rd Party Inspection/ಸಿಆರ್/42/2025-26 ದಿನಾಂಕ: 18.03.2026

ಟೆಂಡರ್ ಅಧಿಸೂಚನೆ

ಬೆಂಗಳೂರು ದಕ್ಷಿಣ ಜಿಲ್ಲೆಯ ನಗರಸಭೆ-ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಪುರಸಭೆ-ಬಿಡದಿ, ಮಾಗಡಿ ಮತ್ತು ಪ.ಪಂ-ಹಾರೋಹಳ್ಳಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಯೋಜನೆ/ಅನುದಾನಗಳಡಿ ಕೈಗೊಳ್ಳುವ ಅಭಿವೃದ್ಧಿ/ನಿರ್ವಹಣಾ ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗೆ 3ನೇ ವ್ಯಕ್ತಿ ತಪಾಸಣೆ ಸಮಲೋಚಕರ ಏಜೆನ್ಸಿ ನೇಮಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಗುತ್ತಿಗೆ ಅವಧಿ
1	ಇಂಡೆಂಟ್ ಸಂಖ್ಯೆ DMA/2025-26 SE7493	86.04	1.29	One year from the date of award

ಆಸಕ್ತಿಯುಳ್ಳ ಬಿಡ್‌ದಾರರು ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್‌ನ್ನು, ಹಾಗೂ ನಿಗಧಿಪಡಿಸಿರುವ ಇ.ಎಂ.ಡಿ. ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ವಿದ್ಯುನ್ಮಾನವಾಗಿ ಸಲ್ಲಿಸುವುದು.

1) ಪೂರ್ವಭಾವಿ ಸಭೆ (Pre-bid) **ದಿನಾಂಕ: 24.03.2026 ರಂದು ಮಧ್ಯಾಹ್ನ 3:00 ಗಂಟೆಗೆ. 2)** ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು **ಕೊನೆಯ ದಿನಾಂಕ: 07.04.2026 ರಂದು ಸಂಜೆ 05.00 ಗಂಟೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 09.04.2026 ರಂದು ಸಂಜೆ 5:30 ಗಂಟೆಗೆ.**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಈ ಕಚೇರಿಯ ಇ-ಮೇಲ್ ಮೂಲಕ ಪಡೆಯಬಹುದು. **ಸೂಚನೆ:-1)** ಬಿಡ್‌ದಾರರು ಆರ್ಥಿಕ ಬಿಡ್‌ನಲ್ಲಿ ನಕರಾತ್ಮಕ/ಅನಿಯಮಿತ ದರವನ್ನು ನಮೂದಿಸಿದ್ದಲ್ಲಿ ಬಿಡ್‌ನ್ನು ತಿರಸ್ಕರಿಸಲಾಗುವುದು.

ಸಹಿ/- **ಯೋಜನಾ ನಿರ್ದೇಶಕರು**
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.

DIPR/BSD/715/SA/2025-26

ಕಿರುಸುದ್ದಿ

ವಯಸ್ಸು 60 ಆದ್ರೇಲೂ ಆಡ್ತಾರಂತೆ ಧೋನಿ!

ಚೆನ್ನೈ: ವಯಸ್ಸು 60 ಆದ್ರೇಲೂ ಐಪಿಎಲ್‌ನಲ್ಲಿ ಧೋನಿ ಆಡ್ತಾರಂತೆ! ಹೌದು, ಐಪಿಎಲ್ ಪೂರ್ವಭಾವಿಯಾಗಿ ನಡೆದ ಸಿಎಸ್‌ಕೆ ರಾರ್ ಕಾರ್ಯಕ್ರಮದಲ್ಲಿ ನಟ ಶಿವಕಾರ್ತಿಕೇಯನ್, ನೀವು ಐಪಿಎಲ್‌ನಿಂದ ನಿವೃತ್ತಿ ಪಡೆಯುವಂತೆ ಕಾಣಿಸುತ್ತಿಲ್ಲ, ವಯಸ್ಸು 60 ದಾಟಿದ ಮೇಲೂ ಸಿಎಸ್‌ಕೆ ಪರ ಆಡುತ್ತೀರಾ? ಎಂದು ಪ್ರಶ್ನಿಸಿದ್ದರು. ಇದಕ್ಕೆ ಧೋನಿ ನಗುತ್ತಲೇ, ತುಂಬಾ ಕಷ್ಟ ಎಂದಿದ್ದಾರೆ. ನಿಮ್ಮ ಫಿಟ್ನೆಸ್ ನೋಡಿದರೆ ಹಾಗೆ ಅನಿಸುತ್ತಿಲ್ಲ ಎಂದು ಶಿವಕಾರ್ತಿಕೇಯನ್ ಹೇಳಿದ್ದು, ಖಂಡಿತಾ ಪ್ರಯತ್ನಿಸುತ್ತೇನೆ ಎಂದು ಧೋನಿ ಪ್ರತಿಕ್ರಿಯೆ ನೀಡಿದ್ದಾರೆ. ಧೋನಿ ಉತ್ತರ ಕೇಳುತ್ತಿದ್ದಂತೆ ಇಡೀ ಚೆಪಾಕ್ ಮೈದಾನದಲ್ಲಿ ಅಭಿಮಾನಿಗಳ ಹರ್ಷೋದ್ಗಾರ ಮುಗಿಲುಮುಟ್ಟಿತ್ತು.

ಮಯಾಮಿ ಓಪನ್: ಹೊರಬಿದ್ದ ಅಲ್ಕರಾಜ್

ಮಯಾಮಿ: ವಿಶ್ವದ ಅಗ್ರ ಶ್ರೇಯಾಂಕದ ಟೆನಿಸಿಗ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮಯಾಮಿ ಓಪನ್ 2026ರ ಮೂರನೇ ಸುತ್ತಿನಲ್ಲೇ ಹೊರಬಿದ್ದು ದೊಡ್ಡ ಆಘಾತಕ್ಕೊಳಗಾಗಿದ್ದಾರೆ. ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸೆಬಾಸ್ಟಿಯನ್ ಕೋರ್ಡಾ ವಿರುದ್ಧ 3-6, 7-5, 4-6 ಸೆಟ್‌ಗಳ ಅಂತರದಿಂದ ಸೋಲುಂಡು ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. ಕಳೆದ ವಾರ ನಡೆದಿದ್ದ ಇಂಡಿಯನ್ ವೆಲ್ಸ್ ಸೆಮಿಫೈನಲ್‌ನಲ್ಲಿ ಡೇನಿಲ್ ಮೆಡ್ವೆಡೆವ್ ಅವರ ವಿರುದ್ಧ ಸೋಲುಂಡು ಹೊರಬಿದ್ದಿದ್ದರು.

ಜಿಮ್ನಾಸ್ಟ್ ಹರ್ಷಿತ್‌ಗೆ ಸ್ವರ್ಣ

ಹೊಸದಿಲ್ಲಿ: ಜರ್ಮನಿಯ ಸ್ಟಟ್‌ಗಾರ್ಟ್‌ನಲ್ಲಿ ನಡೆದ ಪ್ರತಿಷ್ಠಿತ ಅಂತಾರಾಷ್ಟ್ರೀಯ ಜಿಮ್ನಾಸ್ಟಿಕ್ ಸ್ಪರ್ಧೆ ಡಿಟಿಬಿ ಪೋಕಲ್ 2026ರಲ್ಲಿ ಭಾರತೀಯ ಜಿಮ್ನಾಸ್ಟ್ ಹರ್ಷಿತ್ ದಾಮೋದರನ್ ಸ್ವರ್ಣ ಪದಕ ಗೆದ್ದುಕೊಂಡಿದ್ದಾರೆ. ಜೂನಿಯರ್ ವಿಶ್ವಕಪ್ ಪುರುಷರ ವೋಲ್ಟ್ ವಿಭಾಗದಲ್ಲಿ ಒಟ್ಟು 13.666 ಅಂಕಗಳನ್ನು ಸಂಪಾದಿಸುವ ಮೂಲಕ ಸ್ವರ್ಣ ಪದಕಕ್ಕೆ ಮುತ್ತಿಟ್ಟಿದ್ದಾರೆ. ಬಲಿಷ್ಠ ಅಂತಾರಾಷ್ಟ್ರೀಯ ಸ್ಪರ್ಧಿಗಳ ನಡುವೆ ನಿಖರ, ಶಕ್ತಿ ಮತ್ತು ಸಮತೋಲನದಿಂದ ಕೂಡಿದ ಪ್ರದರ್ಶನ ನೀಡಿ ಗಮನಸೆಳೆದ ಹರ್ಷಿತ್ ಭಾರತೀಯ ಜಿಮ್ನಾಸ್ಟಿಕ್ ಇತಿಹಾಸದಲ್ಲಿ ಮಹತ್ವದ ಸಾಧನೆಗೈದಿದ್ದಾರೆ. ಹರ್ಷಿತ್ ಸಾಧನೆಯಿಂದ ಭಾರತೀಯ ಜಿಮ್ನಾಸ್ಟಿಕ್ ವಿಭಾಗ ಮುನ್ನೆಲೆಗೆ ಬಂದಿದೆ.

ಕ್ಯಾಂಡಿಡೇಟ್ಸ್ ಕಪ್‌ನಿಂದ ಹೊರಗುಳಿದ ಹಂಪಿ

ಹೊಸದಿಲ್ಲಿ: ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ವೈಯಕ್ತಿಕ ಸುರಕ್ಷತೆಯ ಕಾರಣಗಳನ್ನು ನೀಡಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೊನೆರು ಹಂಪಿ ಅವರು ಸೈಪ್ರಸ್‌ನಲ್ಲಿ ನಡೆಯಲಿರುವ 2026ರ ಫೀಡೆ ಮಹಿಳಾ ಕ್ಯಾಂಡಿಡೇಟ್ಸ್ ಪಂದ್ಯಾವಳಿಯಿಂದ ಹಿಂದೆ ಸರಿದಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಪ್ರಕಟಣೆ ಮೂಲಕ ತಮ್ಮ ನಿರ್ಧಾರವನ್ನು ಹಂಪಿ ತಿಳಿಸಿದರು.

ವಿದೇಶಿ ಕ್ರಿಕೆಟಿಗರಿಗೆ ಪಾಕ್ ಉಗ್ರ ಸಂಘಟನೆ ಬೆದರಿಕೆ

ಇಸ್ಲಾಮಾಬಾದ್: ಪಿಎಸ್‌ಎಲ್ 2026ರ ಆವೃತ್ತಿಯಲ್ಲಿ ಪಾಲ್ಗೊಂಡರೆ ಪಂದ್ಯಾವಳಿಗೆ ಅಡ್ಡಿಪಡಿಸುವುದಾಗಿ ವಿದೇಶಿ ಆಟಗಾರರಿಗೆ ಪಾಕಿಸ್ತಾನದ ಉಗ್ರ ಸಂಘಟನೆಯೊಂದು ಬೆದರಿಕೆಯೊಡ್ಡಿದೆ. ಆಸ್ಟ್ರೇಲಿಯಾದ ಡೇವಿಡ್ ವಾರ್ನರ್, ಸ್ಟೀವ್ ಸ್ಮಿತ್ ಹಾಗೂ ನ್ಯೂಜಿಲೆಂಡ್ ಆಟಗಾರ ಡೇರಿಲ್ ಮಿಚೆಲ್ ಅವರಿಗೆ ಉಗ್ರ ಸಂಘಟನೆ ಜಮಾತ್-ಉಲ್-ಅಹ್ರಾರ್ ಟೂರ್ನಿಯಲ್ಲಿ ಪಾಲ್ಗೊಳ್ಳದಂತೆ ಬೆದರಿಕೆಯೊಡ್ಡಿದೆ. ಮಧ್ಯಪ್ರಾಚ್ಯ ಯುದ್ಧ ಹಿನ್ನೆಲೆ ಪಾಕ್ ತೈಲ, ಅನಿಲ ಕೊರತೆ ಸಹಿತ ಆರ್ಥಿಕ ಸಂಕಷ್ಟ ಎದುರಿಸುತ್ತಿರುವಾಗ ಮನರಂಜನೆಗಿದು ಸೂಕ್ತವಾದ ಸಮಯವಲ್ಲ ಎಂದು ಜಮಾತುಲ್ ಪ್ರಕಟಣೆ ಹೊರಡಿಸಿದೆ. ಬೆದರಿಕೆಯ ಬೆನ್ನಲ್ಲೇ ಸ್ಮಿತ್ ಲಾಹೋರ್ ವಿಮಾನ ನಿಲ್ದಾಣದಲ್ಲಿ ಬಂದಿಳಿದಿದ್ದಾರೆ.

ಐಪಿಎಲ್ ಉದ್ಘಾಟನಾ ಪಂದ್ಯಕ್ಕೆ ಭರ್ಜರಿ ತಯಾರಿ | ಮೊದಲ ಅಭ್ಯಾಸ ಪಂದ್ಯದಲ್ಲಿ ಒಟ್ಟು 450+ ರನ್

ಅಭ್ಯಾಸ ಪಂದ್ಯದಲ್ಲಿ ಆರ್‌ಸಿಬಿ ರನ್ ಮಳೆ



ಬೆಂಗಳೂರು: ಐಪಿಎಲ್ 19ನೇ ಆವೃತ್ತಿ ಆರಂಭವಾಗಲು ಇನ್ನು ನಾಲ್ಕು ದಿನಗಳಷ್ಟೇ ಉಳಿದಿದ್ದು, ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹಾಲಿ ಚಾಂಪಿಯನ್ ಆರ್‌ಸಿಬಿ ತಂಡ ಭರ್ಜರಿ ತಯಾರಿ ನಡೆಸುತ್ತಿದೆ. ಇದರ ಭಾಗವಾಗಿ ನಡೆದ ಮೊದಲ ಅಭ್ಯಾಸ ಪಂದ್ಯದಲ್ಲಿ ಬ್ಯಾಟರ್‌ಗಳು ರನ್ ಮಳೆಯನ್ನೇ ಸುರಿಸಿದ್ದಾರೆ.

ಅಭ್ಯಾಸ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಉತ್ತಮ ಲಯದಲ್ಲಿ ಕಾಣಿಸಿಕೊಂಡಿದ್ದು, ಇತರ ಎಲ್ಲಾ ಬ್ಯಾಟರ್‌ಗಳು ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಗಮನಸೆಳೆದಿದ್ದಾರೆ. ಈ ಆವೃತ್ತಿಯ ಹರಾಜಿನಲ್ಲಿ ರೂ. 7 ಕೋಟಿಗೆ ಖರೀದಿಸಲ್ಪಟ್ಟ ವೆಂಕಟೇಶ್ ಅಯ್ಯರ್ ನೇತೃತ್ವದ ಟೀಮ್ ವೆಂಕಿ ಮತ್ತು ಆಲ್‌ರೌಂಡರ್ ಕೃಣಾಲ್ ಪಾಂಡ್ಯ ನಾಯಕತ್ವದ ಟೀಮ್ ಕೃಣಾಲ್ ತಂಡಗಳು ಎದುರಾದವು.

ಮೊದಲು ಬ್ಯಾಟ್ ಮಾಡಿದ ಟೀಮ್ ವೆಂಕಿ ಪರ, ಜಿತೇಶ್ ಶರ್ಮಾ 37 ಎಸೆತ ಗಳಲ್ಲಿ ಸ್ಫೋಟಕ 81 ರನ್ ಚಚ್ಚಿದರೆ, ವಿರಾಟ್ ಕೊಹ್ಲಿ 12 ಎಸೆತ ಗಳನ್ನು ಎದುರಿಸಿ 29 ರನ್ ಬಾರಿಸಿದರು. ಇವರನ್ನು ಹೊರತುಪಡಿಸಿದರೆ, ಟಿಮ್ ಡೇವಿಡ್ 14 ಎಸೆತಗಳಿಂದ 36 ರನ್ ಹೊಡೆದರು. ನಾಯಕ ವೆಂಕಟೇಶ್ 16 ಎಸೆತಗಳಿಂದ 36 ರನ್ ಹೊಡೆದರು. ಇವರ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದಿಂದ ಟೀಮ್ ವೆಂಕಿ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 234 ರನ್ ಪೇರಿಸಿತು.

235 ರನ್ ಸವಾಲನ್ನು ಬೆನ್ನತ್ತಿದ ಟೀಮ್ ಕೃಣಾಲ್ ಪರ, ಆರ್‌ಸಿಬಿ ಹನ್ನೊಂದರ ಬಳಗ ಸೇರಬೇಕೆಂಬ ಗುರಿ ಹೊಂದಿರುವ ಕರ್ನಾಟಕ ನಾಯಕ ದೇವದತ್ ಪಡಿಕ್ಕಲ್ 33 ಎಸೆತಗಳಿಂದ 63 ರನ್ ಚಚ್ಚಿದರು. ನಾಯಕ ಕೃಣಾಲ್ 33 ಎಸೆತಗಳಿಂದ 58 ರನ್ ಕೊಡುಗೆ ನೀಡಿದರು. ಆದರೆ ಆರ್‌ಸಿಬಿ ನಾಯಕ ರಜತ್ ಪಾಟಿದಾರ್ ತಮ್ಮ ವಿಸ್ಫೋಟಕ ಬ್ಯಾಟಿಂಗ್‌ನಿಂದ ಗಮನಸೆಳೆದರು. ಕೇವಲ 25 ಎಸೆತಗಳಿಂದ 74 ರನ್ ಚಚ್ಚಿ ಬಿಸಾಕುವ ಮೂಲಕ ಪಾಟಿದಾರ್ ಟೀಮ್ ಕೃಣಾಲ್ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.



ಒಟ್ಟಿನಲ್ಲಿ ಉದ್ಘಾಟನಾ ಪಂದ್ಯವನ್ನಾಡಲು ತುದಿಗಾಲಿನಲ್ಲಿ ಅಭ್ಯಾಸ ನಡೆಸುತ್ತಿರುವ ಆರ್‌ಸಿಬಿ ಬ್ಯಾಟರ್‌ಗಳೆಲ್ಲರೂ ಸ್ಫೋಟಕ ಲಯದಲ್ಲಿ ಕಾಣಿಸಿಕೊಂಡಿದ್ದಾರೆ. ಮಾ.28ರಂದು ಎಂ.ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಐಪಿಎಲ್ 2026 ಉದ್ಘಾಟನಾ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಆರ್‌ಸಿಬಿ ಎದುರಿಸಲಿದೆ.

ನೆಟ್ಸ್ ಹೊರಬಂದು ಆಡುವುದು ಮುಖ್ಯ: ಜಿತೇಶ್‌ನಂತಹ ಬ್ಯಾಟರ್‌ಗಳು 35 ಎಸೆತಗಳನ್ನು ಎದುರಿಸಿ 80ಕ್ಕಿಂತ ಅಧಿಕ ರನ್ ಗಳಿಸುವುದು ಮತ್ತು ರಜತ್ ಅವರ ಸುಂದರ ಹೊಡೆತಗಳನ್ನು ನೋಡಲು ಖುಷಿ ಸಿಗುತ್ತದೆ. ನಿಜಕ್ಕೂ ಫಲಪ್ರದ ಅಭ್ಯಾಸ ನಡೆಸಿದ್ದೇವೆ. ಇಂತಹಾ ಸ್ಪರ್ಧಾತ್ಮಕವಾದ ಪರಿಸ್ಥಿತಿಯಲ್ಲಿ ನೆಟ್ಸ್‌ನಿಂದ ಹೊರಬಂದು ಅಭ್ಯಾಸ ನಡೆಸುವುದು ಬಹಳ ಮುಖ್ಯ ಎಂದು ಆರ್‌ಸಿಬಿ ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಹೇಳಿದ್ದಾರೆ.

ಯುವ ಬೌಲರ್ಸ್ ಬಗ್ಗೆ ಫ್ಲವರ್ ಮೆಚ್ಚುಗೆ: ಯುಪಿ ಟಿ20 ಲೀಗ್‌ನಲ್ಲಿ ಲಖನೌ ಪರ ಆಡಿದ್ದ ಅಭಿನಂದನ್ ಸಿಂಗ್‌ರನ್ನು 2026ರ ಹರಾಜಿನಲ್ಲಿ ಆರ್‌ಸಿಬಿ ಖರೀದಿಸಿತ್ತು. ಅಭಿನಂದನ್‌ರಂತಹ ಯುವ ಬೌಲರ್‌ಗಳ ಕುರಿತು ಕೋಚ್ ಫ್ಲವರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕೆಲವು ಯುವ ಆಟಗಾರರು ಬೌಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ. ಅಭಿನಂದನ್, ರಸಿಕ್ ದರ್ ಉತ್ತಮ ಬೌಲಿಂಗ್ ನಡೆಸಿದ್ದಾರೆ. ಎಡಗೈ ಸ್ಪಿನ್ನರ್ ವಿಕ್ಕಿ ಓಸ್ವಾಲ್ ಸಹ ತಮ್ಮ ಕೌಶಲ ಪ್ರದರ್ಶಿಸಿದ್ದಾರೆ ಎಂದು ಫ್ಲವರ್ ಹೇಳಿದ್ದಾರೆ.



ವಿರಾಟ್ ಕೊಹ್ಲಿ ಇರಾದೆ ಮೆಚ್ಚಿದ ಕೃಣಾಲ್ ಪಾಂಡ್ಯ

ವಿರಾಟ್ ಕೊಹ್ಲಿ ಕ್ರೀಸ್‌ಗಿಳಿದು ಸ್ಫೋಟಕ ಇರಾದೆಯಿಂದ ಬ್ಯಾಟ್ ಬೀಸಿದ್ದನ್ನು ಹೊಗಳಿದ ಕೃಣಾಲ್ ಪಾಂಡ್ಯ, ಜಿತೇಶ್ ಅವರ ಸ್ಫೋಟಕ ಬ್ಯಾಟಿಂಗ್‌ಗೂ ಮೆಚ್ಚುಗೆ ವ್ಯಕ್ತಪಡಿಸಿದರು. ಜಿತೇಶ್ ಚೆನ್ನಾಗಿ ಆಡಿದ್ದಾರೆ. ಅವರ ಇನ್ನಿಂಗ್ಸ್‌ನಲ್ಲಿ ಕೆಲವು ಉತ್ತಮ ಹೊಡೆತಗಳಿದ್ದವು. ಡೇವಿಡ್, ವೆಂಕಿ ಸಹ ಚೆನ್ನಾಗಿ ಆಡಿದ್ದಾರೆ. ಕೊಹ್ಲಿ ದೊಡ್ಡ ಇನ್ನಿಂಗ್ಸ್ ಆಡದಿದ್ದರೂ ಸ್ಫೋಟಕ ಬ್ಯಾಟಿಂಗ್ ನಡೆಸುವ ಇರಾದೆಯೊಂದಿಗೆ ಕ್ರೀಸ್‌ಗಿಳಿದಿದ್ದರು. ಇಂದು ವಿರಾಟ್ ಅವರ ಆಟ ಅತ್ಯುತ್ತಮವಾಗಿತ್ತು, ಉತ್ತಮ ಲಯದಲ್ಲಿದ್ದಾರೆ. ಇದು ಆರ್‌ಸಿಬಿಗೆ ಶುಭ ಸೂಚನೆ ಎಂದು ಕೃಣಾಲ್ ಹೇಳಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಟೀಮ್ ವೆಂಕಿ: 234/7 (20)
ಜಿತೇಶ್ 81(37), ಡೇವಿಡ್ 36(14), ವೆಂಕಟೇಶ್ 30(16), ಕೊಹ್ಲಿ 29(12)
ಟೀಮ್ ಕೃಣಾಲ್: 247 (20)
ಪಡಿಕ್ಕಲ್ 63(33), ಕೃಣಾಲ್ 58(33), ಪಾಟಿದಾರ್ 74(25).
ಫಲಿತಾಂಶ: ಟೀಮ್ ಕೃಣಾಲ್‌ಗೆ ಜಯ
(ಒಟ್ಟು 40 ಓವರ್‌ಗಳಲ್ಲಿ 481 ರನ್)

ಫೈನಲ್‌ನಲ್ಲಿ ಉಕ್ರೇನ್ ಆಟಗಾರ್ತಿ ವಿರುದ್ಧ ಗೆಲುವು

ಪೋಲಿಶ್ ಓಪನ್ ಗೆದ್ದ ಉನ್ನತಿ

ಹೊಸದಿಲ್ಲಿ: ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ತಾರೆ ಉನ್ನತಿ ಹುಡ್ಡಾ ತಮ್ಮ ಅತ್ಯುತ್ತಮ ಲಯದಲ್ಲಿ ಆಟ ಮುಂದುವರಿಸಿದ್ದು, 20,000 ಡಾಲರ್ ಮೌಲ್ಯದ ಪೋಲಿಶ್ ಓಪನ್ ಪ್ರಶಸ್ತಿಯನ್ನು ಇದೇ ಮೊದಲ ಬಾರಿಗೆ ಗೆದ್ದುಕೊಂಡಿದ್ದಾರೆ.

ಭಾನುವಾರ ತಡರಾತ್ರಿ ನಡೆದ ಮೂರು ಸೆಟ್‌ಗಳ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ದ್ವಿತೀಯ ಶ್ರೇಯಾಂಕದ ಉಕ್ರೇನ್ ಆಟಗಾರ್ತಿ ಪೊಲಿನಾ ಬುಹ್ರೋವಾರನ್ನು ಮಣಿಸುವ ಮೂಲಕ ಉನ್ನತಿ ಪ್ರಶಸ್ತಿ ಗೆದ್ದಿದ್ದಾರೆ. 47 ನಿಮಿಷಗಳ ಕಾಲ ನಡೆದ ಫೈನಲ್‌ನಲ್ಲಿ 10-21, 21-15, 21-8 ಸೆಟ್‌ಗಳ ಅಂತರದಿಂದ ಉನ್ನತಿ ಗೆಲುವು ಸಾಧಿಸಿದರು.

28ನೇ ಶ್ರೇಯಾಂಕಿತೆ ಉನ್ನತಿ ಮೊದಲ ಸೆಟ್ ಅನ್ನು 10-21 ಅಂಕಗಳ ಅಂತರದಿಂದ ಕಳೆದುಕೊಂಡಿದ್ದರು. ಆದರೆ ಮೊದಲ ಸೆಟ್ ಸೋತ ಬಳಿಕ ಮಾನಸಿಕ ದೃಢತೆಯನ್ನು ಪ್ರದರ್ಶಿಸಿದ ಹುಡ್ಡಾ, ಮುಂದಿನ ಎರಡು ಸೆಟ್‌ಗಳಲ್ಲಿ ಪ್ರಾಬಲ್ಯ ಮೆರೆದು ಮಹಿಳಾ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿದ್ದಾರೆ.

ಎರಡನೇ ಅಂತಾರಾಷ್ಟ್ರೀಯ ಪ್ರಶಸ್ತಿ: ಇದು ಉನ್ನತಿ ವೃತ್ತಿಜೀವನದ ಎರಡನೇ ಅಂತಾರಾಷ್ಟ್ರೀಯ ಚಾಲೆಂಜ್ ಪ್ರಶಸ್ತಿಯಾಗಿದೆ. ತಮ್ಮ 14ನೇ ವಯಸ್ಸಿನಲ್ಲೇ ಸೂಪರ್ 100 ಬಿಡಬ್ಲ್ಯುಎಫ್ ವರ್ಲ್ಡ್ ಟೂರ್ ಪ್ರಶಸ್ತಿ ಗೆದ್ದ ಅತ್ಯಂತ ಕಿರಿಯ ಭಾರತೀಯ ಬ್ಯಾಡ್ಮಿಂಟನ್ ಪ್ಲೇಯರ್ ಎಂಬ ದಾಖಲೆ ಬರೆದಿದ್ದರು. ಅದಕ್ಕೂ ಮುನ್ನ ಅವರು 2022ರ ಒಡಿಶಾ ಓಪನ್ ಪ್ರಶಸ್ತಿ ಗೆದ್ದಿದ್ದರು.



ಮೈದಾನದ ಪ್ರವೇಶ, ನಿರ್ಗಮನ ದ್ವಾರ ಅಗಲಗೊಳಿಸಿದ ಕೆಎಸ್‌ಸಿಎ

ಭದ್ರತೆ, ಮೂಲಸೌಕರ್ಯ ಪರಿಶೀಲನೆ

ಬೆಂಗಳೂರು: ಐಪಿಎಲ್ 2026ರ ಉದ್ಘಾಟನಾ ಪಂದ್ಯಕ್ಕೆ ಮುನ್ನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದ ಭದ್ರತೆ ಮತ್ತು ಮೂಲಸೌಕರ್ಯ ಸುಧಾರಣೆಗಳನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಗೂ ಪೊಲೀಸ್ ಸಿಬ್ಬಂದಿ ವರ್ಗ ಸೋಮವಾರ ಪರಿಶೀಲನೆ ನಡೆಸಿದರು. ಕ್ರೀಡಾಂಗಣದ ಪ್ರವೇಶ ದ್ವಾರಗಳ ಅಗಲಗೊಳಿಸುವ ಕಾರ್ಯ ಇದರಲ್ಲಿ ಪ್ರಮುಖ ಮೂಲಸೌಕರ್ಯ ಸುಧಾರಣೆಯಾಗಿದೆ. ಮಾ.28ರಂದು ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ತವರಿನ ತಂಡ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ಮುಖಾಮುಖಿ ಆಗಲಿವೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಆರ್‌ಸಿಬಿ ಸಂಭ್ರಮಾಚರಣೆ ವೇಳೆ ಮೈದಾನದಲ್ಲಿ ಸಂಭವಿಸಿದ್ದ ಕಾಲ್ತುಳಿತ ದುರಂತದಲ್ಲಿ 11 ಮಂದಿ ಆರ್‌ಸಿಬಿ ಅಭಿಮಾನಿಗಳು ಬಲಿಯಾಗಿದ್ದರು. ಈ ದುರಂತದ ಬಳಿಕ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯ ಇದಾಗಿದ್ದು, ಭಾರೀ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಸುರಕ್ಷತಾ ವ್ಯವಸ್ಥೆಗಳು

- ಜನದಟ್ಟಣೆ ನಿಯಂತ್ರಣ ಯೋಜನೆಗಳು, ನಿಯೋಜನೆ ಕಾರ್ಯತಂತ್ರಗಳು, ಕಣ್ಗಾವಲು ವ್ಯವಸ್ಥೆಗಳು ಮತ್ತು ತುರ್ತು ಪ್ರತಿಕ್ರಿಯೆಗೆ ಪೂರ್ವಸಿದ್ಧತೆ.



ಮೂಲಸೌಕರ್ಯ ಸುಧಾರಣೆಗಳು

- ಕಾಲ್ತುಳಿತದಂತಹ ಪ್ರಸಂಗಗಳನ್ನು ತಡೆಗಟ್ಟುವ ಉದ್ದೇಶದಿಂದ ಕ್ರೀಡಾಂಗಣದ ಪ್ರವೇಶ ಮತ್ತು ನಿರ್ಗಮನ ದ್ವಾರಗಳನ್ನು ಅಗಲಗೊಳಿಸಲಾಗಿದೆ.
- ಸುಧಾರಿತ ಕ್ಯೂ (ಸರತಿ) ನಿರ್ವಹಣಾ ವ್ಯವಸ್ಥೆ ಅಳವಡಿಸಲಾಗುವುದು.
- ಬ್ಯಾರಿಕೇಡ್ ಮತ್ತು ಸೈನೇಜ್‌ಗಳನ್ನು ವಿಸ್ತರಿಸಲಾಗಿವೆ.

ಯಾವುದೇ ರೀತಿಯ ಸಣ್ಣಪುಟ್ಟ ಸಮಸ್ಯೆಗಳಾಗಲಿ ಅಹಿತಕರ ಘಟನೆಗಳಾಗಲಿ ನಡೆಯದ ರೀತಿಯಲ್ಲಿ ಮಾ.28ರಂದು ಐಪಿಎಲ್ 2026ರ ಉದ್ಘಾಟನಾ ಪಂದ್ಯ ನಡೆಸಿಕೊಡುವುದೇ ಕೆಎಸ್‌ಸಿಎ ಮುಂದಿರುವ ಪ್ರಮುಖ ಸವಾಲಾಗಿದೆ.

ಕೆ.ಸಿ.ವ್ಯಾಲಿಯಿಂದ ಅಂತರ್ಜಲ ವೃದ್ಧಿ: ಕೃಷ್ಣಬೈರೇಗೌಡ

ಬೆಂಗಳೂರು: ಕೆ.ಸಿ.ವ್ಯಾಲಿ ಯೋಜನೆಯು ಕೇವಲ ನೀರಿನ ಮೂಲವಾಗಿರದೆ, ಕೋಲಾರ ಮತ್ತು ಸುತ್ತಮುತ್ತಲ ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಯ ಚಾಲಕ ಶಕ್ತಿಯಾಗಿ ಹೊರಹೊಮ್ಮಿದೆ. ಈ ಯೋಜನೆಯಿಂದ ಕೋಲಾರ ಸೇರಿದಂತೆ ಸುತ್ತಮುತ್ತಲ ಜಿಲ್ಲೆಗಳ ಅಂತರ್ಜಲ ವೃದ್ಧಿಸಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ತಜ್ಞರೊಂದಿಗೆ ನಡೆದ ಮಹತ್ವದ ಸಭೆಯಲ್ಲಿ ತಿಳಿದು ಬಂದಿದೆ. ಈ ಮಾಡೆಲ್ ಅನ್ನು ಇಡೀ ದೇಶವೇ ಅನುಸರಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಭಿಪ್ರಾಯಿಸಿದ್ದಾರೆ.

ಸಭೆಯಲ್ಲಿ ಐಐಎಸ್‌ಸಿ ಅಧಿಕಾರಿಗಳು ಮಂಡಿಸಿದ ವರದಿಯ ಪ್ರಕಾರ, ಹಿಂದೆ 1800 ಅಡಿ ಕೊರೆದರೂ ಸಿಗದ ನೀರು, ಪ್ರಸ್ತುತ 50 ರಿಂದ 100 ಅಡಿ ಆಳದಲ್ಲೇ ಲಭ್ಯವಾಗುತ್ತಿದೆ. ಅಂತರ್ಜಲ ಮರುಪೂರಣದಿಂದಾಗಿ ಬತ್ತಿಹೋಗಿದ್ದ ಬಾವಿಗಳು ಮತ್ತೆ ತುಂಬಿ ತುಳುಕುತ್ತಿವೆ. ಐದು ಹಂತದಲ್ಲಿ ನೈಸರ್ಗಿಕವಾಗಿ ಶುದ್ಧೀಕರಣಗೊಳ್ಳುತ್ತಿರುವ ಈ ನೀರು ಮಣ್ಣಿನ ಗುಣಮಟ್ಟವನ್ನು ಹೆಚ್ಚಿಸಿದ್ದು, ಕೃಷಿ ಉತ್ಪಾದನೆಯಲ್ಲೂ ಗಣನೀಯ ಏರಿಕೆ ಕಂಡಿದೆ ಎಂದು ಸಚಿವ ತಿಳಿಸಿದ್ದಾರೆ.



ಲೋಹದ ಅಂಶ ಪತ್ತೆಯಾಗಿಲ್ಲ: 2019ರಿಂದ ಸತತ ಆರು ವರ್ಷಗಳ ಕಾಲ ನಡೆಸಿದ ಸಂಶೋಧನೆಯಲ್ಲಿ ನೀರಿನಲ್ಲಾಗಲಿ ಅಥವಾ ಅಂತರ್ಜಲದಲ್ಲಾಗಲಿ ಯಾವುದೇ ಅಪಾಯಕಾರಿ ಲೋಹದ ಅಂಶಗಳು ಪತ್ತೆಯಾಗಿಲ್ಲ.ಮೂರು ಬಾರಿ ಮನೆ-ಮನೆಗೆ ತೆರಳಿ ನಡೆಸಿದ ಸಮೀಕ್ಷೆಯಲ್ಲಿ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ನೀರಿನಿಂದಾಗಿ ಕಿಡ್ನಿ ಕಲ್ಲು ಸಮಸ್ಯೆ ಗಣನೀಯವಾಗಿ ಕಡಿಮೆಯಾಗಿದೆ ಎಂದು ವರದಿ ತಿಳಿಸಿದೆ.

ಪರಿಸರ ಸಮತೋಲನ: ಕೆರೆಗಳ ವ್ಯಾಪ್ತಿಯಲ್ಲಿ ಹಕ್ಕಿಗಳ ಸಂಕುಲ ಹೆಚ್ಚಿದ್ದು, ಜಲಚರಗಳು ಸಂಪೂರ್ಣ ಆರೋಗ್ಯವಾಗಿವೆ. ಜಾನುವಾರುಗಳಲ್ಲಿ ಹಾಲು ಉತ್ಪಾದನೆ ಹೆಚ್ಚಿದೆ.ಮಣ್ಣಿನಲ್ಲಿ ನೈಟ್ರೋಜನ್ ಅಂಶ ಹೆಚ್ಚಿದೆ ಎಂಬ ಆರೋಪಗಳು ಸುಳ್ಳೆಂದು ಸಾಬೀತಾಗಿದೆ. ಮೆಂತ್ಯೆ, ಸೌತೆಕಾಯಿ, ಟಮೆಟೋ ಸೇರಿದಂತೆ ವಿವಿಧ ಬೆಳೆಗಳು ಸಮೃದ್ಧವಾಗಿ ಬೆಳೆಯುತ್ತಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅಧಿಕಾರಿಗಳ ಬೇಜವಾಬ್ದಾರಿಗೆ ಕೃಷ್ಣಬೈರೇಗೌಡ ಗರಂ: ಒಂದೆಡೆ ಕೆ.ಸಿ. ವ್ಯಾಲಿ ಯೋಜನೆಯಿಂದ ಕೆರೆಗಳು ಶುದ್ಧವಾಗುತ್ತಿದ್ದರೆ, ಮತ್ತೊಂದೆಡೆ ನಗರಸಭೆಗಳ ಬೇಜವಾಬ್ದಾರಿಯಿಂದ ಊರಿನ ಕೊಳಚೆ ನೀರು ನೇರವಾಗಿ ಕೆರೆಗೆ ಸೇರುತ್ತಿರುವುದಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಶುದ್ಧೀ ಕರಿಸಿದ ನೀರನ್ನು ಹರಿಸುವ ಬೃಹತ್ ಯೋಜನೆಯ ಹೆಸರಿಗೆ ಸ್ಥಳೀಯ ಕೊಳಚೆ ನೀರಿನಿಂದ ಮಸಿ ಬಳಿಯಲಾಗುತ್ತಿದೆ. ನಗರಸಭೆ ಅಧಿಕಾರಿಗಳ ಈ ತಪ್ಪನ್ನು ಸಹಿಸಲು ಸಾಧ್ಯವಿಲ್ಲ ಎಂದು ಸಚಿವರು ಎಚ್ಚರಿಸಿದ್ದಾರೆ.

ಇಂಪ್ಯಾಕ್ಟ್ ಪ್ಲೇಯರ್ ನಿಯಮ ಇಷ್ಟವಿಲ್ಲ

ಹೊಸದಿಲ್ಲಿ: ಐಪಿಎಲ್ 2026ರ ಆವೃತ್ತಿಗೆ ದಿಲ್ಲಿ ಕ್ಯಾಪಿಟಲ್ಸ್ (ಡಿಸಿ) ನಾಯಕರಾಗಿ ಬಡ್ತಿ ಪಡೆದಿರುವ ಆಲ್‌ರೌಂಡರ್ ಅಕ್ಷರ್ ಪಟೇಲ್ ಸೋಮವಾರ ಐಪಿಎಲ್‌ನ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಟೀಕಿಸುವ ಮೂಲಕ ಗಮನಸೆಳೆದರು. ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಟೀಕಿಸಿದ ಅಕ್ಷರ್, ನನಗೆ ಈ ನಿಯಮ ಇಷ್ಟವಿಲ್ಲ ಎಂಬ ಸರಳ ಪ್ರತಿಕ್ರಿಯೆ ನೀಡಿದ್ದಾರೆ. ನಾನು ಸ್ವತಃ ಒಬ್ಬ ಆಲ್‌ರೌಂಡರ್ ಆಗಿರುವುದರಿಂದ ನನಗೆ ಈ ನಿಯಮ ಇಷ್ಟವಾಗಿಲ್ಲ. ಹಿಂದೆ ನಾವು ಬ್ಯಾಟಿಂಗ್ ಮತ್ತು ಬೌಲಿಂಗ್ ಗೋಸ್ಕರ ಆಲ್‌ರೌಂಡರ್‌ಗಳನ್ನು ತಂಡಕ್ಕೆ ಆಯ್ಕೆ ಮಾಡುತ್ತಿದ್ದೆವು. ಆದರೆ ಟೀಮ್ ಮ್ಯಾನೇಜ್‌ಮೆಂಟ್ ಬ್ಯಾಟರ್ ಅಥವಾ ಬೌಲರ್ ಅನ್ನು ಇಂಪ್ಯಾಕ್ಟ್ ಆಟಗಾರನಾಗಿ ಕಳುಹಿಸುವುದರಿಂದ ಆಲ್‌ರೌಂಡರ್ ಪಾತ್ರ ಕಡೆಗಣಿಸಲ್ಪಡುತ್ತದೆ. ನಿಯಮಗಳನ್ನು ನಾವು ಪಾಲಿಸಬೇಕಾಗಿದೆ. ಆದರೆ ವೈಯಕ್ತಿಕವಾಗಿ ನನಗಿದು ಇಷ್ಟವಿಲ್ಲ ಎಂದು ನಾಯಕ ಅಕ್ಷರ್ ಅಭಿಪ್ರಾಯಿಸಿದ್ದಾರೆ.



ಈ ಹಿಂದೆ ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ ಅವರೂ ಇಂಪ್ಯಾಕ್ಟ್ ಪ್ಲೇಯರ್ ನಿಯಮದ ವಿರುದ್ಧ ತಮ್ಮ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಈ ನಿಯಮದ ಪ್ರಕಾರ, ತಂಡಗಳು ಪಂದ್ಯದ ಯಾವುದೇ ಸಂದರ್ಭ ಹನ್ನೊಂದರ ಬಳಗದಲ್ಲಿರುವ ಒಬ್ಬ ಆಟಗಾರನನ್ನು, ಐವರು ಬದಲಿ ಆಟಗಾರರ ಪಟ್ಟಿಯಲ್ಲಿರುವ ಒಬ್ಬರೊಂದಿಗೆ ಬದಲಾಯಿಸಬಹುದು. ಈ ನಿಯಮವನ್ನು 2023ರಲ್ಲಿ ಐಪಿಎಲ್‌ನಲ್ಲಿ ಪರಿಚಯಿಸಲಾಗಿದ್ದು, ಸದ್ಯ 2027ರವರೆಗೆ ಇರಲಿದೆ.

ಉಪಚುನಾವಣೆ ಗೆಲ್ಲುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್‌ಗೆ ತಕ್ಕ ಪಾಠ

ಕಮಲ ಅರಳುವುದು ಖಚಿತ: ವಿಜಯೇಂದ್ರ

ಬಾಗಲಕೋಟೆ: ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರಲ್ಲಿ ಆಕ್ರೋಶ ಹೆಚ್ಚಾಗಿದ್ದು, ಬಿಜೆಪಿ ಪಕ್ಷದ ಅಭಿವೃದ್ಧಿ ಪರ ರಾಜಕಾರಣ, ಸಂಘಟಿತ ಶಕ್ತಿ, ಕಾರ್ಯಕರ್ತರ ಉತ್ಸಾಹ ಹಾಗೂ ಮತದಾರರ ಆಶೀರ್ವಾದದಿಂದ ಈ ಬಾರಿ ಬಾಗಲಕೋಟೆಯಲ್ಲಿ ಕಮಲ ಅರಳಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ನಾಮಪತ್ರ ಸಲ್ಲಿಸಿದ ಬಳಿಕ ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಬಡವರ, ದಲಿತರ, ಯುವಕರ ವಿರೋಧಿ ಸರ್ಕಾರ ರಾಜ್ಯದಲ್ಲಿದ್ದು, ಮುಂದಿನ ದಿನಗಳಲ್ಲಿ ಈ ಸರ್ಕಾರವನ್ನು ಕಿತ್ತು ಹಾಕಲು ರಾಜ್ಯದ ಜನ ಸಂಕಲ್ಪ ಮಾಡಿದ್ದಾರೆ. ರಾಜ್ಯದ ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವ ಮೂಲಕ ಕಾಂಗ್ರೆಸ್ ಧೂಳಿಪಟ ಆಗಲಿದೆ ಎಂದರು.ಪಕ್ಷದ ಗೆಲುವಿಗಾಗಿ ಕಾರ್ಯಕರ್ತರು ಸಂಪೂರ್ಣ ಸಜ್ಜಾಗಿದ್ದು, ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ವಿಜಯದ ದೃಢಸಂಕಲ್ಪ ಕೈಗೊಳ್ಳಲಾಗಿದೆ. ಈ ಉಪಚುನಾವಣೆಯ ಫಲಿತಾಂಶ ರಾಜ್ಯದ ಮುಂದಿನ ರಾಜಕೀಯ ದಿಕ್ಕನ್ನು ನಿರ್ಧರಿಸುವಲ್ಲಿ ಪ್ರಮುಖವಾಗಲಿದೆ ಎಂದರು.



ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ 25 ಸಾವಿರ ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದ ಅವರು, ನಿಗಮದ ದುಡ್ಡು ಹೊಡೆದಿದ್ದು ಹಣದ ಮೂಟೆಯನ್ನು ಹಿಡಿದುಕೊಂಡು ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದವರು ಬರಲಿದ್ದಾರೆ. ಕಾರ್ಯಕರ್ತರಲ್ಲಿ ರಣೋತ್ಸಾಹವಿದ್ದು ಪ್ರಜ್ಞಾವಂತ ಮತದಾರರು ಬಿಜೆಪಿಯನ್ನು ಬೆಂಬಲಿಸಿದ್ದಾರೆ ಎಂದರು.

ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿಯವರು ಜಿಲ್ಲೆಗೆ ಸಾವಿರಾರು ಕೋಟಿ ಅನುದಾನ ನೀಡಿದ್ದಾರೆ. ರಾಜಕೀಯ ಮರುಜನ್ಮ ನೀಡಿದ ಜಿಲ್ಲೆಗೆ ಸಿದ್ದರಾಮಯ್ಯನವರು ಎಷ್ಟು ಅನುದಾನ ನೀಡಿದ್ದಾರೆಂದು ಬಹಿರಂಗಪಡಿಸಲಿ. ಅಭಿವೃದ್ಧಿ ಬಗ್ಗೆ ಸರ್ಕಾರಕ್ಕೆ ಚಿಂತನೆ ಇಲ್ಲ ಎಂದರು. ಸಂಸದ ಜಗದೀಶ ಶೆಟ್ಟರ್ ಮಾತನಾಡಿ, ಚರಂತಿಮಠರದ್ದು ನಾಮಪತ್ರ ಮೆರವಣಿಗೆ ಅಲ್ಲ, ವಿಜಯೋತ್ಸವದ ಮೆರವಣಿಗೆ. ಬಾಗಲಕೋಟೆಯಲ್ಲಿ ಬಿಜೆಪಿ ಶಕ್ತಿ ಏನು ಎಂಬುದನ್ನು ಕಾರ್ಯಕರ್ತರು ತೋರಿಸಿದ್ದಾರೆ ಎಂದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5932

ಎಡದಿಂದ ಬಲಕ್ಕೆ
1.ಪಾಠಕನಿಗಾಗಿ ತಯಾರಿಸಿದ ಅಡುಗೆ (2)
2. ನನಗಾಗಿ ವಾದಿಸಲು ಬಂದ ಸಚಿವ (3)
4.ತಾಡಪತ್ರಿಯಲ್ಲಿರುವ ಬಿಸಿ (2)
6. ಹಾಡಿನಿಂದ ಕೂಡಿದ ಪ್ರಪಂಚ (4)
8. ಮದುವೆಗೆ ಸಿದ್ಧನಾದ ಗಂಡು (4)
12.ಕ್ಷಾಮದ ದಿನಗಳು ತಿರುಗಿ ಮೂಡಿವೆ (4)
14. ವಿಚಿತ್ರವಾದರೂ ಇದನ್ನು ಬರೆದಿಡಲಾಗಿದೆ (4)
15.ಬೆಣ್ಣೆ ಕಾಯಿಸಿ ತೆಗೆದ ಸಾರ (2)
16. ಸಭಾಸದರೆಡೆಗೆ ನುಗ್ಗಿ ಬಂದವರ ವೇಗ (3)
17.ಪೂರ್ಣ ಪದಾರ್ಥದ ಒಂದು ಅಂಶ (2)

ಮೇಲಿನಿಂದ ಕೆಳಕ್ಕೆ
1.ಆಸ್ತಿಯಲ್ಲಿ ಭಾಗಸ್ಥನೀತ (4)
2.ತಾರೀಖನ್ನು ಹೀಗೂ ಹೇಳುತ್ತೇವೆ (3)
3.ದಮನವಾಗದ ಮಾರ ತಲೆಕೆಳಗಾಗಿದ್ದಾನೆ (3)
5.ಇದು ನಾಡಿನ ಒಂದು ಭಾಗ (4)
7.ಜನರ ಕಷ್ಟ-ನಷ್ಟಗಳಿಗೆ ಸಹಾಯ ಮಾಡುವ ಗುಣ (5)
9.ಅನುಚಿತವಾದ ಜಂಭವಿದು (5)
10.ರಾಸಾಯನಿಕವಾಗಿ ವಿಭಜಿಸಲು ಅಸಾಧ್ಯವಾದ ಘಟಕ (4)
11.ಮನದಲ್ಲುಂಟಾಗುವ ಭಾವನೆ-ವಿಚಾರ (4)
13.ಬರದ ನಡುವೆ ಕಾಳಗವಡಗಿದೆ (3)
14.ಇಚ್ಚೆಗೆ ವಿರುದ್ಧವಾದುದು (3)

5931 ಉತ್ತರ

ಎಡದಿಂದ ಬಲಕ್ಕೆ:
3.ಅಲ್ಲಮಪ್ರಭು
5.ಕೇಳುಗ 6.ಚರ್ವಿತ
7.ಹವಳ 9.ತಂಗುದಾಣ
11.ಪರಂತಪಾ 14.ಗಣಕ
16.ಅಪಾರ 17.ಜವಾರಿ
18.ಕೊರಳುಪಟ್ಟಿ

ಮೇಲಿನಿಂದ ಕೆಳಕ್ಕೆ:
1.ತೊಡೆಚಲ್ಲಣ 2.ಸಂಕೇತ
3.ಅಗಣಿತ 4.ಮಣಿಹ
8.ವರ್ಜಿತ 10.ದಾರುಣ
12.ಪಾತರಗಿತ್ತಿ
13.ಜಗಜಟ್ಟಿ 15.ಕರುಳು
16.ಅರಿಕೆ

ಕಿರುಸುದ್ದಿ

ದಾನೇಶ್ವರಿ ಭಜಂತ್ರಿ ನೇಮಕ

ಮುಂಡರಗಿ: ಮುಂಡರಗಿ ತಾಲೂಕು ಬ್ಲಾಕ್ ಮಹಿಳಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ದಾನೇಶ್ವರಿ ಆರ್ ಭಜಂತ್ರಿ ನೇಮಕಗೊಂಡಿದ್ದಾರೆ.ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ ರಾಜ್ಯಾಧ್ಯಕ್ಷರಾದ ಸೌಮ್ಯ ರೆಡ್ಡಿ, ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ. ಪಾಟೀಲ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಗದಗ ಜಿಲ್ಲಾ ಅಧ್ಯಕ್ಷರಾದ, ಜಿ.ಎಸ್. ಪಾಟೀಲ ಅವರ ಅನುಮೋದನೆಯ ಮೇರೆಗೆ



ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯಪ್ರಧಾನ ಕಾರ್ಯದರ್ಶಿಗಳಾದ ಸುಜಾತ ಎನ್. ದೊಡ್ಡಮನಿ . ಶಿರಹಟ್ಟಿ ಮತ ಕ್ಷೇತ್ರದ ಮಾಜಿ ಶಾಸಕರಾದ ರಾಮಕೃಷ್ಣ ದೊಡ್ಡಮನಿ,ಮಾಜಿ ಶಾಸಕರಾದ ಡಿ.ಆರ್. ಪಾಟೀಲ ಅವರ ಶಿಫಾರಸ್ಸಿನ ಮೇರೆಗೆ ದಾನೇಶ್ವರಿ ಆರ್. ಭಜಂತ್ರಿ ಅವರನ್ನು ಮುಂಡರಗಿ ತಾಲೂಕು ಬ್ಲಾಕ್ ಮಹಿಳಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶಿಸಿರುತ್ತದೆ. ದಾನೇಶ್ವರಿ ಆರ್. ಭಜಂತ್ರಿ ಮುಂಡರಗಿ ಬ್ಲಾಕ್ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಪಕ್ಷದ ತತ್ವ ನಿಷ್ಠೆಗೆ ಬದ್ಧರಾಗಿ ತಾವುಗಳು ಈ ಉನ್ನತ ಹುದ್ದೆಯನ್ನು ತಕ್ಷಣ ವಹಿಸಿಕೊಂಡು ಪಕ್ಷ ಸಂಘಟನೆಯಲ್ಲಿ ಇನ್ನಷ್ಟು ತೊಡಗಿಕೊಳ್ಳಬೇಕೆಂದು ಗದಗ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ನೀಲಮ್ಮ ಸಿ. ಬೋಳನವರ ಆದೇಶ ಪತ್ರ ನೀಡಿ ಘೋಷಣೆ ಮಾಡಿದ್ದಾರೆ.

ಮಾ.26ಕ್ಕೆ ಪೂರ್ವಭಾವಿ ಸಭೆ

ಮುಂಡರಗಿ: ರಾಜ್ಯ ಸರ್ಕಾರವು ಸಮಾಜ ಕಲ್ಯಾಣ ಇಲಾಖೆಯ ನೇತೃತ್ವದಲ್ಲಿ 2025-26ನೇ ಸಾಲಿಗೆ ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್ ರವರ 119ನೇ ಜನ್ಮ ದಿನಾಚರಣೆಯನ್ನು ಏ.5ರಂದು, ಡಾ.ಬಿ.ಆರ್. ಅಂಬೇಡ್ಕರ್‌ರವರ 135ನೇ ಜನ್ಮ ದಿನಾಚರಣೆಯನ್ನು ಏ.14ರಂದು ಆಚರಿಸುವ ಸಲುವಾಗಿ ಪೂರ್ವಭಾವಿ ಸಭೆಯನ್ನು ಮಾ.26ರಂದು ತಹಶೀಲ್ದಾರರವರ ಕಾರ್ಯಾಲಯದ ಸಭಾ ಭವನದಲ್ಲಿ ಬೆಳಿಗ್ಗೆ 11.30 ಘಂಟೆಗೆ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿದೆ ಎಂದು ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ಅಧಿಕಾರಿಗಳಾದ ಉದಯಕುಮಾರ ಎಲಿವಾಳ ತಿಳಿಸಿದ್ದಾರೆ.

ಆದುದರಿಂದ ಪೂರ್ವ ಭಾವಿ ಸಭೆಗೆ ತಾಲೂಕು ಮಟ್ಟದ ಅಧಿಕಾರಿಗಳು ಖುದ್ದಾಗಿ ಹಾಜರಿರಬೇಕು ಹಾಗೂ ಎಲ್ಲಾ ದಲಿತ ಸಂಘಟನೆಗಳು, ಕನ್ನಡ ಪರ ಸಂಘಟನೆಗಳು, ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು, ಹಾಗೂ ಪ.ಜಾತಿ, ಪ.ಪಂಗಡದ, ಹಿಂದೂಳಿದ ವರ್ಗ, ಅಲ್ಪಸಂಖ್ಯಾತ ವರ್ಗ ಮತ್ತು ಎಲ್ಲಾ ಸಮಾಜದ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಸಮಾಜದ ಮುಖಂಡರುಗಳು, ಗಣ್ಯ ವ್ಯಕ್ತಿಗಳು, ಸಕಾಲಕ್ಕೆ ಸಭೆಗೆ ಆಗಮಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಲು ಕೋರಲಾಗಿದೆ.

ವಿಜ್ಞಾನ ಪರೀಕ್ಷೆಯಲ್ಲಿ 15,653 ವಿದ್ಯಾರ್ಥಿಗಳು ಹಾಜರು

ಗದಗ: ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳಲ್ಲಿ ಜರುಗಿದ ಎಸ್ಎಸ್ಎಲ್‌ಸಿ ವಿಜ್ಞಾನ ಪರೀಕ್ಷೆಯಲ್ಲಿ 15,653 ವಿದ್ಯಾರ್ಥಿಗಳು ಹಾಜರಾಗಿದ್ದು, 386 ವಿದ್ಯಾರ್ಥಿಗಳು ಗೈರಾದರು.

ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 16,039 ವಿದ್ಯಾರ್ಥಿಗಳು ವಿಜ್ಞಾನ ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದರು. ವೀಕ್ಷಕರು, ಜಿಲ್ಲಾ ವೀಕ್ಷಕ ದಳ ಮತ್ತು ಸ್ಥಾನಿಕ ಜಾಗೃತದಳದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.ನಿಗದಿತ ಅವಧಿಯಲ್ಲಿ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆಪತ್ರಿಕೆಗಳನ್ನು ತಲುಪಿಸಿ, ಪರೀಕ್ಷಾ ಕಾರ್ಯ ಮುಗಿದ ನಂತರ ಉತ್ತರ ಪತ್ರಿಕೆಗಳನ್ನು ಪೊಲೀಸ್ ಬಿಗಿ ಬಂದಬಸ್ತ್ ನಲ್ಲಿ ಭದ್ರತಾ ಕೊಠಡಿಯಲ್ಲಿ ಸಂಗ್ರಹಿಸಲಾಗಿದೆ ಎಂದು ಡಿಡಿಪಿಐ ಆರ್.ಎಸ್. ಬುರಡಿ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	3006-8219
ಅಜವಾನ	7269-8429
ಅಲಸಂದಿಕಾಳು	5529-6219
ಕಡಲೆ	1119-5412
ಉದ್ದು	1144-5844
ಹೆಸರು	1212-7000
ಹುರಳಿ	3807-4374
ಜೋಳ	1459-4531
ಗೋವಿನಜೋಳ	1419-1705
ಸಾಸವಿ	3312-4112
ಕುಸಬಿ	3509-5170
ಗುರೆಳ್ಳು	11300-11300
ತೊಗರಿ	4112-5609
ಗೋಧಿ	1569-5421
ಔಡಲ	5327-5327
ಸೂರ್ಯಕಾಂತಿ	5619-6719
ಬೆಲ್ಲ	4095-4095



ಗದಗ: ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ರೆಡ್ ರಿಬ್ಬನ್ ಕ್ಲಬ್, ಯೂತ್ ರೆಡ್ ಕ್ರಾಸ್ ಮತ್ತು ಎನ್ಎಸ್ಎಸ್ ಘಟಕದ ಸಹಯೋಗದಲ್ಲಿ ಶುಕ್ರವಾರದಂದು ರಕ್ತದಾನದ ಪ್ರಯೋಜನಗಳ ಅರಿವು ಕಾರ್ಯಕ್ರಮ ನಡೆಯಿತು. ಪ್ರಾಚಾರ್ಯ ಶಿವಪ್ಪ ಕುರಿ, ಸಂಚಾಲಕ ಖಲೀಲ್ ಅಹ್ಮದ ಚಿಕ್ಕೇರೂರ, ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಕ್ತನಿಧಿ ಕೇಂದ್ರದ ಸಂಪನ್ಮೂಲ ವ್ಯಕ್ತಿ ಎಸ್.ಬಿ. ಪಾಟೀಲ ಇತರರು ಇದ್ದರು.

ಡಾ.ಪುನೀತರಾಜಕುಮಾರ ಜನ್ಮ ದಿನಾಚರಣೆ

ಗದಗ: ಸಾಮಾಜಿಕ ಕ್ಷೇತ್ರದಲ್ಲಿ ತನ್ನನ್ನು ತಾವು ತೊಡಗಿಸಿಕೊಂಡು ಸಮಾಜ ಸೇವೆ ಮಾಡುವುದರೊಂದಿಗೆ ಸಾರ್ವಜನಿಕವಾಗಿ ಗುರುತಿಸಿಕೊಳ್ಳಬೇಕು ಎಂದು ಜಿಲ್ಲಾ ಯುಥ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಸಲಹೆ ನೀಡಿದರು.

ನಗರದಲ್ಲಿ ಕನ್ನಡ ಜನಾಭಿವೃದ್ಧಿ ವೇದಿಕೆ ಜಿಲ್ಲಾ ಘಟಕದ ವತಿಯಿಂದ ಡಾ.ಪುನೀತರಾಜಕುಮಾರ ಜನ್ಮ ದಿನಾಚರಣೆ ಅಂಗವಾಗಿ ರಸಮಂಜರಿ ಕಾರ್ಯಕ್ರಮ, ಸಾಮೂಹಿಕ ವಿವಾಹ, ಕ್ರಿಕೆಟ್ ಟೂರ್ನಾಮೆಂಟ್, ಜಿಲ್ಲಾ ಅತ್ಯುತ್ತಮ ಹಾಗೂ ರಾಜ್ಯ ಮಟ್ಟದ ವಿಶೇಷ ಶಿಕ್ಷಕ ಪ್ರಶಸ್ತಿ, ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜೀವಗಾಂಧಿ ಬ್ರಿಗೇಡ್ ರಾಜ್ಯಾಧ್ಯಕ್ಷ ಬಿ.ಎಂ.ನದ್ದಿಮುಲ್ಲಾ, ಯುವ ನಾಯಕರು ಅಖಿಲ ಕರ್ನಾಟಕ ಜನಶಕ್ತಿ ವೇದಿಕೆ ರಾಜ್ಯಾಧ್ಯಕ್ಷ ಸೈಯದಖಾಲಿದ ಕೊಪ್ಪಳ, ಕನ್ನಡ ಜನಾಭಿವೃದ್ಧಿ ವೇದಿಕೆ ರಾಜ್ಯಾಧ್ಯಕ್ಷ ಹುಲ್ಲೇಶ ಭಜಂತ್ರಿ, ಶಕುಂತಲಾ ಅಕ್ಕಿ, ಮಾನ್ಸೂಖಲಾಲ ಪುಣೇಕರ, ಚನ್ನಮಲ್ಲಪ್ಪ ತಟ್ಟಿ, ಕುಮಾರ ನೆಟಗತ್ತಿ, ಗಣೇಶ ಮುಟಗಾರ, ಬಸಣ್ಣ ಕೊತಂಬ್ರಿ, ಶಿವರಾಜ ಮಡಿವಾಳರ, ಶ್ರೀಕಾಂತ ಭಜಂತ್ರಿ, ಭೀಮಸೇನಸಾ ರಾಯಬಾಗಿ, ವೇದಿಕೆಯ ಮೇಲಿದ್ದ ಸರ್ವಗಣ್ಯರು, ಇದ್ದರು.

ಜಿಲ್ಲಾಧ್ಯಕ್ಷ ಗಣೇಶ ಹಾತಲಗೇರಿ ಪರಿಚಯಸಿದರು. ಗೌರವ ಅಧ್ಯಕ್ಷ ಉಮೇಶ ಹಿರೇಮಠ ಸ್ವಾಗತಿಸಿದರು. ಆರ್.ಎಲ್. ಮೇಳೆನ್ನವರ ನಿರೂಪಿಸಿದರು.



ಗದಗ: ನಗರದಲ್ಲಿ ಕನ್ನಡ ಜನಾಭಿವೃದ್ಧಿ ವೇದಿಕೆ ಜಿಲ್ಲಾ ಘಟಕದ ವತಿಯಿಂದ ಡಾ.ಪುನೀತರಾಜಕುಮಾರ ಜನ್ಮ ದಿನಾಚರಣೆ ಅಂಗವಾಗಿ ರಸಮಂಜರಿ ಕಾರ್ಯಕ್ರಮ, ಸಾಮೂಹಿಕ ವಿವಾಹ, ಕ್ರಿಕೆಟ್ ಟೂರ್ನಾಮೆಂಟ್, ಜಿಲ್ಲಾ ಅತ್ಯುತ್ತಮ ಹಾಗೂ ರಾಜ್ಯ ಮಟ್ಟದ ವಿಶೇಷ ಶಿಕ್ಷಕ ಪ್ರಶಸ್ತಿ, ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಜಿಲ್ಲಾ ಯುಥ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಅವರು ಉದ್ಘಾಟಿಸಿದರು.

ದೇವರ ದಾಸಿಮಯ್ಯನವರ ಜಯಂತ್ಯುತ್ಸವ | ಜಿಲ್ಲಾಧಿಕಾರಿ ಸಲಹೆ

ಮಹಾತ್ಮರ ತತ್ವಾದರ್ಶ ಅಳವಡಿಸಿಕೊಳ್ಳಿ

ಗದಗ: ದೇವರ ದಾಸಿಮಯ್ಯನವರು ತಮ್ಮ ವಚನಗಳ ಮೂಲಕ ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದುವಲ್ಲಿ ಶ್ರಮಿಸಿದ್ದಾರೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ಗದಗ-ಬೆಟಗೇರಿಯ ಟರ್ನಲ್ ಪೇಟೆಯ ದೇವರ ದಾಸಿಮಯ್ಯ ವೇದಿಕೆಯಲ್ಲಿ ಸೋಮವಾರ ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆದ್ಯ ವಚನಕಾರ ನೇಕಾರ ಸಂತ ದೇವರ ದಾಸಿಮಯ್ಯನವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಘವೇಂದ್ರ ಕೊಪ್ಪಳ ಮಾತನಾಡಿ, ಆದ್ಯ ವಚನಕಾರ ನೇಕಾರ ಸಂತ ದೇವರ ದಾಸಿಮಯ್ಯನವರು 10 ನೇ ಶತಮಾನದಲ್ಲಿ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಎಂಬ ಗ್ರಾಮದಲ್ಲಿ ಜನಿಸಿದರು. ಮುದನೂರು ಗ್ರಾಮದಲ್ಲಿ ಹಲವಾರು ದೇವಾಲಯಗಳಿದ್ದು ಅದರಲ್ಲಿ ರಾಮಲಿಂಗೇಶ್ವರ ದೇವಸ್ಥಾನ ದೇವರ ದಾಸಿಮಯ್ಯನವರ ಅಚ್ಚುಮೆಚ್ಚಿನ ಸ್ಥಳವಾಗಿತ್ತು ಹಾಗೂ ಇವರು ರಾಮಲಿಂಗೇಶ್ವರನ ಆರಾಧಕರಾಗಿದ್ದರು.

ದೇವರ ದಾಸಿಮಯ್ಯನವರ ಅಂಕಿನಾಮ ರಾಮನಾಥ ಆಗಿದೆ. ದಾಸಿಮಯ್ಯನ ಭಕ್ತಿಯಂತೆ ನಮ್ಮ ಭಕ್ತಿ ಇರಬೇಕು ಎಂದು ಜಗಜ್ಯೋತಿ ಬಸವಣ್ಣನವರು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ದೇವರ ದಾಸಿಮಯ್ಯನವರು ಮುದನೂರಿನ ಸಮೀಪದಲ್ಲಿರುವ ಶೈವ ಕೇಂದ್ರವಾಗಿದ್ದ ಶ್ರೀಶೈಲದಲ್ಲಿದ್ದ ಚಂದ್ರಗುಂಡ ಶಿವಾಚಾರ್ಯ ಗುರುಕುಲದಲ್ಲಿ ವಿದ್ಯೆಯೊಂದಿಗೆ ಉತ್ತಮ ಸಂಸ್ಕಾರವನ್ನು ಪಡೆದು ಸುಜ್ಞಾನವಂತರಾದ ದೇವರ ದಾಸಿಮಯ್ಯನವರು ಯಾವುದನ್ನೂ ಪ್ರಶ್ನಿಸದೇ ಸ್ವೀಕರಿಸುವ ಮನೋಭಾವದವರಲ್ಲ, ಪ್ರಖರ ವೈಚಾರಿಕ ನೆಲೆಗಟ್ಟಿನ ಅಸದೃಶ ವ್ಯಕ್ತಿತ್ವವನ್ನು ಹೊಂದಿದ್ದರು. ನೇಕಾರಿಕೆ ಇವರ ಕುಲ ಕಸುಬಾಗಿತ್ತು.



> ದೇವರ ದಾಸಿಮಯ್ಯನವರು 10ನೇ ಶತಮಾತನದಲ್ಲಿನ ವಚನಕಾರರು. ಇವರು ನೇಕಾರ ಕಾಯಕದ ಮೂಲಕ ಜೀವನ ಸಾಗಿಸುತ್ತಿದ್ದರು. ತಮ್ಮ ಅರ್ಥಪೂರ್ಣ ವಚನಗಳ ಮೂಲಕ ಸಮಾಜಕ್ಕೆ ದೊಡ್ಡ ಕೊಡುಗೆ ಕೊಟ್ಟಿದ್ದಾರೆ. ತಮ್ಮ ವಚನಗಳಲ್ಲಿ ಭಕ್ತಿ ಹಾಗೂ ಕಾಯಕದ ಮಹತ್ವವನ್ನು ಸಾರಿದವರು. ದೇವರ ದಾಸಿಮಯ್ಯನವರ ತತ್ವಾದರ್ಶಗಳನ್ನು ಹಾಗೂ ಅವರ ವಚನಗಳ ಸಂದೇಶಗಳನ್ನು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
>
> ■ ಸಿ.ಎನ್.ಶ್ರೀಧರ್.ಜಿಲ್ಲಾಧಿಕಾರಿ

ಇವರ ಧರ್ಮಪತ್ನಿ ಶರಣೆ ದುಗ್ಗಳೇಯವರು ಸಹ ಶಿವಭಕ್ತಿ ಹಾಗೂ ಕುಲಕಸುಬನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದರು. ದೇವರ ದಾಸಿಮಯ್ಯನವರು ತಮ್ಮ ಅರ್ಥಪೂರ್ಣವಾದ ವಚನಗಳ ಮೂಲಕ ಸಮಾಜ ಸುಧಾರಣೆ ಮಾಡಿದವರು. ಇವರ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ ಎಂದು ದೇವರ ದಾಸಿಮಯ್ಯನವರ ಸಾಧನೆ ಕುರಿತು ವಿವರಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ನಂದಾ ಹಣಬರಟ್ಟಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮಾಜದ ಸಾಧಕರನ್ನು ಸನ್ಮಾನಿಸಲಾಯಿತು. ದೇವರ ದಾಸಿಮಯ್ಯ ಜಯಂತಿ ನಿಮಿತ್ತ ಏರ್ಪಡಿಸಲಾಗಿದ್ದ ವಚನಸ್ಪರ್ಧೆ ಹಾಗೂ ನಿಬಂಧ ಸ್ಪರ್ಧೆಯಲ್ಲಿನ ವಿಜೇತರಿಗೆ ಬಹುಮಾನವ ವಿತರಿಸಲಾಯಿತು.

ಗದಗ-ಬೆಟಗೇರಿಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ನಗರಸಭೆ ಸದಸ್ಯ ರಾಘವೇಂದ್ರ ಯಳವತ್ತಿ, ಲಕ್ಷ್ಮೀ ಖಾಕಿ, ಪೂರ್ಣಿಮಾ ಭರದ್ವಾಜ್, ಗದಗ ಬೆಟಗೇರಿ ನಗರಸಭೆಯ ಪೌರಾಯುಕ್ತ ರಾಜಾರಾಮ ಪವಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಸವರಾಜ ಬಳ್ಳಾರಿ, ದಶರಥರಾಜ ಕೊಳ್ಳಿ, ರಮೇಶ ಗಡ್ಡಿ, ಅಶೋಕ ಹೊನ್ನಳ್ಳಿ, ರಮೇಶ ಹತ್ತಿಕಾಳ, ಶ್ರೀನಿವಾಸ ಹುಬ್ಬಳ್ಳಿ, ಮಲ್ಲಿಕಾರ್ಜುನ ಐಲಿ, ಆರ್.ಕೆ.ಹುಬ್ಬಳ್ಳಿ, ಶಕುಂತಲಾ ಅಕ್ಕಿ ಸೇರಿದಂತೆ ಸಮಾಜದ ಮುಖಂಡರು, ಹಿರಿಯರು, ಗಣ್ಯರು, ಪದಾಧಿಕಾರಿಗಳು ಹಾಜರಿದ್ದರು. ಅನಿಲ ಗಡ್ಡಿ ಮಾತನಾಡಿದರು. ದೊಡ್ಡಪ್ಪ ಮೂಲಿಮನಿ ನಿರೂಪಿಸಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಗದಗ: ಭಾರತೀಯ ಜನತಾ ಪಕ್ಷದ ಜಿಲ್ಲಾ ಘಟಕದ ವತಿಯಿಂದ ಅಂತರಾಷ್ಟೀಯ ಮಹಿಳಾ ದಿನಾಚರಣೆ ನಗರದ ಮುಕ್ತಣ್ಣೇಶ್ವರ ಸಮುದಾಯ ಭವನದಲ್ಲಿ ಜರುಗಿತು.

ಮಾಜಿ ಶಾಸಕ ಕಳಕಪ್ಪ ಬಂಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಜ್ಯದಲ್ಲಿಕಾಂಗ್ರೆಸ್ ಸರ್ಕಾರವು ಗ್ಯಾರಂಟಿ ಯೋಜನೆಗಳು ಕೇವಲ ತಾತ್ಕಾಲಿಕವಾದವು ಎಂದರು. ಇಡೀ ಭಾರತದ ಅಭಿವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ನೀಡುತ್ತಿರುವ ಗ್ಯಾರಂಟಿ ಶಾಶ್ವತವಾದದ್ದು ಎಂದರು.

ಕರ್ನಾಟಕ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ.ಮಂಜುಳಾ ಮಾತನಾಡಿ, ಕಾಂಗ್ರೆಸ್ ಸರ್ಕಾರವು ಆರ್ಥಿಕವಾಗಿ ದಿವಾಳಿಯಾಗಿ ಜನರ ಮೇಲೆ ಸಾಲದ ಹೊರೆಹೊರಿಸಿದೆ. ಗ್ಯಾರಂಟಿಯೋಜನೆಗಳ ಹೆಸರಿನಲ್ಲಿ ಮಹಿಳೆಯರಿಗೂ ರಾಜ್ಯ ಸರ್ಕಾರ ನಷ್ಟವನ್ನುಂಟು ಮಾಡುತ್ತಿದೆ. ರಾಜ್ಯ ಸರ್ಕಾರದ ದುರಾಡಳಿತದಿಂದ ಜನರು ಬೇಸತ್ತಿದ್ದಾರೆ. ಗ್ಯಾರಂಟಿ ಆಮಿಷಗಳಿಗೆ ಮಹಿಳೆಯರು ಮಾರು ಹೋಗಬಾರದೆಂದು ಕಿವಿ ಮಾತು ಹೇಳಿದರು.

ಅಧ್ಯಕ್ಷತೆ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ನಿರ್ಮಲಾ ಕೊಳ್ಳಿ ಮಾತನಾಡಿ, ಮಹಿಳೆಯರು ವಿವಿಧ ರಂಗದಲ್ಲಿ ಯಶಸ್ವಿಗೊಳ್ಳುತ್ತಿರುವುದು ಹೆಮ್ಮೆಯ ಸಂಗತಿ. ಜಿಲ್ಲೆಯಲ್ಲಿ ಮಹಿಳೆಯರು ಸಾಮಾಜಿಕ, ರಾಜಕೀಯ ಕ್ಷೇತ್ರದಲ್ಲಿ ಹೆಸರು ಮಾಡಬೇಕು ಎಂದರು.

ರಾಜ್ಯ ಹಾಗೂ ಅಂತರರಾಜ್ಯ ಮಹಿಳಾ ಕ್ರೀಡಾಪಟುಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಡಾ.ಶೋಭಾ ನೀಸ್ಲಿಂಗೌಡ್ರ, ರಾಜಯೋಗಿನಿ ಬ್ರಹ್ಮಕುಮಾರಿ ಜಯಂತಿ ಅಕ್ಕನವರು, ಉಷಾ ದಾಸರ, ಸುನಂದ ಬಾಕಳೆ, ವಿಜಯಲಕ್ಷ್ಮೀ ದಿಂಡೂರ, ಲಕ್ಷ್ಮೀ ಕಾಕಿ, ಸ್ವಾತಿ ಅಕ್ಕಿ, ರೇಖಾ ಮದನೂರ, ಲಕ್ಷ್ಮೀ ಕುಂಬಾರ, ಶಶಿಕಲಾ ಕಲ್ಲಾಪುರ, ಪವಿತ್ರ ಕಲ್ಕುಟಗರ, ನಂದಾ ಪಲ್ಲೇದ, ರೇಖಾ ಗವಳಿ, ಪುಷ್ಪ ಪೂಜಾರ್, ಜ್ಯೋತಿ ಪಾಯಪ್‌ಗೌಡ್ರು, ಸುಜಾತ ಪ್ರಧಾನ, ಜಯಶ್ರೀ ಉಗಲಾಟ, ಶಾಂತ ನಿಡುವಣಿ, ವಂದನ ವೇರ್ಣೆಕರ, ಅಶ್ವಿನಿ ಜಗದಾತ, ವಿಜಯಲಕ್ಷ್ಮೀ ಮಾನ್ವಿ, ಅಕ್ಕಮ್ಮ ವಸ್ತ್ರದ, ರೇಖಾ ಬಂಗಾರಶೆಟ್ಟರ್, ಕವಿತಾ ಬಂಗಾರಿ, ಶಶಿಕಲಾ ಮಾಲಿಪಾಟೀಲ್, ಮಾಧುರಿ ಮಾಳೆಕೊಪ್ಪ, ವಿಜಯಲಕ್ಷ್ಮೀ ಕೋಟಗಿ, ಶಾರದಾ ಸಜ್ಜನರ, ಪುಷ್ಪ ಉಕ್ಲಿ, ಜ್ಯೋತಿ ಹಾನಗಲ್, ಪ್ರಭಾವತಿ ಬೆಳವಣಿಕಿಮಠ, ಯೋಗೇಶ್ವರಿ ಭಾವಿಕಟ್ಟಿ, ಕಸ್ತೂರಿ ಕಮ್ಮಾರ, ಪದ್ಮನಿ ಮುತ್ತಲದಿನ್ನಿ, ಪಾರ್ವತಿ ಪಟ್ಟಣಶೆಟ್ಟಿ, ಶಶಿಧರ ದಿಂಡೂರ, ಲಿಂಗರಾಜ ಪಾಟೀಲ, ಸಂತೋಷ ಅಕ್ಕಿ, ಬಸವರಾಜ ನರೇಗಲ್ಲ ಇದ್ದರು.



ಪರಿಸರ ಸಮತೋಲನಕ್ಕೆ ಪಕ್ಷಿಗಳು ಮೂಲಾಧಾರ

ಗದಗ: ಪಕ್ಷಿಗಳ ಜೀವನ ಕ್ರಮ ಚೇತೋಹಾರಿಯಾಗಿದೆ. ಚಲನೆ, ತೀಕ್ಷ್ಣತೆ, ವೈರಿಗಳಿಂದ ರಕ್ಷಣೆ ಮುಂತಾದ ವಿಷಯಗಳಲ್ಲಿ ಅವುಗಳ ಯೋಚನಾ ಶಕ್ತಿ ಅದ್ಭುತ. ಪರಿಸರ ಸಮತೋಲನದ ಹಿನ್ನೆಲೆಯಲ್ಲಿ ಪಕ್ಷಿಗಳ ಪಾತ್ರ ಮಹತ್ವದ್ದು. ಮನುಷ್ಯ ಇವುಗಳನ್ನು ತನ್ನ ಪರಿವಾರದ ಭಾಗವಾಗಿ ನೋಡಬೇಕು ಎಂದು ಪಕ್ಷಿಮಿತ್ರ ಪ್ರಕಾಶ ಗೌಡರ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜರುಗಿದ ಕಾರ್ಯಕ್ರಮದಲ್ಲಿ ಕೆ.ಎಸ್.ಕೊಡ್ಲಿವಾಡ ಅವರು ರಚಿಸಿದ ಮಂಗೋಲಿಯಾ ಟು ಮಾಗಡಿ ವಲಸೆ ಪಕ್ಷಿಗಳ ಪುಸ್ತಕದ ಕುರಿತು ಮಾತನಾಡಿದರು.

ಆಹಾರ, ನೀರು, ವಿಶ್ರಾಂತಿ ಇಲ್ಲದೇ ಸಾವಿರಾರು ಕಿಲೋಮಿಟರ್ ವಲಸೆ ಬರುವ ಪಕ್ಷಿಗಳು ಅತಿಯಾದ ಕ್ರಿಮಿಕೀಟಗಳ ಹಾವಳಿಯಿಂದ ಮನುಷ್ಯನನ್ನು ರಕ್ಷಿಸುತ್ತವೆ. ಪರಿಸರದಲ್ಲಿರುವ ಜೇನ್ನೊಣಗಳು ಮಾಡುವ ಪರಾಗಸ್ಪರ್ಶ ಕ್ರಿಯೆಯಿಂದ ಮನುಷ್ಯನಿಗೆ ಆಹಾರ ದೊರೆಯುತ್ತಿದೆ. ಪಕ್ಷಿಗಳ ಮಲಮೂತ್ರದಿಂದ ಅರಣ್ಯ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿ ಮನುಷ್ಯ ಶ್ರೇಷ್ಠತೆಯ ವ್ಯಸನದಿಂದ ಹೊರಬಂದು ಪರಿಸರದ ಕೂಸಾಗಿ ಬದುಕಬೇಕೆಂದು ತಿಳಿಸಿದರು.

ಪುಸ್ತಕ ಬಿಡುಗಡೆಗೊಳಿಸಿದ ನಂದಿವೇರಿಮಠದ ಶಿವಕುಮಾರ ಸ್ವಾಮೀಜಿ ಮಾತನಾಡಿ, ಮಾಗಡಿ ಮತ್ತು ಶೆಟ್ಟಿಕೆರೆ ಇನ್ನಷ್ಟು ಅಭಿವೃದ್ಧಿ ಹೊಂದಬೇಕು. ವಿದ್ಯಾರ್ಥಿಗಳಿಗೆ, ಪಕ್ಷಿಪ್ರಿಯರಿಗೆ ಈ ಪುಸ್ತಕ ಸಂಪನ್ಮೂಲ ಸಾಮಗ್ರಿಯಾಗಿದೆ ಎಂದು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರಡಿ ಮಾತನಾಡಿದರು.

ಲೇಖಕ ಕೆ.ಎಸ್.ಕೊಡ್ಲಿವಾಡ ಮಾತನಾಡಿ, ವಲಸೆ ಪಕ್ಷಿಗಳ ಬಗ್ಗೆ ಕುತೂಹಲವೆನಿಸಿ ಅಧ್ಯಯನ ಮಾಡಿ ಈ ಪುಸ್ತಕವನ್ನು ರಚಿಸಲಾಗಿದೆ. ಮಾಗಡಿ ಕೆರೆಯ ಸ್ವಚ್ಛತೆ, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಉತ್ತಮ ಪ್ರವಾಸಿ ತಾಣವನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ಅಧ್ಯಕ್ಷತೆ ವಹಿಸಿದ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿದರು.

ರಾಹುಲ ಗಿಡ್ನಂದಿ ನಿರೂಪಿಸಿದರು. ಡಿ.ಎಸ್ .ಬಾಪುರಿ ಸ್ವಾಗತಿಸಿದರು. ಅಶೋಕ ಹಾದಿ ವಂದಿಸಿದರು. ಅಂದಾನಪ್ಪ ವಿಭೂತಿ, ಸುನೀತಾ ಬುರುಡಿ, ಡಿ.ಎಚ್.ಪಾಟೀಲ, ಚಂದ್ರಶೇಖರ ವಸ್ತ್ರದ, ಕೆ.ಎಚ್. ಬೇಲೂರ, ಜಿ.ಬಿ.ಪಾಟೀಲ, ರಾಜಶೇಖರ ಬಳ್ಳಾರಿ, ಅಮರೇಶ ರಾಂಪೂರ, ರತ್ನಕ್ಕ ಪಾಟೀಲ, ಸಿದ್ದರಾಮ ಹಿರೇಮಠ, ಭಾರತಿ ಕೋಟಿ, ಮೋಹನ ಕೋಟಿ, ಬಸವರಾಜ ದನದಮನಿ, ಜಿ.ಎ.ಪಾಟೀಲ, ಈಶ್ವರಪ್ಪ ಕುಬುಸದ, ರವಿ ಕೇಸರಿ, ಸಚಿನ ಕೊಡ್ಲಿವಾಡ, ಉಮಾದೇವಿ ಪಾಟೀಲ, ಶೈಲಜಾ ಗಿಡ್ನಂದಿ, ಅಶೋಕ ಸತ್ಯರಡ್ಡಿ, ಸಿ.ಎಂ. ಮಾರನಬಸರಿ, ಬಿ.ಬಿ.ಹೊಳಗುಂದಿ, ಯಲ್ಲಪ್ಪ ಹಂದ್ರಾಳ, ರವಿ ದೇವರಡ್ಡಿ, ಶೇಖಣ್ಣ ಕಳಸಾಪೂರಶೆಟ್ರ, ಅಶೋಕ ಸತ್ಯರೆಡ್ಡಿ, ರತ್ನಾ ಪುರಂತರ, ಅಕ್ಕಮ್ಮ ಪಾರ್ವತಿಮಠ, ರಾಜಶೇಖರ ದಾನರಡ್ಡಿ ಇದ್ದರು.



ದೇವರ ದಾಸಿಮಯ್ಯ ಜಯಂತ್ಯುತ್ಸವ

ಲಕ್ಷ್ಮೇಶ್ವರ: ದೇವರ ದಾಸಿಮಯ್ಯ 10ನೇ ಶತಮಾನದ ಕನ್ನಡದ ಆದ್ಯ ವಚನಕಾರರಲ್ಲೊಬ್ಬರಾಗಿದ್ದು, ಕಾಯಕವನ್ನೇ ಕೈಲಾಸ ಎಂದು ನಂಬಿ ನೇಕಾರಿಕೆ ಕಾಯಕದ ಮೂಲಕ ಬದುಕು ಸಾಗಿಸಿ ಸಮಾಜಕ್ಕೆ ಶ್ರೇಷ್ಠ ಸಂದೇಶಗಳನ್ನು ತಮ್ಮ ವಚನಗಳ ಮೂಲಕ ನೀಡಿದ್ದರು ಎಂದು ಸಿಆರ್‌ಪಿ ಸಂಪನ್ಮೂಲ ವ್ಯಕ್ತಿ ಶ್ರೀನಿವಾಸ ಮತ್ತೂರ ಹೇಳಿದರು.

ಅವರು ಪಟ್ಟಣದ ಸರ್ಕಾರಿ ಮಾದರಿ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯಲ್ಲಿ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ರಾಮನಾಥ ಅಂಕಿತದೊಂದಿಗೆ ಸರಳ ತೀಕ್ಷ್ಣ ವೈಚಾರಿಕತೆ ಹಾಗೂ ಭಕ್ತಿ ಭರಿತ ಸುಮಾರು 176ಕ್ಕೂ ಹೆಚ್ಚು ವಚನಗಳನ್ನು ರಚಿಸಿ ವಚನ ಸಾಹಿತ್ಯಕ್ಕೆ ಅಡಿಪಾಯ ಹಾಕಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಶಾಲೆಯ ಮುಖ್ಯೋಪಾಧ್ಯಾಯ ಬಸವರಾಜ ಕುಂಬಾರ ಮಾತನಾಡಿ, ದಾಸಿಮಯ್ಯನವರು ಕೇವಲ ವಚನಕಾರರಾಗಿರದೆ ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದ ಮಹಾಪುರುಷರಾಗಿದ್ದಾರೆ, ಇವರ ವಚನಗಳು ಸರಳತೆ ಮತ್ತು ಅರ್ಥಗರ್ಭಿತವಾಗಿವೆ ಎಂದು ಹೇಳಿದರು.



ಈ ಸಂದರ್ಭದಲ್ಲಿ ಶಿಕ್ಷಕರಾದ ಹೆಚ್.ಡಿ.ನಿಂಗರಡ್ಡಿ, ಆರ್.ಎಂ.ಶಿರಹಟ್ಟಿ, ಎಲ್.ಎ.ಬಣಕಾರ, ಆರ್.ಕೆ.ಉಪನಾಳ, ನೇತ್ರಾವತಿ ಕುಂಬಾರ, ಗೀತಾ ಗುರಿಕಾರ ಮುಂತಾದವರಿದ್ದರು.

ಸೋಮೇಶ್ವರ ದೇವಸ್ಥಾನದ ಹುಂಡಿ ಹಣ ಎಣಿಕೆ: 1ಲಕ್ಷ 68 ಸಾವಿರ ರೂ. ಸಂಗ್ರಹ

ಲಕ್ಷ್ಮೇಶ್ವರ: ಪಟ್ಟಣದ ಐತಿಹಾಸಿಕ ಪ್ರಸಿದ್ಧ ಶ್ರೀ ಸೋಮೇಶ್ವರ ದೇವಸ್ಥಾನದ ಹುಂಡಿಯ ಹಣವನ್ನು ಭಾನುವಾರ ಸಂಜೆ ವಿವಿಧ ಕಮೀಟಿಗಳ ಸಮ್ಮುಖದಲ್ಲಿ ಎಣಿಕೆ ಮಾಡಲಾಯಿತು.

ಹುಂಡಿಯಲ್ಲಿ ಭಕ್ತರು ಸಲ್ಲಿಸಿದ ಹಣವು ಈ ಬಾರಿ ಸುಮಾರು 1ಲಕ್ಷ 68 ಸಾವಿರ ರೂಗಳು ಸಂಗ್ರಹವಾಗಿತ್ತು.ಸಂಜೆ ದೇವರಿಗೆ ಪೂಜೆ ಸಲ್ಲಿಸಿ ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮೀಟಿ ಅಧ್ಯಕ್ಷ ಗುರುರಾಜ ಪಾಟೀಲ ಕುಲಕರ್ಣಿ, ಜಾತ್ರಾ ಕಮೀಟಿ ಅಧ್ಯಕ್ಷ ಕುಬೇರಪ್ಪ ಮಹಾಂತಶೆಟ್ಟರ, ದೇವಸ್ಥಾನದ ಅರ್ಚಕರ ಸಮಿತಿ ಅಧ್ಯಕ್ಷ ದಿಗಂಬರ ಪೂಜಾರ ಅವರ ಬಳಿ ಇರುವ ಹುಂಡಿಯ ಕೀಗಳಿಂದ ಎಲ್ಲರ ಸಮಕ್ಷಮ ಹುಂಡಿಯನ್ನು ತೆಗೆಯಲಾಯಿತು. ನಂತರ ಭಕ್ತ ಸಮೂಹದವರು ಸೇರಿ ಹಣವನ್ನು ಎಣಿಕೆ ಮಾಡಿದರು.

ಎಣಿಕೆಯ ನಂತರ ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮೀಟಿ, ಜಾತ್ರಾ ಕಮೀಟಿ ಮತ್ತು ಅರ್ಚಕರಿಗೆ ಹಣವನ್ನು ಹಂಚಿಕೆ ಮಾಡಲಾಯಿತು.



ಈ ವೇಳೆ ಮಾತನಾಡಿದ ಭಕ್ತರ ಸೇವಾ ಟ್ರಸ್ಟ್ ಕಮೀಟಿ ಖಜಾಂಚಿ ಚನ್ನಪ್ಪ ಜಗಲಿ ಪ್ರತಿವರ್ಷ ಯುಗಾದಿ ಹಬ್ಬ ಮುಗಿದ ಮೇಲೆ ಹುಂಡಿಯನ್ನು ತೆರೆಯುವ ಕಾರ್ಯವನ್ನು ಮಾಡಲಾಗುತ್ತಿದ್ದು, ಅದರಲ್ಲಿ ಸಂಗ್ರಹವಾಗುವ ಹಣವನ್ನು ಮೂರು ಕಮೀಟಿಗಳಿಗೆ ಹಂಚಿಕೆ ಮಾಡಲಾಗುವದು. ಜಾತ್ರಾ ಮಹೋತ್ಸವ ಮತ್ತು ಪಲಿಗೆರೆ ಉತ್ಸವ ಸೇರಿದಂತೆ ಅನೇಕ ಕಾರ್ಯಗಳಿಗೆ ಈ ಹುಂಡಿಯಲ್ಲಿ ಸಂಗ್ರಹವಾದ ಹಣವನ್ನು ಬಳಕೆ ಮಾಡಲಾಗುವದು, ದೇವಸ್ಥಾನದ ಭಕ್ತರು ಹುಂಡಿಯಲ್ಲಿ ಹಣವನ್ನು ಹಾಕಿ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಮನವಿ ಮಾಡುವದಾಗಿ ಹೇಳಿದರು.

ಈ ವೇಳೆ ಶ್ರೀ ಸೋಮೇಶ್ವರ ಭಕ್ತರ ಸೇವಾ ಟ್ರಸ್ಟ್ ಕಮಿಟಿ ಅಧ್ಯಕ್ಷ ಗುರುರಾಜ ಪಾಟೀಲ ಕುಲಕರ್ಣಿ, ನಿಕಟಪೂರ್ವ ಅಧ್ಯಕ್ಷ ಚಂಬಣ್ಣ ಬಾಳಿಕಾಯಿ, ಜಾತ್ರಾ ಕಮೀಟಿ ಅಧ್ಯಕ್ಷ ಕುಬೇರಪ್ಪ ಮಹಾಂತಶೆಟ್ಟರ, ದೇವಸ್ಥಾನದ ಅರ್ಚಕರ ಸಮಿತಿ ಅಧ್ಯಕ್ಷ ದಿಗಂಬರ ಪೂಜಾರ, ಸಿದ್ದನಗೌಡ ಬಳ್ಳೊಳ್ಳಿ, ಪ್ರವೀಣ ಬಾಳಿಕಾಯಿ, ನೀಲಪ್ಪ ಕರ್ಜೆಕಣ್ಣವರ, ಶಿವಯೋಗಿ ಅಂಕಲಕೋಟಿ, ಸುರೇಶ ರಾಚನಾಯ್ಕರ, ಸೋಮಣ್ಣ ಮುಳಗುಂದ, ಮಯೂರಗೌಡ ಪಾಟೀಲ, ವಿರುಪಾಕ್ಷಪ್ಪ ಆದಿ, ಜಯಪ್ರಕಾಶ ಹೊಟ್ಟಿ, ಬಂಗಾರಪ್ಪ ಮುಳಗುಂದ, ಎಸ್.ಪಿ.ಪಾಟೀಲ, ರಾಘವೇಂದ್ರ ಪೂಜಾರ, ಸಮೀರ ಪೂಜಾರ, ಪ್ರಕಾಶ ಮುಳಗುಂದ, ಬಸವರಾಜ ಮೆಣಸಿನಕಾಯಿ, ಕಾಶಪ್ಪ ಮುಳಗುಂದ, ಸೋಮಣ್ಣ ಮುಳಗುಂದ, ಚನ್ನಪ್ಪ ಚಿಂಚಲಿ, ನಂದೀಶ ಬಂಡಿವಾಡ, ರಾಮಣ್ಣ ಗೌರಿ ಮುಂತಾದವರಿದ್ದರು.

ಚಾಲುಕ್ಯರ ಕಾಲದ ದೇವಸ್ಥಾನಗಳಿಗೆ ಮರುಜೀವ: ಶಾಸಕ ಪಾಟೀಲ

ರೋಣ: ರೋಣದಲ್ಲಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರುವ ದೇವಸ್ಥಾನಗಳಿಗೆಮತ್ತಷ್ಟು ಮೆರಗು ನೀಡುವ ಮಹತ್ವದ ಉದ್ದೇಶದಿಂದ 4 ಕೋಟಿ 50 ಲಕ್ಷ ರೂ.ಗಳ ವೆಚ್ಚದಲ್ಲಿ ಮರು ಜೀವ ನೀಡುವ ಕಾಯಕವನ್ನು ಮಾಡಲಾಗುತ್ತಿದೆ ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ಸೋಮವಾರ ಪ್ರವಾಸೋದ್ಯಮ ಹಾಗೂ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಮೈಸೂರು ಇವರ ಸಹಯೋಗದಲ್ಲಿ 4 ಕೋಟಿ50 ಲಕ್ಷರೂ.ಗಳವೆಚ್ಚದಲ್ಲಿರಾಮಲಿಂಗೇಶ್ವರ ದೇವಾಲಯ, ಈಶ್ವರ ದೇವಾಲಯ ಮತ್ತು ಕಲ್ಯಾಣಿ ಸಂರಕ್ಷಣೆ, ಅನಂತಶಯನ ದೇವಸ್ಥಾನ ಸಂರಕ್ಷಣೆ ಕಾಮಗಾರಿಗಳಿಗೆ ಭೂಮಿ ಪೂಜೆಯನ್ನು ನೆರವೇರಿಸಿ ಮಾತನಾಡಿದ ಅವರು, ಇತಿಹಾಸ ಪ್ರಸಿದ್ಧ ರೋಣ ಪಟ್ಟಣವು ಚಾಲುಕ್ಯರ ಕಾಲದಲ್ಲಿ ದ್ರೋಣಾಪೂರವಾಗಿತ್ತು ಎಂಬುದು ನಮಗೆ ತಿಳಿದು ಬರುತ್ತದೆ. ಪಟ್ಟಣದಲ್ಲಿ 11 ಇತಿಹಾಸ ಪ್ರಸಿದ್ಧ ದೇವಸ್ಥಾನಗಳಿದ್ದು ಅವುಗಳ ಸಂರಕ್ಷಣೆ ನಮ್ಮ ಕರ್ತವ್ಯ ಎಂಬುದನ್ನು ಅರಿತುಕೊಂಡು ಪಟ್ಟಣದಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನ ಸಂರಕ್ಷಣೆಗೆ 1 ಕೋಟಿ 50 ಲಕ್ಷ ರೂ., ಈಶ್ವರ ದೇವಾಲಯ ಮತ್ತು ಕಲ್ಯಾಣಿ ಸಂರಕ್ಷಣೆಗೆ 1 ಕೋಟಿ 50 ಲಕ್ಷರೂ, ಅನಂತಶಯನ ದೇವಸ್ಥಾನದ ಸಂರಕ್ಷಣೆಗಾಗಿ 1 ಕೋಟಿ 50 ಲಕ್ಷ ರೂ. ಗಳನ್ನು ಒದಗಿಸಲಾಗಿದ್ದು, ಈ ಎಲ್ಲ ದೇವಸ್ಥಾನಗಳು ಸ್ವಲ್ಪ ಮಾರ್ಪಾಡುಗೊಂಡು ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ದೇವಸ್ಥಾನಗಳ ರಿತಿಯಲ್ಲಿ ಕಾಣಸಿಗಲಿವೆ ಎಂದರು. ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ 11 ದೇವಸ್ಥಾನಗಳ ಪೈಕಿ ಮೂರು ದೇವಸ್ಥಾನಗಳಿಗೆ ಈಗಾಗಲೇ ಅನುದಾನವನ್ನು ಒದಗಿಸಲಾಗಿದ್ದು, ಉಳಿದ ದೇವಸ್ಥಾನಗಳಿಗೆ ಮರು ಜೀವ ನೀಡುವ ಕಾರ್ಯ ಶೀಘ್ರ ಆರಂಭಗೊಳ್ಳಲಿದ್ದು, ರೋಣ ಪಟ್ಟಣವನ್ನು ಸಹ ಸುಂದರ ಪ್ರವಾಸಿ ತಾಣವನ್ನಾಗಿ ರೂಪಿಸಲು ನೀಲ ನಕ್ಷೆ ಸಿದ್ಧವಾಗಿದ್ದು, ಸಾರ್ವಜನಿಕರ ಸಹಕಾರ ಮುಖ್ಯವಾಗಿದೆ. ಪಟ್ಟಣದ ಹೃದಯ ಭಾಗದಲ್ಲಿರುವ ಕೆರೆ ಅಭಿವೃದ್ಧಿ ಕಾರ್ಯಕ್ಕೆ ಈ ಮೊದಲು 2 ಕೋಟಿ ರೂ.ಗಳನ್ನು ನೀಡಲಾಗಿತ್ತು. ಈಗ ಮತ್ತೆ 2 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದ್ದು ಅದೊಂದು ಸುಂದರ ತಾಣವಾಗಲಿದೆ ಎಂದರು.



50 ಕೋಟಿ ವೆಚ್ಚದಲ್ಲಿ ಜಿಟಿಟಿಸಿ ಕಾಲೇಜು ಜೂನ್‌ನಿಂದ ಆರಂಭಗೊಳ್ಳಲಿದ್ದು ವಿದ್ಯಾರ್ಥಿಗಳು ಲಾಭ ಪಡೆಯಬೇಕು. ಅಲ್ಲದೆ 6 ಎಕರೆ ಜಮೀನಿನಲ್ಲಿ 38 ಕೋಟಿ ರೂ.ಗಳ ವೆಚ್ಚದಲ್ಲಿ ಕಾರ್ಮಿಕರ ವಸತಿ ಶಾಲೆ ಸಹ ಶೀಘ್ರ ಆರಂಭಗೊಳ್ಳಲಿದೆ.ಅಲ್ಪ ಸಂಖ್ಯಾತರ ವಸತಿ ನಿಲಯದ ಕಟ್ಟಡಕ್ಕೂ ಸಹ ಅನುದಾನ ಬಿಡುಗಡೆಗೊಂಡಿದ್ದು, ವಾರದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು. ಇನ್ನು ಪಟ್ಟಣದಲ್ಲಿ ಚರಂಡಿ ನೀರು ಸಾರಾಗವಾಗಿ ಹರಿದು ಹೋಗಲು 1 ಕೋಟಿ ರೂ.ಗಳ ಟೆಂಡರ್ ಕರೆಯಲಾಗಿದೆ. ಪುರುಷ ಮತ್ತು ಮಹಿಳೆಯರ ಪ್ರತೇಕ ಶೌಚಾಲಯ ನಿರ್ಮಾಣಕ್ಕೆ 40 ಲಕ್ಷ ರೂ. ಗಳನ್ನು ಈಗಾಗಲೇ ಒದಗಿಸಲಾಗಿದೆ ಎಂದ ಅವರು ಪಟ್ಟಣದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿದ್ದೇನೆ ಎಂದರು.

ಐ.ಎಸ್.ಪಾಟೀಲ, ಸಂಗನಗೌಡ ಪಾಟೀಲ, ಬಸವರಾಜ ನವಲಗುಂದ, ಮುತ್ತಣ್ಣ ಸಂಗಳದ, ವಿ.ಬಿ.ಸೋಮನಕಟ್ಟಿಮಠ, ಇನಾಯತ್ ತರಪದಾರ, ಶಫೀಕ್ ಮೂಗನೂರ, ಪರಶುರಾಮ ಅಳಗವಾಡಿ, ಗುರುರಾಜ ಕುಲಕರ್ಣಿ, ಶಿವಣ್ಣ ನವಲಗುಂದ, ಯಲ್ಲಪ್ಪ ಕಿರೇಸೂರ, ಗದಿಗೇಪ್ಪ ಕಿರೇಸೂರ, ಮಲೀಕ್ ಯಲಿಗಾರ, ಅಸ್ಲಂ ಕೊಪ್ಪಳ, ಕಟ್ಟಿಮನಿ ಸೇರಿದಂತೆ ಪ್ರವಾಸೋದ್ಯಮ ಇಲಾಖೆಯ ಶಿವನಗೌಡ ಉಪಸ್ಥಿತರಿದ್ದರು.

ಏ.26ರಂದು ಉಚಿತ ಸಾಮೂಹಿಕ ವಿವಾಹ

ಗದಗ: ದಿ.ಯಶೋಧಭಾಯಿ ಅಂಬಾಸಾ ಪೂಜಾರಿ ಸ್ಮರಣಾರ್ಥದಲ್ಲಿ ಮಾಲಭಾಯಿ ಹಾಗೂ ಪರಶುರಾಮ ಅಂಬಾಸಾ ಪೂಜಾರಿ ಇವರಿಂದ ಏ.26ರಂದು ಹಳೆ ಸರಫ ಬಜಾರದ ಜಗದಂಬಾ ದೇವಸ್ಥಾನದಲ್ಲಿ ಉಚಿತ ಸಾಮೂಹಿಕ ವಿವಾಹ ಜರಗುತ್ತವೆ ಎಂದು ವಿನೋದ ಶಿಡ್ಲಿಂಗ್ ಹೇಳಿದರು.

ಸೋಮವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೋಮವಂಶ ಸಹಸ್ರಾರ್ಜುನ ಕ್ಷತ್ರೀಯ ಜಗದಂಬಾ ದೇವಸ್ಥಾನ, ತುಳಜಾಭವಾನಿ ದೇವಸ್ಥಾನ, 1008 ಜಗದ್ಗುರು ವಿಠಲಾರೂಢ ಮಹಾಸ್ವಾಮಿ ಗುರುನಿರಂಜನಸ್ವಾಮಿ ಸಂಸ್ಥಾನಮಠದ ಶ್ರೀ ಅಂಬಾಭವಾನಿ ದೇವಸ್ಥಾನ,ಎಸ್.ಎಸ್.ಕೆ. ಸಮಾಜ ಪಂಚ ಕಮೀಟಿ , ತರುಣ ಸಂಘ, ಮಹಿಳಾ ಮಂಡಳ ಹಾಗೂ ದಸರಾ ಉತ್ಸವಸಮಿತಿಸಹಯೋಗದೊಂದಿಗೆ ನಗರದ ಜಗದಂಬಾ ದೇವಸ್ಥಾನದಲ್ಲಿ



ಸಾಮೂಹಿಕ ಉಪನಯನ ಹಾಗೂ ವಿವಾಹ ಸಮಾರಂಭ ಏ.26 ರಂದು ಬೆಳಗ್ಗೆ 9ಕ್ಕೆ ಮಿಥುನ ಲಗ್ನದಲ್ಲಿ ವಟುಗಳಿಗೆ ಸಾಮೂಹಿಕ ಉಪನಯನ ಹಾಗೂ ಮಧ್ಯಾಹ್ನ 12.30ಕ್ಕೆ ಅಭಿಜಿತ್ ಲಗ್ನದ ಶುಭಮುಹೂರ್ತದಲ್ಲಿ ಸಾಮೂಹಿಕ ವಿವಾಹಕಾರ್ಯಕ್ರಮವುಜಗದಂಬಾ ದೇವಿಯ ಅನುಗ್ರಹದಿಂದ ಬಹು ವಿಜೃಂಭಣೆಯಿಂದ ಜರುಗುವುದು ಎಂದು ಹೇಳಿದರು.

ಸಮಾಜದ ಎಲ್ಲ ಬಾಂಧವರು ಆಗಮಿಸಿ ವಟುಗಳಿಗೆ ಹಾಗೂ ನವ ದಂಪತಿಗಳಿಗೆ ಆಶೀರ್ವದಿಸ ಬೇಕೆಂದು ವಿನಂತಿಸಿದರು.

ಮದುವೆ ನೋಂದವಣಿಗೆ ಬರುವಾಗ ಕಡ್ಡಾಯವಾಗಿ ವಧು-ವರರ ಪಾಲಕರು, ಪೋಷಕರು ಹಾಗೂ 1 ಸಾಕ್ಷಿಯೊಂದಿಗೆ ಬರಬೇಕು, ವರನಿಗೆ 21 ವರ್ಷ ಮತ್ತು ವಧುವಿಗೆ 18 ವರ್ಷ ಪೂರ್ತಿ ತುಂಬಿರಬೇಕು ಹಾಗೂ ವಟುವಿನ ವಯಸ್ಸು 5ವರ್ಷ ಮೇಲ್ಪಟ್ಟಿರಬೇಕು. ಈಗ ನಡೆಯುವ ಮದುವೆ ಮೊದಲನೆ ಮದುವೆ ಆಗಿರಬೇಕು, ಎರಡನೇ ಮದುವೆಗೆ ಅವಕಾಶವಿರುವದಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಎಸ್ ಎಸ್ ಕೆ ಸಮಾಜದ ಗುರು-ಹಿರಿಯರು ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ಸಭೆ | ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಸರ್ವ ಜನರ ಪಕ್ಷ ಕಾಂಗ್ರೆಸ್



ಬಾಗಲಕೋಟೆ: ಕಾಂಗ್ರೆಸ್ ಪಕ್ಷವು ಎಲ್ಲ ಜಾತಿ, ಧರ್ಮ ಮತ್ತು ವರ್ಗದ ಜನರನ್ನು ಒಗ್ಗೂಡಿಸುವ ಪಕ್ಷವಾಗಿದ್ದು, ಸಾಮಾಜಿಕ ನ್ಯಾಯದ ಪರವಾಗಿ ಕೆಲಸ ಮಾಡುತ್ತಿದೆ. ಬಸವಣ್ಣನವರ ಆದರ್ಶಗಳನ್ನು ಅನುಸರಿಸುವ ಪಕ್ಷ ಕಾಂಗ್ರೆಸ್ ಮಾತ್ರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸೋಮವಾರ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರವಾಗಿ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿಯವರು ಕೇವಲ ಹಿಂದುತ್ವವಾದವನ್ನು ಮುಂದಿಡುತ್ತಾರೆಯೇ ಹೊರತು, ಕೃಷ್ಣಾ ಮೇಲ್ದಂಡೆ ಹಂತ-3 ಯೋಜನೆಗೆ ಅವರ ಅಧಿಕಾರಾವಧಿಯಲ್ಲಿ ಯಾವುದೇ ಅಭಿವೃದ್ಧಿ ಮಾಡಲಿಲ್ಲ. ನಮ್ಮ ಸರ್ಕಾರ ಈ ಯೋಜನೆಯಡಿ ಮುಳುಗಡೆಯಾಗುವ ಜಮೀನಿಗೆ ಸೂಕ್ತ ಪರಿಹಾರ ನೀಡುವ ನಿರ್ಣಯ ಕೈಗೊಂಡಿದೆ. ಬೇಕಾದ ಅನುದಾನವನ್ನು ಈ ವರ್ಷದ ಬಜೆಟ್‌ನಲ್ಲಿ ತೆಗೆದಿರಿಸಲಾಗಿದೆ. ಇದಕ್ಕಾಗಿ 70 ಸಾವಿರ ಕೋಟಿ ರೂಗಳ ಪರಿಹಾರವನ್ನು ಒಂದೇ ಹಂತದಲ್ಲಿ ನೀಡಿ, ನನೆಗುದಿಗೆ ಬಿದ್ದಿರುವ ಈ ಕಾರ್ಯಕ್ಕೆ ಚಾಲನೆ ನೀಡಲಾಗುವುದು ಎಂದರು.

ದಿ.ಎಚ್.ವೈ.ಮೇಟಿ ಅವರ ಸೇವೆಯನ್ನು ಸ್ಮರಿಸಿ, ಅವರು ಬಡವರು, ಹಿಂದುಳಿದವರು, ದಲಿತರು ಹಾಗೂ ರೈತರ ಪರ ಹೋರಾಟ ನಡೆಸಿದ ಜನನಾಯಕರಾಗಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಬಹಳ ನಿಷ್ಠಾವಂತ ವ್ಯಕ್ತಿಯಾಗಿದ್ದರು. ಯಾರನ್ನಾದರೂ ನಂಬಿಕೊಂಡರೆ ಅವರನ್ನು ಎಂದಿಗೂ ಕೈಬಿಡುತ್ತಿರಲಿಲ್ಲ. ಅವರ ಅಗಲಿಕೆಯಿಂದ ಕ್ಷೇತ್ರಕ್ಕೆ ಅಪಾರ ನಷ್ಟವಾಗಿದೆ. ಅಂಥ ವ್ಯಕ್ತಿಯನ್ನು ಕಳೆದುಕೊಂಡು ಉಪಚುನಾವಣೆ ನಡೆಯುತ್ತಿದೆ ಎಂದರು.

ಮೇಟಿ ಕನಸು ನನಸು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಮಾತನಾಡಿ, ಮೆಡಿಕಲ್ ಕಾಲೇಜ್ ದಿ.ಮೇಟಿಯವರ ಕನಸಾಗಿತ್ತು ಹಾಗಾಗಿ ಅದಕ್ಕೆ ಅಡಿಗಲ್ಲು ಹಾಕಲಾಗಿದೆ. ಖಾಸಗಿ ವೈದ್ಯಕೀಯ ಸೇವೆ ಬಡವರಿಗೆ ದುಬಾರಿಯಾಗಿತ್ತು. ಹಾಗಾಗಿ ಮೆಡಿಕಲ್ ಕಾಲೇಜ್ ಮಾಡಲು ಮುಂದಾಗಿದ್ದೇವೆ. ನಾವು 2013ರಲ್ಲಿಯೇ ಘೋಷಣೆ ಮಾಡಿದ್ದೆವು. ಮುಂದೆ ಅವರದ್ದೇ ಸರ್ಕಾರ ಬಂತು. ಆದರೆ, ಅದನ್ನು ಮಾಡಲಿಲ್ಲ. ಈಗ ನಾವು ಮೇಟಿಯವರ ಕನಸು ನನಸು ಮಾಡಿದ್ದೇವೆ ಎಂದು ತಿಳಿಸಿದರು.

ಸತ್ಯ-ಅಸತ್ಯದ ಚುನಾವಣೆ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಮಾತನಾಡಿ, ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ನಡೆಯುತ್ತಿರುವ ಉಪಚುನಾವಣೆ ಧರ್ಮ ಹಾಗೂ ಅಧರ್ಮ ಮತ್ತು ಸತ್ಯ ಹಾಗೂ ಸುಳ್ಳಿನ ನಡುವೆ ನಡೆಯುತ್ತಿದೆ. ಬಿಜೆಪಿಯವರದ್ದು ಬರೀ ಸುಳ್ಳು ಹೇಳುವ ಕೆಲಸ. ನಮ್ಮದೇನಿದ್ದರೂ ನುಡಿದಂತೆ ನಡೆಯುವುದು ನಮ್ಮ ಕಾಯಕ. ಚುನಾವಣೆ ಮುಂಚೆ, ಚುನಾವಣೆ ನಂತರ ನಾವು ಹೇಳಿದಂತೆ ನಡೆದುಕೊಂಡಿದ್ದೇವೆ ಎಂದರು.

ಮತಕ್ಷೇತ್ರ ಪ್ರತಿಯೊಂದು ಬೂತ್ ಮಟ್ಟ ದಲ್ಲೂ ಸಂಘಟನೆ ಬಲವಾಗಿದ್ದು, ನಮ್ಮ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ ಗೆಲುವು ಖಚಿತ. ಇಡೀ ಸರ್ಕಾರ ಉಮೇಶ ಪರವಾಗಿ ನಿಲ್ಲಲಿದೆ. ಜತೆಗೆ ಮಲ್ಲಿಕಾರ್ಜುನ ಚರಂತಿಮಠರ ಬೆಂಬಲ ನಮಗೆ ಶಕ್ತಿಯಾಗಿ ಪರಿಣಮಿಸಿದೆ ಎಂದು ಶಿವಕುಮಾರ ಹೇಳಿದರು.

ಸಚಿವರಾದ ಸತೀಶ ಜಾರಕಿಹೊಳಿ, ಆರ್.ಬಿ.ತಿಮ್ಮಾಪುರ, ಶಿವಾನಂದ ಪಾಟೀಲ, ಎಂ.ಬಿ.ಪಾಟೀಲ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ, ಮಾಜಿ ಸಚಿವ ಎಸ್.ಆರ್.ಪಾಟೀಲ, ಅಜಯಕುಮಾರ ಸರನಾಯಕ, ವೀಣಾ ಕಾಶಪ್ಪನವರ, ಮಲ್ಲಿಕಾರ್ಜುನ ಚರಂತಿಮಠ, ಸಂತೋಷ ಹೋಕ್ರಾಣಿ, ಎಂ.ಬಿ.ಸೌದಾಗರ, ಅನಿಲ ದಡ್ಡಿ, ಸಿದ್ದು ಕೊಣ್ಣೂರ, ಸಂಯುಕ್ತ ಪಾಟೀಲ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಬಿಜೆಪಿಯದ್ದು ಅಭಿವೃದ್ಧಿ ಶೂನ್ಯ ಆಡಳಿತ

ಬಾಗಲಕೋಟೆ: ಬಿಜೆಪಿ ಆಡಳಿತದ ಅವಧಿಯಲ್ಲಿ ಯಾವುದೇ ಪ್ರಮುಖ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಜನಪರ ಆಡಳಿತ ನೀಡುತ್ತಿದೆ. ಇದರಿಂದ ಬಡವರು, ಮಹಿಳೆಯರು ಮತ್ತು ರೈತರು ನೆಮ್ಮದಿಯ ಜೀವನ ನಡೆಸುವಂತಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವರ್ಷ ಕಳೆದರೂ ಕೇಂದ್ರ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಗೆಜೆಟ್ ನೊಟಿಫಿಕೇಶನ್ ಹೊರಡಿಸಿಲ್ಲ. ನಾವು ಈಗ ಪರಿಹಾರದ ಚೆಕ್ ವಿತರಣೆ ಮಾಡುತ್ತಿದ್ದೇವೆ. ಅದನ್ನು ಪ್ರಶ್ನೆ ಮಾಡುವ ನೈತಿಕತೆ ಬಿಜೆಪಿಯವರಿಗಿದೆಯೇ ಎಂದು ಪ್ರಶ್ನಿಸಿದರು.

ನಾವು ಒಪ್ಪಿತ ಪರಿಹಾರವಾಗಿ ನೀರಾವರಿ ಜಮೀನಿಗೆ ಎಕರೆಗೆ 40 ಲಕ್ಷ ರೂ. ಹಾಗೂ ಒಣ ಬೇಸಾಯಕ್ಕೆ 30 ಲಕ್ಷ ಪರಿಹಾರ ನೀಡುತ್ತಿದ್ದೇವೆ. ಈಗಾಗಲೇ ಕೆಲವರಿಗೆ ಚೆಕ್ ಕೂಡ ನೀಡಿದ್ದೇವೆ. ಬಿಜೆಪಿಯಲ್ಲಿ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ ಮುಖ್ಯಮಂತ್ರಿಗಳಾಗಿದ್ದಾಗ ಏಕೆ ಕೃಷ್ಣಾ ಮೇಲ್ದಂಡೆ ಯೋಜನೆ ಸಮಸ್ಯೆ ಬಗೆಹರಿಸಲಿಲ್ಲ ಎಂದರು.

ಕಾರ್ಯಕರ್ತರೊಂದಿಗೆ ಬೃಹತ್ ಮೆರವಣಿಗೆ

ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಚರಂತಿಮಠ ನಾಮಪತ್ರ ಸಲ್ಲಿಕೆ



ಬಾಗಲಕೋಟೆ: ಬಾಗಲಕೋಟೆ ವಿಧಾನಸಭೆಯ ಉಪಚುನಾವಣೆಗೆ ಬಿಜೆಪಿಯಿಂದ ವೀರಣ್ಣ ಚರಂತಿಮಠವರು ಪಕ್ಷದ ರಾಜ್ಯಾಧ್ಯಕ್ಷರು, ಹಿರಿಯರ ನಾಯಕರೊಂದಿಗೆ ಸೇರಿಕೊಂಡು ಸೋಮವಾರು ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸುವ ಮುನ್ನ ಮುಚಖಂಡಿ ವೀರಭದ್ರೇಶ್ವರ ದೇವಸ್ಥಾನದಲ್ಲಿ ವಿಶೇಶಷ ಪೂಜೆ ಸಲ್ಲಿಸಿದ ವೀರಣ್ಣ ಚರಂತಿಮಠ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ ನೇತೃತ್ವದಲ್ಲಿ ಚುನಾವಣಾಧಿಕಾರಿ ಸಂತೋಷ ಜಗಲಾಸರ್‌ಗೆ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸಿದ ಬಳಿಕ ಹಳೆ ಬಾಗಲಕೋಟೆಯ ಕಣವಿ ವೀರಭದ್ರೇಶ್ವರ ದೇವಸ್ಥಾನದ ಆವರಣದಿಂದ ಆರಂಭಗೊಂಡ ಕಾರ್ಯಕರ್ತರ, ಮುಖಂಡರ ಮೆರವಣಿಗೆ ಪಶು ಆಸ್ಪತ್ರೆಯ ರಸ್ತೆಯ ಮೂಲಕ ಹಳಪೇಟ ಮಡು, ಅಡತ ಬಜಾರ್, ವಲ್ಲಭಬಾಯಿ ವೃತ್ತ, ಎಂ.ಜಿ.ರಸ್ತೆ ಮೂಲಕ ಬಸವೇಶ್ವರ ವೃತ್ತಕ್ಕೆ ತಲುಪಿ ಸಾರ್ವಜನಿಕ ಸಭೆಯಾಗಿ ಮಾರ್ಪಟ್ಟಿತು.

ಕಾರ್ಯಕರ್ತರ ಉತ್ಸಾಹ: ಉರಿ ಬಿಸಿಲನ್ನು ಲೆಕ್ಕಿಸದೇ ಬಿಜೆಪಿ ಕಾರ್ಯಕರ್ತರು, ಮುಖಂಡರು ಕೈಯಲ್ಲಿ ಕಮಲದ ಬಾವುಟ ಹಿಡಿದುಕೊಂಡು ಬಿಜೆಪಿಗೆ ಮತ ನೀಡಿ ಎಂದು ಉತ್ಸಾಹದಿಂದ ಘೋಷಣೆಗಳನ್ನು ಕೂಗುತ್ತಾ, ಬಾಗಲಕೋಟೆ ಅಭಿವೃದ್ಧಿಗೆ ಚರಂತಿಮಠ ಆಯ್ಕೆಯಾಗಬೇಕು ಎಂದು ಕಾರ್ಯಕರ್ತರು ಉತ್ಸಾಹದಿಂದ ಕೂಗು ಹಾಕುತ್ತಿದ್ದರು. ಇನ್ನೂ ಯುವಕರು ಸಂಭ್ರಮದಿಂದ ಕುಣಿಯುತ್ತಿದ್ದು ದೃಶ್ಯ ಸಾಮಾನ್ಯವಾಗಿ ಕಂಡುಬಂದಿತು.

ಒಗ್ಗಟ್ಟು ಪ್ರದರ್ಶಿಸಿದ ಬಿಜೆಪಿ

ಬಾಗಲಕೋಟೆ: ಬಾಗಲಕೋಟೆ ಜಿಲ್ಲೆಯಲ್ಲಿ ಬಿಜೆಪಿ ನಾಯಕರಲ್ಲಿ ಭಿನ್ನಾಪ್ರಾಯವಿದೆ ಎಂದು ಹೇಳಲಾಗುತ್ತಿತ್ತು. ಆದರೆ, ವೀರಣ್ಣ ಚರಂತಿಮಠವರು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಎಲ್ಲ ಬಿಜೆಪಿ ನಾಯಕರು ಬರುವ ಮೂಲಕ ಒಗಟ್ಟು ಪ್ರದರ್ಶನ ಮಾಡಿದ್ದು ವಿಶೇಷವಾಗಿತ್ತು. ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರಗೇಶ ನಿರಾಣಿಯವರ ಜತೆಗೆ ವೀರಣ್ಣ ಚರಂತಿಂಠವರ ನಡುವೆ ಭಿನ್ನಾಭಿಪ್ರಾಯವಿದೆ ಎಂದು ಬಿಂಬಿಸಲಾಗುತ್ತಿತ್ತು. ಆದರೆ, ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ,ಸಂಸದ ಕಾರಜೋಳ ನೇತೃತ್ವದಲ್ಲಿ ಸಂಧಾನ ನಡೆದು ಎಲ್ಲ ನಾಯಕರು ಒಂದಾಗಿದ್ದೇವೆ ಎಂದು ಸಂದೇಶ ಸಾರಿದರು. ಪಕ್ಷಕ್ಕಾಗಿ ಎಲ್ಲರೂ ಒಂದಾಗಿದ್ದೇವೆ. ಚುನಾವಣಾ ಪ್ರಚಾರಕ್ಕೆ ಮುರಗೇಶ ನಿರಾಣಿಯವರು, ಪಿ.ಎಚ್.ಪೂಜಾರ ಸೇರಿದಂತೆ ಎಲ್ಲ ನಾಯಕರು ಬರುತ್ತಾರೆ ಎಂದು ಮಾಧ್ಯಮದವರ ಮುಂದೆ ವೀರಣ್ಣ ಚರಂತಿಮಠ ತಿಳಿಸಿದರು.

ನಾಮಪತ್ರ ಸಲ್ಲಿಕೆಯ ಬಳಿಕ ಮಾತನಾಡಿದ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು, ನಮ್ಮದು ಒಂದೇ ಮಂತ್ರ ಅಭಿವೃದ್ಧಿ ಪರ ಮಂತ್ರ. ಅಭಿವೃದ್ಧಿಯೇ ನಮಗೆ ಮುಖ್ಯ ಆಧಾರ. ಅದನ್ನೇ ಆಧಾರವಾಗಿಟ್ಟುಕೊಂಡು ಮತ ಕೇಳುತ್ತೇವೆ. ನಿಶ್ಚಿತವಾಗಿ ಈ ಕ್ಷೇತ್ರದಲ್ಲಿ ನಾವು ಗೆಲುವು ಸಾಧಿಸುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತೆರೆದ ವಾಹನದಲ್ಲಿ ನಡೆದ ಮೆರವಣಿಗೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಅಭ್ಯರ್ಥಿ ವೀರಣ್ಣ ಚರಂತಿಮಠ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಸಂಸದ ಗೋವಿಂದ ಕಾರಜೋಳ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಶಾಸಕ ಸಿದ್ದು ಸವದಿ, ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಾಜಿ ಸಚಿವ ಬಿ.ಶ್ರೀರಾಮುಲು, ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರುಗೇಶ ನಿರಾಣಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ವಿಪ ಸದಸ್ಯ ಪಿ.ಎಚ್.ಪೂಜಾರ ಹಾಗೂ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ರಾಜು ನಾಯ್ಕರ, ಡಾ.ನವೀನ ಚರಂತಿಮಠ, ಡಾ.ದೇವರಾಜ ಪಾಟೀಲ, ಡಾ.ಶೇಖರ ಮಾನೆ, ರಾಜು ರೇವಣಕರ, ದುಂಡಪ್ಪ ಏಳೆಮ್ಮಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

13 ಅಭ್ಯರ್ಥಿಗಳಿಂದ 19 ನಾಮಪತ್ರ ಸಲ್ಲಿಕೆ

ಬಾಗಲಕೋಟೆ: ಬಾಗಲಕೋಟೆ ವಿಧಾನಸಭಾ ಉಪಚುನಾವಣೆಗೆ ಸಂಬಂಧಿಸಿದಂತೆ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಸೋಮವಾರ ಒಟ್ಟು 13 ಅಭ್ಯರ್ಥಿಗಳಿಂದ 19 ನಾಮಪತ್ರ ಸಲ್ಲಿಕೆಯಾಗಿವೆ ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ. ಭಾರತೀಯ ಜನತಾ ಪಾರ್ಟಿಯಿಂದ ವೀರಭದ್ರಯ್ಯ ಚರಂತಿಮಠ 3 ನಾಮಪತ್ರ ಸಲ್ಲಿಸಿದ್ದು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ ಉಮೇಶ ಮೇಟಿ 4 ನಾಮಪತ್ರ ಸಲ್ಲಿಸಿದ್ದಾರೆ. ಪಕ್ಷೇತರದಿಂದ ಶಿವಪ್ಪ ಪಡಸಲಗಿ ಎರಡು ನಾಮಪತ್ರ ಸಲ್ಲಿಸಿದ್ದಾರೆ. ಪಕ್ಷೇತರರಿಂದ ಯಂಕಪ್ಪ ಕಮತಗಿ, ಅಬ್ದುಲ್ ರಜಾಕ್ ಬಾಳೀಕಾಯಿ, ಆಯುಬಖಾನ ಲಾಲಸಾಬ ಬಾಗೇವಾಡಿ, ಪರಶುರಾಮ ನೀಲನಾಯಕ, ಬಾಬುಷಾ ರೊಳ್ಳಿ, ಪ್ರಶಾಂತ ರಾವ್, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಿಂದ ಗೋವಿಂದರಾಜ ಬಳ್ಳಾರಿ, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ ನಾಗರಾಜ ಕಲಕುಟಗರ, ಜನತಾ ಚಳುವಳಿ ಭಾರತ ಪಕ್ಷದಿಂದ ತೇಜೋರಾಮ ಶೆಟ್ಟಿ, ಆಲ್ ಇಂಡಿಯಾ ಜನರಕ್ಷಾ ಪಾರ್ಟಿಯಿಂದ ಸಿದ್ದಪ್ಪಗೋಡಿ ತಲಾ ಒಂದು ನಾಮಪತ್ರ ಸಲ್ಲಿಸಿದ್ದಾರೆ ಎಂದು ತಿಳಿಸಿದ್ದಾರೆ. ಮಾ.20ರಂದು 5 ಅಭ್ಯರ್ಥಿಗಳಿಂದ 7 ನಾಮಪತ್ರ ಸಲ್ಲಿಕೆಯಾಗಿದ್ದವು. ಇಲ್ಲಿವರೆಗೆ ಒಟ್ಟು 18 ಅಭ್ಯರ್ಥಿಗಳಿಂದ ಒಟ್ಟು 26 ನಾಮಪತ್ರಗಳು ಸಲ್ಲಿಕೆಯಾಗಿರುತ್ತವೆ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಡಬಲ್ ಸ್ಟೇರಿಂಗ್ ಸರ್ಕಾರ: ಶ್ರೀರಾಮುಲು



ಬಾಗಲಕೋಟೆ: ರಾಜ್ಯದಲ್ಲಿರುವುದು ಡಬಲ್ ಎಂಜಿನ್ ಸರ್ಕಾರವಲ್ಲ, ಡಬಲ್ ಸ್ಟೇರಿಂಗ್ ಸರ್ಕಾರ. ಕಾಂಗ್ರೆಸ್ ಪಕ್ಷಕ್ಕೆ ಹೈಕಮಾಂಡ್ ಕೂಡ ಇಲ್ಲದಂತಹ ಸ್ಥಿತಿ ಇದೆ. ಎಐಸಿಸಿ ಅಧ್ಯಕ್ಷರು ಕೂಡ ಉತ್ಸವ ಮೂರ್ತಿಯಾಗಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯವರಿಗೆ ಗಟ್ಟಿಯಾಗಿ ಮಾತನಾಡದಂತಹ ಸ್ಥಿತಿ ಕೂಡ ಬಂದಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರ ನಾಮಪತ್ರ ಸಲ್ಲಿಸುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿ ಸ್ಥಾನಕ್ಕಾಗಿ ರಾಜ್ಯದ ಖಜಾನೆ ಲೂಟಿ ಮಾಡಿ ಹೈಕಮಾಂಡ್‌ಗೆ ತುಂಬುತ್ತಿದ್ದಾರೆ. ರಾಜ್ಯದ ಖಜಾನೆ ಸಂಪೂರ್ಣ ಖಾಲಿಯಾಗಿದೆ. ಅಭಿವೃದ್ಧಿಗೆ ದುಡ್ಡಿಲ್ಲ ಎಂದು ಹೇಳಿದರು.

ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲುವುದು ನಿಶ್ಚಿತ. ನಾಲ್ಕೈದು ಮಂತ್ರಿಗಳು ಇಲ್ಲಿಯೇ ಠಿಕಾಣಿ ಹೂಡಲಿದ್ದು, ವಾಲ್ಮೀಕಿ ನಿಗಮದಲ್ಲಿನ ಹಣ ಲೂಟಿ ಮಾಡಿದ್ದಾರೆ. ದುಡ್ಡಿನ ಚೀಲ ತಂದು ಕುಳಿತಿದ್ದಾರೆ. ಹಣ ಬಲದಿಂದ ಗೆಲ್ಲುತ್ತೇವೆ ಎಂದು ಕಾಂಗ್ರೆಸ್ ನವರು ಹೊರಟಿದ್ದಾರೆ. ಆದರೆ, ಜನ ಈ ಬಾರಿ ತೀರ್ಮಾನ ಮಾಡಿದ್ದು ವೀರಣ್ಣ ಚರಂತಿಮಠರನ್ನು ಗೆಲ್ಲಿಸುತ್ತಾರೆ ಎಂದರು.

ರಾಜ್ಯದಲ್ಲಿ ಸರ್ಕಾರ ಬಂದ ಬಳಿಕ ಜಾತಿವಾರು ಜನಸಂಖ್ಯೆಯನ್ನು ಹೊಡೆದಿದ್ದಾರೆ. ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆ ಮೇಲೆ ಕಲ್ಲು ತೂರಾಟವಾಗಿದೆ. ಬೆಂಗಳೂರಿನ ಅಣ್ಣಮ್ಮದೇವಿ ಮೆರವಣಿಗೆಯಲ್ಲಿ ಕಲ್ಲು ತೂರುವುದು ಹೀಗೆ ಹಿಂದುಗಳ ಹಬ್ಬಗಳು, ಮಹಾಪುರುಷರ ಮೆರವಣಿಗೆಗೆ ಪುಡಾರಿಗಳಿಂದ ಕಲ್ಲು ತೂರಾಟ ನಡೆಯುತ್ತಿದೆ. ಸರ್ಕಾರ ಮಾತ್ರ ಇದರ ಬಗ್ಗೆ ಗಮನ ಕೊಡುವುದಿಲ್ಲ. ಹೀಗಾಗಿ ಈ ಬಾರಿ ಜನ ತಕ್ಕ ಪಾಠವನ್ನು ಉಪಚುನಾವಣೆಯಲ್ಲಿ ಕಲಿಸಲಿದ್ದಾರೆ ಈ ಚುನಾವಣೆ 2028ಕ್ಕೆ ದಿಕ್ಸೂಚಿಯಾಗಲಿದೆ ಎಂದರು.

ಕಾಂಗ್ರೆಸ್ ಅಭ್ಯರ್ಥಿಗಳು ಶೀಘ್ರ ಮನೆಗೆ: ಕೇಂದ್ರ ಸಚಿವ ಜೋಶಿ



ಬಾಗಲಕೋಟೆ: ಬಾಗಲಕೋಟೆಯಲ್ಲಿ ಮಗ, ದಾವಣಗೆರೆಯಲ್ಲಿ ಮೊಮ್ಮಗನಿಗೆ ಅವಕಾಶ ಕೊಟ್ಟಿದ್ದಾರೆ. ಜನರು ಅವರಿಬ್ಬರನ್ನೂ ಮನೆಗೆ ಕಳಿಸುತ್ತಾರೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ಬಾಗಲಕೋಟೆಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇತ್ತ ರಾಜ್ಯದಲ್ಲಿ ಮತಾಂಧ ಶಕ್ತಿ ಹೆಚ್ಚುತ್ತಿದೆ. ಎಲ್ಲಾ ದರಗಳು ಸಹ ಏರಿಕೆಯಾಗಿವೆ. ಭ್ರಷ್ಟಾಚಾರದಲ್ಲಿ ಕಾಂಗ್ರೆಸ್ ತೊಡಗಿದೆ. ಮೂರು ಬಾರಿ ಪೆಟ್ರೋಲ್ ಡೀಸೆಲ್ ದರ ಏರಿಸಿದ್ದಾರೆ. ಬಾಗಲಕೋಟೆಯ ಉಪಚುನಾವಣೆ ನೋಡಿದ್ರೆ ಈ ಚುನಾವಣೆಯಿಂದ ರಾಜ್ಯ ರಾಜಕಾರಣಕ್ಕೆ ದೊಡ್ಡ ತಿರುವು ಸಿಗಲಿದೆ ಎಂದರು.

ಎಲ್ಲ ಪ್ರಮುಖರು ಸಮಯ ಕೊಟ್ಟು ಚುನಾವಣೆ ಮಾಡುತ್ತಾರೆ. ಸರ್ಕಾರ ಒಳ್ಳೆ ಕೆಲಸ ಮಾಡದೇ ಹೋದರೆ ಅನುಕಂಪ ಕೆಲಸ ಮಾಡೋದಿಲ್ಲ. ಚರಂತಿಮಠ, ಪೂಜಾರ ಮಧ್ಯೆ ಮಾತುಕತೆ ಮಾಡಿದ್ದೇವೆ. ಸಭೆ ಮಾಡಿ ಒಂದಾಗಿಸಿದ್ದೇವೆ. ಎಲ್ಲರೂ ಒಗ್ಗಟ್ಟಾಗಿ ಚುನಾವಣೆ ಗೆಲ್ಲುತ್ತೇವೆ ಎಂದರು.

ಮಧ್ಯಪ್ರಾಚ್ಯ ಯುದ್ಧದ ವಿಚಾರ ಪ್ರಸ್ತಾಪಿಸಿದ ಸಚಿವರು ಯುದ್ಧ ಶುರುವಾಗಿ ಮೂರು ವಾರವಾಯ್ತು. ಪೆಟ್ರೋಲ್ ಡೀಸೆಲ್‌ಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಂಡಿದ್ದೇವೆ. ತೈಲ ತುಂಬಿದ ಹಡಗುಗಳು ಕೇವಲ ಭಾರತಕ್ಕೆ ಮಾತ್ರ ಬರ್ತಾ ಇದೆ. ಭಾರತದ ವಿದೇಶಾಂಗ ನೀತಿ ಉತ್ತಮವಾಗಿದೆ. ಎಲ್ಲ ರೀತಿಯಿಂದ ಸರ್ಕಾರ ಮಾನಿಟರ್ ಮಾಡ್ತಿದ್ದಾರೆ ಆದರೆ, ಸಿಎಂ ಪತ್ರ ಬರೆದು ಪೊಲಿಟಿಕ್ಸ್ ಮಾಡ್ತಿದ್ದಾರೆ. ನಮ್ಮಲ್ಲಿ ಯಾವುದೇ ಸಮಸ್ಯೆ ಆಗಿಲ್ಲ ಮೋದಿಯವರ ನೇತೃತ್ವದಲ್ಲಿ ಎಲ್ಲ ಸರಿ ಇದೆ ಎಂದು ತಿಳಿಸಿದರು.

ಬೇರೆ ದೇಶಗಳಲ್ಲಿ ತೈಲಗಳ ಬೆಲೆ ಹೆಚ್ಚಾಗಿದೆ. ದೇಶದ ಪ್ರಧಾನಿ ಮಾತ್ರ ಯಾವ ದರವನ್ನು ಏರಿಕೆ ಮಾಡಿಲ್ಲ, ಜನರಿಗೆ ತೊಂದರೆಯಾಗದಂತೆ ನೀಡುತ್ತಿದ್ದಾರೆ. ಆದರೆ, ರಾಹುಲ್ ಗಾಂಧಿಯವರ ಶಿಷ್ಯ ಸಿಎಂ, ಡಿಸಿಎ ಮಾತ್ರ ರಾಜ್ಯದಲ್ಲಿ ಬೆಲೆ ಏರಿಕೆ ಮಾಡಿ ಜನರ ಮೇಲೆ ಹೊರೆ ಹಾಕುತ್ತಿದ್ದಾರೆ ಎಂದರು.

ಪಶ್ಚಿಮ ಬಂಗಾಳದಲ್ಲಿ ತುಷ್ಟೀಕರಣ ನೀತಿ ಬಂದ್ ಆಗಲಿದೆ. ಮೂಲಭೂತ ವಾದಿಗಳ ಉಪಟಳ ಬಂದ್ ಆಗಲಿದ್ದು, ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ಬಂದರೆ ತಮಿಳುನಾಡಿನಲ್ಲಿ ಎನ್‌ಡಿಎ ನೇತೃತ್ವದ ಸರ್ಕಾರ ಬರಲಿದೆ. ಇದರ ಜತೆಗೆ ರಾಜ್ಯದ ಬಾಗಲಕೋಟೆ, ದಾವಣಗೆರೆ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಿಗಲಿದೆ ಎಂದು ಹೇಳಿದರು.

ಅಗತ್ಯ ವಸ್ತುಗಳ ಪೂರೈಕೆ, ಭದ್ರತೆ ಸಂಬಂಧ ಪ್ರಧಾನಿ ಸಲಹೆ

ನವದೆಹಲಿ: ಪಶ್ಚಿಮ ಏಷ್ಯಾ ಸಂಘರ್ಷದ ವೇಳೆ ದೇಶದ ಮೇಲಾಗುವ ಪ್ರತಿಕೂಲ ಪರಿಣಾಮಗಳ ಬಗ್ಗೆ ಕೇಂದ್ರ ಸರ್ಕಾರ ಸತತ ನಿಗಾ ವಹಿಸುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ರಾತ್ರಿ ಹಿರಿಯ ಸಚಿವರು ಮತ್ತು ಅಧಿಕಾರಿಗಳ ತುರ್ತು ಸಭೆ ನಡೆಸಿ ಮಹತ್ವದ ಚರ್ಚೆ ನಡೆಸಿದ್ದು, ಅಗತ್ಯ ವಸ್ತುಗಳ ಪೂರೈಕೆ, ಭದ್ರತೆ ಸಂಬಂಧ ಅಗತ್ಯ ಸಲಹೆ ಸೂಚನೆ ನೀಡಿದ್ದಾರೆ.

ದೇಶದಲ್ಲಿ ಸದ್ಯದ ಪರಿಸ್ಥಿತಿ ಅವಲೋಕಿಸಿದ ಪ್ರಧಾನಿ, ಭವಿಷ್ಯದಲ್ಲಿ ಭಾರತದ ಮೇಲಾಗುವ ಪರಿಣಾಮ ಹಾಗೂ ಸರ್ಕಾರ ಜನಹಿತಕ್ಕಾಗಿ ಕೈಗೊಳ್ಳಬಹುದಾದ ಪರಿಹಾರ, ಪರ್ಯಾಯ ಕ್ರಮಗಳ ಬಗ್ಗೆ ಗಹನ ಚರ್ಚೆ ನಡೆಸಿದರು. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರನ್ನು ಒಳಗೊಂಡಂತೆ ಹಿರಿಯ ಸಚಿವರ ತಂಡ ಸಹ ರಚಿಸಿದ್ದಾರೆ.

ಸಂಪುಟ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಧಾನಿ, ಜಾಗತಿಕ ಪರಿಸ್ಥಿತಿ ಮತ್ತು ಕೇಂದ್ರ ಸರ್ಕಾರದ ಸಚಿವಾಲಯ, ಇಲಾಖೆಗಳು ಕೈಗೊಂಡಿರುವ ಕ್ರಮಗಳ ಕುರಿತು ಸಂಪುಟ ಕಾರ್ಯದರ್ಶಿಯಿಂದ ಸಮಗ್ರ ಮಾಹಿತಿ ಪಡೆದುಕೊಂಡರು.

ಕೃಷಿ, ರಸಗೊಬ್ಬರ, ಆಹಾರ ಭದ್ರತೆ, ಪೆಟ್ರೋಲಿಯಂ, ವಿದ್ಯುತ್, ಎಂಎಸ್‌ಎಂಇಗಳು, ರಫ್ತುದಾರರು, ಸಾಗಣೆ, ವ್ಯಾಪಾರ, ಹಣಕಾಸು ವಲಯಗಳ ಮೇಲಿನ ನಿರೀಕ್ಷಿತ ಪರಿಣಾಮ ಮತ್ತು ಪರಿಹಾರ ಕ್ರಮಗಳ ಬಗ್ಗೆ ಮಹತ್ವದ ಚರ್ಚೆ ನಡೆಸಿದರು. ಪಶ್ಚಿಮ ಏಷ್ಯಾ ಸಂಘರ್ಷದಿಂದ ಜಾಗತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಖಾರಿಫ್ ಋತುವಿನಲ್ಲಿ ರೈತರ ಮೇಲಾಗುವ ಪರಿಣಾಮ ಮತ್ತು ರಸಗೊಬ್ಬರ ಅಗತ್ಯತೆ, ಪೂರೈಕೆ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು. ಅಲ್ಲದೇ, ರಸಗೊಬ್ಬರ ದಾಸ್ತಾನು, ಲಭ್ಯತೆ ಹಾಗೂ ಪರ್ಯಾಯ ಮೂಲಗಳ ಕುರಿತು ಪ್ರಧಾನಿ ಚರ್ಚಿಸಿದರು. ದೇಶದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಆಹಾರ ಧಾನ್ಯ, ಪದಾರ್ಥಗಳ ಸಕಾಲಿಕ ಲಭ್ಯತೆ ಬಗ್ಗೆ ಸಚಿವ ಪ್ರಲ್ಹಾದ ಜೋಶಿ ಅವರೊಂದಿಗೆ ಮಹತ್ತರ ಚರ್ಚೆ ನಡೆಸಿದರು ಪ್ರಧಾನಿ ಮೋದಿ. ಭವಿಷ್ಯದಲ್ಲಿ ನಿರಂತರ ಆಹಾರ ಲಭ್ಯತೆ ಹಾಗೂ ಜನಸಾಮಾನ್ಯರ, ಗ್ರಾಹಕರ ಹಿತರಕ್ಷಣೆಗೆ ಬದ್ಧವಾಗಿ ತ್ವರಿತ ಕ್ರಮ ಕೈಗೊಂಡ ಬಗ್ಗೆ ಮಾಹಿತಿ ಪಡೆದರು.

ವಿದ್ಯುತ್ ಸ್ಥಾವರಗಳಲ್ಲಿ ಇರುವ ಕಲ್ಲಿದ್ದಲು ದಾಸ್ತಾನು ಹಾಗೂ ನವೀಕರಿಸಬಹುದಾದ ಇಂಧನ ಉತ್ಪಾದನೆ ಸಹ ಹೆಚ್ಚಳವಾಗಿದೆ. ಹಾಗಾಗಿ ದೇಶದಲ್ಲಿ ವಿದ್ಯುತ್ ಕೊರತೆಯಾಗುವುದಿಲ್ಲ ಎಂದ ಅಭಿಪ್ರಾಯಿಸಿದ ಪ್ರಧಾನಿ ಸೌರಕ್ರಾಂತಿ, ಪವನ ವಿದ್ಯುತ್, ಹಸಿರು ಇಂಧನದಲ್ಲಾದ ಗಮನಾರ್ಹ ಸಾಧನೆ ಭಾರತದ ವಿದ್ಯುತ್ ವಲಯವನ್ನು ಬಲಪಡಿಸಿದೆ ಎಂದು ಹೇಳಿದರು.

ಸಚಿವ-ಕಾರ್ಯದರ್ಶಿ ತಂಡ ರಚನೆ

ಈ ಜಾಗತಿಕ ಯುದ್ಧದ ಸನ್ನಿವೇಶದಲ್ಲಿ ದೇಶ ಭದ್ರತೆ, ರಕ್ಷಣೆ, ಆಹಾರ, ಅಗತ್ಯ ಸಾಮಗ್ರಿ ಪೂರೈಕೆ ವಿಚಾರವಾಗಿ ಸಮರ್ಪಕ, ಸಮರ್ಪಿತವಾಗಿ ಕೆಲಸ ಮಾಡಲು ಸಚಿವರು ಮತ್ತು ಕಾರ್ಯದರ್ಶಿಗಳ ತಂಡ ರಚನೆಗೆ ಪ್ರಧಾನಿ ನಿರ್ದೇಶನ ನೀಡಿದರು. ಮಧ್ಯಪ್ರಾಚ್ಯ ಯುದ್ಧ ಸಂಘರ್ಷ ತೀವ್ರಗೊಳ್ಳುತ್ತಿದ್ದರಿಂದ ಇಂದು ಇಡೀ ಜಗತ್ತೇ ಒಂದಿಲ್ಲೊಂದು ರೂಪದಲ್ಲಿ ಕ್ಷಾಮ, ಪರಿಣಾಮ ಎದುರಿಸುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ ಪ್ರಧಾನಿ, ಕ್ಲಿಷ್ಟ ಪರಿಸ್ಥಿತಿಯಲ್ಲಿ ನಾಗರಿಕರ ರಕ್ಷಣೆಗೆ ಸರ್ವ ಪ್ರಯತ್ನ ನಡೆಸುವಂತೆ ಸಚಿವ ಸಂಪುಟ ಸಮಿತಿಗೆ ಪ್ರಧಾನಿ ನಿರ್ದೇಶನ ನೀಡಿದರು.

ದೇಶಪಾಂಡೆ ನಗರ ಮಳಿಗೆಗೀಗ ಬೆಳ್ಳಿಹಬ್ಬ | ಆಭರಣ ಖರೀದಿಯಲ್ಲಿ ಶೇ.25ರಷ್ಟು ಕೊಡುಗೆ

ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಹುಬ್ಬಳ್ಳಿ ನಂಟಿಗೆ 25ರ ಸಂಭ್ರಮ

ಹುಬ್ಬಳ್ಳಿ: ಗ್ರಾಹಕರ ನೆಚ್ಚಿನ ಶೈಲಿಯ ಆಭರಣಗಳಿಗೆ ಪ್ರಸಿದ್ಧವಾಗಿರುವ, ಚಿನ್ನದ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ಹೊಂದಿರುವ, 60 ವರ್ಷಕ್ಕೂ ಹೆಚ್ಚು ಕಾಲ ಗ್ರಾಹಕರೊಂದಿಗೆ ಅನುಬಂಧ ಹೊಂದಿರುವ ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಹುಬ್ಬಳ್ಳಿ ನಂಟಿಗೆ 25 ವರ್ಷಗಳು.



'ರಜತ' ಮಹೋತ್ಸವದ ಸಂಭ್ರಮದಲ್ಲಿರುವ ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಗ್ರಾಹಕರಿಗೆ ಭರ್ಜರಿ ಕೊಡುಗೆ ನೀಡುತ್ತಿದೆ. 1964ರಲ್ಲಿ ಗುಜ್ಜಾಡಿ ಮನೆತನದ ಶ್ರೀ ಗುಜ್ಜಾಡಿ ನರಸಿಂಹ ನಾಯಕ್ ಅವರು ಉಡುಪಿಯಲ್ಲಿ ಸ್ಥಾಪನೆ ಮಾಡಿದ ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಆಭರಣ ವ್ಯಾಪಾರದಲ್ಲಿ ಹೊಸ ಯುಗದ ಪ್ರವರ್ತಕರಾಗಿದ್ದಾರೆ.

ಗ್ರಾಹಕರ ಅಪಾರ ವಿಶ್ವಾಸ ಗಳಿಸಿರುವ ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಬೆಂಗಳೂರು, ಉಡುಪಿ, ಮಂಗಳೂರು, ಕುಂದಾಪುರ, ಹುಬ್ಬಳ್ಳಿ, ಧಾರವಾಡ, ಶಿರಸಿ, ಕೊಪ್ಪಳ ಸೇರಿ ಒಟ್ಟು 11 ಮಳಿಗೆಗಳನ್ನು ಹೊಂದಿದೆ. 400 ಜನ ಸಿಬ್ಬಂದಿ ಕೆಲಸ ನೀಡಿದೆ.

ದೇಶಪಾಂಡೆ ನಗರ ಮಳಿಗೆಗೆ 25ನೇ ವರ್ಷದ ಸಂಭ್ರಮ

ಗುಜ್ಜಾಡಿ ನರಸಿಂಹ ನಾಯಕ ಅವರ ಪುತ್ರ ಗುಜ್ಜಾಡಿ ಗೋಪಾಲಕೃಷ್ಣ ನಾಯಕ ಅವರು ರಾಮನವಮಿಯಂದು ಅಂದರೆ 2001 ಏಪ್ರಿಲ್ 2ರಂದು ಹೊಸ ಕನಸುಗಳೊಂದಿಗೆ ಹುಬ್ಬಳ್ಳಿಗೆ ಆಗಮಿಸಿ, ದೇಶಪಾಂಡೆ ನಗರದಲ್ಲಿ ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಮಳಿಗೆ ಆರಂಭಿಸಿದರು.

ಹುಬ್ಬಳ್ಳಿ 916 ಹಾಲ್‌ಮಾರ್ಕ್ ಆಭರಣ ಪರಿಚಯಿಸಿದ ಖ್ಯಾತಿ ಇವರದ್ದಾಗಿದೆ. ಮೂರನೇ ಮಳಿಗೆಯಾಗಿ ಆರಂಭವಾದ ದೇಶಪಾಂಡೆ ನಗರದ ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಮಳಿಗೆಗೆ ಇದೇ ಮಾರ್ಚ್ 26ರಂದು ರಾಮನವಮಿಯ ದಿನ 25 ವರ್ಷವಾಗಲಿದೆ. ಈ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಭರ್ಜರಿ ಕೊಡುಗೆ ನೀಡುತ್ತಿದೆ.

ಅಯೋಧ್ಯೆ ಶ್ರೀರಾಮನಿಗೆ ಕಿರೀಟ ತಯಾರಿಸಿದ ಕೀರ್ತಿ

ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಎಂದರೆ ದೇಶವಲ್ಲದೇ, ವಿದೇಶಗಳಲ್ಲಿರುವ ಗ್ರಾಹಕರಿಗೂ ಅಚ್ಚುಮೆಚ್ಚು. ಇನ್ನೂ ಶ್ರೀರಾಮ ನವಮಿಯಂದು ಹುಬ್ಬಳ್ಳಿಯಲ್ಲಿ ಆರಂಭವಾದ ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್‌ನ ಉಡುಪಿಯಲ್ಲಿರುವ ಸ್ವರ್ಣೋದ್ಯಮ ಉತ್ಪಾದನಾ ಘಟಕದಲ್ಲಿ ಅಯೋಧ್ಯಾ ಶ್ರೀರಾಮ ಮೂರ್ತಿಗೆ ಕೇವಲ 9 ದಿನದಲ್ಲಿಯೇ ಕಿರೀಟ ಸೇರಿದಂತೆ ವಿವಿಧ ಆಭರಣಗಳನ್ನು ಉತ್ಪಾದನೆಯಾಗಿರುವುದು ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್‌ನ ಖ್ಯಾತಿ, ಹೆಮ್ಮೆಯಾಗಿದೆ. ಅಲ್ಲದೇ, ನುಗ್ಗಿಕೇರಿ ಆಂಜನೇಯಸ್ವಾಮಿ, ನಾಗಶೆಟ್ಟಿಕೊಪ್ಪ ಹನುಮಂತ ದೇವರು, ಕೊಪ್ಪಳ ಹೊಸಹಳ್ಳಿಮಠ ಸೇರಿದಂತೆ ಹಲವಾರು ದೇವಸ್ಥಾನಗಳಿಗೆ ಕವಚ ತಯಾರಿಸಿ ಕೊಟ್ಟಿದೆ.

ಹುಬ್ಬಳ್ಳಿ ಗ್ರಾಹಕರು ನಮಗೆ ಹೆಚ್ಚು ಪ್ರೀತಿ ಕೊಟ್ಟಿದ್ದಾರೆ. ಹುಬ್ಬಳ್ಳಿಯಲ್ಲಿ ಮೊಟ್ಟ ಮೊದಲು 916 ಬಿಐಎಸ್ ಪ್ರಮಾಣೀಕೃತ ಸ್ಟ್ಯಾಂಡರ್ಡ್ ಆಭರಣ ಜನರಿಗೆ ಕೊಟ್ಟಿದ್ದು ನಮ್ಮ ಆಭರಣ ಮಳಿಗೆ. ಮೊದಲಿನಿಂದಲೂ ಸ್ಟ್ಯಾಂಡರ್ಡ್ ಇದ್ದು, ಜನರಿಗೆ ಹತ್ತಿರವಾಯಿತು. ಪಾರದರ್ಶಕ, ಗುಣಮಟ್ಟದಿಂದ ಅಪಾರ ನಂಬಿಕೆ ಬೆಳೆಸಿಕೊಂಡಿದ್ದು, ಸಾಕಷ್ಟು ಹಳೆಯ ಗ್ರಾಹಕರನ್ನು ಹೊಂದಿದೆ.

■ **ಅವಿನಾಶ ನಾಯಕ್, ಶಾಖಾ ಮುಖ್ಯಸ್ಥರು**

ಮಾ. 25ರಿಂದ ಶೇ.25ರಷ್ಟು ಕೊಡುಗೆ

25ನೇ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಗುಜ್ಜಾಡಿ ಸ್ವರ್ಣ ಜ್ಯುವೆಲಸ್‌ನಿಂದ ಗ್ರಾಹಕರಿಗೆ ಬಂಗಾರ, ಬೆಳ್ಳಿ, ವಜ್ರ ಸೇರಿ ಎಲ್ಲ ಆಭರಣಗಳ ಬಿಲ್ಲಿನ ಮೇಲೆ ಶೇ.25ರಷ್ಟು (ಮಜೂರಿಯಲ್ಲಿ) ಕೊಡುಗೆ ನೀಡುತ್ತಿದೆ. ದೇಶಪಾಂಡೆ ನಗರದ ಗುಜ್ಜಾಡಿ ಸ್ವರ್ಣ ಜ್ಯುವೆಲರ್ಸ್ ಮಳಿಗೆಯಲ್ಲಿ ಮಾ.25ರಿಂದ ಮಾ.31ರವರೆಗೆ ನಡೆಯು ಮಾರಾಟ ಮತ್ತು ಪ್ರದರ್ಶನದಲ್ಲಿ ಗ್ರಾಹಕರ ಮನಸೂರೆಗೊಳಿಸುವ ಆಭರಣಗಳನ್ನು ಖರೀದಿಸಬಹುದಾಗಿದೆ. ಹೊಸ ತರಹದ ಟೆಂಪಲ್ ಡಿಸೈನ್, ಕುಂದನ್ ಹಾಗೂ ಪೋಲ್ಕಿ ಆಭರಣ, ಲೈಟ್‌ವೈಟ್‌ನಲ್ಲಿ ಮಾಡರ್ನ್ ಆಭರಣಗಳು ಪ್ರದರ್ಶನದಲ್ಲಿರಲಿವೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 96112-20350 ಸಂಪರ್ಕಿಸಿ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಭಾರೀ ಮಳೆ: ಜನ ಜೀವನ ಅಸ್ತವ್ಯಸ್ತ

ಮುಂಡಗೋಡ: ತಾಲೂಕಿನಲ್ಲಿ ಸೋಮವಾರ ಆಲಿಕಲ್ಲು ಸಹಿತ ಬಾರಿ ಮಳೆಗೆ ಜನಜೀವನ ಅಸ್ತವ್ಯಸ್ತವಾಯಿತು. ಬಿಸಿಲಿನ ಬೇಗೆಯಿಂದ ಬೇಸತ್ತ ಜನತೆಗೆ ತುಸು ಸಮಾಧಾನ ತಂದಿತ್ತು. ಸೋಮವಾರ ಸಂಜೆ ಭಾರಿ ಗಾಳಿಯ ಜತೆ ಆಲಿಕಲ್ಲು ಸಹಿತ ಮಳೆಯಿಂದ ರಸ್ತೆ ಚರಂಡಿಗಳು ತುಂಬಿ ಹರಿದವು. ಅದರಲ್ಲಿಯೂ ಬಂಕಾಪುರ ರಸ್ತೆಯ ಕೆರೆಯಂತೆ ಮಾರ್ಪಟ್ಟಿತು. ಇದರಿಂದ ಕೆಲ ಹೊತ್ತು ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಯಿತು. ವಾರದ ಸಂತೆಯಾಗಿದ್ದರಿಂದ ಜನರಿಗೆ ಮತ್ತು ವ್ಯಾಪಾರಸ್ಥರಿಗೆ ಅಸ್ತವ್ಯಸ್ತ ಯಾಗಿರುವುದು ಕಂಡು ಬಂತು. ಮುಂಡಗೋಡದಿಂದ ಚವಡಳ್ಳಿ ಕಡೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಮರವೊಂದು ರಸ್ತೆಯ ಮಧ್ಯಭಾಗದಲ್ಲೇ ಮರ ಬಿದ್ದ ಪರಿಣಾಮ ಈ ಮಾರ್ಗದಲ್ಲಿ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ವಾಹನ ಸಂಚಾರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು.

ಮಾ.27ಕ್ಕೆ ರಾಮ ನವಮಿ

ಗೋಕರ್ಣ: ಇಲ್ಲಿನ ಮುಖ್ಯಕಡಲತೀರದ ಬಳಿಯಿರುವ ಸೀತಾ ರಾಮ ಲಕ್ಷ್ಮಣ ಮಂದಿರದಲ್ಲಿ ಮಾ.27ರಂದು ಶ್ರೀರಾಮ ನವಮಿ ಆಚರಿಸಲಾಗುತ್ತದೆ. ಬೆಳಗ್ಗೆ ವಿವಿದ ದೈವಿಕ ಕಾರ್ಯಕ್ರಮ ನಡೆಯಲಿದ್ದು, ಸಂಜೆ ಮಹಾಪೂಜೆ, ಮಹಾಮಂಗಳಾರತಿ ಪ್ರಸಾದ ವಿತರಣೆ ನಡೆಯಲಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮಂದಿರದ ಪ್ರಕಟಣೆಯಲ್ಲಿ ತಿಳಿಸಿದಾರೆ.



ನಾಳೆ ಮಾಹಿತಿ ಕಾರ್ಯಕ್ರಮ

ಗೋಕರ್ಣ: ಇಲ್ಲಿನ ಸೇವಾ ಭಾರತಿ ಸಂಸ್ಥೆ ಹಾಗೂ ಪತಂಜಲಿ ಯೋಗ ಸಮಿತಿ ಇವರ ಸಹಯೋಗದಲ್ಲಿ ಕ್ಯಾನ್ಸರ್ ರೋಗದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಮಾಹಿತಿ ಕಾರ್ಯಕ್ರಮ ಮಾ.25ರಂದು ಸಂಜೆ 5 ಗಂಟೆಗೆ ಕವಲೇ ಮಠದಲ್ಲಿ ನಡೆಯಲಿದೆ. ಕುಮಟಾ ಖ್ಯಾತ ವೈದ್ಯರಾದ ಡಾ.ಜಿ.ಜಿ.ಹೆಗಡೆ ಪಾಲ್ಗೊಂಡು ಕ್ಯಾನ್ಸರ್ ಬಗ್ಗೆ ತಿಳುವಳಿಕೆ ನೀಡಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರಯೋಜನ ಪಡೆದುಕೊಳ್ಳುವಂತೆ ಸಂಘಟಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಕಾಡು ಹಂದಿ ದಾಳಿ: ಓರ್ವನಿಗೆ ಗಾಯ

ಅಂಕೋಲಾ: ಕಾಡು ಹಂದಿ ದಾಳಿ ನಡೆಸಿ ಯುವಕನೋರ್ವನ ಕಾಲಿನ ಬೆರಳನ್ನೇ ಕಚ್ಚಿ ತುಂಡರಿಸಿದ ಘಟನೆ ತಾಲೂಕಿನ ಮಾಸ್ತಿಕಟ್ಟಾ ವಲಯ ಅರಣ್ಯ ವ್ಯಾಪ್ತಿಯ ವಾಸರ ಕುದ್ರಗಿ ಉಳಗದ್ದೆಯಲ್ಲಿ ಸಂಭವಿಸಿದೆ.ಉಳಗದ್ದೆ ನಿವಾಸಿ ಅರುಣ ಕನ್ನೆ ಗೌಡ(35)ಹಂದಿ ದಾಳಿಯಿಂದ ಗಾಯಗೊಂಡ ವ್ಯಕ್ತಿಯಾಗಿದ್ದು, ಈತ ಉಳಗದ್ದೆಯ ತನ್ನ ಮನೆಯಿಂದ ಕಾಡು ರಸ್ತೆಯಲ್ಲಿ ಸಂಚರಿಸುತ್ತಿದ್ದ ಸಂದರ್ಭದಲ್ಲಿ ಮರಿಗಳೊಂದಿಗೆ ಹೋಗುತ್ತಿದ್ದ ತಾಯಿ ಕಾಡು ಹಂದಿ ಓಡಿಸಿಕೊಂಡು ಬಂದಿದ್ದು ಹಂದಿ ದಾಳಿಯಿಂದ ತಪ್ಪಿಸಿಕೊಳ್ಳಲು ಮರ ಏರುತ್ತಿರುವ ಸಂದರ್ಭದಲ್ಲಿ ಕಾಲಿನ ಹೆಬ್ಬೆರಳು ಹಂದಿ ಬಾಯಿಗೆ ಸಿಕ್ಕಿದ್ದು ಹಂದಿ ಕಡಿತದಿಂದ ಹೆಬ್ಬೆರಳು ತುಂಡಾಗಿ ಹೋಗಿದೆ.ಗಾಯಾಳುವನ್ನು ಅಂಕೋಲಾ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು ಕಾಲು ಬೆರಳಿನ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಹಂದಿ ದಾಳಿಗೆ ಸಂಬಂಧಿಸಿದಂತೆ ಗಾಯಗೊಂಡ ವ್ಯಕ್ತಿಗೆ ಅರಣ್ಯ ಇಲಾಖೆಯಿಂದ ಪರಿಹಾರ ದೊರಕಿಸಿಕೊಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61399	71199
ಬಿಳಿಗೋಟು	30300	39698
ಕೆಂಪುಗೋಟು	28409	39610
ಬೆಟ್ಟೆ	40001	50181
ರಾಶಿ	49399	54599
ಚಾಲಿ	44099	48599

ಯಲ್ಲಾಪುರ	ಕನಿಷ್ಠ	ಗರಿಷ್ಠ
ರಾಶಿ	49709	57170
ಬೆಟ್ಟೆ	37200	51499
ಕೆಂಪುಗೋಟು	16000	37016
ಬಿಳಿಗೋಟು	16812	41119
ಚಾಲಿ	38695	48269
ಕೋಕಾ	13000	31209
ಕಾಳುಮೆಣಸು	58495	75511



ಸಿದ್ದಾಪುರ: ತಾಲೂಕಿನ ವಾಜಗದ್ದೆ ಸಮೀಪದ ಶಾನಬಾಳೆಗದ್ದೆಯಲ್ಲಿ ಶನೇಶ್ವರ ದೇವರ ಪುನರ್ ಪ್ರತಿಷ್ಠಾಪನೆ ಹಾಗೂ ನೂತನ ದೇವಾಲಯ ಲೋಕಾರ್ಪಣೆ ಪ್ರಯುಕ್ತ ಆಯೋಜಿಸಿದ್ದ ಸಾಂಸ್ಕೃತಿಕ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ವೇ.ದತ್ತಾತ್ರೇಯ ಭಟ್ಟ ಮಗೇಗಾರ ದಂಪತಿ, ಯಕ್ಷಗಾನ ಪ್ರಸಾಧನಕಾರ ಎಂ.ಆರ್.ನಾಯ್ಕ ಕರ್ಸೆಬೈಲ್, ಯಕ್ಷಗಾನ ಕಲಾವಿದ ಶ್ರೀಧರ ಭಟ್ಟ ಕಾಸರಕೋಡ ಇವರನ್ನು ಸನ್ಮಾನಿಸಲಾಯಿತು.

ಸಂಸ್ಕೃತಿ, ಸಂಸ್ಕಾರ ಅಳವಡಿಕೆ ಅಗತ್ಯ

ಸಿದ್ದಾಪುರ: ಯಾವುದೇ ಒಬ್ಬ ವ್ಯಕ್ತಿ ಸಂಸ್ಕೃತಿ ಹಾಗೂ ಸಂಸ್ಕಾರವನ್ನು ಅಳವಡಿಸಿಕೊಂಡಾಗ ಮಾತ್ರ ಶ್ರೇಷ್ಠ ವ್ಯಕ್ತಿಯಾಗಬಹುದು. ಅಲ್ಲದೇ ದೈವ ಭಕ್ತಿಯೂ ಅಷ್ಟೇ ಅತ್ಯವಶ್ಯ ಎಂದು ಸಿದ್ದಾಪುರ ಶಿಕ್ಷಣ ಪ್ರಸಾರಕ ಸಮಿತಿ ಅಧ್ಯಕ್ಷ ಡಾ.ಶಶಿಭೂಷಣ ಹೆಗಡೆ ದೊಡ್ಮನೆ ಹೇಳಿದರು. ತಾಲೂಕಿನ ವಾಜಗದ್ದೆ ಸಮೀಪದ ಶಾನಬಾಳೆಗದ್ದೆಯಲ್ಲಿ ಶನೇಶ್ವರ ದೇವರ ಪುನರ್ ಪ್ರತಿಷ್ಠಾಪನೆ ಹಾಗೂ ನೂತನ ದೇವಾಲಯ ಲೋಕಾರ್ಪಣೆ ಪ್ರಯುಕ್ತ ಆಯೋಜಿಸಿದ್ದ ಸಾಂಸ್ಕೃತಿಕ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಅನಂತಮೂರ್ತಿ ಹೆಗಡೆ ಬ್ಯಾಗದ್ದೆ ಮಾತನಾಡಿದರು. ಬಂಗಾರ್ಯ ರಾಮ ಹಸ್ಲರ್ ಅಧ್ಯಕ್ಷತೆ ವಹಿಸಿದ್ದರು. ಗಣ್ಯರಾದ ಡಾ.ಕೆ. ಶ್ರೀಧರ ವೈದ್ಯ, ಅನಂತಮೂರ್ತಿ ಹೆಗಡೆ, ತಿಮ್ಮಪ್ಪ ಎಂ.ಕೆ., ರಾಘವೇಂದ್ರ ಭಟ್ಟ ಸ್ವಸ್ತಿಕ ಕಲ್ಲಾಳ, ನಂದನ ಬೋರ್ಕರ್, ದ್ಯಾವಾ ನಾರಾಯಣ ಗೌಡ, ಎಸ್.ಸಿ.ಕನ್ನಪ್ಪ, ಮಂಜುನಾಥ ಬಿ.ಹಸ್ಲರ್, ಅನಂತ ಹೆಗಡೆ ಹೊಸಗದ್ದೆ, ಶಂಕರನಾರಾಯಣ ಭಟ್ಟ ಎಲೆಸರ, ಪ್ರಸನ್ನ ಹೆಗಡೆ ಹೊಸಗದ್ದೆ, ದಿವಾಕರ ಸಂಪಖಂಡ ಇತರರಿದ್ದರು.ವೇ.ದತ್ತಾತ್ರೇಯ ಭಟ್ಟ ಮಗೇಗಾರ ದಂಪತಿ, ಯಕ್ಷಗಾನ ಪ್ರಸಾಧನಕಾರ ಎಂ.ಆರ್.ನಾಯ್ಕ ಕರ್ಸೆಬೈಲ್, ಯಕ್ಷಗಾನ ಕಲಾವಿದ ಶ್ರೀಧರ ಭಟ್ಟ ಕಾಸರಕೋಡ ಇವರನ್ನು ಸನ್ಮಾನಿಸಲಾಯಿತು. ಕು.ಸಿ.ಗೌರೀಶ ಹಸ್ಲರ್ ಹೂವಿನಮನೆ ಹಾಗೂ ಕು.ನಿಶಾ ಎಂ.ನಾಯ್ಕ ಹೊನ್ನೆಬಿಡಾರ ಇವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.ಶಾರದಾ ಮನುವಿಕಾಸ ಸಂಘದ ಸದಸ್ಯರು ಸ್ವಾಗತ ಗೀತೆ ಹಾಡಿದರು. ಪ್ರಶಾಂತ ನಾಯ್ಕ ಚನ್ನಪಟ್ಟಣ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ರಮೇಶ ಹೆಗಡೆ ಕಾರ್ಯಕ್ರಮ ನಿರೂಪಿಸಿದರು.



ಮುಂಡಗೋಡ: ಪಟ್ಟಣದ ತಹಶೀಲ್ದಾರ ಕಚೇರಿಯ ಸಭಾಭವನದಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯತಿ ಹಾಗೂ ಪಟ್ಟಣ ಪಂಚಾಯತಿ ಆಶ್ರಯದಲ್ಲಿ ಸೋಮವಾರ ಆದ್ಯ ವಚನಕಾರ ಶ್ರೀ ದೇವರ ದಾಸಿಮಯ್ಯ ಜಯಂತಿ ಆಚರಣೆ ಮಾಡಲಾಯಿತು. ತಹಶೀಲ್ದಾರ ಶಂಕರ ಗೌಡಿ, ಶಿರಸ್ತೇದಾರ ಜಿ.ಬಿ.ಭಟ್, ರಾಘವೇಂದ್ರ ಗಿರಡ್ಡಿ, ರಾಘವೇಂದ್ರ ಕರೂರ, ಶಿವಾನಂದ ಭೋವಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಸಮಾವೇಶ ಕೇಂದ್ರದ ಕಟ್ಟಡ ಉದ್ಘಾಟನೆ | ಎಚ್.ಕೆ ಪಾಟೀಲ ಹೇಳಿಕೆ

ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ

ಹಳಿಯಾಳ: ಪ್ರವಾಸೋದ್ಯಮಕ್ಕೆ ಹೆಚ್ಚಿನ ಬಲ ತುಂಬಿಸಲು ಮುಂದಾದಲ್ಲಿ ಒಳ್ಳೆಯ ಆರ್ಥಿಕ ಬಲ ಪಡೆಯಲು ಸಾಧ್ಯ. ಆ ನಿಟ್ಟಿನಲ್ಲಿ ಹಳಿಯಾಳ ಮತ್ತು ಜೋಯಿಡಾ ತಾಲೂಕುಗಳಲ್ಲಿ ಗಾರ್ಡನ್‌ಗಳನ್ನು ಹೆಚ್ಚು ಮಾಡಲು ಉತ್ತೇಜನ ನೀಡುತ್ತಿದ್ದು, ರಾಜ್ಯ ಸರ್ಕಾರದಿಂದ ಒಂದು ಕೋಟಿ ರೂ.ಗಳ ಅನುದಾನ ಬಿಡುಗಡೆ ಮಾಡುತ್ತಿದ್ದೇವೆ. ಅದಲ್ಲದೇ ಪ್ರವಾಸೋದ್ಯಮದ ವಿವಿಧ ಕಾರ್ಯ ಯೋಜನೆಯಡಿ 50ಲಕ್ಷ ರೂ.ಗಳ ಅನುದಾನ ಕೂಡ ರಾಜ್ಯ ಸರ್ಕಾರ ನೀಡುತ್ತಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ.ಪಾಟೀಲ್ ಹೇಳಿದರು.

ಅವರು ಹಳಿಯಾಳದಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ 47 ಗುಂಟೆ ವ್ಯಾಪ್ತಿಯ ಪ್ರದೇಶದಲ್ಲಿ 798 ಲಕ್ಷ ರೂ. ವೆಚ್ಚದಲ್ಲಿ ಎರಡು ಹಂತಗಳಲ್ಲಿ ನಿರ್ಮಿಸಿದ ಭವ್ಯವಾದ ಸಮಾವೇಶ ಕೇಂದ್ರ ಕಟ್ಟಡ ಉದ್ಘಾಟಿಸಿ ಮಾತನಾಡಿದರು.

ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ರಾಜ್ಯದ ಇತರೇ ಜಿಲ್ಲೆಗಳಿಗಿಂತ ಹೆಚ್ಚಿನ ಅವಕಾಶಗಳಿದ್ದು ಇದಕ್ಕೆ ಇನ್ನೂ ಹೆಚ್ಚಿನ ಪ್ರಚಾರದ ಅಗತ್ಯವಿದೆ ಎಂದರು.

ಹಳಿಯಾಳ ಮತ್ತು ದಾಂಡೇಲಿ ಭಾಗದಲ್ಲಿ ಗಾರ್ಡನ್‌ಗಳನ್ನು ನಿರ್ಮಿಸಲು ಒಂದು ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಮೀಸಲಿಡಲಾಗಿದ್ದು, ಸಂಚಾರಿ ರಾಕ್ ಟೂರಿಸ್ಟ್ ಡೆಸ್ಟಿನೇಷನ್ ಅಭಿವೃದ್ಧಿಗಾಗಿ 50 ಲಕ್ಷ ರೂ., ಕ್ಯಾಸಲ್ ರಾಕ್ ನೇಚರ್ ಕ್ಯಾಂಪ್ ಅಭಿವೃದ್ಧಿಗೆ 50 ಲಕ್ಷ ರೂ. ನೀಡಲಾಗುವುದು ಎಂದರು.

ಶಾಸಕ ಆರ್.ವಿ ದೇಶಪಾಂಡೆ ಮಾತನಾಡಿ, ಉಕ ಜಿಲ್ಲೆ ಗುಡ್ಡಗಾಡು ಪ್ರದೇಶಗಳು, ಜಲಪಾತಗಳು, ಕಡಲತೀರಗಳು ಹಾಗೂ ದ್ವೀಪಗಳನ್ನು ಹೊಂದಿದ್ದು, ಪ್ರವಾಸೋದ್ಯಮ ಅಭಿವೃದ್ಧಿಗೆ ಅಪಾರ ಸಾಧ್ಯತೆಗಳಿವೆ.



> ರಾಜ್ಯದಲ್ಲಿ ಪ್ರವಾಸೋದ್ಯಮ ಮತ್ತು ಕೈಗಾರಿಕೆಗಳು ಅಭಿವೃದ್ಧಿ ಹೊಂದಿದರೆ ಉದ್ಯೋಗ ಸೃಷ್ಟಿಯಾಗಲಿದೆ ಜೊತೆಗೆ ಸರ್ಕಾರವು ಈ ಇಲಾಖೆಗಳಿಗೆ ಪ್ರಾಧಾನ್ಯತೆ ನೀಡಬೇಕು, ನಿರುದ್ಯೋಗ ಮತ್ತು ಬೆಲೆಯೇರಿಕೆ ಸಮಸ್ಯೆಗಳಿಗೆ ಈ ಎರಡು ಕ್ಷೇತ್ರಗಳ ಅಭಿವೃದ್ಧಿಯು ಸೂಕ್ತ ಪರಿಹಾರ ನೀಡಲಿದೆ.
> ■ ಆರ್.ವಿ.ದೇಶಪಾಂಡೆ,ಶಾಸಕ

> ಸಮಾವೇಶ ಕೇಂದ್ರವನ್ನು ಲೋಕೋಪಯೋಗಿ ಹಾಗೂ ಪ್ರವಾಸೋದ್ಯಮ ಇಲಾಖೆಗಳ ಸಹಯೋಗದಲ್ಲಿ 2 ಹಂತದಲ್ಲಿ ಸುಮಾರು ರೂ. 8 ಕೋಟಿ ವೆಚ್ಚದಲ್ಲಿ ಸುಸಜ್ಜಿತವಾಗಿ ನಿರ್ಮಿಸಲಾಗಿದೆ. ಎಲ್ಲರೂ ಈ ಕೇಂದ್ರದ ಸದುಪಯೋಗ ಪಡೆದುಕೊಳ್ಳಬೇಕು.
> ■ ಕೆ. ಲಕ್ಷ್ಮೀ ಪ್ರಿಯಾ, ಜಿಲ್ಲಾಧಿಕಾರಿ

ಈ ಹಿನ್ನೆಲೆ ಮುರುಡೇಶ್ವರ, ಗೋಕರ್ಣ ಹಾಗೂ ಕಾರವಾರ ಕಡಲತೀರಗಳಲ್ಲಿ ಜಲಸಾಹಸ ಕ್ರೀಡೆಗಳನ್ನು ಆರಂಭಿಸಲು ಟೆಂಡರ್‌ಗಳನ್ನು ಕರೆಯಲಾಗಿದೆ. ಅರಣ್ಯ ಪ್ರದೇಶಗಳಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದ್ದು, ಇದರ ಮೂಲಕ ಪ್ರವಾಸೋದ್ಯಮವನ್ನು ಮತ್ತಷ್ಟು ಉತ್ತೇಜಿಸಲಾಗುವುದು ಎಂದು ಹೇಳಿದರು.

ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕಿ ಮಂಗಳ ಗೌರಿ ಭಟ್, ಶಿರಸಿ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಎಸ್.ಎಸ್. ಸಿದ್ದಾಪುರ, ಹಳಿಯಾಳದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಎಸ್.ವಿ.ಅಥಣಿ, ತಹಶೀಲ್ದಾರ್ ಫಿರೋಜ್ ಷಾ, ತಾಪಂ ಕಾರ್ಯ ನಿರ್ವಹಣಾಧಿಕಾರಿ ವಿಲಾಸ್ ರಾಜ್ ಮತ್ತಿತರರು ಇದ್ದರು.

ಸಭಾ ಕಾರ್ಯಕ್ರಮದ ನಂತರ ಶಾಂತಲಾ ನೃತ್ಯಾಲಯ ಧಾರವಾಡದ ವರಿಂದ ಕಥಕ್ ನೃತ್ಯ ರೂಪಕಗಳನ್ನು ಪ್ರದರ್ಶಿಸಲಾಯಿತು. ಹೊನ್ನಾವರದ ಮುಖ್ಯಪ್ರಾಣ ಚಂಡೆ ಗ್ರುಪ್ ನವರಿಂದ ಚಂಡೆ ವಾದನದ ಕಲಾ ಪ್ರದರ್ಶನ ನಡೆಯಿತು.

ಕುದ್ರೋಳಿ ಗಣೇಶ್ ಮತ್ತು ತಂಡದವರಿಂದ ಮ್ಯಾಜಿಕ್ ಮೈಂಡ್ ಮಿಸ್ಟರಿ ಕಾರ್ಯಕ್ರಮ ನಡೆಯಿತು. ಬೋಶ್ ಇಂಡಿಯಾ ಫೌಂಡೇಶನ್ ವತಿಯಿಂದ ಹಳಿಯಾಳದ 5 ಶಾಲೆಗಳಿಗೆ ಸ್ಮಾರ್ಟ್ ಕ್ಲಾಸ್ ರೂಮ್‌ಗಳನ್ನು ಹಸ್ತಾಂತರ ಮಾಡಲಾಯಿತು.

ಜಿಲ್ಲಾಧ್ಯಕ್ಷ ಅನಂತ ಮೂರ್ತಿ ಹೆಗಡೆ ಹೇಳಿಕೆ

ರೈತರ ಸಮಸ್ಯೆ ಶೀಘ್ರ ಪರಿಹರಿಸಿ

ಶಿರಸಿ: ಜಿಲ್ಲೆಯ ರೈತರು ಪ್ರಸ್ತುತ ಸಾಲಿನಲ್ಲಿ ತೀವ್ರ ಸಂಕಷ್ಟದಲ್ಲಿದ್ದು, ಅಘೋಷಿತ ತುರ್ತು ಪರಿಸ್ಥಿತಿಯನ್ನು ಎದುರಿಸುತ್ತಿದ್ದು, ಈ ಕೂಡಲೇ ಕ್ಷೇತ್ರದ ಶಾಸಕರು ತಮ್ಮ ನೇತೃತ್ವದಲ್ಲಿ ರೈತರು, ಸಹಕಾರಿ ಸಂಘಗಳ ಪ್ರಮುಖರು, ಕೃಷಿ ವಿಜ್ಞಾನಿಗಳು, ತೋಟಗಾರಿಕಾ ಹಾಗು ಕೃಷಿ ಇಲಾಖೆಗಳ ಅಧಿಕಾರಿಗಳ ಸಭೆಯನ್ನು ಕರೆದು ರೈತರ ಸಮಸ್ಯೆಗೆ ತುರ್ತು ಪರಿಹಾರವನ್ನು ಕಂಡುಕೊಳ್ಳಬೇಕಿದೆ ಎಂದು ಬಿಜೆಪಿ ರೈತಮೋರ್ಚಾ ಜಿಲ್ಲಾಧ್ಯಕ್ಷ ಅನಂತಮೂರ್ತಿ ಹೆಗಡೆ ಆಗ್ರಹಿಸಿದ್ದಾರೆ.

ಅವರು ಶಿರಸಿ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಲೆಚುಕ್ಕಿ ರೋಗದ ತೀವ್ರತೆಗೆ ಜಿಲ್ಲೆಯ ಜನ ಹೈರಾಣಾಗಿದ್ದು, ನಿತ್ಯದ ಬದುಕನ್ನು ಸಾಗಿಸುವುದು ಸಹ ಕಷ್ಟಕರವಾಗಿದೆ. ಸಂಕಷ್ಟದಲ್ಲಿರುವ ರೈತರ ಪರವಾಗಿ ಬಿಜೆಪಿ ಸದಾ ನಿಲ್ಲಲಿದ್ದು, ಅದೇ ಕಾರಣಕ್ಕೆ ಮಳೆ ಮಾಪನ ಯಂತ್ರ ಸರಿಯಿಲ್ಲದಿದ್ದರೂ ಸಹ ಕಳೆದ ಅವಧಿಯಲ್ಲಿ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಪ್ರಯತ್ನದ ಫಲವಾಗಿ ರೈತರಿಗೆ ಬೆಳೆವಿಮೆ ಹಣ ದೊರಕಿಸಿಕೊಡಲಾಗಿತ್ತು. ಈ ವರ್ಷವೂ ಸಹ ಸಂಸದರ ಪ್ರಯತ್ನದ ಫಲವಾಗಿ ಬೆಳೆವಿಮೆ ಹಣ ಜಮಾ ಆಗುತ್ತಿದೆ. ಕಳೆದ ವರ್ಷವೇ ಮಳೆ ಮಾಪನ ಯಂತ್ರವನ್ನು ಸರಿಪಡಿಸುವಂತೆ ಸಂಸದರು ತಾಕೀತು ಮಾಡಿದ್ದರೂ ಸಹ ರಾಜ್ಯ ಸರ್ಕಾರದ ನಿಷ್ಕಾಳಜಿ ತೋರುವ ಮೂಲಕ ಜಿಲ್ಲೆಯ ರೈತರ ಬದುಕಿನಲ್ಲಿ ಚೆಲ್ಲಾಟ ಮಾಡುತ್ತಿದೆ ಎಂದು ಅವರು ಆಕ್ರೋಶ ಹೊರಹಾಕಿದರು.

ರೈತ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಸುರೇಶ ನಾಯ್ಕ ಕಾನಗೋಡು, ರೈತ ಮೋರ್ಚಾ ಶಿರಸಿ ತಾಲೂಕು ಅಧ್ಯಕ್ಷ ಜಿ.ವಿ.ಹೆಗಡೆ ಓಣಿಕೇರಿ, ಬಿಜೆಪಿ ಶಿರಸಿ ತಾಲೂಕು ಅಧ್ಯಕ್ಷೆ ಉಷಾ ಹೆಗಡೆ, ಜಿಲ್ಲಾ ರೈತಮೋರ್ಚಾ ಪ್ರಭಾರಿ ಪ್ರಶಾಂತ ನಾಯ್ಕ, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ವಿಷ್ಣುಮೂರ್ತಿ ಹೆಗಡೆ, ಸಿದ್ದಾಪುರ ರೈತ ಮೋರ್ಚಾ ತಾಲೂಕು ಅಧ್ಯಕ್ಷ ನಾರಾಯಣ ಚಾರೆಕೋಣೆ, ಬಿಜೆಪಿ ಪ್ರಮುಖರಾದ ಡಾನಿ ಡಿಸೋಜಾ ಇದ್ದರು.



ನಾಗದೇವರ ವಾರ್ಷಿಕ ವರ್ಧಂತಿ ಉತ್ಸವ ಸಂಪನ್ನ

ಅಂಕೋಲಾ: ಪಟ್ಟಣದ ಕಾಕರಮಠ ಅಂಬಾರಕೊಡ್ಲ ರಸ್ತೆಯಲ್ಲಿರುವ ಶ್ರೀ ನಾಗದೇವತಾ ಚಾಮುಂಡೇಶ್ವರಿ ಮಂದಿರದ ಶ್ರೀ ನಾಗದೇವರ ವಾರ್ಷಿಕ ವರ್ಧಂತಿ ಉತ್ಸವ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನೆರವೇರಿತು.

ಉತ್ಸವದ ಪ್ರಯುಕ್ತ ಶ್ರೀ ನಾಗದೇವರ ಮತ್ತು ಚಾಮುಂಡೇಶ್ವರಿ ದೇವಿಯ ಶಿಲಾವಿಗ್ರಹ ಆಭರಣ, ಪುಷ್ಪಗಳಿಂದ ಅಲಂಕರಿಸಲಾಗಿತ್ತು.ದೇವರಸನ್ನಿಧಾನದಲ್ಲಿ ವಿಶೇಷ ಹವನ ಪೂರ್ಣಾಹುತಿ ಮಹಾಪೂಜೆ ಪ್ರಸಾದ ವಿತರಣೆ ನಂತರ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಸಲಾಯಿತು.



ಸುತ್ತ ಮುತ್ತಲಿನ ಸಾವಿರಾರು ಸಂಖ್ಯೆಯ ಭಕ್ತರು ಆಗಮಿಸಿ ದೇವರ ಅನ್ನ ಪ್ರಸಾದ ಸ್ವೀಕರಿಸಿದರು. ಪುರಸಭೆ ಮಾಜಿ ಸದಸ್ಯ ಮಂಜುನಾಥ ನಾಯ್ಕ,ತಂಬೂರಿ ಕುಟುಂಬದವರು ಮತ್ತು ಸುತ್ತಮುತ್ತಲಿನ ಭಕ್ತ ಜನರು ಧಾರ್ಮಿಕ ಕಾರ್ಯಕ್ರಮಕ್ಕೆ ಸಹಕಾರ ನೀಡಿದರು.

ಒಗ್ಗಟ್ಟಿನಿಂದ ಯಶಸ್ಸು ಸಾಧ್ಯ: ಶ್ರೀಗಳು

ಶಿರಸಿ: ಪಶ್ಚಿಮ ಘಟ್ಟದ ಅಸ್ಮಿತೆಯಾದ ಬೇಡ್ತಿ, ಅಘನಾಶಿನಿ ಹಾಗೂ ಶರಾವತಿ ನದಿ ಕಣಿವೆಗಳನ್ನು ಉಳಿಸುವ ಹೋರಾಟದ ಭಾಗವಾಗಿ ಆಯೋಜಿಸಲಾಗಿದ್ದ ರಾಜ್ಯಮಟ್ಟದ ಪರಿಸರ ಹಾಡುಗಳ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಪರಿಸರ ಗೀತೆಗಳ ವಾಚನ ಕಾರ್ಯಕ್ರಮವು ನಗರದ ಯೋಗ ಮಂದಿರದಲ್ಲಿ ಅದ್ದೂರಿಯಾಗಿ ನಡೆಯಿತು.

ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ಗೌರವಾಧ್ಯಕ್ಷರಾದ ಸ್ವರ್ಣವಲ್ಲೀ ಮಹಾಸಂಸ್ಥಾನದ ಗಂಗಾಧರೇಂದ್ರ ಸರಸ್ವತೀ ಶ್ರೀಗಳು ಬಹುಮಾನ ವಿತರಿಸಿ ಆಶೀರ್ವಚನ ನೀಡಿ ಒಗ್ಗಟ್ಟಿನ ಮಂತ್ರದಿಂದ ನಮ್ಮ ಹೋರಾಟಕ್ಕೆ ಭಾಗಶಃ ಯಶಸ್ಸು ಸಿಕ್ಕಿದೆ. ಹಾಡು, ಭಜನೆ ಹಾಗೂ ಪೂಜೆಗಳೆಲ್ಲವೂ ಭಕ್ತಿ ಪ್ರಧಾನ ಮಾರ್ಗಗಳಾಗಿದ್ದು, ಇವುಗಳಿಗೆ ಅಪರಿಮಿತ ಶಕ್ತಿಯಿದೆ. ಈ ಪರಿಸರ ಹಾಡುಗಳು ಧ್ವನಿ ಮುದ್ರಣಗೊಂಡು ನಾಡಿನಾದ್ಯಂತ ನಮ್ಮ ಕಣಿವೆಗಳ ರಕ್ಷಣೆಯ ಕೂಗಾಗಿ ಮೊಳಗಬೇಕು ಎಂದು ಆಶಿಸಿದರು. ವಿಶ್ವ ಜಲ ದಿನದಂದೇ ನದಿ ಕಣಿವೆ ಕುರಿತ ಹಾಡುಗಳು ಲೋಕಾರ್ಪಣೆಗೊಂಡಿರುವುದು ವಿಶೇಷವಾಗಿತ್ತು. ಸಮಿತಿಯ ಅಧ್ಯಕ್ಷ ಅನಂತ ಹೆಗಡೆ ಆಶೀಸರ ಪ್ರಾಸ್ತಾವಿಕವಾಗಿ ಮಾತನಾಡಿ, ಜನವರಿಯಲ್ಲಿ ಶಿರಸಿಯ ಮಾತೃಮಂಡಳಿಯವರು ಬೀದಿ ಬೀದಿಗಳಲ್ಲಿ ಪರಿಸರ ಹಾಡುಗಳನ್ನು ಹಾಡಿ ಜನಜಾಗೃತಿ ಮೂಡಿಸಿದ್ದನ್ನು ಸ್ಮರಿಸಿದರು. ಸ್ಪರ್ಧೆಗೆ ಒಟ್ಟು 70 ಪರಿಸರ ಗೀತೆಗಳು ಬಂದಿದ್ದವು ಎಂದು ಅವರು ತಿಳಿಸಿದರು.ಭಗವತ್ಪಾದ ಪ್ರಕಾಶನದ ನಿರ್ದೇಶಕ ಪ್ರೊ. ಕೆ.ವಿ. ಭಟ್ ಸ್ಪರ್ಧಾ ವಿಜೇತರ ಹೆಸರನ್ನು ಘೋಷಿಸಿದರು. ಹಿರಿಯ ಲೇಖಕಿ ಭಾಗೀರಥಿ ಹೆಗಡೆ ಉಪಸ್ಥಿತರಿದ್ದರು. ಶಿರಸಿಯ ಆರಾಧನಾ ಭಜನಾ ತಂಡದವರು ಹಾಡಿದ ಸಮೂಹ ಪರಿಸರ ಜಾಗೃತಿ ಗೀತೆ ಎಲ್ಲರ ಪ್ರಶಂಸೆಗೆ ಪಾತ್ರವಾಯಿತು. ಭಾರತಿ ಹೆಗಡೆ ಕಾರ್ಯಕ್ರಮ ನಿರ್ವಹಿಸಿದರು.



ಸ್ಪರ್ಧೆಯ ವಿಜೇತರು
ಯಶಸ್ವಿನಿ ಅಜ್ಜಿಬಳ, ರಮೇಶ ಬಿಳೇಕಲ್, ಮಂಜುಳಾ ಉಡುಪಿ, ಗೀತಾ ಬೊಂಗಳೂರು, ಶರಾವತಿ ಶಿನಾಲಾ, ರವಿಶಂಕರ್ ದೊಡ್ಡನಳ್ಳಿ, ಗಣಪತಿ ವಜ್ರಳ್ಳಿ ಹಾಗೂ ಗುರುಪ್ರಸಾದ್ ಮಾಳಕೊಪ್ಪ ಇವರು ಬಹುಮಾನಕ್ಕೆ ಪಾತ್ರರಾಗಿದ್ದಾರೆ.



ಸಿದ್ದಾಪುರ: ಯುಗಾದಿ ಹಬ್ಬದ ಪ್ರಯುಕ್ತ ಕಾಗೋಡಿನ ಬಸವೇಶ್ವರ ದೇವಾಲಯದ ಆಡಳಿತ ಮಂಡಳಿಯವರು ಹೆಗ್ಗರಣಿಯ ವೀರಮಾರುತಿ ಕದಂಬೇಶ್ವರ ಯಕ್ಷಗಾನ ಮಂಡಳಿಯ ಕಲಾವಿದರಿಂದ ಏರ್ಪಡಿಸಿದ್ದ ಯಕ್ಷಗಾನ ಆಖ್ಯಾನಗಳಾದ ಚಂದ್ರಹಾಸ ಚರಿತ್ರೆ, ಹಾಗೂ ಧರ್ಮಾಂಗದ ದಿಗ್ವಿಜಯ ಸೇರಿದ ಪ್ರೇಕ್ಷಕರಿಗೆ ಮುದ ನೀಡಿದವು.

ರೈತರ ಖಾತೆಗೆ 74.12 ಕೋಟಿ ರೂ. ಬೆಳೆ ವಿಮೆ ಜಮಾ

ಶಿರಸಿ: ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರ ಸತತ ಪರಿಶ್ರಮ ಹಾಗೂ ದೃಢ ನಿಲುವಿನಿಂದ ಉತ್ತರ ಕನ್ನಡದ ರೈತರ ಖಾತೆಗಳಿಗೆ 74.12 ಕೋಟಿ ರೂ. ಬೆಳೆ ವಿಮೆ ನೇರ ಜಮಾ ಆಗಿದೆ ಎಂದು ಸಂಸದರ ಕಾರ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಜಿಲ್ಲೆಯಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಒಟ್ಟೂ 74,12,46,793 ರೂ.ಗಳ ಬೃಹತ್ ಮೊತ್ತವು ರೈತರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮಾ ಆಗಿದೆ. ರಾಜ್ಯ ಸರ್ಕಾರದ ರೈತ ವಿರೋಧಿ ನಿಲುವು ಹಾಗೂ ಕೃಷಿಕರ ವಿಷಯದಲ್ಲಿ ತೋರುತ್ತಿರುವ ನಿಷ್ಕಾಳಜಿಯಿಂದಾಗಿ ಈ ವರ್ಷವೂ ಬೆಳೆ ವಿಮೆಯು ರೈತರಿಗೆ ಲಭಿಸದೇ ಕೇವಲ ಮರೀಚಿಕೆಯಾಗುವ ಸಂಭವವಿತ್ತು. ಆದರೆ, ಜಿಲ್ಲೆಯ ರೈತರ ಸಂಕಷ್ಟಕ್ಕೆ ಸ್ಪಂದಿಸಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಕೇಂದ್ರ ಸರ್ಕಾರದ ಮಟ್ಟದಲ್ಲಿ ಸತತವಾಗಿ ಪ್ರಯತ್ನಿಸಿ, ಸಂಬಂಧಪಟ್ಟ ಕೇಂದ್ರ ಕೃಷಿ ಸಚಿವಾಲಯದಿಂದ ವಿಮಾ ಕಂಪೆನಿ ಮೇಲೆ ಒತ್ತಡ ಹೇರುವ ಮೂಲಕ ಈ ವಿಮಾ ಮೊತ್ತವು ಬಿಡುಗಡೆಯಾಗುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದಾರೆ. ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿರುವ ಮಾರಕ ಎಲೆ ಚುಕ್ಕಿ ರೋಗ ಹಾಗೂ ಅಡಿಕೆ ಇಳುವರಿ ಕುಂಠಿತದಿಂದ ಕಂಗಾಲಾಗಿದ್ದ ರೈತರಿಗೆ ಈ ಪರಿಹಾರವು ಆರ್ಥಿಕ ಸಂಜೀವಿನಿಯಾಗಿದೆ. ಜಿಲ್ಲೆಯ 194 ಗ್ರಾಪಂಗಳ ವ್ಯಾಪ್ತಿಯ ಅಡಿಕೆ, ಮಾವು, ಕಾಳುಮೆಣಸು ಮತ್ತು ಶುಂಠಿ ಬೆಳೆಗಾರರ ಒಟ್ಟು 90,235 ಪ್ರಸ್ತಾವನೆಗಳನ್ನು ಪುರಸ್ಕರಿಸಿ, 20,702.88 ಹೆಕ್ಟೇರ್ ಪ್ರದೇಶಕ್ಕೆ ಈ ಪರಿಹಾರವನ್ನು ನೀಡಲಾಗಿದೆ. ಯಾವುದೇ ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ರೈತರ ಖಾತೆಗಳಿಗೆ ಹಣ ತಲುಪಿಸುವ ಪ್ರಕ್ರಿಯೆಯು ಈಗ ಸಂಪೂರ್ಣವಾಗಿ ಪೂರ್ಣಗೊಂಡಿದ್ದು, ಸಂಬಂಧಪಟ್ಟ ರೈತರು ತಮ್ಮ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿಕೊಳ್ಳುವಂತೆ ಕೋರಲಾಗಿದೆ. ಸಂಸದರ ಈ ಕಾಳಜಿಯುತ ನಡೆ ಜಿಲ್ಲೆಯ ಕೃಷಿಕ ವಲಯದಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಸ್ವಚ್ಛತೆಗೆ ಮೊದಲ ಆದ್ಯತೆ: ಆರ್.ವಿ.ದೇಶಪಾಂಡೆ

ದಾಂಡೇಲಿ: ದಾಂಡೇಲಿ ನಗರ ಸೇರಿದಂತೆ ತಾಲೂಕು ವ್ಯಾಪ್ತಿಯಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆಯನ್ನು ನೀಡ ಬೇಕೆಂದು ಶಾಸಕರು ಹಾಗೂ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಕರೆ ನೀಡಿದರು.

ತ್ರೈಮಾಸಿಕ ಕೆಡಿಪಿ ಸಭೆ

ಸೋಮವಾರ ಅಂಬೇವಾಡಿಯಲ್ಲಿರುವ ತಾಲೂಕು ಆಡಳಿತ ಸೌಧದಲ್ಲಿ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಮಾತನಾಡಿ, ದಾಂಡೇಲಿ ನಗರದ 31 ವಾರ್ಡ್‌ಗಳಲ್ಲಿ ಸ್ವಚ್ಛತಾ ಆಂದೋಲನ ಮಾಡುವ ಬಗ್ಗೆ ಒಂದು ವಾರದೊಳಗೆ ಸಭೆ ಮಾಡಿ. ತರಕಾರಿ ಮಾರ್ಕೆಟ್, ಫಿಶ್ ಮಾರ್ಕೆಟ್, ಹಣ್ಣಿನ ಅಂಗಡಿಗಳು, ಸಿಹಿ ತಿಂಡಿಗಳ ಅಂಗಡಿಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಬೀದಿ ನಾಯಿಗಳು ಹಾಗೂ ಬೆಕ್ಕುಗಳನ್ನು ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಬೇಕೆಂದು ನಗರಸಭೆಯ ಪೌರಾಯುಕ್ತರಿಗೆ ನಿರ್ದೇಶನವನ್ನು ನೀಡಿದರು.

ದಾಂಡೇಲಿ ನಗರದಲ್ಲಿ ಗಿಡಗಳನ್ನು ನೆಡುವ ಮೂಲಕ ಹಸಿರು ನಗರವನ್ನಾಗಿ ಮಾಡಬೇಕೆಂದು ಅರಣ್ಯ ಇಲಾಖೆಯವರಿಗೆ ಹೇಳಿದರು. ಹೋಂ ಸ್ಟೇ ಹಾಗೂ ರೆಸಾರ್ಟ್‌ಗಳನ್ನು ಸ್ವಚ್ಛವಾಗಿಟ್ಟುಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಹಶೀಲ್ದಾರ್ ಅವರಿಗೆ ತಿಳಿಸಿದರು.ದಾಂಡೇಲಿಯ ರೈತರಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ದಾಂಡೇಲಿಯಲ್ಲಿ ಕಾರ್ಯಕ್ರಮಗಳನ್ನು ಮಾಡುವಂತೆ ತೋಟಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.



ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿ, ಮುಂದಿನ ದಿನಗಳಲ್ಲಿ ಬಿತ್ತನೆ ಬೀಜ ನೀಡುವ ಕಾರ್ಯ ಪ್ರಾರಂಭವಾಗಲಿರುವ ಬಗ್ಗೆ ಕೃಷಿ ಇಲಾಖೆಯಿಂದ ಮಾಹಿತಿ ಪಡೆದುಕೊಂಡರು. ಬೊಮ್ಮನಹಳ್ಳಿ ಸೇತುವೆಯ ಡಿಪಿಆರ್ ರೆಡಿ ಮಾಡಲಾಗುತ್ತಿದೆ ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಪೌರಾಯುಕ್ತ ವಿವೇಕ ಬನ್ನೆ ಮಾತನಾಡಿ, ದಾಂಡೇಲಿ ನಗರಸಭೆ ವ್ಯಾಪ್ತಿಯಲ್ಲಿ ಗೃಹ ಭಾಗ್ಯ ಯೋಜನೆಯಡಿ18 ಪೌರಕಾರ್ಮಿಕರಿಗೆ ಮನೆ ನಿರ್ಮಿಸಿ ಕೊಡಲಾಗುತ್ತಿದ್ದು, ಶಾಸಕರ ಅನುದಾನದಲ್ಲಿ ನೀಡಿರುವ 11.46 ಕೋಟಿ ರೂ.ಗಳ ಮೊತ್ತದಲ್ಲಿ 56 ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಎಂದರು.

ನಂತರ ಮಾತನಾಡಿದ ದೇಶಪಾಂಡೆಯವರು ಸಾರ್ವಜನಿಕ ಆಸ್ಪತ್ರೆ ಮತ್ತು ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆಯಲ್ಲಿ ವೈದ್ಯರು ಸಾರ್ವಜನಿಕರಿಂದ ಹಣ ಕೇಳಬಾರದು. ಸೇವಾ ಮನೋಭಾವನೆಯಿಂದ ಕರ್ತವ್ಯವನ್ನು ನಿರ್ವಹಿಸಬೇಕು. ಕುಡಿಯುವ ನೀರಿನ ಅಭಾವಗಳ ಬಗ್ಗೆ ಗ್ರಾಪಂ ಮಟ್ಟದಲ್ಲಿ ಸಭೆ ನಡೆಸಿ ಕ್ರಮ ಕೈಗೊಳ್ಳಬೇಕು. ತಾಲೂಕು, ನಗರ ವ್ಯಾಪ್ತಿಯಲ್ಲಿರುವ ಬಸ್ ತಂಗುದಾಣಗಳನ್ನು ನಿರ್ವಹಣೆ ಮಾಡಿ ಸ್ವಚ್ಛವಾಗಿಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಕುಡಿಯುವ ನೀರಿನ ಘಟಕ, ಚೆಸ್ ಪಾರ್ಕ್ ನಿರ್ವಹಣೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ದೇಶಪಾಂಡೆಯವರು ಮಾಹಿತಿ ಪಡೆದುಕೊಂಡರು. ಉದ್ಯಾನವನಗಳ ಸಮರ್ಪಕ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಹೂವಿನ ಗಿಡಗಳನ್ನು ನೆಡುವಂತೆ ಸಲಹೆ ನೀಡಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು. ತಹಶೀಲ್ದಾರ್ ಶೈಲೇಶ್ ಪರಮಾನಂದ ಸ್ವಾಗತಿಸಿ, ತಾಪಂ ಕಾರ್ಯನಿರ್ವಹಣಾಧಿಕಾರಿ ಟಿ.ಸಿ.ಹಾದಿಮನಿ ವಂದಿಸಿದರು.

ಎತ್ತರ ಜಿಗಿತ: ಪ್ರೀತಿ ರಾಷ್ಟ್ರಕ್ಕೆ ಮೂರನೇ ಸ್ಥಾನ

ಶಿರಸಿ: ಸಾಧಿಸುವ ಛಲ, ಸಾಧನೆಯ ದಾರಿಯ ಪರಿಶ್ರಮ ನ್ಯೂನತೆಗಳನ್ನೆಲ್ಲ ಬದಿಗೊತ್ತುತ್ತದೆ ಎಂಬುದನ್ನು ಶಿರಸಿ ತಾಲೂಕಿನ ಗ್ರಾಮೀಣ ಪ್ರದೇಶದ ಈ ಯುವತಿ ತೋರಿಸಿಕೊಟ್ಟಿದ್ದಾಳೆ. ಬಾಲ್ಯದಿಂದಲೂ ಎದುರಿಸಿದ ಶ್ರವಣ ದೋಷದ ಸಮಸ್ಯೆಯನ್ನು ನಿರ್ಲಕ್ಷಿಯಸಿ ಗುಜರಾತಿನ ಅಹಮದಾಬಾದ್‌ನಲ್ಲಿ ನಡೆದ 10ನೇ ರಾಷ್ಟ್ರೀಯ ಡೆಫ್ ಸಬ್ ಜ್ಯೂನಿಯರ್-ಸೀನಿಯರ್ ಸ್ಪೋರ್ಟ್ಸ ಚಾಂಪಿಯನ್ನಿಪ್‌ನಲ್ಲಿ ತಾಲೂಕಿನ ಮರ್ಲಮನೆಯ ಪ್ರೀತಿ ವಿನಾಯಕ ಹೆಗಡೆ ಎತ್ತರಜಿಗಿತಸ್ಪರ್ಧೆಯಲ್ಲಿರಾಷ್ಟ್ರಕ್ಕೆಮೂರನೇ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾಳೆ. ತಾಲೂಕಿನ ನೆಗ್ಗು ಗ್ರಾಪಂ ಮರ್ಲಮನೆಯ ವಿನಾಯಕ ಹೆಗಡೆ ಹಾಗೂ ವೀಣಾ ಹೆಗಡೆ ಅವರ ದ್ವಿತೀಯ ಪುತ್ರಿಯಾದ ಪ್ರೀತಿ ಬಾಲ್ಯದಿಂದಲೇ ಶ್ರವಣದೋಷ ಹಾಗೂ ಮಾತಿನ ದೋಷ ಹೊಂದಿದ್ದರು. ಆದರೆ, ಈ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿದ ಪ್ರೀತಿ, ವಿಶೇಷಶಾಲೆಯಲ್ಲಿ ಕಲಿತು ಮಾತಿನ ಸಮಸ್ಯೆ ಬಗೆಹರಿಸಿಕೊಂಡಿದ್ದಾರೆ. ಇತ್ತೀಚೆಗೆ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಎತ್ತರ ಜಿಗಿತದಲ್ಲಿ ಪ್ರಥಮ ಸ್ಥಾನ ಮತ್ತು 200 ಮೀ.ಓಟದದಲ್ಲಿ ಎರಡನೇ ಸ್ಥಾನ ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದರು. ಆ ಬಳಿಕ ಬೆಂಗಳೂರಿನಲ್ಲಿ ಎರಡು ತಿಂಗಳ ಕಾಲ ಎತ್ತರ ಜಿಗಿತದ ತರಬೇತಿ ಪಡೆದ ಅವಳು, ಗುಜರಾತಿನಅಹಮದಾಬಾದನಲ್ಲಿ ನಡೆದ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ ಎತ್ತರ ಜಿಗಿತ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದು ಕೀರ್ತಿ ತಂದಿದ್ದಾಳೆ.



ಗಾಂಜಾ ಸೇವನೆ: ಆರೋಪಿ ಬಂಧನ

ಅಂಕೋಲಾ: ಸಾರ್ವಜನಿಕ ಸ್ಥಳದಲ್ಲಿ ಮಾದಕ ಗಾಂಜಾ ನಶೆಯಲ್ಲಿದ್ದ ಯುವಕನನ್ನು ಅಂಕೋಲಾ ಪೊಲೀಸರು ವಶಕ್ಕೆ ಪಡೆದು ದೂರು ದಾಖಲಿಸಿದ್ದಾರೆ.

ತಾಲೂಕಿನ ವಂದಿಗೆ ನಿವಾಸಿ ರಜತ ಮಂಜುನಾಥ ನಾಯಕ(24) ಬಂಧಿತ ಆರೋಪಿಯಾಗಿದ್ದು,

ಪಟ್ಟಣದ ಹುಲಿದೇವರವಾಡದ ಸಾರ್ವಜನಿಕ ಸ್ಥಳ ಎ.ಪಿ.ಎಂ.ಸಿ ಮೈದಾನದಲ್ಲಿ ಈತ ಮಾದಕ ವಸ್ತು ಸೇವನೆ ಮಾಡಿರುವ ರೀತಿಯಲ್ಲಿ ಕಂಡು ಬಂದಿದ್ದರಿಂದ ಮತ್ತು ಬಾಯಿಂದ ಘಾಟು ವಾಸನೆ ಬರುತ್ತಿರುವ ಕಾರಣ ಪಿ.ಎಸ್.ಐ ಗುರುನಾಥ ಹಾದಿಮನಿ ವಿಚಾರಣೆ ನಡೆಸಿದಾಗ ಗಾಂಜಾ ಸೇವನೆ ಮಾಡಿರುವುದನ್ನು ಆತ ಒಪ್ಪಿಕೊಂಡಿದ್ದು ಆಪಾದಿತನ ವೈದ್ಯಕೀಯ ಪರೀಕ್ಷೆಯನ್ನು ಅಂಕೋಲಾ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ನಡೆಸಲಾಗಿದ್ದು ವೈದ್ಯಕೀಯ ಪರೀಕ್ಷಾ ವರದಿಯಲ್ಲಿ ಆಪಾದಿತನು ಮಾದಕ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ.

ತಾಲೂಕಿನಲ್ಲಿ ಯುವಕರು ಗಾಂಜಾ ಚಟಕ್ಕೆ ದಾಸರಾಗುತ್ತಿರುವುದು ಹೆಚ್ಚುತ್ತಿದ್ದು ರಾಷ್ಟ್ರೀಯ ಹೆದ್ದಾರಿ 66 ಸುತ್ತ ಮುತ್ತಲಿನ ನಿರ್ಜನ ಪ್ರದೇಶಗಳಲ್ಲಿ ಗಾಂಜಾ ಚಟ ಜೋರಾಗಿದೆ ಎಂದು ಹೇಳಲಾಗುತ್ತಿದೆ.

ಕೆಲವೇ ದಿನಗಳ ಹಿಂದೆ ರಾಷ್ಟ್ರೀಯ ಹೆದ್ದಾರಿ 66 ಜಿ.ಸಿ.ಕಾಲೇಜ ಪ್ಲೈ ಓವರ್ ಬಳಿ ಗಾಂಜಾ ನಶೆಯಲ್ಲಿದ್ದ ಯುವಕನನ್ನು ಅಂಕೋಲಾ ಪಿ.ಎಸ್.ಐ ಗುರುನಾಥ ಹಾದಿಮನಿ ಬಂಧಿಸಿದ್ದರು.

ಕಿರುಸುದ್ದಿ

ಡಾ.ಬಾಬೂಜಿ ಜಯಂತಿ: ಮಾ.27ಕ್ಕೆ ಪೂರ್ವಭಾವಿ ಸಭೆ

ಹಾವೇರಿ: ಡಾ.ಬಾಬು ಜಗಜೀವನರಾಂ ಅವರ 119ನೇ ಜನ್ಮದಿನಾಚರಣೆ ಹಾಗೂ ಸಂವಿಧಾನ ಶಿಲ್ಪಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರವರ 135ನೇ ಜನ್ಮ ದಿನಾಚರಣೆ ಪೂರ್ವಭಾವಿ ಸಿದ್ಧತಾ ಸಭೆ ಮಾರ್ಚ್ 27ರಂದು ಮಧ್ಯಾಹ್ನ 3.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಗ್ರೀಷ್ಮಾ ತಟ್ಟಿಗೆ ಯುವ ಶ್ರೀ ಪ್ರಶಸ್ತಿ

ಹಾವೇರಿ: ತಾಲೂಕಿನ ಅಗಡಿ ಗ್ರಾಮದ ಬಹುಮುಖ ಪ್ರತಿಭೆ ಗ್ರೀಷ್ಮಾ ರಾಮಣ್ಣ ತಟ್ಟಿಗೆ ಮೈಸೂರಿನ ಪ್ರತಿಷ್ಠಿತ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಕೊಡಮಾಡುವ ಯುವ ಶ್ರೀ ಪ್ರಶಸ್ತಿ ದೊರೆತಿದೆ. ದ್ವಿತೀಯ ಪಿಯುಸಿಯಲ್ಲಿ ಓದುತ್ತಿರುವ ಗ್ರೀಷ್ಮಾ ರಾಷ್ಟ್ರಮಟ್ಟದ ಮುಕ್ತ ಕರಾಟೆ ಚಾಂಪಿಯನ್



ಸ್ಪರ್ಧೆಯಲ್ಲಿ ಚಿನ್ನದ ಪದಕ, ಬ್ಲ್ಯಾಕ್ ಬೆಲ್ಟ್, ಮಂಡ್ಯದ ಸಿರಿಗನ್ನಡ ವೇದಿಕೆಯಿಂದ ರಾಜ್ಯೋತ್ಸವ ಪ್ರಶಸ್ತಿ ಹೀಗೆ ಹಲವು ಹತ್ತು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದ್ದಾಳೆ. ಮಾ.29ರಂದು ಮೈಸೂರಿನಲ್ಲಿ ನಡೆಯಲಿರುವ ಪ್ರತಿಷ್ಠಾನದ ಸಾಧಕರ ಸನ್ಮಾನ ಕಾರ್ಯಕ್ರಮದಲ್ಲಿ ಯುವ ಶ್ರೀ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾಳೆ.

ಡಾ.ಪುನೀತ್ ರಾಜ ಕುಮಾರ ಜನ್ಮ ದಿನಾಚರಣೆ

ಗದಗ: ಸಾಮಾಜಿಕ ಕ್ಷೇತ್ರದಲ್ಲಿ ತನ್ನನ್ನು ತಾವು ತೊಡಗಿಸಿಕೊಂಡು ಸಮಾಜ ಸೇವೆ ಮಾಡುವುದರೊಂದಿಗೆ ಸಾರ್ವಜನಿಕವಾಗಿ ಗುರುತಿಸಿಕೊಳ್ಳಬೇಕು ಎಂದು ಜಿಲ್ಲಾ ಯುಥ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಸಲಹೆ ನೀಡಿದರು.

ನಗರದಲ್ಲಿ ಕನ್ನಡ ಜನಾಭಿವೃದ್ಧಿ ವೇದಿಕೆ ಜಿಲ್ಲಾ ಘಟಕದ ವತಿಯಿಂದ ಡಾ.ಪುನೀತರಾಜಕುಮಾರ ಜನ್ಮ ದಿನಾಚರಣೆ ಅಂಗವಾಗಿ ರಸಮಂಜರಿ ಕಾರ್ಯಕ್ರಮ, ಸಾಮೂಹಿಕ ವಿವಾಹ, ಕ್ರಿಕೆಟ್ ಟೂರ್ನಾಮೆಂಟ್, ಜಿಲ್ಲಾ ಅತ್ಯುತ್ತಮ ಹಾಗೂ ರಾಜ್ಯ ಮಟ್ಟದ ವಿಶೇಷ ಶಿಕ್ಷಕ ಪ್ರಶಸ್ತಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜೀವಗಾಂಧಿ ಬ್ರಿಗೇಡ್ ರಾಜ್ಯಾಧ್ಯಕ್ಷ ಬಿ.ಎಂ.ನದ್ದಿಮುಲ್ಲಾ, ಯುವ ನಾಯಕರು ಅಖಿಲ ಕರ್ನಾಟಕ ಜನಶಕ್ತಿ ವೇದಿಕೆ ರಾಜ್ಯಾಧ್ಯಕ್ಷ ಸೈಯದಖಾಲಿದ ಕೊಪ್ಪಳ, ಕನ್ನಡ ಜನಾಭಿವೃದ್ಧಿ ವೇದಿಕೆ ರಾಜ್ಯಾಧ್ಯಕ್ಷ ಹುಲ್ಲೇಶ ಭಜಂತ್ರಿ, ಶಕುಂತಲಾ ಅಕ್ಕಿ, ಮಾನ್ಸೂಖಿಲಾಲ ಪುಣೇಕರ, ಚನ್ನಮಲ್ಲಪ್ಪ ತಟ್ಟಿ, ಕುಮಾರ ನೆಟಗತ್ತಿ, ಗಣೇಶ ಮುಟಗಾರ, ಬಸಣ್ಣ ಕೊತಂಬ್ರಿ, ಶಿವರಾಜ ಮಡಿವಾಳರ, ಶ್ರೀಕಾಂತ ಭಜಂತ್ರಿ, ಭೀಮಸೇನಸಾ ರಾಯಬಾಗಿ, ವೇದಿಕೆಯ ಮೇಲಿದ್ದ ಸರ್ವಗಣ್ಯ, ಇದ್ದರು.

ಜಿಲ್ಲಾಧ್ಯಕ್ಷ ಗಣೇಶ ಹಾತಲಗೇರಿ ಪರಿಚಯಸಿದರು. ಗೌರವ ಅಧ್ಯಕ್ಷ ಉಮೇಶ ಹಿರೇಮಠ ಸ್ವಾಗತಿಸಿದರು. ಆರ್.ಎಲ್. ಮೇಳೆನ್ನವರ ನಿರೂಪಿಸಿದರು.

ದಾನೇಶ್ವರಿ ಭಜಂತ್ರಿ ನೇಮಕ

ಮುಂಡರಗಿ: ಮುಂಡರಗಿ ತಾಲೂಕು ಬ್ಲಾಕ್ ಮಹಿಳಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ದಾನೇಶ್ವರಿ ಆರ್ ಭಜಂತ್ರಿ ನೇಮಕಗೊಂಡಿದ್ದಾರೆ.ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ ರಾಜ್ಯಾಧ್ಯಕ್ಷರಾದ ಸೌಮ್ಯ ರೆಡ್ಡಿ, ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್. ಕೆ. ಪಾಟೀಲ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಗದಗ ಜಿಲ್ಲಾ ಅಧ್ಯಕ್ಷರಾದ, ಜಿ.ಎಸ್. ಪಾಟೀಲ



ಅವರ ಅನುಮೋದನೆಯ ಮೇರೆಗೆ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯಪ್ರಧಾನ ಕಾರ್ಯದರ್ಶಿಗಳಾದ ಸುಜಾತ ಎನ್. ದೊಡ್ಡಮನಿ . ಶಿರಹಟ್ಟಿ ಮತ ಕ್ಷೇತ್ರದ ಮಾಜಿ ಶಾಸಕರಾದ ರಾಮಕೃಷ್ಣ ದೊಡ್ಡಮನಿ,ಮಾಜಿ ಶಾಸಕರಾದ ಡಿ.ಆರ್. ಪಾಟೀಲ ಅವರ ಶಿಫಾರಸ್ಸಿನ ಮೇರೆಗೆ ದಾನೇಶ್ವರಿ ಆರ್. ಭಜಂತ್ರಿ ಅವರನ್ನು ಮುಂಡರಗಿ ತಾಲೂಕು ಬ್ಲಾಕ್ ಮಹಿಳಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶಿಸಿರುತ್ತದೆ. ದಾನೇಶ್ವರಿ ಆರ್. ಭಜಂತ್ರಿ ಮುಂಡರಗಿ ಬ್ಲಾಕ್ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಪಕ್ಷದ ತತ್ವ ನಿಷ್ಠೆಗೆ ಬದ್ಧರಾಗಿ ತಾವುಗಳು ಈ ಉನ್ನತ ಹುದ್ದೆಯನ್ನು ತಕ್ಷಣ ವಹಿಸಿಕೊಂಡು ಪಕ್ಷ ಸಂಘಟನೆಯಲ್ಲಿ ಇನ್ನಷ್ಟು ತೊಡಗಿಕೊಳ್ಳಬೇಕೆಂದು ಗದಗ ಜಿಲ್ಲಾ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ನೀಲಮ್ಮ ಸಿ. ಬೋಳನವರ ಆದೇಶ ಪತ್ರ ನೀಡಿ ಘೋಷಣೆ ಮಾಡಿದ್ದಾರೆ.



ಹಾವೇರಿ: ಇಜಾರಿ ಲಕಮಾಪೂರ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜಿನಲ್ಲಿ ಸೋಮವಾರ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ವೃತ್ತಿ ಪ್ರಪಂಚದ ಅರಿವು ಮತ್ತು ಆಯ್ಕೆಗಳ ಮಾರ್ಗದರ್ಶನ ನೀಡಲು ಆಯೋಜಿಸಲಾದ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳವನ್ನಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರುಚಿ ಬಿಂದಲ್, ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್ ಮತ್ತಿತರರು ಮೇಳವನ್ನು ವಿಕ್ಷೀಸಿದರು.

ಏ.26ರಂದು ಉಚಿತ ಸಾಮೂಹಿಕ ವಿವಾಹ

ಗದಗ: ದಿ.ಯಶೋಧಭಾಯಿ ಅಂಬಾಸಾ ಪೂಜಾರಿ ಸ್ಮರಣಾರ್ಥದಲ್ಲಿ ಮಾಲಭಾಯಿ ಹಾಗೂ ಪರಶುರಾಮ ಅಂಬಾಸಾ ಪೂಜಾರಿ ಇವರಿಂದ ಏ.26ರಂದು ಹಳೆ ಸರಾಫ ಬಜಾರದ ಜಗದಂಬಾ ದೇವಸ್ಥಾನದಲ್ಲಿ ಉಚಿತ ಸಾಮೂಹಿಕ ವಿವಾಹ ಜರಗುತ್ತವೆ ಎಂದು ವಿನೋದ ಶಿಡ್ಲಲಿಂಗ್ ಹೇಳಿದರು. ಸೋಮವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಜಗದಂಬಾ ದೇವಸ್ಥಾನ, ತುಳಜಾಭವಾನಿ ದೇವಸ್ಥಾನ, 1008 ಜಗದ್ಗುರು ವಿಠಲಾರೂಢ ಮಹಾಸ್ವಾಮಿ ಗುರುನಿರಂಜನಸ್ವಾಮಿ ಸಂಸ್ಥಾನಮಠದ ಶ್ರೀ ಅಂಬಾಭವಾನಿ ದೇವಸ್ಥಾನ,ಎಸ್.ಎಸ್.ಕೆ. ಸಮಾಜ ಪಂಚ ಕಮೀಟಿ, ತರುಣ ಸಂಘ, ಮಹಿಳಾ ಮಂಡಳ ಹಾಗೂ ದಸರಾ ಉತ್ಸವ ಸಮಿತಿ ಸಹಯೋಗದೊಂದಿಗೆ ನಗರದ ಜಗದಂಬಾ ದೇವಸ್ಥಾನದಲ್ಲಿ ಸಾಮೂಹಿಕ ಉಪನಯನ ಹಾಗೂ ವಿವಾಹ ಸಮಾರಂಭ ಏ.26 ರಂದು ಬೆಳಗ್ಗೆ 9ಕ್ಕೆ ವಟುಗಳಿಗೆ ಸಾಮೂಹಿಕ ಉಪನಯನ ಹಾಗೂ ಮಧ್ಯಾಹ್ನ 12.30ಕ್ಕೆ ಶುಭಮುಹೂರ್ತದಲ್ಲಿ ಸಾಮೂಹಿಕ ವಿವಾಹ ಜರುಗುವುದು ಎಂದು ಹೇಳಿದರು. ಸಮಾಜದ ಎಲ್ಲ ಬಾಂಧವರು ಆಗಮಿಸಿ ವಟುಗಳಿಗೆ ಹಾಗೂ ನವ ದಂಪತಿಗಳಿಗೆ ಆಶೀರ್ವದಿಸ ಬೇಕೆಂದು ವಿನಂತಿಸಿದರು. ಮದುವೆ ನೋಂದವಣಿಗೆ ಬರುವಾಗ ಕಡ್ಡಾಯವಾಗಿ ವಧು- ವರರ ಪಾಲಕರು, ಪೋಷಕರು ಹಾಗೂ 1 ಸಾಕ್ಷಿಯೊಂದಿಗೆ ಬರಬೇಕು, ವರನಿಗೆ 21 ವರ್ಷ ಮತ್ತು ವಧುವಿಗೆ 18 ವರ್ಷ ಪೂರ್ತಿ ತುಂಬಿರಬೇಕು ಹಾಗೂ ವಟುವಿನ ವಯಸ್ಸು 5ವರ್ಷ ಮೇಲ್ಪಟ್ಟಿರಬೇಕು. ಈಗ ನಡೆಯುವ ಮದುವೆ ಮೊದಲನೆ ಮದುವೆ ಆಗಿರಬೇಕು, ಎರಡನೇ ಮದುವೆಗೆ ಅವಕಾಶವಿರುವದಿಲ್ಲ ಎಂದರು. ಸುದ್ದಿಗೋಷ್ಟಿಯಲ್ಲಿ ಎಸ್ ಎಸ್ ಕೆ ಸಮಾಜದ ಗುರು-ಹಿರಿಯರು ಇದ್ದರು.



ಗದಗ: ನಗರದಲ್ಲಿ ಕನ್ನಡ ಜನಾಭಿವೃದ್ಧಿ ವೇದಿಕೆ ಜಿಲ್ಲಾ ಘಟಕದ ವತಿಯಿಂದ ಡಾ.ಪುನೀತರಾಜಕುಮಾರ ಜನ್ಮ ದಿನಾಚರಣೆ ಅಂಗವಾಗಿ ರಸಮಂಜರಿ ಕಾರ್ಯಕ್ರಮ, ಸಾಮೂಹಿಕ ವಿವಾಹ, ಕ್ರಿಕೆಟ್ ಟೂರ್ನಾಮೆಂಟ್, ಜಿಲ್ಲಾ ಅತ್ಯುತ್ತಮ ಹಾಗೂ ರಾಜ್ಯ ಮಟ್ಟದ ವಿಶೇಷ ಶಿಕ್ಷಕ ಪ್ರಶಸ್ತಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಜಿಲ್ಲಾ ಯುಥ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಪಾಟೀಲ ಅವರು ಉದ್ಘಾಟಿಸಿದರು.

ಕೆರಿಯರ್ ಮೇಳ | ಜಿಪಂ ಸಿಇಒ ರುಚಿ ಬಿಂದಲ್ ಹೇಳಿಕೆ

ಭವಿಷ್ಯ ರೂಪಿಸಿಕೊಳ್ಳಲು ಮೇಳ ಸುವರ್ಣಾವಕಾಶ

ಹಾವೇರಿ: ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಇದೊಂದು ಒಳ್ಳೆಯ ಸುವರ್ಣ ಅವಕಾಶವಾಗಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರುಚಿ ಬಿಂದಲ್ ಅವರು ಹೇಳಿದರು.

ಇಜಾರಿ ಲಕಮಾಪೂರ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜಿನಲ್ಲಿ ಸೋಮವಾರ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ಅವರ ಸಾಮರ್ಥ್ಯ ಮತ್ತು ಆಸಕ್ತಿಗಳಿಗೆ ಅನುಗುಣವಾಗಿ ವೃತ್ತಿ ಪ್ರಪಂಚದ ಅರಿವು ಮತ್ತು ಆಯ್ಕೆಗಳ ಮಾರ್ಗದರ್ಶನ ನೀಡಲು ಆಯೋಜಿಸಲಾದ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗೆ ವಿವಿಧ ವೃತ್ತಿಪರ ಕೋಸ್‌ಗಳು ಮತ್ತು ಲಭ್ಯವಿರುವ ಉದ್ಯೋಗದ ಅವಕಾಶಗಳ ಬಗ್ಗೆ ಅರಿವು ಮೂಡಿಸುವುದು, 12ನೇ ತರಗತಿಯ ನಂತರದ ವಿವಿಧ ಪ್ರವೇಶ ಪರೀಕ್ಷೆಗಳ (ಸಿಇಟಿ, ನೀಟ್, ಜೆಇಇ ಇತ್ಯಾದಿ) ಬಗ್ಗೆ ಮಾಹಿತಿ ನೀಡುವುದು, ವಿವಿಧ ಕೋಸ್‌ಗಳಿಗೆ ಇಲಾಖೆಯಿಂದ ಲಭ್ಯವಿರುವ ಆರ್ಥಿಕ ನೆರವು, ಜಿಲ್ಲೆಯಲ್ಲಿ ಲಭ್ಯವಿರುವ ಇಲಾಖಾ ವಸತಿ ನಿಲಯಗಳ ವಿವರ, ಯುವಕರಿಗೆ, ವಿದ್ಯಾರ್ಥಿಗಳಿಗೆ ಇಲಾಖೆ ವತಿಯಿಂದ ನೀಡಲಾಗುವ ವೃತ್ತಿಪರ ತರಬೇತಿಗಳು, ಉದ್ಯಮಶೀಲತೆ ಅಥವಾ ಉನ್ನತ



ವ್ಯಾಸಂಗಕ್ಕೆ ನೀಡಲಾಗುವ ಇತರೆ ಇಲಾಖಾ ಸೌಲಭ್ಯಗಳ ಮಾಹಿತಿ ನೀಡುವುದು ಈ ಮೇಳದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್ ಅವರು ವೃತ್ತಿ ಮೇಳದ ಮಳಿಗೆಗಳ ಉದ್ಘಾಟನೆ ನೆರವೇರಿಸಿ ಮಾತನಾಡಿ, ಮುಂದಿನ ಭವಿಷ್ಯದಲ್ಲಿ ತಮ್ಮ ವಿದ್ಯಾಭ್ಯಾಸದಲ್ಲಿ ಅಭಿರುಚಿ ಮತ್ತು ಆಸಕ್ತಿಯ ಮೇರೆಗೆ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಉತ್ತಮ ಭವಿಷ್ಯತ್ತಿಗಾಗಿ ಪ್ರಯತ್ನ ಹಾಗೂ ಪರಿಶ್ರಮ ಪಡಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೇಳದಲ್ಲಿ ಒಟ್ಟು 19 ಮಾರ್ಗದರ್ಶನ ಕೇಂದ್ರಗಳನ್ನು ತೆರೆದು, ಮೇಳಕ್ಕೆ ಆಗಮಿಸಿದ ವಿದ್ಯಾರ್ಥಿಗಳಿಗೆ ಎಸ್ಸೆಸ್ಸೆಲ್ಸಿ ಮತ್ತು ಪದವಿ ಪೂರ್ವ ಶಿಕ್ಷಣದ ನಂತರದ ಕೌಶಲ್ಯಯುತವಾದ ಕೋರ್ಸ್‌ಗಳ ಬಗ್ಗೆ ಮತ್ತು ಸ್ವಯಂ ಉದ್ಯೋಗ ಕೈಗೊಳ್ಳಲು ಯಾವ ತರಬೇತಿಗಳನ್ನು ಆಯ್ಕೆ ಮಾಡಿದಲ್ಲಿ ಯಶಸ್ವಿಯಾಗಿ ನಿರ್ವಹಣೆ ಮಾಡಬಹುದು ಎಂಬುದರ ಬಗ್ಗೆ ಪರಿಣಿತರು ಮಾರ್ಗದರ್ಶನ ನೀಡಿದರು.

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಉಪನಿರ್ದೇಶಕ (ಅಭಿವೃದ್ಧಿ) ಹಾಗೂ ಪ್ರಾಂಶುಪಾಲ ಝುಡ್ ಎಂ. ಖಾಜಿ, ಹಿರಿಯ ಉಪನ್ಯಾಸಕ ಹಾಗೂ ಕಾರ್ಯಕ್ರಮದ ನೋಡಲ್ ಅಧಿಕಾರಿ ಮೌನೇಶ ಬಡಿಗೇರ ಹಾಗೂ ಸಂಸ್ಥೆಯ ಎಲ್ಲ ಉಪನ್ಯಾಸಕರು ಇತರರು ಉಪಸ್ಥಿತರಿದ್ದರು.

ನೀರಿನ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಬ್ಯಾಡಗಿ: ಭೂಮಿಯ ಮೇಲೆ ಮಾನವನ ಸೃಷ್ಟಿ ಭಗವಂತನ ಅದ್ಭುತ ಕೊಡುಗೆ. ನಮ್ಮ ಜೀವನಕ್ಕೆ ನೆಲ ಜಲ ವಾಯು ಕೊಡುಗೆಯಾಗಿ ಉಚಿತವಾಗಿ ಸಿಗುತ್ತದೆ ಇದರ ಋಣ ಮಾನವ ಎಂದಿಗೂ ತಿರಿಸಲು ಸಾಧ್ಯವಿಲ್ಲ. ನಮ್ಮ ಭವಿಷ್ಯಕ್ಕೆ ನೀರಿನ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆ ಎಂದು ಉಪ್ಪಾರ ಸಮಾಜದ ಅಧ್ಯಕ್ಷ ಮಂಜುನಾಥ್ ಉಪ್ಪಾರ್ ತಿಳಿಸಿದರು .

ಪಟ್ಟಣದ ಭಗೀರಥ ಉಪ್ಪಾರ ಸಮಾಜದ ವತಿಯಿಂದ ಸೋಮವಾರ ಪಟ್ಟಣದ ರಟ್ಟಿಹಳ್ಳಿ ರಸ್ತೆ ಮತ್ತು ಹಂಸಭಾವಿ ರಸ್ತೆ ಡಿವೈಡರ ನಲ್ಲಿರುವ ಗಿಡಗಳಿಗೆ ನೀರಿನ ಟ್ಯಾಂಕರ್ ಮೂಲಕ ನೀರು ಉಣಿಸಿ ಪ್ರಕೃತಿಗೆ ಬೆಳೆಸುವ ದೆಸೆಯಲ್ಲಿ ಈ ಭೂಮಿಗೆ ಜೀವಜಲ ಗಂಗೆಯನ್ನು ಹರಿಸಿದ ಭಗೀರಥ ಮಹರ್ಷಿಯನ್ನು ನೆನೆಸುತ್ತಾ ವಿಶ್ವ ಜಲ ದಿನಾಚರಣೆಯನ್ನು ಆಚರಣೆ ಮಾಡಿದರು.

ಭವಿಷ್ಯದ ಸುರಕ್ಷತೆಗೆ ಜಲ ಸಂರಕ್ಷಣೆ ನಮ್ಮೆಲ್ಲರ ಹೊಣೆ. ವಿಶ್ವ ಜಲ ದಿನದ ಸ್ಟಿಕರ್‌ಗಳನ್ನು ಸಾರ್ವಜನಿಕ ಸ್ಥಳದ ನೀರಿನ ಟ್ಯಾಂಕ್ ಕುಡಿಯುವ ನೀರಿನ ಘಟಕಗಳ ಮೇಲೆ ಅಂಟಿಸಲಾಯಿತು ಮತ್ತು ಡಾಕ್ಟರ್ ಬಿ.ಆರ್ ಅಂಬೇಡ್ಕರ್ ಬಾಲಕರ ವಸತಿ ನಿಲಯದ ಕೈ ತುಳಿಯುವ ಸ್ಥಳದಲ್ಲಿ ವಿದ್ಯಾರ್ಥಿಗಳಿಗೆ ಭೂಮಿಯ ಮೇಲೆ 70% ನೀರಿದ್ದರೂ ಸಹ ಅದು ಜೀವನೋಪಾಯಕ್ಕೆ ಲಭ್ಯವಿಲ್ಲ ಮಾನವನ ಸಹಿ ನಿರೀನ ಮೂಲಗಳ ಮೇಲೆ ಅವಲಂಬಿತ ಅವುಗಳನ್ನು ಪುನಶ್ಚೇತನ ಸಂರಕ್ಷಣೆ ಅವಶ್ಯ ಎಂದು ತಿಳಿಸಿ ನೀರನ್ನು ಮಿತವಾಗಿ ಬಳಸಿ ಪೋಲು ಮಾಡದಂತೆ ಜಾಗೃತಿ ಮೂಡಿಸುವ ಕಾರ್ಯ ನಡೆಸಿದರು.

ಅಧ್ಯಕ್ಷ ಮಂಜುನಾಥ ಉಪ್ಪಾರ, ಕಾರ್ಯದರ್ಶಿ ಲಿಂಗರಾಜ ಹರ್ಲಾಪುರ, ಖಜಾಂಚಿ ಚಂದ್ರಶೇಖರ ಆಟದವರ, ಶಂಕರ ಉಪ್ಪಾರ, ಕೃಷ್ಣಪ್ಪ ಉಪ್ಪಾರ, ಮಾಲತೇಶ ಉಪ್ಪಾರ, ಶಿವಬಸಪ್ಪ ಉಪ್ಪಾರ, ಗಾದೀಲಿಂಗಪ್ಪ ಉಪ್ಪಾರ, ಮಂಜು ಸಾಗರಿ, ರವಿ ಉಪ್ಪಾರ, ವೆಂಕಟೇಶ ಉಪ್ಪಾರ, ಜಗದೀಶ ಉಪ್ಪಾರ ಉಪಸ್ಥಿತರಿದ್ದರು.



ಡಿಸಿ ಡಾ. ವಿಜಯಮಹಾಂತೇಶ ಅಭಿಮತ

ಡಾ.ಪುನೀತ್ ಬದುಕು ಯುವಜನತೆಗೆ ಮಾದರಿ

ಹಾವೇರಿ: ತಾಲೂಕಿನ ಹೊಸಕಿತ್ತೂರಿನಲ್ಲಿ ಶ್ರೀಸಂಗಮೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಸ್ಥಳೀಯ ಅಪ್ಪು ಡ್ಯಾನ್ಸ್ ಅಕಾಡೆಮಿ ವತಿಯಿಂದ ಡಾ. ಪುನೀತ್ ರಾಜಕುಮಾರ್ ಸಂಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಅಧ್ಯಕ್ಷತೆವಹಿಸಿದ್ದಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಮಾತನಾಡಿ, ಪುನೀತ್ ರಾಜ್‌ಕುಮಾರ್ ಅವರ ಬದುಕು ಯುವಜನತೆಗೆ ಮಾದರಿಯಾಗಿದೆ. ಅವರ ಆದರ್ಶಗಳು, ಸಮಾಜಮುಖಿ ಕಾರ್ಯಗಳು ಹಾಗೂ ಸರಳ ಜೀವನ ಶೈಲಿ ಅನುಕರಣೀಯ ಎಂದು ಹೇಳಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಹೊಸರಿತ್ತಿಯ ಗುದ್ದಲಿಸ್ವಾಮಿ ಮಠದ ಶ್ರೀ ಗುದ್ದಲಿ ಶಿವಯೋಗಿಶ್ವರ ಸ್ವಾಮೀಜಿ ಮಾತನಾಡಿ, ಪುನೀತ್ ರಾಜ್‌ಕುಮಾರ್ ಅವರು ವಿವಿಧ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಗುರುಗಳ ಆಶೀರ್ವಾದ ಪಡೆದಿದ್ದನ್ನು ಸ್ಮರಿಸಿದರು. ಅವರ ಜೀವನವೇ ದೈವ ಸಂದೇಶ ಸಾರುವಂತದ್ದು ಎಂದು ಸ್ಮರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಜಯ ಗಾಂಧಿ ಸಂಜೀವಣ್ಣನವರ, ಕಾರ್ಯಕ್ರಮದ ಆಯೋಜಕ, ನೃತ್ಯ ನಿರ್ದೇಶಕ, ಪ್ರಕಾಶ್ ಮರಬದ ಅವರು ಪುನೀತ್ ರಾಜ್‌ಕುಮಾರ್ ಅವರ ಅಪ್ಪಟ ಅಭಿಮಾನಿಯಾಗಿದ್ದು, ವಿಶೇಷ ಕಾರ್ಯಕ್ರಮಗಳ ಮೂಲಕ ಅವರ ಸ್ಮರಣೆಯನ್ನು ಜೀವಂತವಾಗಿರಿಸಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಗ್ರಾಮದ ಹಿರಿಯರಾದ ಶಿವಯ್ಯ ಹಿರೇಮಠ, ಸಿದ್ದರಾಜ ಕಲಕೋಟಿ, ಐ.ಜಿ. ಕೋರಿ, ಗುಡದಯ್ಯ ಬರಡಿ, ನಾಗರಾಜ ಮಡಿವಾಳರ, ಆನಂದ ಮುರುಡಪ್ಪ, ಮಂಜರೆಡ್ಡಿ ಮಾಗಡಿ, ಸಂಗನಗೌಡ ಧೂಳಿಕೊಪ್ಪ, ರಂಗಪ್ಪ ತಳವಾರ, ಎಂ.ಎಫ್. ಭಗವಂತಗೌಡ್ರ, ಎಚ್.ಆರ್. ಮಡಿವಾಳರ, ಗೀತಾಬಾಯಿ ಲಮಾಣಿ, ಮಂಜು ದಡ್ಡೂರು, ಸಿದ್ದಯ್ಯ ಹಿರೇಮಠ, ಫಕೀರೇಶ ಮತ್ತೂರು, ರಾಜಶೇಖರ ದಂಡಣ್ಣನವರ, ಸಿದ್ದಲಿಂಗಪ್ಪ ಗುಳ್ಳೆದ, ಪಿ.ಬಿ. ದುಂಡಪ್ಪನವರ, ಮಂಜುನಾಥ ಕುರಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.



ಸ್ವಯಂ ಗುರುವಾಗಿ ಜ್ಯೋತಿಯಾದ ಅಲ್ಲಮರು

ಹಾವೇರಿ: ಗುರುವನ್ನು ಮುಟ್ಟಿ ಗುರುವಾಗಿಸ್ವಯಂಜ್ಯೋತಿಯಾದವರು ಅಲ್ಲಮಪ್ರಭುಗಳು ಎಂದು ಹಾವೇರಿ ಬಸವ ಬಳಗದ ಅಧ್ಯಕ್ಷ ವಿ.ಜಿ. ಯಳಗೇರಿ ಅವರು ಹೇಳಿದರು.

ಇಲ್ಲಿಯ ಬಸವ ಭವನದಲ್ಲಿ ನಡೆದ ಅಲ್ಲಮ ಪ್ರಭುಗಳ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಲ್ಲಮಪ್ರಭು ಮತ್ತು ಅನಿಮಿಷ ಯೋಗಿಗಳ ನಡುವೆ ನಡೆದ ಘಟನೆಯನ್ನು ಎಳೆ ಎಳೆಯಾಗಿ ವಿವರಿಸಿ, ಅಲ್ಲಮರು ಅನೇಕ ಬೆಡಗಿನ ವಚನಗಳ ಮೂಲಕ ಜಗದ ಅಂಕು ಡೊಂಕುಗಳನ್ನು ತಿದ್ದುವ ಕಾರ್ಯ ಮಾಡಿದ್ದಾರೆ. ಅಲ್ಲಮರ ಹಾಗೂ ಮುಕ್ತಾಯಕ್ಕನ ನಡುವೆ ನಡೆದ ನಿರವಲಯ ಪಥದ ಬಗ್ಗೆ



ವಿವರಿಸಿದರು.

ಬಸವರಾಜ ಕೋರಿ ಅಲ್ಲಮ ಪ್ರಭುಗಳ ಕಾಲಜ್ಞಾನದ ವಚನವನ್ನು ಉಲ್ಲೇಖಿಸಿ ಮಾತನಾಡಿದರು. ಬಳಗದ ಉಪಾಧ್ಯಕ್ಷ ಮಲ್ಲಿಕಾರ್ಜುನ ಹಿಂಚಿಗೇರಿ ಮಾತನಾಡಿ, ಅಲ್ಲಮ ಪ್ರಭುಗಳು ಸಿದ್ದರಾಮೇಶ್ವರರೊಂದಿಗೆ ಪ್ರಥಮವಾಗಿ ಬಸವಣ್ಣನವರನ್ನು ಭೇಟಿಯಾದಂತಹ ಸಂದರ್ಭವನ್ನು ವಿವರಿಸಿದರು. ಅಲ್ಲಮರು ಅವರ ವಚನಗಳ ಮೂಲಕ ಸಮಾಜಕ್ಕೆ ಕೊಟ್ಟಿರುವ ಅತ್ಯಮೂಲ್ಯ ಕೊಡುಗೆಗಳನ್ನು ಸ್ಮರಿಸಿದರು.

ಕಾರ್ಯದರ್ಶಿ ಜಗದೀಶ ಹರ್ತಿಕೋಟಿ ಮಾತನಾಡಿ, ಅಲ್ಲಮಪ್ರಭುಗಳ ಜನನ, ಜೀವನ ಹಾಗೂ ಶೂನ್ಯ ಪೀಠದ ಪ್ರಥಮ ಅಧ್ಯಕ್ಷರಾದಂತಹ ಸಂದರ್ಭದಲ್ಲಿ ಅನುಭವ ಮಂಟಪದಲ್ಲಿ ನಡೆದಂತಹ ಅಕ್ಕಮಹಾದೇವಿಯ ಸಂವಾದದ ಬಗ್ಗೆ ವಚನಗಳ ಮೂಲಕ ವ್ಯಾಖ್ಯಾನಿಸಿದರು.

ಮುರಿಗೆಪ್ಪ ಕಡೆಕೊಪ್ಪ, ಶಿವಾನಂದ ಅಂಗಡಿ, ಇಟಗಿ, ನಾಗೇಂದ್ರಪ್ಪ ಮಂಡಕ್ಕಿ ರಿತ್ತಿಗಾಣಗೇರ, ಗಂಗಣ್ಣ ಮಾಸೂರ, ಹನುಮಂತಪ್ಪ ಮಡಿವಾಳರ, ಶಿವಾನಂದ ಹೊಸಮನಿ, ಕೋರಿಶೆಟ್ಟರ, ಶಂಕರಪ್ಪ ಜಾಯಗೊಂಡರ, ಪುಟ್ಟಪ್ಪ ಮಲ್ಲಪ್ಪನವರ ಇನ್ನೂ ಅನೇಕರು ಉಪಸ್ಥಿತರಿದ್ದರು. ಶಿವಯೋಗಿ ಬೆನ್ನೂರು ಪ್ರಾಸ್ತಾವಿಕವಾಗಿ, ಪವುಷ್ಪಾವತಿ ಕೆರೂಡಿ ಮಾತನಾಡಿದರು. ಶಿವಬಸಪ್ಪ ಮುದ್ದಿ ಸ್ವಾಗತಿಸಿದರು. ಉಪಾಧ್ಯಕ್ಷ ಕೊಟ್ರೇಶ ಬಿಜಾಪುರ ನಿರೂಪಿಸಿದರು.

ಪರಿಸರ ಸಮತೋಲನಕ್ಕೆ ಪಕ್ಷಿಗಳು ಮೂಲಾಧಾರ

ಗದಗ: ಪಕ್ಷಿಗಳಜೀವನಕ್ರಮಚೇತೋಹಾರಿಯಾಗಿದೆ. ಚಲನೆ, ತೀಕ್ಷ್ಣೆ, ವೈರಿಗಳಿಂದ ರಕ್ಷಣೆ ಮುಂತಾದ ವಿಷಯಗಳಲ್ಲಿ ಅವುಗಳ ಯೋಚನಾ ಶಕ್ತಿ ಅದ್ಭುತ. ಪರಿಸರ ಸಮತೋಲನದ ಹಿನ್ನೆಲೆಯಲ್ಲಿ ಪಕ್ಷಿಗಳ ಪಾತ್ರ ಮಹತ್ವದ್ದು. ಮನುಷ್ಯ ಇವುಗಳನ್ನು ತನ್ನ ಪರಿವಾರದ ಭಾಗವಾಗಿ ನೋಡಬೇಕು ಎಂದು ಪಕ್ಷಿಮಿತ್ರ ಪ್ರಕಾಶ ಗೌಡರ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಜರುಗಿದ ಕಾರ್ಯಕ್ರಮದಲ್ಲಿ ಕೆ.ಎಸ್.ಕೊಡ್ಲಿವಾಡ ಅವರು ರಚಿಸಿದ ಮಂಗೋಲಿಯಾ ಟು ಮಾಗಡಿ ವಲಸೆ ಪಕ್ಷಿಗಳ ಪುಸ್ತಕದ ಕುರಿತು ಮಾತನಾಡಿದರು.

ಆಹಾರ, ನೀರು, ವಿಶ್ರಾಂತಿ ಇಲ್ಲದೇ ಸಾವಿರಾರು ಕಿಲೋಮಿಟರ್ ವಲಸೆ ಬರುವ ಪಕ್ಷಿಗಳು ಅತಿಯಾದ ಕ್ರಿಮಿಕೀಟಗಳ ಹಾವಳಿಯಿಂದ ಮನುಷ್ಯನನ್ನು ರಕ್ಷಿಸುತ್ತವೆ. ಪರಿಸರದಲ್ಲಿರುವ ಜೇನ್ನೊಣಗಳು ಮಾಡುವ ಪರಾಗಸ್ಪರ್ಶ ಕ್ರಿಯೆಯಿಂದ ಮನುಷ್ಯನಿಗೆ ಆಹಾರ ದೊರೆಯುತ್ತಿದೆ. ಪಕ್ಷಿಗಳ ಮಲಮೂತ್ರದಿಂದ ಅರಣ್ಯ ಸೃಷ್ಠಿಯಾಗಿದೆ. ಈ ಹಿನ್ನೆಲೆಯಲ್ಲಿ ಮನುಷ್ಯ ಶ್ರೇಷ್ಠತೆಯ ವ್ಯಸನದಿಂದ ಹೊರಬಂದು ಪರಿಸರದ ಕೂಸಾಗಿ ಬದುಕಬೇಕೆಂದು ತಿಳಿಸಿದರು.

ಪುಸ್ತಕ ಬಿಡುಗಡೆಗೊಳಿಸಿದ ನಂದಿವೇರಿಮಠದ ಶಿವಕುಮಾರ ಸ್ವಾಮೀಜಿ ಮಾತನಾಡಿ, ಮಾಗಡಿ ಮತ್ತು ಶೆಟ್ಟಿಕೆರೆ ಇನ್ನಷ್ಟು ಅಭಿವೃದ್ಧಿ ಹೊಂದಬೇಕು. ವಿದ್ಯಾರ್ಥಿಗಳಿಗೆ, ಪಕ್ಷಿಪ್ರಿಯರಿಗೆ ಈ ಪುಸ್ತಕ ಸಂಪನ್ಮೂಲ ಸಾಮಗ್ರಿಯಾಗಿದೆ ಎಂದು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್. ಎಸ್.ಬುರಡಿ ಮಾತನಾಡಿದರು.

ಲೇಖಕ ಕೆ.ಎಸ್.ಕೊಡ್ಲಿವಾಡ ಮಾತನಾಡಿ, ವಲಸೆ ಪಕ್ಷಿಗಳ ಬಗ್ಗೆ ಕುತೂಹಲವೆನಿಸಿ ಅಧ್ಯಯನ ಮಾಡಿ ಈ ಪುಸ್ತಕವನ್ನು ರಚಿಸಲಾಗಿದೆ. ಮಾಗಡಿ ಕೆರೆಯ ಸ್ವಚ್ಛತೆ, ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಉತ್ತಮ ಪ್ರವಾಸಿ ತಾಣವನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ಇಂದು ದೇವರ ದಾಸಿಮಯ್ಯನವರ ಜಯಂತಿ

ಹಾವೇರಿ: ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಾವೇರಿ ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟದ ಸಹಯೋಗದಲ್ಲಿ ಆದ್ಯವಚನಕಾರ ಶ್ರೀ ದೇವರ ದಾಸಿಮಯ್ಯನವರ ಜಯಂತಿ ಕಾರ್ಯಕ್ರಮ ಮಾ.24 ರಂದು ಬೆಳಗ್ಗೆ 11 ಗಂಟೆಗೆ ಹಾವೇರಿ ನಗರದ ಪ್ರವಾಸಿ ತಾಣ ಗಾಂಧಿ ಭವನದಲ್ಲಿ ಜರುಗಲಿದೆ.

ಕೇಂದ್ರ ಗ್ರಾಹಕರ ವ್ಯವಹಾರಗಳ ಆಹಾರ ಮತ್ತು ಸಾರ್ವಜನಿಕ ವಿತರಣಾ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾದ ಪ್ರಹ್ಲಾದ ಜೋಶಿ ಹಾಗೂ ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಗೌರವಾನ್ವಿತ ಉಪಸ್ಥಿತಿಯಲ್ಲಿ, ಜವಳಿ, ಕಬ್ಬು ಅಭಿವೃದ್ಧಿ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ.

ಮಾಜಿ ಮುಖ್ಯ ಮಂತ್ರಿಗಳು ಹಾಗೂ ಸಂಸದರಾದ ಬಸವರಾಜ ಬೊಮ್ಮಾಯಿ ಅವರ ಗೌರವ ಉಪಸ್ಥಿತಿಯಲ್ಲಿ, ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಸೈಯದ್ ಅಜೀಮಪೀರ್ ಖಾದ್ರಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್. ಪಾಟೀಲ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ವಿಧಾನ ಪರಿಷತ್ ಶಾಸಕರಾದ ಪ್ರೊ. ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ. ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರ ಅಹ್ಮದಖಾನ್ ಪಠಾಣ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಂ.ಎಂ. ಹಿರೇಮಠ ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಮೈದೂರ ಅವರು ಭಾಗವಹಿಸಲಿದ್ದಾರೆ.

ಶಿಗ್ಗಾಂವ ಚನ್ನಪ್ಪ ಕನ್ನೂರ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ನಾಗರಾಜ ದ್ಯಾಮನಕೊಪ್ಪ ಅವರು ಉಪನ್ಯಾಸಕರಾಗಿ ಭಾಗವಹಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಹಾವೇರಿ ಜಿಲ್ಲಾ ನೇಕಾರ ಸಮುದಾಯಗಳ ಒಕ್ಕೂಟ ಗೌರವಾಧ್ಯಕ್ಷ ಡಾ.ಬಸವರಾಜ ಕೆಲಗಾರ ಹಾಗೂ ಜಿಲ್ಲಾ ಅಧ್ಯಕ್ಷ ಹನುಮಂತಪ್ಪ ಮುಕ್ತೇನಹಳ್ಳಿ ಅವರು ಭಾಗವಹಿಸಲಿದ್ದಾರೆ.

ಗ್ರಾಹಕರು ಪ್ರತಿ ಹಂತದಲ್ಲೂ ಎಚ್ಚರವಹಿಸಲಿ

ಹಾವೇರಿ: ದಿನನಿತ್ಯದ ಜೀವನದಲ್ಲಿ ಎಲ್ಲರೂ ಗ್ರಾಹಕರೆ, ಹಾಗಾಗಿ ಗ್ರಾಹಕರು ಜಾಗೃತರಾಗಬೇಕು ಹಾಗೂ ಪ್ರತಿ ಹಂತದಲ್ಲಿ ಎಚ್ಚರಿಕೆ ಇರಬೇಕು ಎಂದು ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ. ಹೇಳಿದರು.

ನಗರದ ಸಿ.ಬಿ. ಕೊಳ್ಳಿ ಪಾಲಿಟೆಕ್ನಿಕ್‌ನಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಚೈತನ್ಯ ಸಂಸ್ಥೆಯ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ, ಕಾನೂನು ಮಾಪನ ಶಾಸ್ತ್ರ ಇಲಾಖೆ ಸಹಯೋಗದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಖರೀದಿಸಿದ ವಸ್ತುಗಳಲ್ಲಿ ಲೋಪದೋಷ ಉಂಟಾದಾಗ ಏನು ಮಾಡಬೇಕು, ಎಲ್ಲಿ ಹೋಗಬೇಕು ಎಂದು ತಿಳಿದುಕೊಳ್ಳಬೇಕು.



ಇಂದು ಆನ್‌ಲೈನ್ ಖರೀದಿಯಲ್ಲಿ ಬಹಳ ಮೋಸವಾಗುತ್ತಿದ್ದು, ನಾವು ಆಯ್ಕೆ ಮಾಡಿದ ವಸ್ತು ಬೇರೆ ಇರುತ್ತದೆ, ಅವರು ಕಳುಹಿಸುವ ವಸ್ತು ಬೇರೆ ಆಗಿರುತ್ತದೆ. ಇಂತಹ ಸಂದರ್ಭದಲ್ಲಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ದೂರು ಸಲ್ಲಿಸುವ ಮೂಲಕ ಪರಿಹಾರ ಪಡೆದುಕೊಳ್ಳಬಹುದು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಈಶ್ವರಪ್ಪ ಬಿ.ಎಸ್. ಮಾತನಾಡಿದರು. ಕಾನೂನು ನೆರವು ಅಭಿರಕ್ಷಣಾ ವಕೀಲ ಎನ್.ಎನ್. ಡಿಳ್ಳೆಪ್ಪನವರ ಉಪನ್ಯಾಸ ನೀಡಿದರು.

ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿ. ಸಿದ್ದನಗೌಡ್ರ ಹಾಗೂ ವಕೀಲ ಸುರೇಶ ಸಜ್ಜನರ ಮಾತನಾಡಿದರು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯರಾದ ಉಮಾದೇವಿ ಹಿರೇಮಠ, ಪ್ರಾಂಶುಪಾಲ ಪ್ರದೀಪ ಗದ್ದಿಗೌಡರ, ಕಾನೂನು ಮಾಪನ ಶಾಸ್ತ್ರ ಇಲಾಖೆ ಸಿದ್ದಪ್ಪ ಪೂಜಾರಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಕುಮಾರ ವಡ್ಡನಕಟ್ಟಿ ಉಪಸ್ಥಿತರಿದ್ದರು. ಮಂಜುನಾಥ ಡಿ.ಜೆ. ಅವರು ಸ್ವಾಗತಿಸಿದರು. ಮಜೀದ್ ಎಸ್. ಎಚ್. ನಿರೂಪಿಸಿ, ವಂದಿಸಿದರು.

ಭಾರೀ ಮಳೆಗೆ ಉರುಳಿದ ಕಂಬ

ಹಾವೇರಿ: ಜಿಲ್ಲೆಯ ಹಲವೆಡೆ ಸೋಮವಾರ ಸಂಜೆ ಗುಡುಗು, ವೇಗದ ಗಾಳಿ ಸಹಿತ ಕೆಲಕಾಲ ಮಳೆಯಾಗಿದ್ದು, ಇದರಿಂದ ಇಡೀ ದಿನ ಸೆಕೆಗೆ ಬಸವಳಿದಿದ್ದ ಜನತೆ ಇಳೆಗೆ ಮಳೆ ಸುರಿಯುತ್ತಿದ್ದಂತೆಯೇ ಕೊಂಚ ರಿಲ್ಯಾಕ್ಸ್ ಆಗಿದ್ದಾರೆ. ಇಡೀ ದಿನ



ಬೆಳಗ್ಗೆಯಿಂದ ಸಂಜೆವರೆಗೆ ಬಿಸಿಲಿನ ತಾಪಮಾನ 36ರಿಂದ 38ರವರೆಗೆ ದಾಖಲಾಗಿದ್ದು, ಸಂಜೆ ಅಲ್ಲಲ್ಲಿ ಏಕಾಏಕಿ ಜೋರಾದ ಗಾಳಿ ಸಹಿತ ಮಳೆ ಸುರಿದಿದೆ. ರಾಣೆಬೆನ್ನೂರ ನಗರದ ಗೌರಿಶಂಕರ ನಗರದಲ್ಲಿ ಬೃಹತ್ ಮರವೊಂದು ಬಿದ್ದು ಆಟೋ ರಿಕ್ಷಾ ಜಖಂ. ಕ್ಷಣಾರ್ಧದಲ್ಲೇ ಉರುಳಿ ಬಿದ್ದ ಬೃಹತ್ ಮರಕೂದಲೆಳೆಯಅಂತರದಲ್ಲಿ ಪಾರಾದ ಚಾಲಕ. ವಾಗೀಶ ನಗರ ಸೇರಿದಂತೆ ಗ್ರಾಮೀಣ ಭಾಗದ ಹಲವೆಡೆ ಗಾಳಿಯ ವೇಗಕ್ಕೆ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಹಾವೇರಿ, ಬ್ಯಾಡಗಿ, ಶಿಗ್ಗಾವಿ, ಸವಣೂರು, ಹಾನಗಲ್ಲ, ಹಿರೇಕೆರೂರು ಹಾಗೂ ರಟ್ಟೀಹಳ್ಳಿ ತಾಲೂಕಿನ ಅಲ್ಲಲ್ಲಿ ಕೊಂಚ ಬಿರುಸಿನ ಮಳೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ರಾಗಿ, ಕುಸುಬೆ ಸೇರಿದಂತೆ ಕೆಲ ಬೆಳೆಗಳನ್ನು ಒಣಗಿಸಲು ಹಾಗೂ ಕಟಾವು ಮಾಡಿ ಮಾರಾಟಕ್ಕೆ ಮುಂದಾಗಬೇಕಿದ್ದ ರೈತರು ಈ ಅಕಾಲಿಕ ಮಳೆಯಿಂದ ಸಮಸ್ಯೆ ಎದುರಿಸುವಂತಾಗಿದೆ. ಕೆಲವೆಡೆ ಕೊಯ್ಲಿಗೆ ಬಂದ ರಾಗಿ ಕಟಾವು ಹಂತದಲ್ಲಿದ್ದಾಗ ಈ ಮಳೆ ರಾಗಿ ಬೆಳೆಗಾರರನ್ನು ಆತಂಕಕೆ ನೂಕಿದೆ.

ಕಿರುಸುದ್ದಿ

ದೇವರ ದಾಸಿಮಯ್ಯ ಜಯಂತಿ ಆಚರಣೆ



• **ಯರಗಟ್ಟಿ:** ಪಟ್ಟಣದ ತಹಶೀಲ್ದಾರ ಕಚೇರಿ ಸಭಾಭವನದಲ್ಲಿ 12ನೇ ಶತಮಾನದ ಆದ್ಯ ವಚನಕಾರ, ಶಿವಶರಣ ದೇವರ ದಾಸಿಮಯ್ಯನವರ ಜಯಂತಿಯನ್ನು ಅತ್ಯಂತ ಸಡಗರ ಹಾಗೂ ಭಕ್ತಿ-ಭಾವದಿಂದ ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ತಹಶೀಲ್ದಾರ ಎಮ್. ವ್ಹಿ. ಗುಂಡಪ್ಪಗೋಳ ಅವರು ದೇವರ ದಾಸಿಮಯ್ಯನವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಉಪ ತಹಶೀಲ್ದಾರ ಎಸ್. ಎಸ್. ಜಾದವ, ಶಿರಸ್ತೇದಾರ ಎಸ್. ಬಿ. ಕುಲಕರ್ಣಿ, ಲೀಲಾವತಿ ತಳವಾರ, ಗ್ರಾಮ ಆಡಳಿತಾಧಿಕಾರಿಗಳಾದ ಎಲ್. ಬಿ. ದಳವಾಯಿ, ಎ. ಬಿ. ಹುಣಶ್ಯಾಳ, ಶಾಹೀನ ಮಿಶ್ರಕೋಟಿ, ಸ್ವರೂಪ ಚಪಳಿ, ಲಕ್ಕಣ್ಣ ಪೂಜೇರ, ವಿಜಯ ಉಪ್ಪಿನ, ಈರಣ್ಣಾ ಹುಲ್ಲೂರ, ಫೀರೋಜ ಖಾದ್ರಿ, ಚಿದಂಬರ ಕಟ್ಟಿಮನಿ ಸೇರಿದಂತೆ ಅನೇಕರು ಇದ್ದರು.

ವಾಸುದೇವ ಮೇಟಿ ನೇಮಕ



• **ಬೆಳಗಾವಿ:** ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷರಾದ ವಾಸುದೇವ ಮೇಟಿ ಅವರ ಆದೇಶದ ಮೇರೆಗೆ ಮೂಡಲಗಿಯ ಕಲ್ಮೇಶ ಗೋಕಾಕ ಅವರನ್ನು ಬೆಳಗಾವಿ ಜಿಲ್ಲಾಧ್ಯಕ್ಷರನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದೆ. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತತ್ವ ಸಿದ್ದಾಂತಗಳಿಗೆ ಬದ್ದರಾಗಿ ಯಾವುದೇ ರೀತಿಯ ಆಸೆ ಆಮಿಷಗಳಿಗೆ ಒಳಗಾಗದೆ ಸಾಮಾಜಿಕ ಪಿಡುಕುಗಳಿಂದ ದೂರವಿದ್ದು ಪ್ರಾಮಾಣಿಕತೆ ಮತ್ತು ಚಾರಿತ್ರ್ಯಗಳಿಗೆ ದಕ್ಕೆ ಬರದ ರೀತಿಯಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿ ಜಾತಿ ಮತ ಧರ್ಮ ಮೇಲು ಕೀಳು ಮತ್ತು ಯಾವುದೇ ಕಲಹ ಬಾರದ ರೀತಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತ ಜಿಲ್ಲಾ ಸಂಘಟನೆಯ ಕಾರ್ಯವನ್ನು ಶಿಸ್ತುಬದ್ದವಾಗಿ ಪಾಲನೆ ಮಾಡುವಂತೆ ಆದೇಶ ಪತ್ರದಲ್ಲಿ ತಿಳಿಸಲಾಗಿದೆ.

ವ್ಯಕ್ತಿ ನಾಪತ್ತೆ



• **ಬೆಳಗಾವಿ:** ವಡಗಾಂವ ಗ್ರಾಮದ ಗಾಡೆ ಮಾರ್ಗ ಸಂಬಾಜಿ ನಗರದ ನಿವಾಸಿ ವಿನಾಯಕ ಮಾರುತಿ ಬೋಸಲೆ ಈತನು ಮಾರ್ಚ 13 ರಂದು ಕುಟುಂಬ ಕೆಲಸದಿಂದ ಮನೆ ಬಿಟ್ಟು ಹೋಗಿ ಕಾಣೆಯಾಗಿರುತ್ತಾನೆ. ಈ ಕುರಿತು ಶಹಾಪೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಾಣೆಯಾದ ವ್ಯಕ್ತಿಯ ವಿವರ : ವಯಸ್ಸು 46 ವರ್ಷ, ಜಾತಿ ಹಿಂದೂ ಮರಾಠಾ ಉದ್ಯೋಗ ಹೋಟೆಲ್ದಲ್ಲಿ ಕೆಲಸ, 5 ಪೂಟ 7 ಇಂಚ್ ಎತ್ತರ, ಉದ್ದ ಮುಖ, ಉದ್ದ ಮೂಗು, ಸಡಪಾತಾಳ ಮೈಕಟ್ಟು, ಗೋಧಿಗೆಂಪು ಮೈಬಣ್ಣ ಇರುತ್ತದೆ. ಮರಾಠಿ, ಕನ್ನಡ, ಹಿಂದಿ, ಇಂಗ್ಲಿಷ ಭಾಷೆ ಮಾತನಾಡುತ್ತಾನೆ ಹಾಗೂ ಕಪ್ಪು ಬಣ್ಣದ ಶರ್ಟ್ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಈ ಪ್ರಕಾರ ಚಹರೆಯುಳ್ಳ ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಪೊಲೀಸ್ ಆಯುಕ್ತರು, ಬೆಳಗಾವಿ ನಗರ ಅಥವಾ ಪೊಲೀಸ್ ಇನ್ಸಪೆಕ್ಟರ್, ಶಹಾಪೂರ ಪೊಲೀಸ್ ಠಾಣೆ ಬೆಳಗಾವಿ ನಗರ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಿಧನ ಸುದ್ದಿ

ಕೊಂತೆಪ್ಪ ಬೆಳಗಾವಿ



• **ಮುರಗೋಡ:** ಗ್ರಾಮದೇವಿ ಓಣಿಯ ನಿವಾಸಿ ಕೊಂತೆಪ್ಪ ಯಲ್ಲಪ್ಪ ಬೆಳಗಾವಿ(42) ಭಾನುವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ನೀಲಗಂಗವ್ವ ಚಿಕ್ಕನಗೌಡ್ರ



• **ನೇಸರಗಿ:** ಗ್ರಾಮದ ನಿವಾಸಿ ಶ್ರೀಮತಿ ನೀಲಗಂಗವ್ವ ಶಂಕರೆಪ್ಪ ಚಿಕ್ಕನಗೌಡ್ರ (85) ಸೋಮವಾರ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, 3 ಜನ ಪುತ್ರಿಯರು ಹಾಗೂ ಅಪಾರ ಬಂದು ಬಳಗವನ್ನು ಅಗಲಿದ್ದಾರೆ.



ಕಕಮರಿ: ಗ್ರಾಮದೇವತೆ ಶ್ರೀ ಅಮ್ಮಾಜೀಶ್ವರಿ ದೇವಸ್ಥಾನ ಕಟ್ಟಡ ನಿರ್ಮಾಣಕ್ಕಾಗಿ 50,001ರೂ. ದೇಣಿಗೆ ನೀಡಿದ ಗ್ರಾಮದ ಗುಲಾಬಸಾಬ ಬಾಪುಸಾಬ ನದಾಫ್ ಅವರನ್ನು ಶ್ರೀ ಅಮ್ಮಾಜೀಶ್ವರಿ ದೇವಸ್ಥಾನ ಸೇವಾ ಕಮೀಟಿ ವತಿಯಿಂದ ಸತ್ಕರಿಸಲಾಯಿತು. ಲಕ್ಷ್ಮಣ ಗುರ್ಕಿ, ಲಾಯಪ್ಪ ದಾತ್ಯಾಳ, ಬೀಮಪ್ಪ ಜನಗೌಡ, ಗಿರಮಲ್ಲ ಬಸರಗಿ, ಮಹಾದೇವ ಜನಗೌಡ, ರಾಜಭಕ್ಷ ನದಾಫ್, ಶಿವಾನಂದ ಪೂಜಾರಿ, ಇತರರಿದ್ದರು.

ಮಾ.26ರಿಂದ ಪಡಿಬಸವೇಶ್ವರ ಜಾತ್ರೆ

• **ಹಿರೇಬಾಗೇವಾಡಿ:** ಇಲ್ಲಿನ ಪಡಿಬಸವೇಶ್ವರ ಜಾತ್ರೆ ಮತ್ತು ಗ್ರಾಮದೇವಿ ಉಡಿ ತುಂಬುವ ಕಾರ್ಯಕ್ರಮಗಳು ಮಾ.26 ರಿಂದ ಮಾ 30 ರವರೆಗೆ ನೆರವೇರಲಿವೆ.

ಮಾ 26 ರಂದು ಬೆಳಗ್ಗೆ ಪಡಿಬಸವೇಶ್ವರ ಮತ್ತು ವೀರಭದ್ರೇಶ್ವರ ದೇವರಿಗೆ ರುದ್ರಾಭಿಷೇಕ, ಮಧ್ಯಾಹ್ನ 1 ಗಂಟೆಗೆ ಬಡೇಕೊಳ್ಳಮಠದ ನಾಗೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ದೇವರ ಬೆಳ್ಳಿಯ ಮೂರ್ತಿ ಮೆರವಣಿಗೆ ನಡೆಯಲಿದೆ. ಮಧ್ಯಾಹ್ನ ರುದ್ರದೂಟ ಮತ್ತು ಸಂಜೆ 5 ಗಂಟೆಗೆ ಉಪಸ್ಥಿತ ಶ್ರೀಗಳಿಂದ ರಥದ ಕಳಸಾರೋಹಣ ನೆರವೇರಿಸಲಾಗುವುದು. ನಂತರ ವಾಲಿಬಾಲ್ ಪಂದ್ಯಾವಳಿಗಳು ನಡೆಯಲಿವೆ. ಮಾ. 27 ರಂದು ಮುಂಜಾನೆ 9 ಗಂಟೆಗೆ ಪಡಿಬಸವೇಶ್ವರ ದೇವಸ್ಥಾನದಿಂದ ಪಡಿಬಸವೇಶ್ವರ ಮತ್ತು ವೀರಭದ್ರೇಶ್ವರ ದೇವರ ಮೂರ್ತಿಗಳನ್ನು ಗ್ರಾಮದೇವಿ ದೇವಸ್ಥಾನದ ವರೆಗೆ ಮೆರವಣಿಗೆಯಲ್ಲಿ ತರಲಾಗುವುದು. ನಂತರ ಗ್ರಾಮದೇವಿ ಮತ್ತು ಲಕ್ಷ್ಮೀದೇವಿಯರ ಉಡಿ ತುಂಬಲಾಗುವುದು. ಮಧ್ಯಾಹ್ನ ಮಹಾಪ್ರಸಾದ ಮತ್ತು ವಾಲಿಬಾಲ್ ಪಂದ್ಯಾವಳಿಗಳು ನಡೆಯಲಿವೆ. ರಾತ್ರಿ 10 ಗಂಟೆಗೆ ನಾಟಕ ಪ್ರದರ್ಶನಗೊಳ್ಳಲಿದೆ. ಮಾ. 28 ರಂದು 12 ರಿಂದ ಮಹಾಪ್ರಸಾದ ಮತ್ತು ವಾಲಿಬಾಲ್ ಪಂದ್ಯಾವಳಿ ಹಾಗೂ ರಾತ್ರಿ 10 ಗಂಟೆಗೆ ನಾಟಕವಿರುವುದು. ಮಾ. 29 ರಂದು 12 ರಿಂದ ಮಹಾಪ್ರಸಾದ, 3 ಗಂಟೆಗೆ ಬಯಲು ಕುಸ್ತಿಗಳು, ರಾತ್ರಿ 9 ಗಂಟೆಗೆ ರಸಮಂಜರಿ ಮತ್ತು ನಗೆ ಹಬ್ಬ ಕಾರ್ಯಕ್ರಮಗಳು ನಡೆಯಲಿವೆ. ಮಾ. 30 ರಂದು 4.05 ಕ್ಕೆ ಮಹಾರಥೋತ್ಸವ ನಡೆಲಿದೆ. ನಂತರ 6.05 ಕ್ಕೆ ಶ್ರೀಗಳಿಂದ ರಥದ ಕಳಸ ಅವರೋಹಣದೊಂದಿಗೆ ಜಾತ್ರಾ ಕಾರ್ಯಕ್ರಮಗಳು ಮುಕ್ತಾಯಗೊಳ್ಳುವವು.



ಯರಗಟ್ಟಿ: ಪಟ್ಟಣದ ಈದ್ಗಾ ಮೈದಾನದಲ್ಲಿ ಅಂಜುಮನ್ ಕಮಿಟಿ ನೇತೃತ್ವದಲ್ಲಿ ಹಾಗೂ ವಿವಿಧ ಕಮಿಟಿಗಳ ಸಹಕಾರದಲ್ಲಿ ರಂಜಾನ್ ಹಬ್ಬದ ಈದ್ ಉಲ್ ಫಿತರ ಅಂಗವಾಗಿ ಸಾಮೂಹಿಕ ಪ್ರಾರ್ಥನೆ ಮಾಡಿದರು.

ಐತಿಹಾಸಿಕ ಹಲ್ಮಿಡಿ ಶಾಸನದ ಪ್ರತಿಕೃತಿ ನಾಪತ್ತೆ

ಕನ್ನಡಪರ ಸಂಘಟನೆಗಳ ಆಕ್ರೋಶ



“ಹಲ್ಮಿಡಿ ಶಾಸನದ ಪ್ರತಿಕೃತಿ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅಭಿಮಾನವಿಲ್ಲ, ಕಳೆದು ಹೋದ ಶಾಸನವನ್ನು ಹುಡುಕುವ ಕಾರ್ಯವನ್ನು ಮಾಡುತ್ತೇವೆ. ಒಂದು ವೇಳೆ ಸಿಗದಿದ್ದರೇ ಎಫ್ ಐಆರ್ ದಾಖಲಿಸಿ ಕಾನೂನು ಹೋರಾಟ ನಡೆಸುತ್ತೇವೆ.

■ ಶ್ರೀನಿವಾಸ ತಾಳೂಕರ, ಕನ್ನಡಪರ ಹೋರಾಟಗಾರ

• **ಬೆಳಗಾವಿ:** ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿದ್ದ ಐತಿಹಾಸಿಕ ಹಲ್ಮಿಡಿ ಶಾಸನದ ಪ್ರತಿಕೃತಿ ನಾಪತ್ತೆಯಾಗಿದ್ದು, ಶಾಸನ ಮಾಹವಾಗಿರುವುದು ಇದೀಗ ದೊಡ್ಡ ವಿವಾದಕ್ಕೆ ಕಾರಣವಾಗಿದೆ ಎಂದು ಕನ್ನಡ ಪರ ಸಂಘಟನೆಗಳು ಆಕ್ರೋಶವನ್ನು ಹೋರಹಾಕಿ ಸರ್ಕಾರದ ವಿರುದ್ಧ ಕೆಂಡಾಮಂಡಲವಾಗಿದ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಸಿಎಂ ಅಧ್ಯಕ್ಷತೆಯಲ್ಲಿ ಸಭೆ ನಡೆದು ಹಲ್ಮಿಡಿ ಶಾಸನದ ಪ್ರತಿಕೃತಿಗಳನ್ನು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಬೇಕೆಂದು ಆದೇಶವಾಗಿ ನಗರದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿ ಈ ಶಾಸನವನ್ನು ಹಾಕಲಾಗಿತ್ತು. 2024ರಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು ಅನಾವರಣವನ್ನು ಮಾಡಿದ್ದರು. ಆದರೇ, ಈಗ ಅದು ಮಾಯವಾಗಿದ್ದು, ಇದು ಸಿಎಂ, ಕನ್ನಡ ಸಾಹಿತ್ಯ ಕನ್ನಡ ಪರಂಪರೆಗೆ ಮಾಡಿದ ಅಪಮಾನವಾಗಿದೆ ಎಂದು ಕನ್ನಡ ಕ್ರಿಯಾಶೀಲ ಸಮಿತಿಯ ಅಧ್ಯಕ್ಷ ಅಶೋಕ ಚಂದರಗಿ ಅಸಮಾದಾನ ಹೋರ ಹಾಕಿದರು.

ಈ ವೇಳೆ ಕನ್ನಡಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ್ ಚಂದರಗಿ, ಶ್ರೀನಿವಾಸ್ ತಾಳೂರಕರ್, ವಾಜೀದ್ ಹಿರೇಕುಂಡಿ ಸೇರಿದಂತೆ ಹಲವು ಕನ್ನರಪರ ಸಂಘಟನೆಯ ಹೋರಾಟಗಾರರು ಇದ್ದರು.

ಜೇಡರ ದಾಸಿಮಯ್ಯ ಜಯಂತಿ ಆಚರಣೆ



• **ಯಮಕನಮರಡಿ:** ದೇವಾಂಗ ಸಮಾಜದ ಗುರು ಹಿರಿಯರು ಹಾಗೂ ಯುವಕ ಮಿತ್ರ ಬಾಂಧವರ ವತಿಯಿಂದ ನೇಕಾರ ಸಮುದಾಯದ ಮೂಲ ಪುರುಷ ಮತ್ತು 11ನೇ ಶತಮಾನದ ಆದ್ಯ ವಚನಕಾರರಾದ ಜೇಡರ ದಾಸಿಮಯ್ಯನವರ ಜಯಂತಿಯನ್ನು ಅತಿ ವಿಜೃಂಭಣೆಯಿಂದ ಆಚರಿಸಲಾಯಿತು.

ಆನಂದಪೂರ ಗ್ರಾಮದ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ದೇವಾಂಗ ಸಮಾಜದ ನೇಕಾರ ಆದ್ಯ ವಚನಕಾರ 11ನೇ ಶತಮಾನದ ಶ್ರೀ ಜೇಡರ ದೇವರ ದಾಸಿಮಯ್ಯನವರ 1047 ನೇ ಜಯಂತಿ ಆಚರಣೆ ಮಾಡಲಾಯಿತು ಈ ಸಂದರ್ಭದಲ್ಲಿ ದೇವಾಂಗ ಸಮಾಜದ ಹಿರಿಯರು ಹಾಗೂ ಸದಸ್ಯರು ಯುವಕ ಮಿತ್ರರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿ ನೇರವೇರಿಸಲಾಯಿತು.

ಸಿದ್ಧಾರೂಢರ ಮಠಕ್ಕೆ ಶಾಸಕ ಪಾಟೀಲ ಭೇಟಿ



• **ನೇಸರಗಿ:** ಸಮೀಪದ ಮುರಕಿಭಾವಿ ಗ್ರಾಮದ ಪ್ರತಿಷ್ಠಿತ ಶ್ರೀ ಸದ್ಗುರು ಸಿದ್ಧಾರೂಢ ಮಹಾಸ್ವಾಮಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀಮಠಕ್ಕೆ ಚನ್ನಮ್ಮನ ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಅವರು ಭೇಟಿ ನೀಡಿದರು.

ಶ್ರೀಮಠದಲ್ಲಿ ವಾಸ್ತವವಿದ್ದ ಇಂಚಲ ಸಾಧು ಸಂಸ್ಥಾನ ಮಠದ ಡಾ. ಶಿವಾನಂದ ಭಾರತಿ ಸ್ವಾಮಿಜಿಗಳನ್ನು ಗೌರವಿಸಿದರು.

ಜಾತ್ರಾ ಕಮಿಟಿ ವತಿಯಿಂದ ಶಾಸಕರನ್ನು ಸತ್ಕರಸಲಾಯಿತು.

ಈ ಸಂದರ್ಭದಲ್ಲಿ ನೇಸರಗಿ ಜಿಪಂ ಮಾಜಿ ಸದಸ್ಯ ನಿಂಗಪ್ಪ ಅರಿಕೇರಿ, ನ್ಯಾಯವಾದಿ ಉಮೇಶ ಪಾಟೀಲ, ಶಿವಾನಂದ ಕುಂಕುರ, ಈರಣ್ಣ ಉಳವಿ, ಮುರಕಿಭಾವಿ ಮಠದ ಸದ್ಭಕ್ತರು, ಗ್ರಾಮದ ಹಿರಿಯರು ಉಪಸ್ಥಿತರಿದ್ದರು.



ಕ್ರಾಂತಿಕಾರಿಗಳ ಹುತಾತ್ಮ ದಿನ ಆಚರಣೆ

ಬೆಳಗಾವಿ : ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಕ್ರಾಂತಿಕಾರಿ ಭಗತ್ ಸಿಂಗ್, ರಾಜಗುರು, ಸುಖದೇವ್ ಅವರ 95ನೇ ಹುತಾತ್ಮ ದಿನವನ್ನು ಎಐಡಿಎಸ್‌ಓ ವತಿಯಿಂದ ತಾಲೂಕಿನ ಹೊನ್ನಿಹಾಳ ಮತ್ತು ಇಂಡಾಲ್ ನಗರ ಸರ್ಕಾರಿ ಶಾಲೆ ಸೇರಿದಂತೆ ವಿವಿಧೆಡೆ ಆಚರಿಸಲಾಯಿತು.

ಎಐಡಿಎಸ್‌ಓ ಜಿಲ್ಲಾ ಸಂಚಾಲಕರಾದ ಮಹಾಂತೇಶ ಬಿಳೂರ್, ಸಾರ್ವಜನಿಕ ಶಿಕ್ಷಣ ಉಳಿಸಿ ಬೆಳಗಾವಿ ಜಿಲ್ಲಾ ಸಮಿತಿ ಅಧ್ಯಕ್ಷರಾದ ರಾಮು ಹಣಗಂಡಿ, ಹೊನ್ನಿಹಾಳದ ಎಸ್ ಡಿ ಎಂ ಸಿ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ಉಪಾಧ್ಯಕ್ಷರಾದ ರೇಷ್ಮಾ ಸದಸ್ಯರಾದ ಗೌರಿ ಉಣಕಲ್ ಸೇರದಂತೆ ವಿದ್ಯಾರ್ಥಿಗಳು ಹಾಗೂ ಪೋಷಕರು ಪಾಲ್ಗೊಂಡಿದ್ದರು.

ಕಥಿ ಹೇಳೂಣು ಸ್ಪರ್ಧೆ: ಲಕ್ಷ್ಮೀ ಸವದತ್ತಿಗೆ ಪ್ರಶಸ್ತಿ



• **ರಾಯಬಾಗ:** ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಬಿಎಸ್ಸಿ ನಾಲ್ಕನೆಯ ಸೆಮಿಸ್ಟರ್ ನ ವಿದ್ಯಾರ್ಥಿನಿ ಲಕ್ಷ್ಮೀ ಮಹಾದೇವ ಸವದತ್ತಿ ಬಸವರಾಜ ಕಟ್ಟೀಮನಿ ಪ್ರತಿಷ್ಠಾನವು ಪದವಿ ಮತ್ತು ಶಿಕ್ಷಣ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ, ಜಿಲ್ಲಾಮಟ್ಟದ ಕಟ್ಟೀಮನಿ ಕಥಿ ಹೇಳೂಣು ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು, ಪ್ರಶಸ್ತಿ ಫಲಕದೊಂದಿಗೆ ರೂ.4000 ನಗದು ಬಹುಮಾನ ಪಡೆದಿದ್ದಾರೆ.

ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಅಧ್ಯಕ್ಷ ಡಾ. ಯಲ್ಲಪ್ಪ ಹಿಮ್ಮಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆಳಗಾವಿ ವಲಯದ ಜಂಟಿ ನಿರ್ದೇಶಕರಾದ ಕೆ ಎಚ್ ಚೆನ್ನೂರ ಬಹುಮಾನ ವಿತರಿಸಿದರು. ಸದಸ್ಯ ಕಾರ್ಯದರ್ಶಿ ವಿದ್ಯಾವತಿ ಭಜಂತ್ರಿ, ಸಾಹಿತಿ ಡಾ. ರಾಮಕೃಷ್ಣ ಮರಾಠೆ, ಡಾ. ಸುಬ್ಬರಾವ್ ಎಂಟೆತ್ತಿನವರ, ಡಾ. ವೀಣಾ ಬಿರಾದಾರ ವೇದಿಕೆಯಲ್ಲಿದ್ದರು. ಸದರಿ ವಿದ್ಯಾರ್ಥಿಯನ್ನು ಮಹಾವಿದ್ಯಾಲಯದ ಪ್ರಾಚಾರ್ಯರು, ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

ಸಾರ್ವಜನಿಕ ಸ್ಥಳದಲ್ಲಿ ಮದ್ಯ ಸೇವನೆ: ಬಂಧನ

• **ಬೆಳಗಾವಿ:** ಸಾರ್ವಜನಿಕ ಸ್ಥಳದಲ್ಲಿ ರಾಜಾರೋಷವಾಗಿ ಮದ್ಯ ಸೇವೆನೆ ಮಾಡುತ್ತಿದ್ದ, ಮೂವರ ವಿರುದ್ಧ ಬೆಳಗಾವಿ ನಗರ ಪೊಲೀಸರು ಕಾನೂನಿನ ಕ್ರಮ ಕೈಗೊಂಡಿದ್ದಾರೆ.

ಗಣಪತಿ ಯಲ್ಲಪ್ಪ ಹೊಸಮನಿ ಎಂಬಾತ ಮಾರಿಹಾಳ ಠಾಣೆಯ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ಮದ್ಯ ಸೇವನೆ ಮಾಡುತ್ತಿದ್ದ ವೇಳೆ ಪೊಲೀಸರು ದಾಳಿ ಆತನ ವಿರುದ್ಧ ಮಾರಿಹಾಳ ಪೊಲೀಸ್ ಠಾಣೆ ಪ್ರಕರಣ ದಾಖಲಿಸಿದ್ದಾರೆ.

ಕಾಡಪ್ಪ ಬಸವಣ್ಣಿ ವಾಲೀಕರ ಹಾಗೂ ದುರ್ಗಪ್ಪ ಬಾಬು ನಾಯಕ ಎಂಬ ಆರೋಪಿಗಳು ಭೂತರಾಮನಟ್ಟಿ ಗ್ರಾಮದ ಮುಕ್ತಿಮಠದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಮದ್ಯ ಸೇವಿಸುತ್ತಿದ್ದರು. ಇವರು ಮೇಲೆಯೂ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಜನಪದ ಚಿಲಿಪಿಲಿ ಸಂಭ್ರಮಕ್ಕೆ ಶಾಸಕ ವೈದ್ಯ ಚಾಲನೆ



» ದುರ್ಗಾದೇವಿ ಜಾತ್ರಾ ಮಹೋತ್ಸವ
» ಜಾತ್ರೆಯ ಕಳೆ ಹೆಚ್ಚಿಸಿದ ಕಲಾವಿದರ ಅದ್ಭುತ ಪ್ರದರ್ಶನ

• **ಯರಗಟ್ಟಿ:** ತಾಲೂಕಿನ ಸತ್ತಿಗೇರಿ ಗ್ರಾಮದಲ್ಲಿ ಅತ್ಯಂತ ಸ'ಡ'ಗ'ರ'-ಸಂ'ಭ್ರ'ಮ'ದಿಂದ' ಜರುಗಿದ ದುರ್ಗಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಜನಪದ ಚಿಲಿಪಿಲಿ' ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಶಾಸಕ ವಿಶ್ವಾಸ ವೈದ್ಯ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಜಾನಪದ ಕಲೆ, ಇತಿಹಾಸ ಮತ್ತು ಸಾಹಿತ್ಯವನ್ನು ಉಳಿಸಿ, ಬೆಳೆಸಿ, ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಗ್ರಾಮೀಣ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಕಾಪಾಡಲು ಯುವಜನತೆ ವಿಶೇಷ ಆಸಕ್ತಿ ವಹಿಸಬೇಕು ಹಾಗೂ ಪಾಶ್ಚಾತ್ಯ ಸಂಸ್ಕೃತಿಯ ಭರಾಟೆಯಲ್ಲಿ ನಮ್ಮ ಮೂಲ ಕಲೆಗಳು ನಶಿಸದಂತೆ ಎಚ್ಚರ ವಹಿಸಲು ಒತ್ತಾಯಿಸಲಾಗಿದೆ.

ಜಾನಪದ ಕಲೆ ನಮ್ಮ ಸಂಸ್ಕೃತಿಯ ಜೀವಾಳ. ಇಂತಹ ಕಾರ್ಯಕ್ರಮಗಳು ನಮ್ಮ ಗ್ರಾಮೀಣ ಭಾಗದ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸುವುದಲ್ಲದೆ, ಮುಂದಿನ ಪೀಳಿಗೆಗೆ ನಮ್ಮ ಪರಂಪರೆಯನ್ನು ಪರಿಚಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಈ ಸಂದರ್ಭದಲ್ಲಿ ಸ್ಥಳೀಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು, ಗ್ರಾ. ಪಂ. ಮಾಜಿ ಉಪಾಧ್ಯಕ್ಷ ಗುರು ವಾಲಿ, ಬಂಗಾರೆಪ್ಪ ಹರಳಿ, ಯುವ ಮುಖಂಡರ ಪ್ರಕಾಶ ವಾಲಿ, ಬಸಪ್ಪಗೌಡ ಪಾಟೀಲ, ಉಮೇಶ ಮಾಗುಂಡನ್ನವರ, ಗೌಡಪ್ಪಸವದತ್ತಿ, ಕಳಸಪ್ಪ ಕಳಸಪ್ಪನ್ನವರ, ಯಲ್ಲಪ್ಪ ಪಟ್ಟಪ್ಪನ್ನವರ, ನಿಂಗಪ್ಪ ನುಗ್ಗಾನಟ್ಟಿ, ಹನಮಂತ ಪಟ್ಟಪ್ಪನ್ನವರ, ರಾಜು ಸೋಮನ್ನವರ, ಹೊನ್ನಪ್ಪ ಪಟ್ಟಪ್ಪನ್ನವರ, ಈರಪ್ಪ ಗೋಡಿ, ಗ್ರಾ. ಪಂ. ಸದಸ್ಯ ಶಾಹಿನಶಾ ಬಾಗವಾನ ಸೇರಿದಂತೆ ಗ್ರಾಮದ ಹಿರಿಯರು, ಜಾತ್ರಾ ಕಮಿಟಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಚಂದ್ರಶೇಖರ ಸ್ವಾಮೀಜಿ ಹತ್ಯೆಗೈದ ಆರೋಪಿಗಳ ಬಂಧನಕ್ಕೆ ಆಗ್ರಹ



• **ಬೆಳಗಾವಿ:** ಗೋರಕ್ಷಣೆಗೆಮುಂದಾಗಿದ್ದ ಉತ್ತರ ಪ್ರದೇಶ ಮಥುರಾದಲ್ಲಿ ಚಂದ್ರಶೇಖರ ಸ್ವಾಮೀಜಿಗಳನ್ನು ಹತ್ಯೆ ಮಾಡಿದವರ ವಿರುದ್ಧಕಾನೂನಿನಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಸಿ ಕಾಮಧೇನು ಅಯ್ಯಪ್ಪ ಸಾಮಾಜಿಕ ಸೇವಾ ಸಂಘಟನೆ ಕಾರ್ಯಕರ್ತರಿಂದ ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸೋಮವಾರ ಕಾಮಧೇನು ಅಯಪ್ಪ ಸಾಮಾಜಿಕ ಸೇವಾ ಸಂಘಟನೆ ಕಾರ್ಯಕರ್ತರು ಜಿಲ್ಲಾದಿಕಾರಿಗಳ ಕಚೇರಿಗೆ ಆಗಮಿಸಿ ಉತ್ತರ ಪ್ರದೇಶದಲ್ಲಿ ಚಂದ್ರಶೇಖರ್ ಸ್ವಾಮೀಜಿಗಳನ್ನು ಹತ್ಯೆ ಮಾಡಿದವರ ವಿರುದ್ದ ಕಾನೂನು ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಸಿ ಪ್ರತಿಭಟನೆ ನಡೆಸಿದರು.

ಮಥುರಾದಲ್ಲಿ ಮಾರ್ಚ್ 21 ರಂದು ಗೋವುಗಳನ್ನು ವಾಹನದಲ್ಲಿ ತುಂಬಿಕೊಂಡು ತೆರಳುತ್ತಿದ್ದ ವೇಳೆ ಚಂದ್ರಶೇಖರ್ ಸ್ವಾಮಿಜಿಗಳ ವಾಹನಕ್ಕೆ ಅಡ್ಡ ಕಟ್ಟಿ ವಾಹನದಲ್ಲಿದ್ದ ಗೋವುಗಳನ್ನು ರಕ್ಷಣೆ ಮಾಡಿದ್ದಾರೆ. ಬಳಿಕ ಆರೋಪಿಗಳು ಹಾಗೂ ಚಂದ್ರಶೇಖರ ಅವರ ನಡುವೆ ವಾಗ್ವಾದ ನಡೆದು ಚಂದ್ರಶೇಖರ ಅವರ ಮೇಲೆ ವಾಹನ ಹತ್ತಿಸಿ ಕೊಲೆ ಮಾಡಿದ್ದಾರೆ. ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಕಳೆದು ಹೋಗಿದ್ದ 51 ಮೊಬೈಲ್ ಜಪ್ತಿ

ವಾರಸುದಾರರಿಗೆ ಹಸ್ತಾಂತರಿಸಿದ ಎಸ್ಪಿ



• **ಬೆಳಗಾವಿ:** ಬೆಳಗಾವಿ ಜಿಲ್ಲಾ ಪೊಲೀಸರು ಹೈಟೆಕ್ ತಂತ್ರಜ್ಞಾನ ಬಳಸಿ ಕಳ್ಳತನವಾಗಿದ್ದ ಮೊಬೈಲ್ ಗಳನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಸ್ವತಃ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಅವರೇ ವಾರಸುದಾರರಿಗೆ ಮೊಬೈಲ್ ಹಸ್ತಾಂತರಿಸಿದ್ದಾರೆ.

ಇತ್ತೀಚೆಗೆ ಬೆಳಗಾವಿ ಜಿಲ್ಲೆಯಲ್ಲಿ ಕಳ್ಳತನವಾಗಿದ್ದ ಹಾಗೂ ಕಳೆದುಹೋಗಿದ್ದ 51 ಮೊಬೈಲ್‌ಗಳನ್ನು ಜಿಲ್ಲಾ ಸೈಬರ್ ಕ್ರೈಮ್ ಪೊಲೀಸರು ಯಶಸ್ವಿಯಾಗಿ ರಿಕವರಿ ಮಾಡಿದ್ದಾರೆ.

ಈ ಕುರಿತು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಅವರು, 51 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದ್ದು, ಆಯಾ ಮಾಲೀಕರಿಗೆ ಹಸ್ತಾಂತರಿಸಲಾಗುತ್ತಿದೆ. ಜಿಲ್ಲೆಯಲ್ಲಿ ಈವರೆಗೆ ದಾಖಲಾಗಿರುವ 4,744 ಮೊಬೈಲ್ ದೂರುಗಳ ಪೈಕಿ ಈಗಾಗಲೇ 1,051 ಮೊಬೈಲ್ ಗಳನ್ನು ಪತ್ತೆಹಚ್ಚಿ ವಾಪಸ್ ನೀಡಲಾಗಿದೆ.

ಅಥಣಿ, ರಾಮದುರ್ಗ, ಬೈಲಹೊಂಗಲ ಭಾಗದ ಜಾತ್ರೆ ಹಾಗೂ ಬಸ್ ನಿಲ್ದಾಣಗಳಲ್ಲಿ ಮೊಬೈಲ್ ಕಳೆದುಕೊಂಡವರು ಕೇಂದ್ರ ಸರ್ಕಾರದ 'ಸಿಇಐಆರ್' ಪೋರ್ಟಲ್‌ನಲ್ಲಿ ದೂರು ದಾಖಲಿಸಿದ್ದರು. ಈ ಮೊಬೈಲ್‌ಗಳಲ್ಲಿ ಹೊಸ ಸಿಮ್ ಹಾಕಿದ ತಕ್ಷಣ ಸೈಬರ್ ಪೊಲೀಸರಿಗೆ ಮಾಹಿತಿ ಲಭ್ಯವಾಗಿದ್ದು, ಕೂಡಲೇ ಆ ನಂಬರ್‌ಗಳಿಗೆ ಕರೆ ಮಾಡಿ ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಸಾರ್ವಜನಿಕರು ಮೊಬೈಲ್ ಕಳೆದುಕೊಂಡ ತಕ್ಷಣ ದೂರು ನೀಡುವ ಮೂಲಕ ಈ ತಂತ್ರಜ್ಞಾನದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಎಸ್ಪಿ ಕೆ.ರಾಮರಾಜನ್ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಮಹರ್ಷಿ ವಾಲ್ಮೀಕಿ ಅವರ ಸಾಧನೆ ಅಜರಾಮರ: ಜಾರಕಿಹೊಳಿ



• **ನೇಸರಗಿ.** ಅದ್ಬುತ ರಾಮಾಯಣ ಬರೆದ ಅದುತ ಕವಿ ಋಷಿ ಮಹರ್ಷಿ ವಾಲ್ಮೀಕಿ ಋಷಿಗಳು ರಾಮಾಯಣ ರಚಿಸಿ ದೇಶ, ವಿದೇಶದಲ್ಲಿ ಅದರ ವಸ್ತುಸ್ಥಿತಿಯನ್ನು ಜನರಿಗೆ ತಿಳಿಸಿ, ಆ ಕೃತಿಯಲ್ಲಿ ಕೆಡಕುಗಳಿಂದ ಆಗುವ ದುಷ್ಟರ ಸಂಹಾರದ ಬಗ್ಗೆ ವಿವರಣೆ ನೀಡಿ ಅದ್ಬುತ ರಾಮಾಯಣ ರಚಿಸಿ ಅವರು ಅಜರಾಮರ ಆಗಿದ್ದಾರೆ ಎಂದು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸಮೀಪದ ಸುತಗಟ್ಟಿ ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ನಾಮಫಲಕ ಉದ್ಘಾಟನೆ ನೆರವೇರಿಸಿ ಮಾತನಾಡಿ, ಆ ಮಹಾನ ಪುರುಷರ ಆದರ್ಶ, ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಮುಂದೆ ಬರಬೇಕು ಎಂದರು.

ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಮಾತನಾಡಿ, ಇಡೀ ಜಗತ್ತಿಗೆ ರಾಮಾಯಣ ಪರಿಚಯಿಸಿದರು ಮಹರ್ಷಿ ವಾಲ್ಮೀಕಿ ಋಷಿಗಳು, ಅವರು ರಾಮಾಯಣ ರಚಿಸದಿದ್ದರೆ ಇಂದು ರಾಮಾಯಣ ಅರಿವು ನಮಗೆ ಆಗುತ್ತಿರಲಿಲ್ಲ, ರಾಮಾಯಣದಲ್ಲಿನ ಒಳ್ಳೆಯ ಗುಣಗಳನ್ನು ನಾವು ನೀವೆಲ್ಲರೂ ತಿಳಿದುಕೊಂಡು ಜೀವನದಲ್ಲಿ ಮುಂದೆ ಬರಬೇಕು,ಈ ಮಹರ್ಷಿ ವಾಲ್ಮೀಕಿ ನಾಮಫಲಕ ಕಾರ್ಯರೂಪಕ್ಕೆ ಬರಲು ಶ್ರಮಿಸಿದ ವಾಲ್ಮೀಕಿ ಜನಾಂಗದ ಸಾಧನೆ ಅಪಾರ ಎಂದರು.

ಕಾರ್ಯಕ್ರಮದಲ್ಲಿ ನೇಸರಗಿ ಮಾಜಿ ಜಿ ಪಂ ಸದಸ್ಯರಾದ ನಿಂಗಪ್ಪ ಅರಿಕೇರಿ,ಗ್ರಾಮದ ಹಿರಿಯರಾದ ಮಲ್ಲಿಕಾರ್ಜುನ ತುಬಾಕಿ , ಉಮೇಶ ಪಾಟೀಲ ವಕೀಲರು,ಮಹೇಶ ಪಾಟೀಲ, ವಾಲ್ಮೀಕಿ ಸಂಘದ ಅಧ್ಯಕ್ಷ ಸದಾಶಿವ ರಾಮ್ಕಿ , ಮಾರುತಿ ಕಲ್ಲೂರ, ಮಹಾಂತೇಶ ಪರಗನ್ನವರ, ಶಂಕರಗೌಡ ಪಾಟೀಲ,ಚಂದ್ರಪ್ಪ ರಾಮ್ಕಿ, ವಿಠ್ಠಲ ರಾಮ್ಕಿ, ರಮೇಶ ರಾಮ್ಕಿ , ಚನ್ನಬಸಯ್ಯ ಮಠಪತಿ, ಸೇರಿದಂತೆ ಎಲ್ಲ ಸಮಾಜದ ಮುಖಂಡರು, ವಾಲ್ಮೀಕಿ ಸಮಾಜದ ಜನತೆ, ಗ್ರಾಮಸ್ಥರು ಪಾಲ್ಗೊಂಡಿದ್ದರು.

ಮಡಿವಾಳ ಸಮಾಜ ಪಜಾಕ್ಕೆ ಸೇರಿಸಲು ಒತ್ತಾಯ

• **ರಾಯಬಾಗ:** ಮಡಿವಾಳಸಮಾಜ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಒತ್ತಾಯಿಸಿ ತಹಶೀಲ್ದಾರ್ ಮೂಲಕ ಮುಖ್ಯ ಮಂತ್ರಿಗೆ ಮನವಿ ಸಲ್ಲಿಸ ಲಾಯಿತು.

ಸರ್ಕಾರ ಮಡಿವಾಳ ಮಾಚಿದೇವರ ಸಮಾಜವನ್ನು ನಿರ್ಲಕ್ಷಿಸುತ್ತಿದೆ ಸಮುದಾಯ ಸರಕಾರದಿಂದ ಸಿಗಬೇಕಾದ ಎಲ್ಲ ಸೌಲಭ್ಯಗಳಿಂದ ವಂಚಿತವಾಗಿದೆ ಈ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೆಂದು ಒತ್ತಾಯಿಸಿದರು.

ಮಡಿವಾಳರ ಗ್ರಾಮಾಭಿವೃದ್ಧಿ ಸಂಘ ಹಾಗೂ ಉತ್ತರಕರ್ನಾಟಕದ ಮಡಿವಾಳರ ಸಂಘಟನೆಗಳು ಡಾ.ಅನ್ನಪೂರ್ಣ ವರದಿಯನ್ನು ಜಾರಿಗೆ ತರಲು ಕರ್ನಾಟಕ ರಾಜ್ಯದ 19 ಮಂತ್ರಿಗಳು 137 ಶಾಸಕರಿಂದ ಶಿಫಾರಸ್ಸು ಪತ್ರಗಳನ್ನು ಪಡೆದಿದ್ದರೂ ನಮ್ಮ ಮನವಿಗಳನ್ನು ಪರಿಗಣಿಸದೆ ನಮ್ಮ ಹಕ್ಕನ್ನು ಕಸಿದುಕೊಂಡಿವೆ. ಈಗಲಾದರೂ ಮಡಿವಾಳ ಮಾಚಿದೇವರ ಸಮುದಾಯ ಪರಿಶಿಷ್ಟರ ಪಟ್ಟಿಯಲ್ಲಿ ಮಾಡದಿದ್ದರೆ ಉಗ್ರ ಹೋರಾಟ ಮಾಡುವ ಅನಿವಾರ್ಯವಾಗುತ್ತದೆ ಎಂದು ಮನವಿಯಲ್ಲಿ ಎಚ್ಚರಿಸಿದ್ದಾರೆ. ತಹಶೀಲ್ದಾರ್ ಮಹಾದೇವ ಸನಮೂರಿ ಮನವಿ ಪತ್ರವನ್ನು ಸ್ವೀಕರಿಸಿದರು.

ಮಡಿವಾಳ ಮಾಚಿದೇವರ ಸಮುದಾಯ ಸಂಘಟನೆಯ ತಾಲೂಕ ಘಟಕ ಅಧ್ಯಕ್ಷ ಗುಂಡೂರಾವ್ ಪರಿಟ್, ಉಪಾಧ್ಯಕ್ಷ ಮೋಹನ ಪರಿಟ್, ಕಾರ್ಯದರ್ಶಿ ಮೋಹನ ಮಡಿವಾಳ, ರಾಜಕುಮಾರ ಮಡಿವಾಳ, ಸಂಜೀವಕುಮಾರ ಮಡಿವಾಳ, ರೇವಪ್ಪ ಮಾರುತಿ ಮಡಿವಾಳ, ಈರಪ್ಪ ಸಚಿನಪರಿಟ್, ವಿಜಯ ಪರಿಟ್, ಗಣೇಶ ಮಡಿವಾಳ, ರಾಜು ಮಡಿವಾಳ, ಸುನಿಲ್ ಮಡಿವಾಳ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಕಿರುಸುದ್ದಿ

ಪ್ರಶಸ್ತಿಗಾಗಿ ಪುಸ್ತಕ ಆಹ್ವಾನ

• **ಬೆಳಗಾವಿ:** ಬಸವರಾಜ ಕಟ್ಟೀಮನಿ ಪ್ರತಿಷ್ಠಾನವು ಪ್ರೊ. ಮಲ್ಲಿಕಾರ್ಜುನ ಹಿರೇಮಠ ಅವರು ಸ್ಥಾಪಿಸಿರುವ ದತ್ತಿನಿಧಿಯಿಂದ ಕೊಡಮಾಡುವ ರಾಜ್ಯ ಮಟ್ಟದ ಬಸವರಾಜ ಕಟ್ಟೀಮನಿ ಆತ್ಮಕಥಾ ಪುಸ್ತಕ ಪ್ರಶಸ್ತಿಗಾಗಿ ಅರ್ಹ ಲೇಖಕರಿಂದ ಅರ್ಜಿ ಆಹ್ವಾನಿಸಲಾಗಿದೆ. 2025ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡ ಉತ್ತಮ ಕೃತಿಗೆ ದತ್ತಿ ಪ್ರಶಸ್ತಿ ದೊರಕಲಿದ್ದು, 20 ಸಾವಿರ ನಗದು ಬಹುಮಾನವನ್ನು ಸನ್ಮಾನ ಪತ್ರದೊಂದಿಗೆ ಸಮಾರಂಭ ಪೂರ್ವಕವಾಗಿ ನೀಡಲಾಗುವುದು.

ಅರ್ಹ ಲೇಖಕರು ತಮ್ಮ ಆತ್ಮಕಥೆ ಕೃತಿಯ ನಾಲ್ಕು ಪ್ರತಿಗಳನ್ನು ಏಪ್ರಿಲ್ 24 ರ ಒಳಗಾಗಿ ಅಧ್ಯಕ್ಷರು, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಕುಮಾರಗಂಧರ್ವ ಕಲಾ ಮಂದಿರ ಆವರಣ, ಸುಭಾಷ್ ನಗರ, ಬೆಳಗಾವಿ 590016 ಈ ವಿಳಾಸಕ್ಕೆ ಕಳುಹಿಸಿಕೊಡಬಹುದಾಗಿದೆ ಎಂದು ಬಸವರಾಜ ಕಟ್ಟೀಮನಿ ಪ್ರತಿಷ್ಠಾನ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

5,33,788 ಮೆಟ್ರಿಕ್ ಟನ್ ಕಬ್ಬು ನುರಿಸಿದ ಕಾರ್ಖಾನೆ



• **ಅಥಣಿ:** ಸಹಕಾರ ತತ್ವದ ಆಧಾರದ ಮೇಲೆ ರಚನೆಗೊಂಡಿರುವ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯು 2025–26ನೇ ಸಾಲಿನ ಕಬ್ಬು ನುರಿಸುವ ಹಂಗಾಮನ್ನು ಯಶಸ್ವಿಯಾಗಿ ಪೂರೈಸಿದ್ದು, ರೈತರಿಗೆ ಘೋಷಿಸಿದಂತೆ ಪೂರ್ಣ ಹಣ ಪಾವತಿಸಿ ನುಡಿದಂತೆ ನಡೆದುಕೊಂಡಿದ್ದೇವೆ ಎಂದು ಕಾರ್ಖಾನೆಯ ಅಧ್ಯಕ್ಷ ಪರಪ್ಪಣ್ಣ ಸವದಿ ತಿಳಿಸಿದರು. ಅವರು ಕಾರ್ಖಾನೆಯ ತಮ್ಮ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಕಾರ್ಖಾನೆಯು ಕಳೆದ ನವೆಂಬರ 10ರಂದು ಕಬ್ಬು ನುರಿಸಲು ಪ್ರಾರಂಭಿಸಿ ಫೆ. 9 ರಂದು ಮುಕ್ತಾಯಗೊಂಡಿತು. ಈ ಅವಧಿಯಲ್ಲಿ ಒಟ್ಟು 5,33,788 ಮೆಟ್ರಿಕ್ ಟನ್ ಕಬ್ಬು ನುರಿಸಲಾಗಿದೆ. ರೈತರಿಗೆ ಪ್ರತಿ ಟನ್‌ಗೆ ರೂ. 3,200 ರಂತೆ ಒಟ್ಟು 170.81 ಕೋಟಿ ರೂಪಾಯಿಗಳ ಬಿಲ್ ಅನ್ನು ಈಗಾಗಲೇ ರೈತರ ಖಾತೆಗೆ ಜಮಾಗೊಳಿಸಲಾಗಿದೆ ಎಂದರು. ಶಾಸಕರಾದ ಲಕ್ಷ್ಮಣ ಸವದಿ, ರಾಜು ಕಾಗೆ ಅವರ ಮಾರ್ಗದರ್ಶನದಲ್ಲಿ ಆಡಳಿತ ಮಂಡಳಿಯು ರೈತರಿಗೆ ನೀಡಿದ ಭರವಸೆಯಂತೆ ಪ್ರತಿ 15 ದಿನಗಳಿಗೊಮ್ಮೆ ಬಿಲ್ ಪಾವತಿಸುವ ಮೂಲಕ ಪಾರದರ್ಶಕತೆ ಕಾಯ್ದುಕೊಂಡಿದೆ. ರೈತರು ನಮ್ಮ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳಲು ನಾವು ಸದಾ ಬದ್ಧ ಎಂದರು. ಸಹಕಾರಿ ರಂಗದ ಈ ಕಾರ್ಖಾನೆಯು ರೈತರ ಆಸ್ತಿಯಾಗಿದೆ. ಬರುವ ಹಂಗಾಮಿನಲ್ಲಿಯೂ ರೈತರು ಹೆಚ್ಚಿನ ಪ್ರಮಾಣದ ಮತ್ತು ಉತ್ತಮ ಇಳುವರಿಯುಳ್ಳ ಕಬ್ಬನ್ನು ಪೂರೈಸುವ ಮೂಲಕ ಕಾರ್ಖಾನೆಯ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಪ್ರಸಕ್ತ ಹಂಗಾಮು ಯಶಸ್ವಿಗೊಳಿಸಲು ಸಹಕರಿಸಿದ ಎಲ್ಲ ಸದಸ್ಯರಿಗೂ, ರೈತ ಬಾಂಧವರಿಗೂ ಆಡಳಿತ ಮಂಡಳಿ ಹಾಗೂ ಶಾಸಕದ್ವಯರ ಪರವಾಗಿ ಅವರು ಅಭಿನಂದನೆ ಸಲ್ಲಿಸಿದರು.

ದೂರು ನೀಡಿದರೂ ಕ್ರಮ ಜರುಗಿಸದ ಜಿಪಂ ಸಿಇಒ: ಸಂತೋಷ

• **ಖಾನಾಪುರ:** ಗ್ರಾಪಂ ವ್ಯಾಪ್ತಿಯ ಕಾಮಗಾರಿಗಳ ಗುತ್ತಿಗೆಯನ್ನು ತಮ್ಮ ಪತಿಗೆ ನೀಡುವ ಮೂಲಕ ತಾಲೂಕಿನ ಹಿರೇಮುನವಳ್ಳಿ ಗ್ರಾಪಂ ಪಿಡಿಒ ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿದ ಮಾಹಿತಿಯನ್ನು ಸೂಕ್ತ ದಾಖಲೆಗಳ ಸಮೇತ ಬೆಳಗಾವಿ ಜಿಪಂ ಸಿಇಒ ಅವರಿಗೆ 2024ರ ನ.11ರಂದು ನೀಡಿರುವ ದೂರಿಗೆ ಸಂಬಂಧಿಸಿದಂತೆ ಸಿಇಒ ಅವರು ಇದುವರೆಗೂ ಕ್ರಮ ಜರುಗಿಸಿಲ್ಲ ಎಂದು ತಾಲೂಕಿನ ಕರವಿನಕೊಪ್ಪ ಗ್ರಾಮದ ನಿವಾಸಿ ಸಂತೋಷ ತಳವಾರ ಹೇಳಿದರು. ಮಂಗಳವಾರ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿರೇಮುನವಳ್ಳಿ ಪಿಡಿಒ 2023–24ರಲ್ಲಿ 2 ಲಕ್ಷ ರೂಪಾಯಿಗಳ ಕಾಮಗಾರಿಯ ಗುತ್ತಿಗೆಯನ್ನು ತಮ್ಮ ಪತಿಗೆ ನೀಡಿದ್ದು, ಕಾಮಗಾರಿ ಮುಗಿದ ಬಳಿಕ ಪತಿಯ ಹೆಸರಿನಲ್ಲಿ ಕಾಮಗಾರಿಯ ಬಿಲ್ ಪಾವತಿಸಿದ್ದಾರೆ. ಸರ್ಕಾರದ ನಿಯಮಗಳ ಪ್ರಕಾರ ಸರ್ಕಾರಿ ಅಧಿಕಾರಿಯ ಸಂಬಂಧಿಕರಿಗೆ ಕಾಮಗಾರಿ ಗುತ್ತಿಗೆ ನೀಡುವಂತಿಲ್ಲ ಎಂದು ಉಲ್ಲೇಖಿಸಿ 2024ರ ನವಂಬರ್ ತಿಂಗಳಲ್ಲಿ ದಾಖಲೆಗಳ ಸಮೇತ ಜಿಪಂ ಸಿಇಒ ಅವರಿಗೆ ಮಾಹಿತಿ ಸಲ್ಲಿಸಲಾಗಿತ್ತು. ಆದರೆ ಜಿಪಂ ಸಿಇಒ ತಪ್ಪಿತಸ್ಥ ಪಿಡಿಒ ವಿರುದ್ಧ ಕ್ರಮ ಜರುಗಿಸಲು ಮುಂದಾಗದೇ ಅವರ ರಕ್ಷಣೆಗೆ ನಿಂತಿದ್ದಾರೆ. ಮಾ.9ರಂದು ಜಿಪಂ ಸಿಇಒ ಅವರಿಗೆ ಮತ್ತೊಂದು ಪತ್ರ ಬರೆಯಲಾಗಿದೆ. ಪತ್ರದ ಪ್ರತಿಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಕರ್ನಾಟಕ ಲೋಕಾಯುಕ್ತಕ್ಕೆ ಸಲ್ಲಿಸಲಾಗಿದೆ ಎಂದು ವಿವರಿಸಿದರು. ಸಾರ್ವಜನಿಕರು ಸಲ್ಲಿಸುವ ದೂರುಗಳ ಬಗ್ಗೆ ವಿಚಾರಣೆ ಅಥವಾ ತನಿಖೆ ನಡೆಸಿ 30 ದಿನಗಳ ಒಳಗೆ ತ್ವರಿತ ಮತ್ತು ಗುಣಾತ್ಮಕ ವಿಲೇವಾರಿ ಮಾಡಬೇಕು ಎಂದು ಸರ್ಕಾರದ ಆದೇಶವಿದೆ. ಆದರೆ ಪಿಡಿಒ ವಿರುದ್ಧ ದೂರು ಸಲ್ಲಿಸಿ 16 ತಿಂಗಳುಗಳು ಕಳೆದರೂ ಅವರ ವಿರುದ್ಧ ವಿಚಾರಣೆ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಜಿಪಂ ಸಿಇಒ ಅವರ ಕಾರ್ಯವೈಖರಿ ಬಗ್ಗೆ ತಾವು ಅಸಮಾಧಾನ ಹೊಂದಿರುವುದಾಗಿ ಸಂತೋಷ ಹೇಳಿದರು.



ರಾಮದುರ್ಗ: ರಂಜಾನ್ ಹಬ್ಬವನ್ನು ಮುಸ್ಲಿಂ ಭಾಂದವರ ಶ್ರದ್ಧಾಭಕ್ತಿ ಹಾಗೂ ಸಡಗರದಿಂದ ಆಚರಿಸಿದರು. ಬೆಳಗ್ಗೆ ನಗರದ ಹೊರ ವಲಯದಲ್ಲಿರುವು ಈದಗಾ ಮೈದಾನದಲ್ಲಿ ಪಟ್ಟಣದ ಮುಸ್ಲಿಂ ಭಾಂದವರು ಸೇರಿ ಪ್ರಾರ್ಥನೆ ಸಲ್ಲಿಸಿದರು. ಬಂಧು ಭಾಂಧವರೊಂದಿಗೆ ಮತ್ತು ಸ್ನೇಹಿತರೊಂದಿಗೆ ಹಬ್ಬದ ಶುಭಾಶಯಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು. ಹಬ್ಬವನ್ನು ವಿಜೃಂಭಣೆಯಿಂದ ಆಚರಣೆ ಮಾಡಿದರು.

ತೆಲಸಂಗದಲ್ಲಿ ರಂಜಾನ್ ಹಬ್ಬ ಆಚರಣೆ

• **ತೆಲಸಂಗ:** ಗ್ರಾಮದಲ್ಲಿ ಮುಸ್ಲಿಂ ಬಾಂಧವರು ಶನಿವಾರ ರಂಜಾನ್ ಹಬ್ಬವನ್ನು ಅತ್ಯಂತ ಸಡಗರ, ಸಂಭ್ರಮ ಹಾಗೂ ಸೌಹಾರ್ದತೆಯಿಂದ ಆಚರಿಸಿದರು. ಒಂದು ತಿಂಗಳ ಕಾಲ ಕೈಗೊಂಡಿದ್ದ ಕಠಿಣ ಉಪವಾಸ ವ್ರತದ ಮುಕ್ತಾಯದ ಸಂಕೇತವಾಗಿ ಈದ್-ಉಲ್-ಫಿತರ್ ಹಬ್ಬವನ್ನು ಸಂಭ್ರಮಿಸಲಾಯಿತು.

ಬೆಳಿಗ್ಗೆ 9:30 ಗಂಟೆಗೆ ಗ್ರಾಮದ ಹೊರವಲಯದಲ್ಲಿರುವ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಹಫೀಜ್ ಸಾಬ್‌ರಂಜಾನ್ ಮಿರಾಗೋಳ್ ಅವರುಧರ್ಮ ಬೋಧನೆ ನೀಡಿ, ಹಬ್ಬದ ಮಹತ್ವ ಹಾಗೂ ಶಾಂತಿ-ಸಹಬಾಳ್ವೆಯ ಬಗ್ಗೆ ಸಂದೇಶ ನೀಡಿದರು. ಪ್ರಾರ್ಥನೆಯ ನಂತರದೇಶದ ಶಾಂತಿ ಮತ್ತು ಸಮೃದ್ಧಿಗಾಗಿ ವಿಶೇಷ ದುವಾ ಮಾಡಲಾಯಿತು.

ಪ್ರಾರ್ಥನೆಯ ಬಳಿಕ ಮುಸ್ಲಿಂ ಬಾಂಧವರು ಪರಸ್ಪರ ಆಲಿಂಗಿಸಿಕೊಳ್ಳುವ ಮೂಲಕ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಕೇವಲ ತಮ್ಮ ಸಮುದಾಯದವರಷ್ಟೇಅಲ್ಲದೆ, ಗ್ರಾಮದಎಲ್ಲ ಸಮುದಾಯದ ಬಂಧು-ಬಾಂದವರನ್ನುತಮ್ಮ ಮನೆಗಳಿಗೆ ಆಮಂತ್ರಿಸಿ ಆತ್ಮೀಯವಾಗಿ ಬರಮಾಡಿಕೊಂಡರು. ಹಬ್ಬದ ವಿಶೇಷ ಸಿಹಿ ತಿನಿಸಾದ ಸುರ್ಕುರ್ಮಾಉಣಬಡಿಸುವ ಮೂಲಕ ಭಾವೈಕ್ಯತೆ ಮೆರೆದರು. ಒಟ್ಟಾರೆ ತೆಲಸಂಗ ಗ್ರಾಮದಲ್ಲಿರಂಜಾನ್ ಹಬ್ಬವುಜಾತಿ-ಮತಗಳ ಭೇದವಿಲ್ಲದೆ, ಪ್ರೀತಿ ಮತ್ತು ಸೌಹಾರ್ದತೆಯ ಹಬ್ಬವಾಗಿ ಯಶಸ್ವಿಯಾಗಿ ಜರುಗಿತು.



ತೆಲಸಂಗ: ಗ್ರಾಮದಲ್ಲಿ ಮುಸ್ಲಿಂ ಬಾಂಧವರು ಶನಿವಾರ ರಂಜಾನ್ ಹಬ್ಬವನ್ನು ಅತ್ಯಂತ ಸಡಗರ, ಸಂಭ್ರಮ ಹಾಗೂ ಸೌಹಾರ್ದತೆಯಿಂದ ಆಚರಿಸಿದರು. ಒಂದು ತಿಂಗಳ ಕಾಲ ಕೈಗೊಂಡಿದ್ದ ಕಠಿಣ ಉಪವಾಸ ವ್ರತದ ಮುಕ್ತಾಯದ ಸಂಕೇತವಾಗಿ ಈದ್-ಉಲ್-ಫಿತರ್ ಹಬ್ಬವನ್ನು ಸಂಭ್ರಮಿಸಲಾಯಿತು.

1.30 ಕೋಟಿ ರೂ. ಮೊತ್ತದ ಕಾಮಗಾರಿಗಳಿಗೆ ಚಾಲನೆ

ಮೂಲ ಸೌಕರ್ಯ ಅಭಿವೃದ್ಧಿಗೆ ಆದ್ಯತೆ

• **ಚಿಕ್ಕೋಡಿ:** ವಡಗೋಲದಲ್ಲಿ 1.30 ಕೋಟಿ ರೂ. ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

• ಮೂಲ ಸೌಕರ್ಯ ಅಭಿವೃದ್ಧಿಗೆ ಆದ್ಯತೆ

ವಡಗೋಲ ಸೇರಿದಂತೆ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಸರ್ಕಾರದಿಂದ ಅನುದಾನ ಮಂಜೂರಾಗಿದ್ದು, ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಮೂಲಭೂತ ಸೌಕರ್ಯಗಳಿಗೆ ಕ್ಷೇತ್ರದಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಚಿಕ್ಕೋಡಿ-ಸದಲಗಾ ಶಾಸಕ ಗಣೇಶ ಹುಕ್ಕೇರಿ ಹೇಳಿದರು.

ತಾಲೂಕಿನ ವಡಗೋಲ ಗ್ರಾಮದಲ್ಲಿ 1.30 ಕೋಟಿ ರೂ. ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, ವಡಗೋಲ ಗ್ರಾಮದಲ್ಲಿರುವ ಬೀರಸಿದ್ದೇಶ್ವರ ದೇವಸ್ಥಾನ ಜಾಗೃತ ದೇವಸ್ಥಾನವಾಗಿದೆ. ಭಕ್ತರ ಅನುಕೂಲಕ್ಕಾಗಿ ಸಮುದಾಯ ಭವನ ಸೇರಿದಂತೆ ಹಲವು ಸೌಕರ್ಯಗಳನ್ನು ಹಂತ ಹಂತವಾಗಿ ಕಲ್ಪಿಸಿಕೊಡಲಾಗುತ್ತಿದೆ. ದೇವಸ್ಥಾನದ ರಸ್ತೆ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಿ ಅಭಿವೃದ್ಧಿಪಡಿಸಲಾಗುವುದು ಎಂದರು.



ವಡಗೋಲ ಗ್ರಾಮದ ಬೀರಸಿದ್ದೇಶ್ವರ ದೇವಸ್ಥಾನದ ಸಮುದಾಯ ಭವನ ನಿರ್ಮಾಣಕ್ಕಾಗಿ 1 ಕೋಟಿ ರೂ. ಮಂಜೂರಾಗಿದ್ದು, ಮೊದಲ ಹಂತದಲ್ಲಿ 50 ಲಕ್ಷ ರೂ. ಮೊತ್ತದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ ಹಾಗೂ 80 ಲಕ್ಷ ರೂ. ಮೊತ್ತದಲ್ಲಿ ನಣದಿ-ನೇಜ ರಸ್ತೆ ಸುಧಾರಣಾ ಕಾಮಗಾರಿಗೆ ಶಾಸಕ ಗಣೇಶ ಹುಕ್ಕೇರಿ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ದೇವಸ್ಥಾನ ಕಮಿಟಿಯ ಅಧ್ಯಕ್ಷ ಮಲ್ಲಪ್ಪ ವಾಳಕೆ, ಸದಲಗಾ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ರಾಜು ಗುಂಡಕಲ್ಲೆ, ಅರುಣ ದೇಸಾಯಿ, ಸಂತೋಷ ನವಲೆ, ಸತೀಶ ಪಾಟೀಲ, ಪೀರಗೌಡ ಪಾಟೀಲ, ರವಿ ಗೋಸಾವಿ, ರಾಮಾ ಮಾರಾಪೂರೆ, ಅಶೋಕ ಭಿವಷೆ, ರವಿ ಭತ್ತೆ, ಬಾಳಾಸಾಹೇಬ ಪಾಟೀಲ, ಸಂಭಾಜಿ ಪಾಟೀಲ, ಶಹಜನಾ ಜಮಾದಾರ, ರೋಹನ ಕೋಟಿವಾಲೆ ಇತರರು ಇದ್ದರು.

ಗರಡಿ ಮನೆಗಳ ಉಳಿವು ಅಗತ್ಯ

• **ಹುಕ್ಕೇರಿ:** ಯುವಸಮೂಹಆರೋಗ್ಯದ ಜತೆಗೆ ದೃಢಕಾಯರಾಗಿ ಬದುಕಬೇಕೆಂದು ಗ್ರಾಮಗಳಲ್ಲಿ ಗರಡಿ (ಕುಸ್ತಿ) ಮನೆಗಳನ್ನು ಸ್ಥಾಪಿಸಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅವು ಇಲ್ಲವಾಗುತ್ತಿರುವುದು ಶೋಚನೀಯ ಸಂಗತಿ ಎಂದು ಡಿಸಿಸಿ ಬ್ಯಾಂಕ ನಿರ್ದೇಶಕ ರಮೇಶ ಕತ್ತಿ ಹೇಳಿದರು.

ಶನಿವಾರದಂದು ತಾಲೂಕಿನ ಬಸ್ತವಾಡ ಗ್ರಾಮದ ಕಾಡಸಿದ್ದೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಹಮ್ಮಿಕೊಂಡ ಕುಸ್ತಿ ಪಂದ್ಯಾವಳಿ ವಿಜೇತ ಪ್ರಕಾಶ ಇಂಗಳಗಿ ಪ್ರಜ್ವಲ ಲಕ್ಕುಂಡಿ ಕೊಡ ಮಾಡಿದ ಬೆಳ್ಳಿ ಗದೆ ಮತ್ತು 20 ಸಾವಿರ ನಗದು ಬಹುಮಾನ ವಿತರಿಸಿ ಮಾತನಾಡಿದರು. ಸಂಜೀವ ಇಂಗಳಗಿ ದ್ವಿತೀಯ ಹಾಗೂ ದಯಾನಂದ ಇಂಗಳಗಿ ಸ್ಥಾನ ಪಡೆದರು.

4 ದಶಕಗಳ ಹಿಂದೆ ಪ್ರತಿಯೊಂದು ಗ್ರಾಮದಲ್ಲಿ20 ರಿಂದ30 ಜನಕುಸ್ತಿ ಪಟುಗಳು ಇರುತ್ತಿದ್ದರು. ಅವರಿಗಾಗಿ ಮನೆಯಲ್ಲಿ ಎಮ್ಮೆ ಸಾಕಿ ವರ್ಷವಿಡಿ ಹಾಲು ಹೈನು ತಿನ್ನಿಸಿ ಅವರನ್ನು ಬೆಳೆಸುತ್ತಿದ್ದರು. ಗ್ರಾಮ ಅಥವಾ ನೆರೆಯ ಗ್ರಾಮಗಳ ಜಾತ್ರಾ ಮಹೋತ್ಸವದಲ್ಲಿ ಆಯೋಜಿಸುತ್ತಿದ್ದ ಕುಸ್ತಿ ಪಂದ್ಯಾವಳಿಯಲ್ಲಿ ಇವರು ಪಾಲ್ಗೊಂಡು ಶಕ್ತಿ ಪ್ರದರ್ಶನ ಮಾಡುತ್ತಿದ್ದರು. ವಿಜೇತರನ್ನು ಗ್ರಾಮಸ್ಥರು ಗೌರವಿಸಿ ಸತ್ಕರಿಸುತ್ತಿದ್ದರು. ಆದರೆ ಇಂದಿನ ದಿನಗಳಲ್ಲಿ ಅವು ನೆನಪಾಗಿ ಉಳಿಯುತ್ತಿರುವುದು ವಿಷಾದಕರ ಸಂಗತಿ ಎಂದರು.

ಇಂತಹ ಪರಿಸ್ಥಿತಿಯಲ್ಲಿ ಬಸ್ತವಾಡ ಗ್ರಾಮಸ್ಥರು ತಮ್ಮ ಜಾತ್ರಾ ಮಹೋತ್ಸವದಲ್ಲಿ ಕುಸ್ತಿ ಪಂದ್ಯಾವಳಿ ಆಯೋಜಿಸಿದ್ದು ನಿಜಕ್ಕೂ ಶ್ಲಾಘನೀಯ ಕಾರ್ಯವೆಂದರು. ಯುವ ಸಮೂಹ ಇಂತಹ ದೇಸಿ ಕ್ರೀಡೆಗಳಲ್ಲಿ ಪಾಲ್ಗೊಂಡು ಆರೋಗ್ಯವಂತರಾಗಿ ಬದುಕಬೇಕು. ಆ ನಿಟ್ಟಿನಲ್ಲಿ ಪಾಲಕರು ಚಿಂತನೆ ಮಾಡಬೇಕೆಂದು ಸಲಹೆಯಿತ್ತರು.

ಜಾತ್ರಾ ಮಹೋತ್ಸವ ಸಮಿತಿ ಉಪಾಧ್ಯಕ್ಷ ಸುರೇಶ ವಂಟಮೂರಿ, ಪಿಕೆಪಿಎಸ್ ಅಧ್ಯಕ್ಷ ಅಶೋಕ ಪಾಟೀಲ, ಉದ್ಯಮಿ ಆನಂದ ಲಕ್ಕುಂಡಿ, ಮುಖಂಡರಾದ ಪರಗೌಡ ಪಾಟೀಲ, ದಯಾನಂದ ವಂಟಮೂರಿ, ನೇಮಣ್ಣಾ ಮಗದುಮ್ಮ, ಕಾಡಪ್ಪಾ ಮಗದುಮ್ಮ, ಶಂಕರಗೌಡ ಪಾಟೀಲ, ಪ್ರಜ್ವಲ ಲಕ್ಕುಂಡಿ ಇತರರಿದ್ದರು.



ಯುನಿವರ್ಸಿಟಿ ಬ್ಲ್ಯೂ ಆಗಿ: ಆಯ್ಕೆ





• **ಸವದತ್ತಿ:** ಬೆಳಗಾವಿಯ ರಾಣಿಚೆನ್ನಮ್ಮ ವಿಶ್ವವಿದ್ಯಾಲಯವು ಮೂಡಲಗಿಯಲ್ಲಿ ಏರ್ಪಡಿಸಿದ್ದ ಪುರುಷರ ಖೋ ಖೋ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಪಟ್ಟಣದ ಕೆ ಎಲ್ ಇ ಸಂಸ್ಥೆಯ ಎಸ್. ವಿ. ಎಸ್. ಬೆಳ್ಳುಬ್ಬಿ ಮಹಾವಿದ್ಯಾಲಯದ ಬಿ.ಎ. ದ್ವಿತೀಯ ವರ್ಷದ ವಿದ್ಯಾರ್ಥಿಗಳಾದ ನಾಗರಾಜ ಗುಡಗಾರ ಮತ್ತು ವಿಜಯ ಗಳಗಿನ ಯುನಿವರ್ಸಿಟಿ ಬ್ಲೂ ಆಗಿ ಆಯ್ಕೆಯಾಗಿದ್ದಾರೆ. ಮುಂದೆ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಮಾ.26 ರಿಂದ 29ರವರೆಗೆ ನಡೆಯುವ ದಕ್ಷಿಣ ಭಾರತ ಅಂತರ್ ವಿಶ್ವವಿದ್ಯಾಲಯಗಳ ಖೋ ಖೋ ಪಂದ್ಯಾಟದಲ್ಲಿ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಲಿದ್ದಾರೆ.

ದೇವರ ದಾಸಿಮಯ್ಯ ಜಯಂತಿ ಆಚರಣೆ

• **ತೆಲಸಂಗ:** ಶರಣರ ತತ್ವಗಳು ಕೇವಲ ಭಾಷಣಕ್ಕೆ ಸೀಮಿತವಾಗದೆ, ನಮ್ಮ ನಿತ್ಯದ ಬದುಕಿನಲ್ಲಿ ಅಳವಡಿಕೆಯಾಗಬೇಕು ಎಂದು ಪ್ರಧಾನ ಗುರುಗಳಾದ ವಿಜಯ ಕನಾಳ ಹೇಳಿದರು.

ಸಮೀಪದ ಖಿಲಾರದಡ್ಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯಲ್ಲಿ 11ನೇ ಶತಮಾನದ ಶ್ರೇಷ್ಠ ಶಿವಶರಣ ವಚನಕಾರ ದೇವರ ದಾಸಿಮಯ್ಯನವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಕನ್ನಡ ಸಾಹಿತ್ಯ ಲೋಕದಲ್ಲಿ ವಚನ ಕ್ರಾಂತಿಗೆ ನಾಂದಿ ಹಾಡಿದವರು ದೇವರ ದಾಸಿಮಯ್ಯನವರು, ಕೇವಲ ಉಪದೇಶ ನೀಡಿದವರಲ್ಲ, ಅದನ್ನು ಬದುಕಿ ತೋರಿಸಿದವರು. ನೇಯ್ಗೆ ವೃತ್ತಿಯನ್ನು ಮಾಡುತ್ತಾ, ಕಾಯಕದಲ್ಲಿಯೇ ಕೈಲಾಸವನ್ನು ಕಂಡವರು. ಕಾಯಕವಿಲ್ಲದವನಿಗೆ ಭಕ್ತಿಯಿಲ್ಲ ಎಂಬುದು ಅವರ ದೃಢ ನಂಬಿಕೆಯಾಗಿತ್ತು. ಶ್ರಮಜೀವಿಯಾಗಿ ಬದುಕುತ್ತಲೇ ಸಮಾಜದ ಅಂಕುಡೊಂಕುಗಳನ್ನು ತಿದ್ದಿದ ಮಹಾನ್ ಸುಧಾರಕರು ಇವರು. ದಾಸಿಮಯ್ಯನವರು ನಮಗೆ ನೀಡಿದ ಅತಿದೊಡ್ಡ ಸಂದೇಶವೆಂದರೆ ನುಡಿದಂತೆ ನಡೆಯಬೇಕು. ನಾವು ಏನು ಮಾತನಾಡುತ್ತೇವೆಯೋ ಅದರಂತೆ ನಮ್ಮ ನಡವಳಿಕೆ ಇರಬೇಕು. ಸತ್ಯ ಮತ್ತು ಪ್ರಾಮಾಣಿಕತೆಯೇ ಶಿವನನ್ನು ತಲುಪುವ ದಾರಿ ಎಂದು ಅವರು ಸಾರಿದರು. ಇಂದಿನ ವಿದ್ಯಾರ್ಥಿಗಳು ದಾಸಿಮಯ್ಯನವರ ಜೀವನದಿಂದ ಕಲಿಯಬೇಕಾದ್ದು ಬಹಳಷ್ಟಿದೆ. ಶಿಸ್ತು, ಕಠಿಣ ಪರಿಶ್ರಮ ಮತ್ತು ಮಾನವೀಯ ಮೌಲ್ಯಗಳನ್ನು ನಾವು ಬೆಳೆಸಿಕೊಳ್ಳಬೇಕು. ಜಾತಿ-ಮತಗಳ ಭೇದವಿಲ್ಲದೆ ಎಲ್ಲರನ್ನೂ ಪ್ರೀತಿಸುವ ಗುಣವನ್ನು ಅಳವಡಿಸಿಕೊಳ್ಳೋಣ. ದಾಸಿಮಯ್ಯನವರ ತತ್ವಗಳು ನಮ್ಮ ಬದುಕಿಗೆ ದಾರಿದೀಪವಾಗಲಿ ಎಂದು ಆಶಿಸಿದರು.

ಕಾಸಿನಾಥ್ ಲೋಖಂಡೆ, ಶ್ರೀಮಂತ ತಾಂಬೆ, ಸಹ ಶಿಕ್ಷಕ ಅಶೋಕ್ ದೊಡಮನಿ, ಸೋನಾಬಾಯಿ ಗಾಯಕ್ವಾಡ್, ರಮೇಶ್ ಕಂಬಾರ, ಬೀರಪ್ಪ ಖಿಮಗೋಳ, ಲಕ್ಷ್ಮಿ ಜಾಧವ್, ಪ್ರಿಯಾಂಕಾ ಬೋಸ್ಲೆ ಉಪಸ್ಥಿತರಿದ್ದರು.



ನವೋದಯ ಶಾಲೆಗೆ ಪ್ರೀತಿ ಆಯ್ಕೆ

• **ಸವದತ್ತಿ:** ಪ್ರಸಕ್ತ ಸಾಲಿನ ನವೋದಯ ವಸತಿ ಶಾಲೆಯ 6 ನೇ ತರಗತಿ ಪ್ರವೇಶ ಪರೀಕ್ಷೆಯಲ್ಲಿ ತಾಲೂಕಿನ ಅಸುಂಡಿ ಗ್ರಾಮದ ವೀರಭದ್ರೇಶ್ವರ ಕನ್ನಡ ಕಾನ್ವೆಂಟ್ ಶಾಲೆಯ ಪ್ರೀತಿ ಶಿವಾನಂದ ಬುಳ್ಳಿ ಉತ್ತೀರ್ಣರಾಗಿ ಚಿಕ್ಕೋಡಿ ತಾಲೂಕಿನ ಕೋಥಳಿ ಗ್ರಾಮದಲ್ಲಿರುವ ಜವಾಹರ ನವೋದಯ ವಸತಿ ಶಾಲೆಗೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಯ ಸಾಧನೆಗೆ ಶಾಲಾ ಸಂಸ್ಥೆಯ ಅಧ್ಯಕ್ಷ ಎಫ್. ಕೆ. ತೋಟಗಿ, ಮುಖ್ಯ ಶಿಕ್ಷಕ ಎಸ್.ಆರ್. ಕುಲಕರ್ಣಿ ಹಾಗೂ ಶಾಲಾ ಸಿಬ್ಬಂದಿ ಸನ್ಮಾನಿಸಿ ಅಭಿನಂದಿಸಿದ್ದಾರೆ.



ಪಕ್ಷಾತೀತ ಧರಣಿಗೆ ದಿನದಿಂದ ದಿನಕ್ಕೆ ಬೆಂಬಲ: ಮಾಜಿ ಶಾಸಕ ಪಾಟೀಲ

• **ಬೈಲಹೊಂಗಲ:** ನಗರದ ರಾಯಣ್ಣ ವೃತ್ತದಲ್ಲಿ ಕಳೆದ 15 ದಿನಗಳಿಂದ ನಡೆಯುತ್ತಿರುವ ಕಿತ್ತೂರು ರಾಣಿ ಚೆನ್ನಮ್ಮಾಜಿ ಅವರ ರಾಕ್ ಗಾರ್ಡನ್ ಉದ್ಘಾಟನೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ಆಗ್ರಹಿಸಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹಕ್ಕೆ ದಿನದಿಂದ ದಿನಕ್ಕೆ ಸಾರ್ವಜನಿಕರ ಬೆಂಬಲ ಹೆಚ್ಚುತ್ತಿದೆ.

ಈ ಹೋರಾಟದಲ್ಲಿ ಭಾಗವಹಿಸಿ ಮಾತನಾಡಿದ ಮಾಜಿ ಶಾಸಕ ಡಾ. ವಿಶ್ವನಾಥ ಪಾಟೀಲ ಅವರು, ಈ ಹೋರಾಟ ಸಂಪೂರ್ಣವಾಗಿ ಪಕ್ಷಾತೀತ ಹಾಗೂ ಜಾತ್ಯತೀತವಾಗಿದ್ದು, ಯಾವುದೇ ರಾಜಕೀಯ ಪಕ್ಷದ ಆಶ್ರಯದಲ್ಲಿಲ್ಲ. ಚೆನ್ನಮ್ಮ ಅಭಿಮಾನಿಗಳು ಹಾಗೂ ವಿವಿಧ ಸಂಘಟನೆಗಳು ಸ್ವಯಂಪ್ರೇರಿತವಾಗಿ ಭಾಗವಹಿಸುತ್ತಿದ್ದಾರೆ ಎಂದು ಹೇಳಿದರು.

ಚೆನ್ನಮ್ಮ ರಾಕ್ ಗಾರ್ಡನ್ ಅಭಿವೃದ್ಧಿಗೆ ಜಾಗದ ಕೊರತೆ ಎನ್ನುವ ನೆಪವನ್ನು ತಳ್ಳಿ ಹಾಕಿದ ಅವರು, ನಗರದಲ್ಲಿ ಸರ್ಕಾರದ ಸಾಕಷ್ಟು ಜಾಗ ಲಭ್ಯವಿದೆ. ಸರಿಯಾದ ಯೋಜನೆಯೊಂದಿಗೆ ಅಭಿವೃದ್ಧಿ ಕೈಗೊಂಡರೆ ಯಾವುದೇ ತೊಂದರೆ ಎದುರಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಕಿತ್ತೂರು ರಾಣಿ ಚೆನ್ನಮ್ಮಾಜಿಯ ಸಮಾಧಿ ಸ್ಥಳವನ್ನು ರಾಷ್ಟ್ರೀಯ ಸ್ಮಾರಕವಾಗಿ ಘೋಷಿಸುವ ಕುರಿತು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿರುವುದರಿಂದ ಮಾತ್ರ ಸಾಕಾಗುವುದಿಲ್ಲ. ಪ್ರಸ್ತುತ ನಡೆಯುತ್ತಿರುವ ಅಧಿವೇಶನದಲ್ಲೇ ಈ ಕುರಿತು ಠರಾವು ಅಂಗೀಕರಿಸಿ ಕೇಂದ್ರಕ್ಕೆ ಕಳುಹಿಸಿದರೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತದೆ ಎಂದು ಹೇಳಿದರು.

ಇದೇ ವೇಳೆ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರದಿಂದ ಘೋಷಿಸಿರುವ 200 ಕೋಟಿ ಅನುದಾನ ಸಾಕಾಗುವುದಿಲ್ಲ ಎಂದು ತಿಳಿಸಿದ ಅವರು, ಚೆನ್ನಮ್ಮರಂತಹ ಮಹಾನ್ ನಾಯಕಿಯ ಸ್ಮಾರಕಕ್ಕೆ ಕನಿಷ್ಠ 500 ಕೋಟಿಗೂ ಹೆಚ್ಚು ಅನುದಾನ ಬಿಡುಗಡೆ ಮಾಡಿದಾಗ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಒತ್ತಾಯಿಸಿದರು.

ನಂದಗಡದಲ್ಲಿ ಸಂಗೊಳ್ಳಿ ರಾಯಣ್ಣ ಸಮಾಧಿ ಸ್ಥಳವನ್ನು ಅಭಿವೃದ್ಧಿಪಡಿಸಿರುವ ಮಾದರಿಯಲ್ಲಿ ಚೆನ್ನಮ್ಮ ರಾಕ್ ಗಾರ್ಡನ್ ಹಾಗೂ ಸಂಬಂಧಿತ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಅವರು ಆಗ್ರಹಿಸಿದರು.

ಅಧಿವೇಶನವುಮಾ.26ರವರೆಗೆನಡೆಯಲಿದ್ದು, ಈ ಅವಧಿಯಲ್ಲಿ ಸರ್ಕಾರದಿಂದ ಸಕಾರಾತ್ಮಕ ನಿರ್ಧಾರ ಹೊರಬರುವ ನಿರೀಕ್ಷೆಯಿದೆ. ಯಾವುದೇ ಸ್ಪಷ್ಟ ನಿರ್ಧಾರವಾಗದಿದ್ದರೆ ಮಾ.27ರಂದು ಚನ್ನಮ್ಮ ಅಭಿಮಾನಿಗಳು ಹಾಗೂ ಹೋರಾಟಗಾರರ ಸಭೆ ಕರೆದು ಮುಂದಿನ ಹೋರಾಟದ ರೂಪರೇಖೆ ಹಾಗೂ ಉಗ್ರ ಹೋರಾಟದ ಕುರಿತು ತೀರ್ಮಾನಿಸಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಭಾರತೀಯ ಕೃಷಿಕ ಸಮಾಜದ ರಾಜ್ಯಾಧ್ಯಕ್ಷ ಸಿದ್ದಗೌಡ ಮೊದಗಿ ಸೇರಿದಂತೆ ರಫಿಕ್ ಬಡೇಘರ, ಶಿವಾನಂದ ಕೋಲಕಾರ, ಮಡಿವಾಳಪ್ಪ ಹೋಟಿ, ರಾಜು ಭರಮಗೌಡ್ರ, ಶ್ರೀಶೈಲ ಯಡಳ್ಳಿ, ಅಶೋಕ ಗುಂಡ್ಲೂರ, ಆನಂದ ಮೂಗಿ, ವಿಜಯ ಪತ್ತಾರ, ಅಪ್ಪಾಸಾಬ ಯಕ್ಕುಂಡಿ, ಬಸವರಾಜ ನೇಸರಗಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗೆ ನೂತನ ಕೊಠಡಿ ನಿರ್ಮಾಣಕ್ಕೆ ಚಾಲನೆ

• **ಸವದತ್ತಿ:** ಗುರ್ಲಹೊಸೂರ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ದಶಕಗಳ ಕನಸು ನನಸಾಗುವ ಕಾಲ ಹತ್ತಿರ ಬಂದಿದೆ. ಶಾಲೆಯ ಮೂಲಸೌಕರ್ಯ ಅಭಿವೃದ್ಧಿಸುವ ನಿಟ್ಟಿನಲ್ಲಿ ನೂತನ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಶಾಸಕ ವಿಶ್ವಾಸ ವೈದ್ಯ ಅವರು ಅಧಿಕೃತವಾಗಿ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

2025–26ನೇ ಸಾಲಿನ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಈ ಮಹತ್ವದ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. 36 ಲಕ್ಷ ವೆಚ್ಚದ ನಿರ್ಮಿತಿ ಕೇಂದ್ರದ ವತಿಯಿಂದ ಎರಡು ಹೆಚ್ಚುವರಿ ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ. ಶಾಲೆಯಲ್ಲಿ ಎದುರಾಗಿದ್ದ ಸ್ಥಳಾವಕಾಶದ ಕೊರತೆಯನ್ನು ನೀಗಿಸಲು ಈ ಯೋಜನೆ ಸಹಕಾರಿಯಾಗಲಿದೆ ಎಂದರು.

ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಶಿಕ್ಷಣದ ಮಹತ್ವವನ್ನು ಒತ್ತಿಹೇಳಿದರು. ಕ್ಷೇತ್ರದಪ್ರತಿಯೊಂದು ಸರ್ಕಾರಿ ಶಾಲೆಯನ್ನು ಸುಸಜ್ಜಿತಗೊಳಿಸಿ, ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ಕಲ್ಪಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ. ಗ್ರಾಮೀಣ ಭಾಗದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಈ ನೂತನ ಕೊಠಡಿಗಳು ಶೀಘ್ರದಲ್ಲಿ ಪೂರ್ಣಗೊಂಡು ಮಕ್ಕಳ ಜ್ಞಾನಾರ್ಜನೆಗೆಪೂರಕವಾಗಲಿ,



ಅಲ್ಲದೆ, ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಮತ್ತು ಅತ್ಯಂತ ಉತ್ತಮ ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ನೂತನ ಕಟ್ಟಡ ನಿರ್ಮಾಣದಿಂದ ಶಾಲೆಯಲ್ಲಿ ಈವರೆಗೆಇದ್ದ ಕೆಲವು ಪ್ರಮುಖ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗಲಿದೆ. ಹೆಚ್ಚುವರಿ ಕೊಠಡಿಗಳಿಂದಾಗಿ ವಿದ್ಯಾರ್ಥಿಗಳ ದಟ್ಟಣೆ ಕಡಿಮೆಯಾಗಿ, ನೆಮ್ಮದಿಯಿಂದ ಕಲಿಯಲು ಅವಕಾಶ ಸಿಗಲಿದೆ. ಹೊಸ ಕೊಠಡಿಗಳು ಇಂದಿನ ಆಧುನಿಕ ಶಿಕ್ಷಣಕ್ಕೆ ಪೂರಕವಾದ ಸೌಲಭ್ಯಗಳನ್ನು ಹೊಂದಿರಲಿವೆ. ಉತ್ತಮ ಮೂಲಸೌಕರ್ಯದಿಂದಾಗಿ ಶಾಲೆಯಲ್ಲಿ ದಾಖಲಾತಿ ಹೆಚ್ಚಳ ಹಾಗೂ ಗುಣಮಟ್ಟದ ಕಲಿಕೆಗೆ ವೇದಿಕೆ ಸಿದ್ಧವಾಗಲಿದೆ.ಎಂದು ಹೇಳಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ. ಖಾಜಿ, ಮುಖ್ಯ ಶಿಕ್ಷಕ ವಿರೂಪಾಕ್ಷಪ್ಪ ಕಂಪ್ಲಿ, ಹನಮಂತ ಪೆಟ್ಲೂರ, ಚಂದ್ರು ಶಾಮರಾಯನವರ, ಬಸವರಾಜ ಅರಮನಿ, ಶಾಹಾಜಾನ ಸಂಗೊಳ್ಳಿ, ದಿಲಾವರ ಸನದಿ, ಹಾಗೂ ಊರಿನ ಮುಖಂಡರು, ಶಾಲಾ ಶಿಕ್ಷಕರು ಮತ್ತು ಶಿಕ್ಷಕಿಯರು, ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು, ಶಾಲೆಯ ಅಭಿವೃದ್ಧಿಗೆಶ್ರಮಿಸುತ್ತಿರುವ ಶಾಸಕರಿಗೆ ಕೃತಜ್ಞತೆ ಸಲ್ಲಿಸಿದರು.

ಗ್ರಾಮಸ್ಥರ ಹೋರಾಟಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಬೆಂಬಲ

ತುರಮುರಿ ತ್ಯಾಜ್ಯ ವಿಲೇವಾರಿ ರದ್ದತಿಗೆ ಆಗ್ರಹ

• **ಬೆಳಗಾವಿ:** ಗ್ರಾಮೀಣ ಕ್ಷೇತ್ರದ ತುರಮುರಿ ಗ್ರಾಮದ ಬಳಿ ಇರುವ ತ್ಯಾಜ್ಯ ವಿಲೇವಾರಿ ಘಟಕದಿಂದ ಸ್ಥಳೀಯ ಜನರಿಗಾಗುತ್ತಿರುವ ತೊಂದರೆಗಳ ಬಗ್ಗೆ ತುರುಮುರಿ, ಬಾಚಿ, ಕೋನೆವಾಡಿ, ಉಚಗಾಂವ, ಸುಳಗಾ, ಗೋಜಗಾ, ಮಣ್ಣೂರ, ಕಲ್ಲೆಹೋಳ, ಅಂಬೇವಾಡಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಮುಖಂಡರು ಹಾಗೂ ಹಿರಿಯರು ಬೃಹತ್ ಸಂಖ್ಯೆಯಲ್ಲಿ ಆಗಮಿಸಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ಮನವಿ ಸಲ್ಲಿಸಿದರು.

ಗ್ರಾಮಸ್ಥರ ಮನವಿಗೆ ಸ್ಪಂದಿಸುವುದು ನನ್ನ ಕರ್ತವ್ಯ. ಈ ಘಟಕವನ್ನು ಸ್ಥಗಿತಗೊಳಿಸುವ ಕುರಿತು ಸಕಾರಾತ್ಮಕವಾಗಿದ್ದು, ಯಾರೂ ಆತಂಕಪಡಬೇಡಿ, ನಿಮ್ಮೆಲ್ಲರ ಹೋರಾಟದಲ್ಲಿ ನಾನಿದ್ದೇನೆ ಎಂದು ಸಚಿವರು ಭರವಸೆ ನೀಡಿದರು.

ನಾನು ಮೊದಲಿನಿಂದಲೂ ನಿಮ್ಮ ಪರವಾಗಿದ್ದೇನೆ. ನಾನು ಶೀಘ್ರವೇ ಜಿಲ್ಲಾಧಿಕಾರಿ ಮತ್ತು ಮಹಾನಗರ ಪಾಲಿಕೆ ಆಯುಕ್ತರ ಸಭೆ ನಡೆಸುತ್ತೇನೆ. ಜೊತೆಗೆ ಸರಕಾರದ ಮಟ್ಟದಲ್ಲೂ ಧ್ವನಿ ಎತ್ತುತ್ತೇನೆ. ಆದರೆ, ನಗರದ ಶಾಸಕರು ಮತ್ತು ಸಂಸದರು ಈ ವಿಷಯದಲ್ಲಿ ಗ್ರಾಮಸ್ಥರಿಗೆ ಸಹಾಯ ಮಾಡುತ್ತಿಲ್ಲ. ನಗರದ ಕಸ ತಂದು ಗ್ರಾಮೀಣದಲ್ಲಿ ಚೆಲ್ಲುವುದು ಖಂಡನೀಯ. ಹಾಗಾಗಿ ಸಂಸದ ಜಗದೀಶ ಶೆಟ್ಟರ, ಶಾಸಕರಾದ ಅಭಯ ಪಾಟೀಲ ಮತ್ತು ರಾಜು ಸೇಠ್ ಮತ್ತು ಮೇಯರ್, ಉಪಮೇಯರ್ ಅವರ ಬಳಿಯೂ ತೆರಳಿ ಮನವಿ ಸಲ್ಲಿಸಿ. ಅವರ ವ್ಯಾಪ್ತಿಯ ಕಸವನ್ನು ನಿಮ್ಮೂರಿಗೆ ತಂದು ಹಾಕುವುದು ಸರಿಯಲ್ಲ ಎಂದು ಸಚಿವರು ತಿಳಿಸಿದರು.



ಸಚಿವ ಬೈರತಿ ಸುರೇಶ್ ಅವರಿಗೆ ಮನವಿ : ಇದೇ ವೇಳೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ವಿಡಿಯೋ ಕಾಲ್ ಮೂಲಕ ಸಂಪರ್ಕಿಸಿ ಗ್ರಾಮಸ್ಥರ ಮನವಿಯನ್ನು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಗ್ರಾಮಸ್ಥರಿಗೆ ತೊಂದರೆಯಾಗದಂತೆ ಕ್ರಮವಹಿಸುವುದಾಗಿ ಭರವಸೆ ನೀಡಿದರು.

ಜನತಾ ದರ್ಶನ ನಡೆಸಿದ ಸಚಿವರು : ಬೆಳಗಾವಿಯ ಗೃಹ ಕಚೇರಿಯಲ್ಲಿ ಜನತಾದರ್ಶನ ನಡೆಸಿದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು, ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು. ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸಿ, ಇನ್ನುಳಿದ ಸಮಸ್ಯೆಗಳನ್ನು ಪರಿಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಿರುಸುದ್ದಿ



ಬಾದಾಮಿ: ನಗರದ ಸರ್ಕಾರಿ ಮಾದರಿ ಶಾಲೆ(ಹೊಂಡದ)ಶಾಲೆಗೆ ಟಿಪ್ಪುನಗರದ ಮುಖ್ಯ ಶಿಕ್ಷಕ ಮುರುಳೀಧರ ಇನಾಮದಾರ ಅವರು ತಮ್ಮ ಮೊಮ್ಮಗಳ ಜನನದ ಸ್ಮರಣಾರ್ಥ ತಾವು ಕಲಿತ ಶಾಲೆಗೆ ರೂ.40 ಸಾವಿರ ಮೌಲ್ಯದ ಕಲರ ಪ್ರಿಂಟರ್‌ನ್ನು ದೇಣಿಗೆ ನೀಡಿದರು. ಮುಖ್ಯಶಿಕ್ಷಕ ಬಸವರಾಜ ರಜಪೂತ, ಬಾದಾಮಿ ಸಮೂಹ ಸಂಪನ್ಮೂಲ ವ್ಯಕ್ತಿ ಎಂ.ಕೆ.ಬಡಿಗೇರ, ಸಹಶಿಕ್ಷಕಿ ಅನಸೂಯಾ ಯಲಿಗಾರ ಇದ್ದರು.

ಮಾ.28ರ ವರೆಗೆ ವಿವಿಧ ಕಾರ್ಯಕ್ರಮ

ಬಾದಾಮಿ: ತಾಲೂಕಿನ ಕಟಾಪೂರ ಗ್ರಾಮದ ಶಿರಡಿ ಸಾಯಿಬಾಬಾ ಮಂದಿರದ 30ನೇ ವಾರ್ಷಿಕೋತ್ಸವದ ನಿಮಿತ್ತ ವಿವಿಧ ಕಾರ್ಯಕ್ರಮಗಳು ಮಾ.19ರಿಂದ ಆರಂಭವಾಗಿದ್ದು, ಮಾ.28ರ ವರೆಗೆ ನಡೆಯಲಿವೆ. ಮಾ.25ರಂದು ಶಿರಡಿ ಸಾಯಿಬಾಬಾ ಅವರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಮಾ.26ರಂದು ಗುರುವಾರ ಮಂದಿರದ 26ನೇ ವಾರ್ಷಿಕೋತ್ಸವ ಹಾಗೂ ಸಾಯಿ ರಾಮನವಮಿ ಉತ್ಸವ-2026 ಹಾಗೂ ಸರ್ವಧರ್ಮ ಸಾಮೂಹಿಕ ವಿವಾಹಗಳು ನಡೆಯಲಿವೆ. ಮಾ.27, 28ರಂದು ಶುಕ್ರವಾರ ಕಾಕಡಾರತಿ, ಜಂಗಿ ಕುಸ್ತಿಗಳು, ನೃತ್ಯ ಕಾರ್ಯಕ್ರಮ ನಂತರ ಮಹಾಪ್ರಸಾದ ನಡೆಯಲಿದೆ. ಭಕ್ತರು ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಶ್ರೀಕಾಂತ ಮಲ್ಲೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೇಸಿಗೆಯಲ್ಲಿ ಕರಬೂಜ ಲಾಭದಾಯಕ ಕೃಷಿ



ಕೆರೂರ: ಕರಬೂಜ ಹಣ್ಣು ಬೇಸಿಗೆಯಲ್ಲಿ ಬೆಳೆಯುವ ಲಾಭದಾಯಕ ಹಣ್ಣು. ಈ ಹಣ್ಣು ಮನುಷ್ಯನ ಆರೋಗ್ಯವಂತ ದೇಹಕ್ಕೆ ಅತ್ಯಂತ ಉಪಯುಕ್ತವಾಗಿದೆ ಎಂದು ನೌನ ಯೂ ಸೀಡ್ ಕಂಪನಿಯ ಮ್ಯಾನೇಜರ ಗಣಪತಿ ನಿಕಂ ಹೇಳಿದರು. ಇತ್ತೀಚೆಗೆ ಸಮೀಪದ ಜಮ್ಮನಕಟ್ಟಿ ಗ್ರಾಮದ ರೈತ ವಿಶ್ವನಾಥ ಹೊಸಗೌಡರ ಅವರ ಜಮೀನನಲ್ಲಿ ಏರ್ಪಡಿಸಿದ್ದ ಕರಬೂಜ ಹಣ್ಣಿನ ಕ್ಷೇತ್ರ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಕರಬೂಜ ಹಣ್ಣು 60 ದಿನಗಳಲ್ಲಿ ಬೆಳೆಯಬಲ್ಲ ಬೆಳೆಯಾಗಿದ್ದು, ಕನಿಷ್ಠ 3ರಿಂದ 4 ಎಕರೆ ಜಮೀನು ಹೊಂದಿದ ರೈತರು ಕರಬೂಜನ್ನು ಬೆಳೆಯಬಹುದು ಎಂದರು. ಕರಬೂಜು ಹಣ್ಣಿಗೆ ಯಾವ ರೀತಿ ಪೋಷಕಾಂಶ ನೀಡಬೇಕು. ಹಾಗೂ 60 ದಿನಗಳ ಕಾಲ ಹೇಗೆ ನಿರ್ವಹಣೆ ಮಾಡಬೇಕು ಎಂದು ರೈತರಿಗೆ ತರಬೇತಿ ನೀಡಿದರು. ಕೃಷಿಕರಾದ ಶ್ರೀನಿವಾಸ ಹೊಸಗೌಡರ, ಸಂಜೀವ ಹೊಸಗೌಡ್ರ, ಮಾಂತೇಶ ಶೆಡ್ಡಾರ ಹಾಗೂ ಸುತ್ತಮುತ್ತಲಿನ ರೈತರು ಭಾಗವಹಿಸಿದ್ದರು.

ವಾರ್ಷಿಕ ಶಿಬಿರ ಯಶಸ್ವಿ



ಬಾದಾಮಿ: ತಾಲೂಕಿನ ರಾಘಾಪೂರ ಗ್ರಾಮದಲ್ಲಿ ಕಾಳಿದಾಸ ಪದವಿ ಮಹಾ ವಿದ್ಯಾಲಯ ಹಾಗೂ ಬಾಗಲಕೋಟೆ ವಿಶ್ವವಿದ್ಯಾಲಯ ಜಮಖಂಡಿ ಇವರ ಸಂಯುಕ್ತ ಆಶ್ರಯದಲ್ಲಿ 2025-26ನೇ ಸಾಲಿನ ಎನ್‌ಎಸ್ ಎಸ್ ವಾರ್ಷಿಕ ವಿಶೇಷ ಶಿಬಿರ ನಡೆಯಿತು. ದತ್ತು ಗ್ರಾಮ ರಾಘಾಪುರದಲ್ಲಿ ನಡೆದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರವನ್ನು ನಿವೃತ್ತ ಶಿಕ್ಷಕ ರಂಗಪ್ಪ ಡಂಬೂರ ಉದ್ಘಾಟಿಸಿ ಮಾತನಾಡಿದರು. ರಂಗಪ್ಪ ದಾದಿ ಅಧ್ಯಕ್ಷತೆ ವಹಿಸಿದ್ದರು ಯಮನಪ್ಪ ಗಿಡ್ಡನಾಯಕನಾಳ, ಪ್ರಭಾರಿ ಪ್ರಾಚಾರ್ಯ ಎಚ್.ಎಂ.ಸಂಗಮದ, ಎನ್‌ಎಸ್‌ಎಸ್ ಸಂಯೋಜಕ ಪಿ.ಆರ್.ವಾಘಮೋಡೆ, ಡಿ.ಎಫ್.ಮಾದರ ಸೇರಿದಂತೆ ಸ್ವಯಂ ಸೇವಕರು ಸೇವಕಿಯರು ಇದ್ದರು.



ರಬಕವಿ-ಬಕಹಟ್ಟಿ: ಇಲ್ಲಿನ ಕಾಳಿಕಾದೇವಿಯ 34ನೇ ಜಾತ್ರಾ ಮಹೋತ್ಸವ ಹಾಗೂ ಶತಚಂಡಿಯಾಗ, ಪುರನ್ ಪ್ರಾಣ ಪ್ರತಿಷ್ಠಾಪನೆ ನಿಮಿತ್ತ ಸೋಮವಾರ ಕಾಳಮ್ಮದೇವಿ ದೇವಸ್ಥಾನದಲ್ಲಿ ಕಾಳಿಕಾದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.



ಜಮಖಂಡಿ: ಸ್ಥಳೀಯ ದಿ ಜನತಾ ಕಂಜುಮರ್ ಕೋ ಆಪರೇಟಿವ್ ಹೋಲಸೆಲ್ ಸ್ಟೋರ್ಸ್ ಲಿ. ಜನತಾ ಬಜಾರ ಅಧ್ಯಕ್ಷರಾಗಿ ಶಶಿಕಾಂತ ಗಲಗಲಿ ಅವರು ಎಂಟು ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಹಾಗೂ ಉಪಾಧ್ಯಕ್ಷರಾಗಿ ಮುತ್ತಣ್ಣಾ ಮೇತ್ರಿ ಅವರು ಎಂಟು ಮತಗಳನ್ನು ಪಡೆದು ಚುನಾವಣೆ ಮೂಲಕ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ವರ್ಧಮಾನ ನ್ಯಾಮಗೌಡ, ಭೀಮಣ್ಣಾ ಹಿಪ್ಪರಗಿ, ಬಸವರಾಜ ಹರಕಂಗಿ, ಮಹಾಂತೇಶ ತಳವಾರ, ಮಲ್ಲಿಕಾರ್ಜುನ ಇಂಗಳಗಾವಿ, ಕಲ್ಲಪ್ಪಾ ಗಿರಡ್ಡಿ ಇನ್ನಿತರರಿದ್ದರು.

ಸಮಾನತೆ ಸಾರಿದ್ದ ದಾಸಿಮಯ್ಯ: ಬೆನಕನಾಳ

ಗುಳೇದಗುಡ್ಡ: ಆದ್ಯವಚನಕಾರ ದೇವರ ದಾಸಿಮಯ್ಯ ಜಾತಿ ಧರ್ಮ ಮೀರಿ, ಸಮಾನತೆಗಾಗಿ ಕಾಯಕದ ಮೂಲಕ ಹಾಗೂ ವಚನಗಳನ್ನು ಜಗತ್ತಿಗೆ ನೀಡಿ ಸಮಸಮಾಜ ಕಟ್ಟಲು ಪ್ರಯತ್ನಿಸಿದರು. ಸಮಾಜಕ್ಕೆ ದಾಸಿಮಯ್ಯನ ಕೊಡುಗೆ ಅಪಾರವಾಗಿದೆ ಎಂದು ಶಿಕ್ಷಣ ತಜ್ಞ ಡಾ.ವಿ.ಎ.ಬೆನಕನಾಳ ಹೇಳಿದರು. ಪಟ್ಟಣದ ಗುರುಸಿದ್ದೇಶ್ವರ ಮಠದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಬದುಕಿನ ಪ್ರತಿದಿನದ ಪ್ರಶ್ನೆಗಳಿಗೆ ಸಲಹೆ ನೀಡಿ ಸತಿಪತಿಗಳು ಉತ್ತಮವಾಗಿ ಬಾಳಬೇಕು, ಈ ಜಗತ್ತು ದೇವರಿಂದ ನಿರ್ಮಾಣವಾಗಿದೆ ಎಲ್ಲವೂ ನಿನ್ನದೆ ಎನ್ನುತ್ತಾ ಇಳೆ ನಿಮ್ಮ ದಾನ ಎಲ್ಲವೂ ನಿಮ್ಮದಾನ ಎಂದು ಹೇಳಿದ ದಾಸಿಮಯ್ಯ ಇಡೀ ಜೀವನವನ್ನೆ ಸಮಾಜಕ್ಕೆ ಅರ್ಪಿಸಿದ್ದನ್ನು ವಿವರವಾಗಿ ಹೇಳಿದರು. ಪಟ್ಟಸಾಲಿ ನೇಕಾರ ಸಮುದಾಯದ ತಾಲೂಕು ಅಧ್ಯಕ್ಷ ಈರಣ್ಣ ಶೇಖಾ ಮಾತನಾಡಿ, ಬದುಕಿನಲ್ಲಿ ಮೌಲ್ಯಗಳನ್ನು ಅಳವಡಿಸಿಕೊಂಡು ಬದುಕಿದಾಗ ಉದಾತ್ತ ಜೀವನ ನಮ್ಮದಾಗುತ್ತದೆ. ಶರಣರ ಸಂತರ ಆದರ್ಶ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದು ಹೇಳಿದರು. ಪ್ರಾಚಾರ್ಯ ಎಚ್.ಎಸ್.ಘಂಟಿ ಅಧ್ಯಕ್ಷತೆ ವಹಿಸಿ ಮಾತನಾಡಿ ಪ್ರಶಿಕ್ಷಣಾರ್ಥಿಗಳು ದಾಸಿಮಯ್ಯನವರ ವಿಚಾರಗಳನ್ನು ಮಕ್ಕಳಿಗೆ ತಿಳಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣ ನಿಮ್ಮ ಮೇಲಿದೆ ಎಂದರು. ಗುರುಸಿದ್ದ ಪಟ್ಟದಾರ್ಯ ಸ್ವಾಮೀಜಿ ಸಾನಿಧ್ಯವಹಿಸಿ ಮಾತನಾಡಿ, ದಾಸಿಮಯ್ಯನವರು ಮನುಷ್ಯನ ಜೀವನಕ್ಕೆ ಬೇಕಾಗಿರುವ ಎಲ್ಲವನ್ನು ವಚನಗಳ ಮೂಲಕ ನೀಡಿದ್ದಾರೆ. ಮನುಷ್ಯನಿಗೆ ಜಾತಿ ಮುಖ್ಯವಲ್ಲ, ಮಾನವೀಯತೆ ಮುಖ್ಯ ಎಂದು ಹೇಳಿದರು.



ಗುಳೇದಗುಡ್ಡ: ಪಟ್ಟಣದ ಗುರಸಿದ್ದೇಶ್ವರ ಮಠದಲ್ಲಿ ಹಮ್ಮಿಕೊಂಡಿದ್ದ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ನಡೆಯಿತು. ದೇವಾಂಗ ಸಮಾಜದ(ಕಂಠಿಪೇಟೆ) ಅಧ್ಯಕ್ಷ ಆರ್.ವಿ.ಶೇಬಿನಕಟ್ಟಿ, ಉಪಾಧ್ಯಕ್ಷ ರಾಮಚಂದ್ರ ಹಾನಾಪೂರ, ಸುರೇಖಾ ತಿಪ್ಪಾ, ಸರಿತಾ ಚಂದನ್ನವರ, ಇಂದುಮತಿ ಬೋರಣ್ಣವರ ನೇಕಾರ ಸಮುದಾಯದ ಮುಖಂಡರು, ಗುರುಸಿದ್ದೇಶ್ವರ ಮಹಿಳಾ ಬಿ.ಎಡ್.ಕಾಲೇಜಿನ ಪ್ರಥಮ ಹಾಗೂ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಇದ್ದರು.

ಅಭಿವೃದ್ಧಿಗೆ ಒತ್ತು ನೀಡುವ ಚರಂತಿಮಠ | ಮುರಗೇಶ ನಿರಾಣಿ ಹೇಳಿಕೆ

ಬಿಜೆಪಿ ಗೆಲುವಿಗೆ ಶ್ರಮಿಸಿ

ಬಾಗಲಕೋಟೆ: ಬಾಗಲಕೋಟೆ ಮತಕ್ಷೇತ್ರದ ಉಪಚುನಾವಣೆಯ ಅಭ್ಯರ್ಥಿ ವೀರಣ್ಣ ಚರಂತಿಮಠ ನೇರ, ನಿಷ್ಠುರವಾದಿಯಾಗಿದ್ದು, ಮಾತಿನಲ್ಲಿ ಸ್ವಲ್ಪ ಒರಟು ಇದ್ದರೂ ಅಭಿವೃದ್ಧಿಗೆ ಒತ್ತು ನೀಡುವ ವ್ಯಕ್ತಿಯಾಗಿದ್ದಾರೆ. ಇವರನ್ನು 25 ಸಾವಿರ ಮತಗಳ ಅಂತರದಿಂದ ಗೆಲ್ಲುತ್ತಾರೆ ಎಂದು ಮಾಜಿ ಸಚಿವ ಹಾಗೂ ಬಿಜೆಪಿ ರಾಜ್ಯ ಉಪಾಧ್ಯಕ್ಷ ಮುರಗೇಶ ನಿರಾಣಿ ವಿಶ್ವಾಸ ವ್ಯಕ್ತಪಡಿಸಿದರು.

ವೀರಣ್ಣ ಚರಂತಿಮಠವರ ನಾಮಪತ್ರ ಸಲ್ಲಿಸಿದ ನಂತರ ನಡೆದ ರೋಡಶೋದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ನಮ್ಮಲ್ಲಿನ ತಪ್ಪುಗಳಿಂದಲೇ ನಾವು ಕಳೆದ ಚುನಾವಣೆಯಲ್ಲಿ ಸೋತಿದ್ದೇವೆ. ಈಗ ಅದರ ಅರಿವು ಆಗಿದೆ. ಇದು ಮರುಕಳಿಸುವುದಿಲ್ಲ, ಪ್ರತಿಯೊಬ್ಬರು ಬೂತ ಮಟ್ಟದಿಂದ ಪಕ್ಷದ ಅಭ್ಯರ್ಥಿ ವೀರಣ್ಣ ಚರಂತಿಮಠವರಿಗೆ ಮತ ಬರುವಂತೆ ಮಾಡಿ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸೋಣ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಬಾಗಲಕೋಟೆ ಒಂದು ಮುಳುಗಡೆ ನಗರವಾಗಿದ್ದು ಇದಕ್ಕೆ ಶಾಶ್ವತ ಪರಿಹಾರವನ್ನು ಕಾಣಬೇಕಾಗಿದೆ. ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ, ಬೊಮ್ಮಾಯಿಯವರು ನೀಡಿದಷ್ಟು ಅನುದಾನ ಈಗಿನ ಸರ್ಕಾರ ನೀಡುತ್ತಿಲ್ಲ. ರಾಜ್ಯದಲ್ಲಿ ಯಾವುದೇ ಚುನಾವಣೆ ಬಂದರೂ ಜನ ಬೇಸತ್ತು ಹೋಗಿದ್ದಾರೆ. ಈಗ ನಡೆಯುತ್ತಿರುವ ಉಪಚುನಾವಣೆಯಲ್ಲಿ ವೀರಣ್ಣ ಚರಂತಿಮಠವರಿಗೆ ಹೆಚ್ಚು ಮತಗಳನ್ನು ನೀಡುವ ಮೂಲಕ ಅವರನ್ನು ಗೆಲ್ಲಿಸೋಣ ಎಂದರು.

ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ದುರಾಡಳಿತ ಮಿತಿಮೀರಿದೆ. ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ, ಕುರ್ಚಿಗಾಗಿ ಅವರ ಆಂತರಿಕ ಕಚ್ಚಾಟದಿಂದ ಜನ ಬೇಸತ್ತು ಹೋಗಿದ್ದಾರೆ. ಈ ಉಪಚುನಾವಣೆ ಮುಂದಿನ ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದರು.

ವೀರಣ್ಣ ಚರಂತಿಮಠವರು ಸರ್ಕಾರ ಯಾವುದೇ ಇರಲಿ ಕ್ಷೇತ್ರದ ಅಭಿವೃದ್ಧಿಗೆ ಅನುದಾನ ತರುತ್ತಾರೆ. ಚರಂತಿಮಠರನ್ನು ಗೆಲ್ಲಿಸುವ ಮೂಲಕ ಅಭಿವೃದ್ಧಿಗೆ ನಾಂದಿ ಹಾಡಬೇಕು ಎಂದರು.



> ಎ.9ಕ್ಕೆ ನಡೆಯುವ ಚುನಾವಣೆಯಲ್ಲಿ ಬಿಜೆಪಿ ಗುರುತಿಗೆ ಮತ ನೀಡಬೇಕು. ಎಲ್ಲ ನಾಯಕರು ಪ್ರಚಾರಕ್ಕೆ ಬಂದಿದ್ದು ಕಾರ್ಯಕರ್ತರು ಕೂಡ ಮೈ ಮರೆಯದೇ ಮತದಾನ ನಡೆಯುವ ಸಮಯುದವರೆಗೂ ಮನೆ ಮನೆಗೆ ತೆರಳಿ ಬಿಜೆಪಿಗೆ ಮತ ನೀಡಲು ಜನರಿಗೆ ತಿಳಿಸುವ ಕೆಲಸ ಮಾಡಬೇಕು.
> ■ ವೀರಣ್ಣ ಚರಂತಿಮಠ, ಬಿಜೆಪಿ ಅಭ್ಯರ್ಥಿ

ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ, ರಾಜ್ಯದಲ್ಲಿ ಭ್ರಷ್ಟಾಚಾರ ತುಂಬಿದೆ. ಈ ಸರ್ಕಾರದ ವಿರುದ್ಧ ಜನ ಆಕ್ರೋಶಗೊಂಡಿದ್ದಾರೆ. ಎ.9ಕ್ಕೆ ನಡೆಯುವ ಚುನಾವಣೆಯ ಮತದಾನದಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠವರ ಕಮಲದ ಗುರುತಿಗೆ ಮತ ನೀಡಿ ಗೆಲ್ಲಿಸಬೇಕು. ಎಲ್ಲರೂ ಒಗ್ಗಟ್ಟಾಗಿ ಬಿಜೆಪಿಯನ್ನು ಗೆಲ್ಲಿಸಬೇಕು ಎಂದರು.

ಜೆಡಿಎಸ್ ಪಕ್ಷದ ನಾಯಕ ವೆಂಕನಗೌಡ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಅಕಾರಕ್ಕೆ ಬಂದು ಮೂರು ವರ್ಷವಾದರೂ ಗ್ರಾಮೀಣ, ನಗರಮಟ್ಟದ ರಸ್ತೆಗೆ ಒಂದು ಪುಟ್ಟಿ ಮಣ್ಣು ಹಾಕುತ್ತಿಲ್ಲ. ಸರ್ಕಾರದ ಬಳಿ ದುಡ್ಡೆ ಇಲ್ಲ. ಇದೊಂದು ದರಿದ್ರ ಸರ್ಕಾರವಾಗಿದೆ. ಇದನ್ನು ಕಿತ್ತೊಗೆಯಲು ಜನ ಸಂಕಲ್ಪ ತೊಟ್ಟಿದ್ದಾರೆ ಎಂದರು.

ಸಂಸದ ಜಗದೀಶ ಶೆಟ್ಟರ, ಸಂಸದ ಗೋವಿಂದ ಎಂ. ಕಾರಜೋಳ, ರಾಜ್ಯಸಭಾ ಸದಸ್ಯ ನಾರಾಯಣ ಸಾ. ಭಾಂಡಗೆ, ಶಾಸಕ ಸಿದ್ದು ಸವದಿ, ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಮಾಜಿ ಸಚಿವ ಬಿ.ಶ್ರೀರಾಮುಲು, ರಾಜ್ಯ ಉಪಾಧ್ಯಕ್ಷ ಎನ್. ಮಹೇಶ ಸೇರಿ ಮುಖಂಡರು ಉಪಸ್ಥಿತರಿದ್ದರು.

ರೈತರಿಗೆ ಅಗತ್ಯ ಪರಿಹಾರದ ಭರವಸೆ: ಜೆಟಿಪಾ

ಕಲಾದಗಿ: ಕಳೆದ ಬುಧವಾರ ರಾತ್ರಿ ಹಾಗೂ ಗುರವಾರ ಸಂಜೆ ಬಿದ್ದ ಆಲಿಕಲ್ಲು ಮಳೆಗೆ ಹಾನಿಗೀಡಾದ ಬೆಳೆಗಳ ರೈತರ ಜಮೀನುಗಳಿಗೆ ಶಾಸಕ ಜೆ.ಟಿ.ಪಾಟೀಲ ಭೇಟಿ ನೀಡಿ ಹಾನಿ ವೀಕ್ಷಿಸಿ ರೈತರೊಂದಿಗೆ ಮಾತನಾಡಿ, ಆಗಿರುವ ನಷ್ಟದ ಬಗ್ಗೆ ಮಾಹಿತಿ ಪಡೆದರು.

ದೇವನಾಳದ ಮಂಜುನಾಥ ಒಂಟಗೋಡಿ, ಆನಂದ ಹೊನ್ನಪ್ಪಗೋಳ ಹಾಗೂ ಸಿದ್ದಾರೂಡ ಒಂಟಗೋಡಿ ಅವರ ಆಲಿಕಲ್ಲು ಮಳೆಯಿಂದ ಹಾಳಾದ ಕಲ್ಲಂಗಡಿ ಬೆಳೆ ನೋಡುವುದರೊಂದಿಗೆ ಆರಂಭವಾದ ಶಾಸಕರ ವಿಕ್ಷಣಾ ಕಾರ್ಯ ತದನಂತರ ಸಂಜೆಯವರೆಗೆ ತುಳಸಿಗೇರಿ, ಚಿಕ್ಕಸಂಶಿ, ಹಿರೇಸಂಶಿ, ಹಿರೇಶೆಲ್ಲಿಕೇರಿ, ಚಿಕ್ಕಶೆಲ್ಲಿಕೇರಿ ಊರುಗಳ ರೈತರ ನಷ್ಟಕ್ಕೊಳಗಾದ ದಾಳಿಂಬೆ, ಪಪ್ಪಾಯಿ, ಗೋವಿನಜೋಳ, ಕಲ್ಲಂಗಡಿ, ಕಬ್ಬು ಮುಂತಾದ ಬೆಳೆಗಳನ್ನು ವೀಕ್ಷಣೆ ಮಾಡಿ ರೈತರಿಂದ ಬೆಳೆಗೆ ಮಾಡಿರುವ ಖರ್ಚು, ಬರುತ್ತಿದ್ದ ಆದಾಯ ಹಾಗೂ ಆಗಿರುವ ನಷ್ಟದ ಮಾಹಿತಿ ಪಡೆದು ಬೆಳೆಗಾರರಿಗೆ ಆಗಿರುವ ಅಪಾರ ಪ್ರಮಾಣದ ನಷ್ಟಕ್ಕೆ ನೋವನ್ನು ವ್ಯಕ್ತಪಡಿಸಿದರು.

ಇತ್ತೀಚಿಗಷ್ಟೇ ನಿಧನರಾಗಿರುವ ಚಿಕ್ಕಸಂಶಿಯ ದಿ.ಕೃಷ್ಣಾ ಪತ್ತಾರ ಅವರ ಸಮೃದ್ಧವಾಗಿ ಬೆಳೆದಿದ್ದ ಕಲ್ಲಂಗಡಿ, ಹಿರೇ ಶೆಲ್ಲಿಕೇರಿ ವ್ಯಾಪ್ತಿಯ ಚಿದಾನಂದ ಉಮದಿ ಅವರ ಗಿಡತುಂಬ ಕಾಯಿಗಳಿರುವ ಪಪ್ಪಾಯಿಯ ಬೆಳೆ ಹಾಗೂ ಮುಸ್ತಪಾ ಬಿಸ್ತಿ ಅವರ ಕಲ್ಲಂಗಡಿ, ಬಸವರಾಜ ಸಬರದ ಅವರ ಇನ್ನಿಲ್ಲದಂತೆ ಹಾಳಾಗಿರುವ ಗೋವಿನಜೋಳ, ಚಿಕ್ಕಶೆಲ್ಲಿಕೇರಿ ವ್ಯಾಪ್ತಿಯ ಅಬ್ದುಲ್ ಗಣಿ ಸೋಲ್ಜರ್ ಅವರ ದಾಳಿಂಬೆ ಮುಂತಾದವರ ಹಾನಿಯಾಗಿರುವ ಬೆಳೆಗಳನ್ನು ವೀಕ್ಷಿಸಿದ ಅವರು ರೈತರಿಗೆ ಅಗತ್ಯ ನೆರವಿನ ಭರವಸೆ ನೀಡಿದರು.

ಹಾನಿಗೊಳಗಾದ ಯಾವೊಂದು ಬೆಳೆ, ಜಮೀನನ್ನು ಬಿಡದಂತೆ ಸರ್ವೆ ಮಾಡಿ ವರದಿ ನೀಡಲು ತೋಟಗಾರಿಕೆ ಮತ್ತು ಕೃಷಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಸರ್ಕಾರದಿಂದ ಸಿಗಬೇಕಾಗದ ಅಗತ್ಯ ಪರಿಹಾರ ಕೊಡಿಸುವಲ್ಲಿ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು. ಎಂ.ಬಿ.ಸೌದಾಗರ, ಸಂಗಣ್ಣ ಮುದೋಳ, ಪಾಂಡು ಪೋಲಿಸ್, ನಾರಾಯಣ ಹಾದಿಮನಿ, ಬಂದೇನವಾಜ್ ಸೌದಾಗರ, ಪಕೀರಪ್ಪ ಮಾದರ ಶೆಲ್ಲಿಕೇರಿ, ಪಕೀರಪ್ಪ ಬಿಸಾಳೆ, ಫಕೀರಪ್ಪ ಮಾದರ, ಭೀಮನಗೌಡರ, ಮಂಜುಗೌಡರ ಇದ್ದರು.



> ಆಲಿಕಲ್ಲು ಮಳೆಗೆ ಅಪಾರ ಬೆಳೆ ನಷ್ಟವಾಗಿರುವುದು ನಿಜಕ್ಕೂ ವಿಷಾದನೀಯ. ದಾಳಿಂಬೆ, ಪಪ್ಪಾಯಿ, ಕಲ್ಲಂಗಡಿ ಸೇರಿದಂತೆ 300 ಹೆಕ್ಟೇರ್‌ಗೂ ಹೆಚ್ಚು ವಿವಿಧ ತೋಟಗಾರಿಕಾ ಬೆಳೆಗಳು ಹಾಳಾಗಿವೆ. ರೈತರಿಗೆ ಅಗತ್ಯ ಪರಿಹಾರ ಕೊಡಿಸಲಾಗುವುದು.
> ■ ಜೆ.ಟಿ.ಪಾಟೀಲ, ಶಾಸಕರು

ದೇವಾಂಗ ಜ್ಯೋತಿ ಪ್ರಚಾರ ವಾಹನಕ್ಕೆ ಚಾಲನೆ

ಬಾದಾಮಿ: ಸಮೀಪದ ಬನಶಂಕರಿ ದೇವಾಂಗ ಶಾಖಾಮಠದಲ್ಲಿ ಮೇ 9, 10ರಂದು ಹಂಪಿ ಹೇಮಕೂಟ ಗಾಯತ್ರಿಪೀಠ ಮಹಾಸಂಸ್ಥಾನ ಟ್ರಸ್ಟ್ ಹಾಗೂ ರಾಜ್ಯ ದೇವಾಂಗ ಸಂಘದ ಸಹಯೋಗದಲ್ಲಿ ನಡೆಯಲಿರುವ ಅಖಿಲ ಭಾರತ ದೇವಾಂಗ(ನೇಕಾರ) ಜಾಗೃತ ಸಮಾವೇಶ ಮತ್ತು ದಯಾನಂದ ಪುರಿ ಶ್ರೀಗಳ 36ನೇ ವರ್ಷದ ಪಟ್ಟಾಭಿಷೇಕ ಹಾಗೂ ತುಲಾಭಾರ ಸಮಾರಂಭದ ಅಂಗವಾಗಿ ಸೋಮವಾರ ದೇವರ ದಾಸಿಮಯ್ಯ ಜಯಂತಿ ಹಾಗೂ ಅಖಿಲ ಭಾರತ ದೇವಾಂಗ ಜಾಗೃತ ಸಮಾವೇಶದ ದೇವಾಂಗ ಜ್ಯೋತಿ ನಾಲ್ಕು ವಿಭಾಗವಾರು ಪ್ರಚಾರ ವಾಹನಕ್ಕೆ ದಯಾನಂದಪುರಿ ಸ್ವಾಮೀಜಿ ಚಾಲನೆ ನೀಡಿದರು.

ಅಖಿಲ ಭಾರತ ದೇವಾಂಗ(ನೇಕಾರ) ಜಾಗೃತ ಸಮಾವೇಶ ದಯಾನಂದಪುರಿ ಸ್ವಾಮೀಜಿಗಳ 36 ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವ ಸಮಿತಿಯ ಅಧ್ಯಕ್ಷ ರವೀಂದ್ರ ಪಿ.ಕಲಬುರ್ಗಿ, ಬೆಳಗಾವಿ ಮಹಾನಗರ ಪಾಲಿಕೆಗೆ ನೂತನವಾಗಿ ಸಮಾಜದ ಮೇಯರ್ ಆಗಿ ಆಯ್ಕೆಯಾದ ಪ್ರೀತಿ ಕಾಮಕರ್ ಹಾಗೂ ಕಾರ್ಪೊರೇಟರ್ ಆಗಿ ಆಯ್ಕೆಯಾದ ರೇಷ್ಮಾ ಕಾಮಕರ್ ಅವರನ್ನು ಸನ್ಮಾನಿಸಿ ಗೌರವಿಸಿದರು. ದಯಾನಂದಪುರಿ ಸ್ವಾಮಿಜೀ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ರಾಜ್ಯ ಸಂಘದಕಾರ್ಯದರ್ಶಿ ಟಿ.ರಾಜೇಶ, ಜಿಲ್ಲಾ ದೇವಾಂಗ ಸಂಘದ ಅಧ್ಯಕ್ಷ ಸತೀಶ ಸಪ್ಪರದ, ಪ್ರಧಾನ ಕಾರ್ಯದರ್ಶಿ ಸಂಕಣ್ಣ ಕರಡಿಗುಡ್ಡ, ದೇವಾಂಗ ಸಮಾಜದ ಅಧ್ಯಕ್ಷ ಅಮಾತೆಪ್ಪ ಕೊಪ್ಪಳ. ಹೇಮಾದ್ರಪ್ಪ ಕೊಪ್ಪಳ, ನಾಗರಾಜ ಪರಗಿ, ವಿರುಪಾಕ್ಷಪ್ಪ ಗೂಳಿ, ಉಮೇಶ ಕಂದಗಲ್ಲ, ಕೃಷ್ಣಪ್ಪ ರಾಮದುರ್ಗ, ಆರ್.ಜಿ. ರಾಮದುರ್ಗ, ನವೀನ ಚಿಲ್ಲಾಳ, ಗಜಾನನ ಗುಂಜೇರಿ, ವೀಣಾ ಕಾಮಕರ್, ಆನಂದ ಉಪರಿ, ರವಿ ಬಳಿಗೇರ, ಆನಂದ ಹುಲಮನಿ, ಗಿರಿಯಪ್ಪ ಬಳಗೇರಿ ಪ್ರಕಾಶ ಶೇಬಿನಕಟ್ಟಿ, ಶಂಕ್ರಪ್ಪ ಜನಿವಾರದ, ಹನಮಂತ ಒಡ್ಡೊಡಗಿ, ನಾರಾಯಣ ರಾಮದುರ್ಗ, ಮಹೇಶ ಶೇಬಿನಕಟ್ಟಿ, ಬಸವರಾಜ ಒಡ್ಡೊಡಗಿ ಸೇರಿದಂತೆ ಸಮಾಜ ಬಾಂಧವರು ಇದ್ದರು.

> ಬಾದಾಮಿ ತಾಲೂಕಿನ ಬನಶಂಕರಿಯಲ್ಲಿ ನಡೆಯಲಿರುವ ಅಖಿಲ ಭಾರತ ದೇವಾಂಗ ಜಾಗೃತಿ ಸಮಾವೇಶ ಮತ್ತು ಶ್ರೀಗಳ 36ನೇ ಪಟ್ಟಾಭಿಷೇಕ ಕಾರ್ಯಕ್ರಮ ಯಶಸ್ವಿಗೊಳಿಸಲು ಸನ್ನದ್ಧರಾಗಬೇಕು. ಬೆಂಗಳೂರಿನಲ್ಲಿ ನಡೆದ ಬೃಹತ್ ಸಮಾವೇಶದ ಮಾದರಿಯಲ್ಲಿಯೇ ಈ ಕಾರ್ಯಕ್ರಮ ಸಹ ಹಮ್ಮಿಕೊಂಡು ಕಾಯಕ್ರಮ ಯಶಸ್ವಿಗೊಳಿಸಿರಿ.
> ■ ರವೀಂದ್ರ ಕಲಬುರ್ಗಿ, ರಾಜ್ಯ ದೇವಾಂಗ ಸಂಘದ ಅಧ್ಯಕ್ಷರು



ಮಕ್ಕಳಿಗೆ ತಂದೆ-ತಾಯಿಗಳೇ ಮಾದರಿಯಾಗಲಿ: ಸಿದ್ಧಲಿಂಗ ದೇವರು

ಜಮಖಂಡಿ: ತಂದೆ-ತಾಯಿಗಳು ತಮ್ಮ ಮಕ್ಕಳಿಗೆ ಸಂಸ್ಕಾರ ನೀಡಬೇಕು. ಸಂಸ್ಕಾರವಂತ ಮಕ್ಕಳು ವಿನಯಶೀಲರಾಗಿ ಶಿಕ್ಷಣ ಪಡೆಯುತ್ತಾರೆ. ಆ ನಿಟ್ಟಿನಲ್ಲಿ ಮಕ್ಕಳಿಗೆ ತಂದೆ-ತಾಯಿಗಳೇ ಮಾದರಿಯಾಗಬೇಕು ಎಂದು ಜಕನೂರ-ಕುಂಚನೂರ ಗ್ರಾಮಗಳ ಕಮರಿಮಠದ ಸಿದ್ಧಲಿಂಗದೇವರು ಸ್ವಾಮಿಗಳು ಹೇಳಿದರು.

ತಾಲೂಕಿನ ಹುಲ್ಯಾಳ ಗುರುದೇವಾಶ್ರಮದ ಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳ 4ನೇ ಭಾನುವಾರ ಹಮ್ಮಿಕೊಳ್ಳುವ ಗುರುದೇವ ಸತ್ಸಂಗ ಮಾ.22ರ ಮಾಸಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಸಮಾಜ ನಿರ್ಮಾಣದಲ್ಲಿ ಯುವಕರ ಪಾತ್ರ ಕುರಿತು ಮಾತನಾಡಿದ ಅವರು, ಭಗವಂತ ಕೊಟ್ಟಿರುವ ಶರೀರ ಸದೃಢವಾಗಿದ್ದರೆ ಮಾತ್ರ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸಬಹುದು. ಅದಕ್ಕಾಗಿ ಪೂಜ್ಯರ ಸಾನ್ನಿಧ್ಯದಲ್ಲಿದ್ದು ಉತ್ತಮ ನಾಗರಿಕರಾಗಿ ರೂಪಗೊಳ್ಳಬೇಕು. ಉತ್ತಮ ನಾಗರಿಕರಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಆಶೀರ್ವಚನ ನೀಡಿದರು.



ಗುರುದೇವಾಶ್ರಮದ ಹರ್ಷಾನಂದ ಸ್ವಾಮಿಗಳು ನೇತೃತ್ವ ವಹಿಸಿ, ಸಿದ್ದಾಪುರ ಅಡವಿ ಸಿದ್ದೇಶ್ವರ ಮಠದ ಮಾತೋಶ್ರೀ ಅಕ್ಕಮಹಾದೇವಿತಾಯಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಸತ್ಸಂಗದ ಮಹಾಪ್ರಸಾದದ ದಾಸೋಹ ಸೇವೆಗೈದ ಡಾ.ಟಿ.ಪಿ.ಗಿರಡ್ಡಿ ಗಿರಡ್ಡಿ ದಂಪತಿಯನ್ನು ಸನ್ಮಾನಿಸಲಾಯಿತು. ಗುರುಬಸಗೌಡ ಪಾಟೀಲ, ಪರಮೇಶ್ವರ ತೇಲಿ, ರಾಮಚಂದ್ರ ಹೂಗಾರ, ಸಿದ್ದು ಉಪ್ಪಲದಿನ್ನಿ ಸಂಗೀತ ಸೇವೆ ಸಲ್ಲಿಸಿದರು. ನಿವೃತ್ತ ಶಿಕ್ಷಕ ಗುರುನಾಥ ಸುತಾರ ಸ್ವಾಗತಿಸಿದರು. ಪೃಥ್ವಿರಾಜ ಹೊನಗೌಡ ನಿರೂಪಿಸಿದರು.

ಗುರುದೇವಾಶ್ರಮದ ಸದ್ಭಕ್ತ ಹಿಪ್ಪರಗಿ ಗ್ರಾಮದ ಗುರುಬಸಗೌಡ ಪಾಟೀಲ ಅವರ ಪುತ್ರನ ವಿವಾಹ ಹಿಪ್ಪರಗಿಯಲ್ಲಿ ಎ.14ರಂದು ನೆರವೇರಲಿದ್ದು, ಅದೇ ವಿವಾಹದಲ್ಲಿ 4, 5 ಜೋಡಿ ವಧು-ವರರ ವಿವಾಹವನ್ನು ಉಚಿತವಾಗಿ ನೆರವೇರಿಸಲು ನಿಶ್ಚಯಿಸಿದ್ದಾರೆ. ತಾಳಿ, ಎರಡು ಗುಂಡು, ಒಂದು ಜೊತೆ ವಧು-ವರರ ಬಟ್ಟೆ, ಉಚಿತವಾಗಿ ನೀಡಲಿದ್ದಾರೆ. ಇಚ್ಛಿಸುವವರು ಮೊ.9591074767, 9986233521 ಸಂಪರ್ಕಿಸಬಹುದು ಎಂದು ಹರ್ಷಾನಂದ ಸ್ವಾಮಿಗಳು ತಿಳಿಸಿದ್ದಾರೆ.

ಲೋಕಾಪುರ ನೂತನ ತಾಲೂಕಿಗೆ ಆಗ್ರಹ

ಲೋಕಾಪುರ: ಪಟ್ಟಣದ ಹಿರಿಯ ನಾಗರಿಕರ ವೇದಿಕೆ ವತಿಯಿಂದ ಜಮಖಂಡಿ ಉಪವಿಭಾಗಾಧಿಕಾರಿ ಶ್ವೇತಾ ಬೀಡಿಕರ ಅವರಿಗೆ ಲೋಕಾಪುರ ನೂತನ ತಾಲೂಕು ಕೇಂದ್ರವನ್ನಾಗಿ ಮಾಡಲು ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿದ ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ಬಸನಗೌಡ ಪಾಟೀಲ ಮಾತನಾಡಿ, ಲೋಕಾಪುರ ತಾಲೂಕು 40,723 ಹೆಕ್ಟರ್ ಭೌಗೋಳಿಕ ಕ್ಷೇತ್ರ ಹೊಂದಿದ್ದು, 2011ರ ಜನಗಣತಿ ಪ್ರಕಾರ 83,294 ಜನಸಂಖ್ಯೆ ಹೊಂದಿದೆ. ನಿಯೋಜಿತ ಲೋಕಾಪುರ ತಾಲೂಕು ಒಂದು ಪಟ್ಟಣ ಪಂಚಾಯತಿ ಹಾಗೂ 10 ಗ್ರಾಮ ಪಂಚಾಯತಿಗಳನ್ನು ಹೊಂದಿದೆ ಎಂದು ತಿಳಿಸಿದರು.

ಹಿರಿಯ ಮುಖಂಡ ಎಂ.ಎಂ.ವಿರಕ್ತಮಠ ಮಾತನಾಡಿ, ಡಿ.29, 2025ರಂದು ಲೋಕಾಪುರ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿ ಮಾಡುವ ಕುರಿತು ಹಿರಿಯ ನಾಗರಿಕರ ಸೇವಾ ಸಂಘ ಸದಸ್ಯರು ಹಾಗೂ ಲೋಕಾಪುರದ ನಾಗರಿಕರು ತಮಗೆ ಅವಶ್ಯಕ ಮಾಹಿತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿದ್ದೇವು ಎಂದು ತಿಳಸಿದರು.

ಲೋಕಾಪುರ ತಾಲೂಕಿಗೆ ಸೇರ ಬಯಸುವ ಎಲ್ಲ ಪಂಚಾಯತಿಗಳ ಒಪ್ಪಿಗೆ ಸೂಚಿಸುವ ಠರಾವು ಪ್ರತಿಗಳು ಆವಶ್ಯಕ ಮಾಹಿತಿ ವಿಚಾರ ಪ್ರಸ್ತಾಪ ಮಾಡ್ಡಿದ್ದೀರಿ. ಕಾರಣ ಈಗ ಲೋಕಾಪುರ ತಾಲೂಕಿನಲ್ಲಿ ಸೇರ್ಪಡೆಯಾಗಲಿರುವ ಲೋಕಾಪುರ ಪಪಂ ಹಾಗೂ ಲಕ್ಷಾನಟ್ಟಿ, ದಾದನಟ್ಟಿ, ಭಂಟನೂರ, ಹೆಬ್ಬಾಳ, ಮೆಟಗುಡ್ಡ, ಕಸಬಾಜಂಬಗಿ, ಖಜ್ಜಿಕೋಣಿ, ಅನವಾಲ, ಕೈನಕಟ್ಟಿ, ನೀರಬೂದಿಹಾಳ ಗ್ರಾಪಂಗಳು ಲೋಕಾಪುರ ತಾಲೂಕಿಗೆ ಸೇರ್ಪಡೆಯಾಗಲು ಒಪ್ಪಿಗೆ ಸೂಚಿಸುವ ಠರಾವು ಪ್ರತಿಗಳನ್ನು ಈ ಮೂಲಕ ತಮಗೆ ಸಲ್ಲಿಸುತ್ತಿದ್ದೇವೆ ಎಂದರು.



ಮನವಿ ಸ್ವೀಕರಿಸಿ ಮಾತನಾಡಿದ ಉಪವಿಭಾಗಾಧಿಕಾರಿ, ಶೀಘ್ರದಲ್ಲಿ ತಮ್ಮ ವರದಿಯೊಂದಿಗೆ ಸರ್ಕಾರಕ್ಕೆ ಲೋಕಾಪುರ ಪಟ್ಟಣವನ್ನು ತಾಲೂಕಿಗೆ ಮಾಡುವ ಕುರಿತು ಪ್ರಸ್ತಾವಣೆ ಸಲ್ಲಿಸುವುದಾಗಿ ಭರವಸೆ ನೀಡಿದರು.

ಗಣಿ ಉದ್ಯಮಿ ರವಿ ಬೋಳಿಶೆಟ್ಟಿ, ವಿ.ಬಿ.ಮಾಳಿ, ಸಿ.ಎಂ.ಪಾಟೀಲ, ಸದಾಶಿವ ಹಗ್ಗದ, ಹಣಮಂತಗೌಡ ಪಾಟೀಲ, ದೇವಣ್ಣಾ ದಾಸರಡ್ಡಿ, ಭೀಮಣ್ಣಾ ಹುಣಶಿಕಟ್ಟಿ, ಕೃಷ್ಣಗೌಡ ಪಾಟೀಲ ಇನ್ನಿತರರು ಇದ್ದರು.

ಪ್ರೇಕ್ಷಕರನ್ನು ರಂಜಿಸಿದ ಚೈತ್ರ ನಿನಾದ



ಬಾದಾಮಿ: ಇಲ್ಲಿನ ಸಿರಿಗಂಧ ಸಂಸ್ಕೃತಿ ಬಳಗವು ಯುಗಾದಿ ಪ್ರಯುಕ್ತ ಶಿವಯೋಗ ಮಂದಿರ ಶಾಖಾಮಠದ ಆವರಣದಲ್ಲಿ ಏರ್ಪಡಿಸಿದ್ದ ಚೈತ್ರ ನಿನಾದ ಕಾರ್ಯಕ್ರಮ ಪ್ರೇಕ್ಷಕರನ್ನು ರಂಜಿಸಿತು.

ಬಾಗಲಕೋಟೆ ಯುವ ಗಾಯಕ ಜಯತೀರ್ಥ ತಾಸಗಾಂವ ಪ್ರೇಕ್ಷಕರಿಗೆ ಸಂಗೀತದ ರಸದೌತಣ ನೀಡಿದರು. ರಾಗ ಬಸಂತದೊಂದಿಗೆ ಕಾರ್ಯಕ್ರಮ ಪ್ರಾರಂಭಿಸಿದ ಅವರು 'ಗುರುವಿಗೆ ತನುವನ್ನು ಲಿಂಗಕ್ಕೆ ಮನವನ್ನು' 'ಸಮಾಧಾನವಾಗಿರು ಮನವೇ' ಸಿದ್ದಯ್ಯ ಪುರಾಣಿಕ ಅವರ ಓದಿ ಬ್ರಾಹ್ಮಣನಾಗು' ಕನಕದಾಸರ 'ತೊರೆದು ಜೀವಿಸಬಹುದೇ' ಮತ್ತು 'ನನ್ನವ್ವ ಕಲ್ಲ ಬಿಡೆ' ಗೀತೆಗಳನ್ನು ಹಾಡಿ ಪ್ರೇಕ್ಷಕರ ಮನ ತಣಿಸಿದರು. ಅವರಿಗೆ ಪ್ರಸಾದ್ ಕುಲಕರ್ಣಿ ತಬಲಾ ಸಾಥ್ ಮತ್ತು ಚಂದ್ರಶೇಖರ್ ಆಲೂರ್, ಹಾರ್ಮೋನಿಯಂ ಸಾಥ್ ನೀಡಿದರು. ಲಕ್ಷ್ಮೀ ಕುಲಕರ್ಣಿ ಮತ್ತು ವೈಷ್ಣವಿ ಜಾಡಗೌಡ ಭರತನಾಟ್ಯವು ಸಹ ನೆರೆದ ಪ್ರೇಕ್ಷಕರನ್ನು ಸಂತಸಗೊಳಿಸಿತು.

ಬಳಗದ ಅಧ್ಯಕ್ಷ ಜೆ.ದಾಜೀಬಾ ಮಾತನಾಡಿದರು. ಗೌರವಾಧ್ಯಕ್ಷ ಡಿ.ಎಂ.ಪೈಲ್, ಅಶೋಕ ನಾಗರಾಣ, ಎಸ್.ಎ.ಭರಮಗೌಡರ, ಶಾರದಾ ಪಾಟೀಲ, ಅನುಸೂಯಾ ಹೊಸಮನೆ, ಡಾ.ಪ್ರಿಯದರ್ಶಿನಿ ಉಗಲವಾಟ, ವಿ.ಬಿ.ಪದಸಾಲಿಮನಿ, ಎ.ಎಸ್. ವಸ್ತ್ರದ, ಎಸ್.ಎಂ.ಹಿರೇಮಠ, ದೇವೇಂದ್ರ ಬಡಿಗೇರ, ಭಾಗ್ಯಾ ಹಡಗಲಿ, ಸುರೇಶ ಆರಳಿಮರ, ಜಯಶ್ರೀ ಆಲೂರ ಉಪಸ್ಥಿತರಿದ್ದರು.

ಮುಸ್ಲಿಂ ವೃದ್ಧ ದಂಪತಿಗೆ ಮನೆ ಭಾಗ್ಯ

ಕೆರೂರ: ಪಟ್ಟಣದ ಕಿಲ್ಲಾ ಪೇಟೆಯಲ್ಲಿ ತಗಡಿನ ಪುಟ್ಟ ಶೆಡ್‌ನಲ್ಲಿ ವಾಸಿಸುತ್ತಿದ್ದ ಮಕ್ಕಳಿಲ್ಲದ ಮುಸ್ಲಿಂ ದಂಪತಿಗಳಿಗೆ ಖ್ಯಾತ ವೈದ್ಯರು, ಜಿಪಂ ಮಾಜಿ ಸದಸ್ಯರಾದ ಡಾ.ಎಂ.ಜಿ.ಕಿತ್ತಲಿ ಅವರ 55ನೇ ಜನ್ಮದಿನದ ಅಂಗವಾಗಿ ಅಭಿಮಾನಿ ಬಳಗದವರು ಮನೆ ನಿರ್ಮಿಸಿ ಕೊಟ್ಟಿದ್ದಾರೆ. ದಂಪತಿಗಳಾದ ಮಹೆಬೂಬಸಾಬ ಮುಲ್ಲಾ ಹಾಗೂ ಶಾಬೇರಾ ಮುಲ್ಲಾ ದಂಪತಿಗಳಿಗೆ ಮಕ್ಕಳಿಲ್ಲ, ಕೂಲಿ ನಾಲಿ ಮಾಡಿ ಜೀವನ ನಡೆಸುವುದು ಕಷ್ಟವಾಗಿತ್ತು.

ತಗಡಿನ ಶೆಡ್‌ನಲ್ಲಿ ವಾಸುತ್ತಿದ್ದರು ವೃದ್ಧ ದಂಪತಿಗಳು ರಂಜನ್ ಉಪವಾಸವನ್ನು ಪ್ರತಿದಿನ ತಪ್ಪದೆ ಆಚರಿಸುತ್ತಾ ಬಂದಿದ್ದಾರೆ. ಅಲ್ಲಾಹನು ಅವರ ನಿಲ್ಕಲ್ಮಶ ಭಕ್ತಿಗೆ ಮೆಚ್ಚಿ ಪವಿತ್ರ ಈ ರಂಜಾನ ತಿಂಗಳಲ್ಲಿ ಅವರಿಗೆ ಉಡುಗೊರೆಯಾಗಿ ನೀಡಿದ್ದಾನೆ ಎನ್ನುತ್ತಾರೆ ಸ್ಥಳೀಯರು. ಹಬ್ಬವನ್ನು ಹೊಸ ಮನೆಯಲ್ಲಿ ವೃದ್ಧ ದಂಪತಿಗಳು ಆಚರಿಸಲೆಂದು ಹಬ್ಬದ ಉಡುಗೊರೆಯಾಗಿ ಡಾ.ಎಂ.ಜಿ.ಕಿತ್ತಲಿ ಅಭಿಮಾನಿ ಬಳಗದವರು ನೀಡಿದ್ದಾರೆ.

ವೃದ್ಧ ದಂಪತಿಗಳ ಕಷ್ಟಕ್ಕೆ ಅಭಿಮಾನಿ ಬಳಗ ಆಸರೆಯಾಗಿದೆ. ಮಕ್ಕಳಿಲ್ಲದ ನಮಗೆ ಮನೆ ನಿರ್ಮಾಸಿ ಕೊಟ್ಟ ಡಾ.ಎಂ.ಜಿ.ಕಿತ್ತಲಿ ಅಭಿಮಾನಿ ಬಳಗದವರು ಅಲ್ಲಾಹುವಿನ ರೂಪದಲ್ಲಿ ನಮ್ಮ ಬದುಕಿಗೆ ದೇವರಾಗಿದ್ದಾರೆ ಎಂದು ಮಹೆಬೂಬಸಾಬ ಮುಲ್ಲಾ, ಶಾಬೇರಾ ಮುಲ್ಲಾ ಎಂದು ಹೇಳಿದರು.



ಸಂಭ್ರಮದ ಗೌರಿಹಬ್ಬ ಆಚರಣೆ



ಗುಳೇದಗುಡ್ಡ: ಪಟ್ಟಣದ ಮಾರವಾಡಿ ಸಮಾಜದ ಮಾಹೇಶ್ವರಿ ಮಹಿಳಾ ಮಂಡಳ ಹಾಗೂ ಸಖಿ ಮಹಿಳಾ ಮಂಡಳದ ವತಿಯಿಂದ ಪಟ್ಟಣದಲ್ಲಿ ಗೌರಿಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಸ್ಥಳೀಯ ಜಗದೀಶ ದೇವಸ್ಥಾನದಿಂದ ಮಹಿಳೆಯರು ಈಶ್ವರಿಜಿ, ಗೌರಿ ಮೂರ್ತಿಯನ್ನು ತಲೆಯ ಮೇಲೆ ಹೊತ್ತುಕೊಂಡು ವಾದ್ಯಮೇಳಗಳೊಂದಿಗೆ ಮೆರವಣಿಗೆ ಹೊರಟು ಆರಳಿಕಟ್ಟಿ, ಚೌಬಜಾರ, ಗಚ್ಚಿನಕಟ್ಟಿ, ಕಂಠಿಪೇಟೆ, ಸರಾಫ್ ಬಜಾರ, ಕಾಬ್ರಾ ಗಲ್ಲಿಯ ಮೂಲಕ ಹಾಯ್ದು ಮರಳಿ ದೇವಸ್ಥಾನಕ್ಕೆ ತಲುಪಿತು. ಇದಕ್ಕೂ ಮೊದಲು ಹದಿನೈದು ದಿನಗಳ ವರೆಗೆ ಮನೆಗಳಲ್ಲಿ ಈಶ್ವರಜಿ, ಗೌರಿಯ ಪೂಜೆ ನಡೆಯಿತು.

ಮಾಹೇಶ್ವರಿ ಮಹಿಳಾ ಮಂಡಳದ ಅಧ್ಯಕ್ಷೆ ಲತಾ ತಾಪಡಿಯಾ, ಸಂಗೀತಾ ಜಾಜು, ಸುನೀತಾ ರಾಠಿ, ದುರ್ಗಾ ಜಾಜು, ಸೀಮಾ ಚಂಡಕ್, ಶೀತಲ್ ಭಟ್ಟಡ, ಶಶಿ ಬಜಾಜ್, ವಂದನಾ ಭಟ್ಟಡ, ಪ್ರಮಿಳಾ ಮನಿಯಾರ, ಚಂದ್ರಕಲಾ ಸೋನಿ, ವರ್ಷಾ ಸೋನಿ, ವಸಂತಿ ಮಾಲಪಾಣಿ, ಮೋನಿಬಾಯಿ ಭಟ್ಟಡ, ಚಂಪಾಬಾಯಿ ಕಾಬ್ರಾ, ಲಲಿತಾ ಇನಾನಿ, ನೀತಾ ಇನಾನಿ, ಅತು ಚಂಡಕ್, ನಿರ್ಮಲಾ ಬರಗುಂಡಿ, ಜಯಶ್ರೀ ಬರಗುಂಡಿ ಮತ್ತಿತರು ಇದ್ದರು.

ರಂಜಾನ್: ಸಾಮೂಹಿಕ ಪ್ರಾರ್ಥನೆ

ಗುಳೇದಗುಡ್ಡ: ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ಮುಸ್ಲಿಂ ಬಾಂಧವರು ಇಲ್ಲಿನ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಒಬ್ಬರಿಗೊಬ್ಬರು ರಂಜಾನ್ ಹಬ್ಬದ ಶುಭಾಶಯ ವಿನಮಯ ಮಾಡಿಕೊಂಡರು. ಮಾತನಾಡಿದ ಅಂಜುಮನ್ ಎ ಇಸ್ಲಾಂ ಕಮಿಟಿ ಅಧ್ಯಕ್ಷ ಅಬ್ದುಲರಜಾಕ್ ಕುದರಿ, ಒಂದು ತಿಂಗಳ ಪರ್ಯಂತ ಉಪವಾಸ ಮಾಡಿ ದೇವರ ಸ್ಮರಣೆ ಮಾಡುವ ಮೂಲಕ ದೇವರ ಪ್ರೀತಿಗೆ ಪಾತ್ರವಾಗುವ ರಂಜಾನ್ ಹಬ್ಬ, ದೇವರ ಚಿಂತನೆ, ದೇವರ ಸ್ಮರಣೆ ಜೊತೆಗೆ ನನ್ನ ಜವಾಬ್ದಾರಿ ಏನು, ಸಮಾಜದ ಜವಾಬ್ದಾರಿ ಏನೆಂದು ತಿಳಿದುಕೊಂಡು ಎಲ್ಲರೊಂದಿಗೆ ಪ್ರೀತಿ ವಿಶ್ವಾಸ ಬೆಳಸಿಕೊಂಡು ಹೋಗುವ ವಿಚಾರ ಮಾಡುವುದು ಪ್ರಾರ್ಥನೆಯ ಉದ್ದೇಶವಾಗಿದೆ ಎಂದರು. ಹಾಪೀಸ್ ಸಿಕಂದರ್ ಕಡ್ಲಿಮಟ್ಟಿ, ಹಾಪೀಸ್ ಹಸನಸಾಬ ಮುದಗಲ್ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಅಂಜುಮನ್ ಕಮಿಟಿ ಉಪಾಧ್ಯಕ್ಷ ಸಲೀಮ ಇಲಕಲ್, ಮಹಿಬೂಬ ಮುದ್ದೇಬಿಹಾಳ, ಕೆ.ಆರ್. ರಾಯಚೂರ, ಜಮೀರ ಮೌಲ್ವಿ, ರಫೀಕ ಕಲ್ಬುಗಿ, ರಮಜಾನ್‌ಸಾಬ ಮಕಾನದಾರ, ದಾವಲ ಬಾಗವಾನ, ಕಲೀಲ ಕೊತ್ತಲ, ಸಮೀರ ಡಾಲಯತ್, ಮಹಿಬೂಬ ಸವರಾಜ, ಮಹಿಬೂಬ ಹಣಗಿ, ಅನ್ವರ ಮುದಗಲ, ದಾದಾಪೀರ ಕಲಾದಗಿ, ಅಹ್ಮದ ಅಮೀನಗಡ, ಸಲೀಮ ಮೋಮಿನ, ಗೌಸ ಬಾಗವಾನ, ಗಫಾರ ಯಾಳಗಿ, ಅಬ್ದುಲ್‌ಕರೀಮ್ ಬಾಗವಾನ, ಅಬ್ದುಲ್ ಕಂಠಿಗೌಡರ, ಎಂ.ಎಂ. ಜಮಖಾನಿ, ಅನ್ವರಖಾನ ಪಠಾಣ, ಹಾಜಿ ಎಮ್. ಎಮ್. ಮಕನಾದಾರ, ಮಹಿಬೂಬ ಫಣಿಬಂದ, ಅಬ್ದುಲಸಾಬ ರಾಯಚೂರ, ಮಹಿಬೂಬ ಕಂಟ್ರಾಕ್ಟರ್, ಆಸೀಫ್ ಬಲಕುಂದಿ ಉಪಸ್ಥಿತರಿದ್ದರು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
18

ಕಿರುಸುದ್ದಿ

ಕೆರೆಗಳ ಭರ್ತಿಗೆ ನೀರು ಬಿಡಲು ಆಗ್ರಹಿಸಿ ಮನವಿ



ಆಲಮಟ್ಟಿ: ನೀರಾವರಿಗಾಗಿ ಕಾಲುವೆಗಳಿಗೆ ಏಪ್ರಿಲ್ ಅಂತ್ಯದವರೆಗೂ ನೀರು ಹರಿಸಬೇಕು. ವಿಜಯಪುರ ಜಿಲ್ಲೆಯ ಕೆರೆಗಳ ಭರ್ತಿಗಾಗಿ ಮೇ ಅಂತ್ಯದವರೆಗೂ ನೀರು ಹರಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರೈತ ಸಂಘ ಮತ್ತು ಹಸಿರು ಸೇನೆಯ ಕಾರ್ಯಕರ್ತರು ಸೋಮವಾರ ಆಗ್ರಹಿಸಿದರು.

ಇಲ್ಲಿನ ಕೆಬಿಜೆಎನ್‌ಎಲ್ ಮುಖ್ಯ ಎಂಜಿನಿಯರ್ ಡಿ.ಬಸವರಾಜ ಅವರಿಗೆ ಮನವಿ ಅರ್ಪಿಸಿ ನೀರು ಬಿಡುವಂತೆ ಮನವಿ ಮಾಡಿದರು. ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ನಿಂಗರಾಜ ಆಲೂರ, ತಾಲೂಕು ಘಟಕದ ಅಧ್ಯಕ್ಷ ಸೀತಪ್ಪ ಗಣಿ ಮಾತನಾಡಿ, ಕುಡಿಯುವ ನೀರಿನ ಉದ್ದೇಶಕ್ಕಾಗಿ ಜಿಲ್ಲೆಯ ಕೆರೆಗಳ ಭರ್ತಿಗಾಗಿ ಮೇ ತಿಂಗಳಾದ್ಯಂತ ಕಾಲುವೆಗಳಿಂದ ಕೆರೆಗಳಿಗೆ ನೀರು ಹರಿಸಬೇಕು, ಅದೇ ರೀತಿ ಶೇಂಗಾ, ಉಳ್ಳಾಗಡ್ಡಿ, ಮೆಕ್ಕೆಜೋಳಕ್ಕೆ ನೀರಿನ ಅಗತ್ಯವಿದೆ ಎಂದರು.ರೈತರ ಸಮಸ್ಯೆಯ ಬೇಡಿಕೆಯ ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ಮುಖ್ಯ ಎಂಜಿನಿಯರ್ ಡಿ. ಬಸವರಾಜ, ಮೇ ತಿಂಗಳಲ್ಲಿ ಕೆರೆಗಳ ಭರ್ತಿಗಾಗಿ ನೀರು ಹರಿಸಲಾಗುತ್ತದೆ ಎಂದು ಭರವಸೆ ನೀಡಿದರು. ಶಿವಪ್ಪ ಪಾಟೀಲ, ಹೊನ್ನಪ್ಪ ಕೆಂಗುತ್ತಿ, ಲಕ್ಷ್ಮಣ ಚಲವಾದಿ, ಈರಯ್ಯ ಹಿರೇಮಠ, ಶಿವಾನಂದ ಚಲವಾದಿ ಮತ್ತಿತರರು ಇದ್ದರು.

ಇಂದಿನಿಂದ ಎನ್‌ಎಸ್ ಎಸ್ ವಾರ್ಷಿಕ ಶಿಬಿರ

ಬಸವನಬಾಗೇವಾಡಿ: ಕಾಲೇಜು ಶಿಕ್ಷಣ ಇಲಾಖೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಾಣಿ ಚನ್ನಮ್ಮ ವಿವಿ ಬೆಳಗಾವಿ ಇವರ ಸಹಯೋಗದಲ್ಲಿ ಎನ್‌ಎಸ್‌ಎಸ್ ವಾರ್ಷಿಕ ಶಿಬಿರ 2025–26ನೇ ಸಾಲಿನ ನನ್ನ ಭಾರತಕ್ಕಾಗಿ ಯುವಕರು ಎಂಬ ವಿಶೇಷ ಕಾರ್ಯಕ್ರಮ ಮಾ.24ರಿಂದ ಮಾ.30ರ ವರೆಗೆ ತಾಲೂಕಿನ ಇವಣಗಿ ಗ್ರಾಮದಲ್ಲಿ ನಡೆಯಲಿದೆ. ಮಾ.24ರಂದು ಸಂಜೆ 4.30ಕ್ಕೆ ಸಚಿವ ಶಿವಾನಂದ ಪಾಟೀಲ ಶಿಬಿರವನ್ನು ಉದ್ಘಾಟಿಸುವರು, ಮಾ.25ರಂದು ನಶೆ ಮುಕ್ತ ಭಾರತ ವಿಶೇಷ ಕಾರ್ಯಕ್ರಮ ಸೇರಿದಂತೆ ವಿವಿಧ ನಡೆಯಲಿದೆ. ವಿಶೇಷ ಕಾರ್ಯಕ್ರಮ ಜರುಗಲಿವೆ ಎಂದು ಕಾಲೇಜು ಪ್ರಾಚಾರ್ಯ ಡಾ.ಎನ್. ಬಿ. ಹೊಸಮನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲವ್ ಜಿಹಾದ್: ಕ್ರಮ ಕೈಗೊಳ್ಳಿ

ವಿಜಯಪುರ: ನಗರದ ಶಾಲಾ, ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿನಿಯರನ್ನು ಕೆಲ ಕಾಮುಕ ರೌಡಿ, ರೋಡ್ ರೋಮಿಯೋಗಳು ಹಿಂಬಾಲಿಸುವುದು, ಒತ್ತಾಯದಿಂದ ಫೋನ್ ನಂಬರ್‌ಗಳನ್ನು ತೆಗೆದುಕೊಳ್ಳುವುದು, ಪ್ರತಿನಿತ್ಯ ಹೀಗೆ ವಿದ್ಯಾರ್ಥಿನಿಯರನ್ನು ಚುಡಾಯಿಸುತ್ತಿರುವ ಇಂತಹವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಲವ್‌ಜಿಹಾದ್‌ನಂತಹ ಪ್ರಕರಣಗಳನ್ನು ತಪ್ಪಿಸಬೇಕು ಎಂದು ಸ್ವಾಮಿ ವಿವೇಕಾನಂದ ಸೇನೆ ರಾಜ್ಯಾಧ್ಯಕ್ಷ ರಾಘವ್ ಅಣ್ಣಿಗೇರಿ ಒತ್ತಾಯಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿದ ಅವರು, ಜಿಲ್ಲಾ ಪೊಲೀಸ್ ಇಲಾಖೆ ಅತ್ಯುತ್ತಮ ಕಾರ್ಯ ಮಾಡುತ್ತಿದ್ದು, ಈಗಾಗಲೇ ದರೋಡೆಕೋರರು, ಕಳ್ಳರು, ಸಮಾಜಘಾತಕರು ಮೇಲೆ ಕ್ರಮ ಕೈಗೊಳ್ಳುವದರ ಜೊತೆಗೆ ಜನತೆಗೆ ಕಿರಿಕಿರಿ ಉಂಟುಮಾಡುವ ವಾಹನಗಳ ಸೈಲೆನ್ಸರ್‌ಗಳನ್ನು ವಶಪಡಿಸಿಕೊಂಡು, ನಾಶಪಡಿಸಿ ಕೇಸ್ ದಾಖಲಿಸಿ, ಸಾರ್ವಜನಿಕ ಸ್ಥಳಗಳಲ್ಲಿ ಅನೈತಿಕ ಚಟುವಟಿಕೆ ಮಾಡುವವರು, ಮಧ್ಯಪಾನ ಮಾಡುವವರ ಮೇಲೆ ಕ್ರಮ ಕೈಗೊಂಡಿದ್ದು ಸ್ವಾಗತಾರ್ಹ. ಇನ್ನೊಂದು ಸೂಕ್ಷ್ಮ ಗಂಭೀರ ವಿಷಯವಾಗಿರುವ ವಿದ್ಯಾರ್ಥಿನಿಯರನ್ನು ಚುಡಾಯಿಸುವ ಕಾಮುಕರ ವಿರುದ್ಧ ಕ್ರಮ ಕೈಗೊಳ್ಳಬೇಕಿದೆ. ಇಂತಹ ಘಟನೆಗಳಿಂದ ಕೆಲ ವಿದ್ಯಾರ್ಥಿನಿಯರು ಅನೇಕ ತೊಂದರೆಗಳಾಗಿ ಲೈಂಗಿಕ ಕಿರುಕುಳು ಉಂಟಾದರೂ ಕೂಡ ಪೊಲೀಸ್‌ರಿಗೆ ದೂರು ಕೊಡಲು ಜನರು ಹಿಂಜರಿಯುತ್ತಿದ್ದಾರೆ. ಲವ್ ಜಿಹಾದ್‌ನಂತಹ ಪ್ರಕರಣಗಳು ಕೂಡ ಜಾಸ್ತಿಯಾಗುತ್ತಿದ್ದು, ಹಿಂದು ಯುವತಿಯರನ್ನು ಮೋಸ ಮಾಡಿ, ಒತ್ತಡ ಹೇರಿ ವಿವಾಹ ಮಾಡಿಕೊಂಡು, ಮತಾಂತರ ಮಾಡಿದ ಪ್ರಕರಣಗಳು ಕೂಡ ಬೆಳಕಿಗೆ ಬಂದಿವೆ. ಪರೀಕ್ಷೆ ಸಮಯಗಳಲ್ಲಿಯೂ ಕೂಡ ಕೆಲ ಪುಂಡರು ತಮ್ಮ ಉಪಟಳ ಮುಂದುವರಿಸಿದ್ದಾರೆ. ಪೊಲೀಸರು ಮುಫ್ತಿಯಲ್ಲಿ ತೆರಳಿ ಇಂತಹ ಕಿಡಿಗೇಡಿಗಳನ್ನು ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಸಹಾಯವಾಣಿಗೆ ಕರೆ ಮಾಡಿ

ದೇವರಹಿಪ್ಪರಗಿ: ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ ಎಂದು ದೇವರಹಿಪ್ಪರಗಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಭಾರತಿ ಚೆಲುವಯ್ಯ ತಿಳಿಸಿದರು. ತಾಲೂಕಿನಲ್ಲಿ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುವ ಸಾಧ್ಯತೆ ಇದ್ದು ಸಾರ್ವಜನಿಕ ಹಿತದೃಷ್ಟಿಯಿಂದ ಕುಡಿಯುವ ನೀರಿನ ಸಮಸ್ಯೆಯನ್ನು ನಿಗದಿತ ಸಮಯದಲ್ಲಿ ನಿವಾರಿಸಲು ತಾಪಂ ಕಚೇರಿಯಲ್ಲಿ, ತಾಪಂ ಕಚೇರಿಗಳಲ್ಲಿ ಸಹಾಯವಾಣಿ ಕೇಂದ್ರ ಪ್ರಾರಂಭಿಸಲಾಗಿದ್ದು ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ತಾಪಂ ಇಂಡಿ ಸಹಾಯವಾಣಿ : 08424–200114 ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ, ಕುಡಿಯುವ ನೀರಿನ ಸಮಸ್ಯೆ ನಿವಾರಿಸಿಕೊಳ್ಳಬಹುದಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿಜಯಪುರ: ತಾಲೂಕಿನ ಉತ್ನಾಳ ಗ್ರಾಮದಲ್ಲಿ 99 ವರ್ಷದ ಮಾತೋಶ್ರೀ ತಂಗೆವ್ವ ನಂದಪ್ಪ ಬಾಗೇವಾಡಿ ಅವರ ಪಾದ ಪೂಜೆ ಮಾಡುವ ಮೂಲಕ ಪುತ್ರ ಬಸವರಾಜ ಬಾಗೇವಾಡಿ, ಮೊಮ್ಮಕ್ಕಳಾದ ನರೇಂದ್ರ, ನೀತಿನ ಅವರು ಯುಗಾದಿಯ ಹೊಸ ವರ್ಷ ಆಚರಣೆ ಮಾಡಿ ಸಂಭ್ರಮಿಸಿದರು.

ದೇವರಲ್ಲಿ ಭಕ್ತಿಯಿಂದ ನಡೆದರೆ ಜೀವನ ಪಾವನ

ಕೊಲ್ಹಾರ: ಪಟ್ಟಣದ ಆರಾಧ್ಯ ದೇವ ಜಗದ್ಗುರು ಶ್ರೀ ದಿಗಂಬರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಮೂರು ಲೋಕದ ಗಂಡ ಬಬಲಾದಿ ಸದಾಶಿವ ಸ್ವಾಮಿಗಳ ಪುರಾಣ ಪ್ರಾರಂಭೋತ್ಸವ ಕಾರ್ಯಕ್ರಮ ಹಾಗೂ ಯುಗಾದಿಯ ಹೊಸ ವರ್ಷಾಚರಣೆಯ ಬೇವು ಬೆಲ್ಲ ವಿತರಣೆ ಕಾರ್ಯಕ್ರಮ ಶನಿವಾರ ಸಂಜೆ ಪಟ್ಟಣದ ದಿಗಂಬರೇಶ್ವರ ಸಂಸ್ಥಾನ ಮಠದಲ್ಲಿ ಕಾರ್ಯಕ್ರಮಕ್ಕೆ ಪಟ್ಟಣ ಪಂಚಾಯಿತಿಯ ಅಧ್ಯಕ್ಷ ಚನ್ನಮಲ್ಲಪ್ಪ ಗಿಡ್ಡಪ್ಪಗೋಳ ಚಾಲನೆ ನೀಡಿದರು. ಸಾನಿಧ್ಯ ವಹಿಸಿ ದಿಗಂಬರೇಶ್ವರ ಸಂಸ್ಥಾನ ಮಠದ ಕಲ್ಲಿನಾಥ ಸ್ವಾಮಿ ಮಾತನಾಡಿ, ಮನುಷ್ಯ ಜೀವನದಲ್ಲಿ ಕಷ್ಟಗಳು ಬರುವುದು ಸಹಜ ಅವು ಪರಿಹಾರ ಆಗದಂತಹ ಸ್ಥಿತಿಯಲ್ಲಿದ್ದಾಗ ದೇವರಲ್ಲಿ ಹರಕೆ ಹೊತ್ತು ತಮಗೆ ಬಂದಿರುವ ಸಂಕಷ್ಟಗಳು ದೂರವಾದಾಗ ದೇವರ ಹರಕೆ ತೀರಿಸುವ ಸಂಪ್ರದಾಯ ಪ್ರತಿಯೊಬ್ಬರು ದೇವರಲ್ಲಿ ಭಯ ಭಕ್ತಿಯಿಂದ ನಡೆದಿದ್ದೆ ಆದರೆ ನಿಮ್ಮ ಜೀವನ ಪಾವನವಾಗಲಿದೆ. ಇಂದಿನಿಂದ ಏ.12 ರ ವರೆಗೆ ದಿಗಂಬರೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಮಠದಲ್ಲಿ ನಿರಂತರವಾಗಿ ಪುರಾಣ ಕಾರ್ಯಕ್ರಮ ನಡೆಯಲಿದೆ ಎಂದರು.ನಿವೃತ್ತ ಶಿಕ್ಷಕ ಪಡೆಪ್ಪ ನಾಗರಾಳ ಮಾತನಾಡಿ, ಜೀವನ ಪಾವನವಾಗಬೇಕಾದರೆ ಮಠ ಮಂದಿರಗಳಲ್ಲಿ ಪುರಾಣ ಪ್ರವಚನ ಸತ್ಸಂಗಗಳು ಕಾರ್ಯಕ್ರಮಗಳು ನಡೆಯಲಿ. ದಿಗಂಬರೇಶ್ವರ ಮಠದಲಿ ಪ್ರತಿ ವರ್ಷ ನಡೆಯುವ ಆಧ್ಯಾತ್ಮಿಕ ಅಮೃತ ನೀಡುವ ಪುರಾಣ ಕಾರ್ಯಕ್ರಮ ಅನ್ನದಾಸೋಹನಡೆಸುತ್ತಿರುವುದು ಬಹಳ ಶ್ಲಾಘನೀಯ ಎಂದರು. ಪಪಂ ಅಧ್ಯಕ್ಷ ಚನ್ನಮಲ್ಲಪ್ಪ ಗಿಡ್ಡಪ್ಪಗೋಳ, ಸಂಗಮೇಶ್ವರ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷ ಬಸಪ್ಪ ಗಿಡ್ಡಪ್ಪಗೋಳ, ಈರಪ್ಪ ಜಿಡ್ಡಿಲಬಾಗಿಲ, ಬಸವರಾಜ ಹಂಗರಗಿ, ಬಸವರಾಜ ಕೊಠಾರಿ, ಮಹಿಳೆಯರು ಇದ್ದರು.



ಕೊಲ್ಹಾರ: ಪಟ್ಟಣದ ಆರಾಧ್ಯ ದೇವ ಜಗದ್ಗುರು ಶ್ರೀ ದಿಗಂಬರೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಮೂರು ಲೋಕದ ಗಂಡ ಬಬಲಾದಿ ಸದಾಶಿವ ಸ್ವಾಮಿಗಳ ಪುರಾಣ ಪ್ರಾರಂಭೋತ್ಸವ ಕಾರ್ಯಕ್ರಮ ಹಾಗೂ ಯುಗಾದಿಯ ಹೊಸ ವರ್ಷಾಚರಣೆಯ ಬೇವು ಬೆಲ್ಲ ವಿತರಣೆ ಕಾರ್ಯಕ್ರಮ ನಡೆಯಿತು.

ರೈತರ ಮನವೊಲಿಸಿದ ಜಿಲ್ಲಾಧಿಕಾರಿ

ಕಾಲುವೆಗೆ ನೀರು ಹರಿಸಲು ಆಗ್ರಹಿಸಿ ಪ್ರತಿಭಟನೆ

ಝಳಕಿ : ವಿಜಯಪುರ ಜಿಲ್ಲೆಯ ನಾಗಠಾಣ ಮತಕ್ಷೇತ್ರದ ಚಡಚಣ ತಾಲೂಕಿನ ಕಡೆಯ ಭಾಗದ ರೈತರಿಗೆ ನಾರಾಯಣಪುರ ಎಡದಂಡೆ ಕಾಲುವೆ ಮುಖಾಂತರ ನೀರು ಹರಿಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಝಳಕಿ ಸಹಾಯಕ ಕಾರ್ಯಪಾಲಕ ಅಭಿಯಂತರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಅಧ್ಯಕ್ಷ ಸಂಗಮೇಶ ಸಗರ ಮಾತನಾಡಿ, ಜಿಲ್ಲೆಯ ನಾಗಠಾಣ ಮತಕ್ಷೇತ್ರದ ಚಡಚಣ ತಾಲೂಕಿನ ನಾರಾಯಣಪುರ ಎಡದಂಡೆ ಕಾಲುವೆ ಡಿಸ್ಟ್ರಿಬ್ಯೂಟರ್ 35 ರಿಂದ 47ರವರಿಗೆ ಕಾಲುವೆ ಮೂಲಕ ದಸೂರ ಗ್ರಾಮದ ಕೊನೆಯವರೆಗೂ ನೀರು ಹರಿಸಬೇಕು. ಏ. 12ರ ನಂತರ ನೀರು ಬಿಡದೇ ಹೋದರೆ ಉಗ್ರ ಹೋರಾಟ ಮಾಡಲಾಗುವುದು ಎಚ್ಚರಿಕೆ ನೀಡಿದರು.

ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ರಾಜ್ಯ ಉಪಾಧ್ಯಕ್ಷ ನಾಗನಾಥಗೌಡ ಬಿರಾದಾರ ಮಾತನಾಡಿ, ಇಂಡಿ ತಾಲೂಕಿನ ರೈತರಿಗೆ ಯಾವುದೇ ರೀತಿಯ ನೀರಿನ ಸಮಸ್ಯೆ ಎದುರಾಗಿಲ್ಲ, ಚಡಚಣ ತಾಲೂಕಿನ ನಾಗಠಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಡಿಸ್ಟ್ರಿಬ್ಯೂಟರ್ 35 ರಿಂದ 47ರಂದು ಕೊನೆಯ ಭಾಗದ ರೈತರಿಗೆ ಕಾಲುವೆ ನೀರು ಹರಿಸುವಲ್ಲಿ ಅಧಿಕಾರಿಗಳು ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ. ನಾಗಠಾಣ ಮತಕ್ಷೇತ್ರದ ಶಾಸಕರು ಮತ್ತು ಚಡಚಣ ತಾಲೂಕು ಆಡಳಿತ ರೈತರಿಗೆ ಕಾಲುವೆ ನೀರಿನ ಪರಿಹಾರ ಬಗೆಹರಿಸುವಲ್ಲಿ ಮುಂದಾಗುತ್ತಿಲ್ಲ ಎಂದು ಆರೋಪಿಸಿದರು.

ಕೆಬಿಜೆಎನ್‌ಎಲ್ ಅಧೀಕ್ಷಿತ ಅಭಿಯಂತರ ಮನೋಜಕುಮಾರ ಗಡಬಳ್ಳಿ ಮಾತನಾಡಿ, ಏ. 1 ರಂದು ಕಾಲುವೆ ಮೂಲಕ ನೀರು ಹರಿಸುತ್ತೇವೆ ಏ.12ರವರಿಗೆ ನೀರು 35 ರಿಂದ 47 ರವರಿಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು, ಹಿಂದಿನ ರೈತರು ತಮ್ಮ ಮೋಟಾರು ಪಂಪ್ ಒಂದೆರಡು ದಿನ ಕೊನೆ ಭಾಗದ ಜನರಿಗೆ ನೀರು ತಲುಪುವವರೆಗೆ ಬಂದ ಮಾಡುವ ಮೂಲಕ ಸಹಕರಿಸಬೇಕು ಮನವಿ ಮಾಡಿದರು.

ಜಿಲ್ಲಾಧಿಕಾರಿಗಳು ದೂರವಾಣಿ ಮೂಲಕ ರೈತರಿಗೆ ಹೋರಾಟ ಕೈ ಬಿಡುವಂತೆ ಮನವೊಲಿಸಿ ಹೋರಾಟ ಮೊಟಕುಗೊಳಿಸಿದರು. ಇಂಡಿ ತಹಶೀಲ್ದಾರ್ ವಿಜಯ ಕಡಕಬಾವಿ, ಚಡಚಣ ತಹಶೀಲ್ದಾರ್ ಸಂಜಯ ಇಂಗಳೆ, ಶ್ರೀಮಂತ ಅಂಗಡಿ, ರೈತ ಮುಖಂಡರಾದ ಗುರುನಾಥ ಬಗಲಿ, ವಸಂತ ಬೈರಮಡಿ, ದಯಾನಂದ ಕುಮಸಳೆ, ಆಲೋಕ ಬೈರಮಡಿ, ಎಂ.ಎಚ್. ಪೂಜಾರಿ, ಖಾಜೀಸಾಹೇಬ ಗುರುನಾಳ, ದಸ್ತಗೀರ ವಾಲಿಕಾರ, ಅಣ್ಣಾರಾಯ ಶಿರನಾಳ, ಸತೀಶ ತಳಕೇರಿ, ದಾನೇಶ ತಳಕೇರಿ, ಸಿದ್ದು ಕೊಟಲಗಿ, ಶಿವಾನಂದ ಬಿರಾದಾರ, ಸತೀಶ ತೊಳನೂರ, ಸಂದೀಪ ಬೆಳ್ಳಿ, ದಯಾನಂದ ಕೊಳಿ ಸೇರಿದಂತೆ ಹಲವು ಗ್ರಾಮಗಳ ರೈತ ಮುಖಂಡರು ಇದ್ದರು.



ರೈತರ ಆಕ್ರೋಶ

ನಾಗಠಾಣ ಮತಕ್ಷೇತ್ರದ ಚಡಚಣ ತಾಲೂಕಿನ ಹಲಸಂಗಿ, ಗೋಟ್ಯಾಳ, ಮಣಕಂಲಗಿ, ಏಳಗಿ, ಕೇರೂರ, ಉಮರಾಣಿ, ತದ್ದೇವಾಡಿ, ಕಂಚನಾಳ, ಲೋಣಿ ಬಿಕೆ, ಹಾವಿನಾಳ, ಹತ್ತಳ್ಳಿ, ರೇವತಗಾಂವ, ದಸೂರ, ಉಮರಜ, ನೀವರಗಿ ಸೇರಿದಂತೆ ಹಲವು ಗ್ರಾಮಗಳಿಗೆ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವ ಉಂಟಾಗಿದೆ. ಇಂಡಿ ತಾಲೂಕಿನ ಕಾಲುವೆ ತುಂಬಿ ಹರಿಯುತ್ತಿದೆ. ಚಡಚಣ ತಾಲೂಕು ಮುಟ್ಟುವ ಮೊದಲೆ ನೀರಿನ ಹರಿವು ನಿಲ್ಲುತ್ತದೆ ಎಂದು ಹಲವು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಕ್ಕೆ ಜಿಪಂ ಸಿಇಒ ಭೇಟಿ

ವಿಜಯಪುರ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಯಶಸ್ವಿ ಹಾಗೂ ಪಾರದರ್ಶಕವಾಗಿ ನಡೆಯುವ ನಿಟ್ಟಿನಲ್ಲಿ ವಿಜಯಪುರ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ಸೋಮವಾರ ನಗರದ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಹಾಗೂ ಪರೀಕ್ಷಾ ವೆಬ್ ಕಾಸ್ಟಿಂಗ್ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇಲ್ಲಿನ ಮಿನಿ ಸಭಾಂಗಣದಲ್ಲಿ ಸ್ಥಾಪಿಸಲಾದ ಜಿಲ್ಲಾ ವೆಬ್ ಕಾಸ್ಟಿಂಗ್ ಕೇಂದ್ರಕ್ಕೆ ಭೇಟಿ ನೀಡಿ, ಜಿಲ್ಲೆಯಾದ್ಯಂತ ನಡೆಯುತ್ತಿರುವ ಪರೀಕ್ಷೆಗಳ ನೇರ ವೀಕ್ಷಣಾ ವ್ಯವಸ್ಥೆಯನ್ನು ಪರಿಶೀಲಿಸಿದರು. ತಾಂತ್ರಿಕ ವ್ಯವಸ್ಥೆಗಳು ದೋಷ ರಹಿತವಾಗಿ ಕಾರ್ಯ ನಿರ್ವಹಿಸುವಂತೆ ನಿರಂತರ ನಿಗಾವಹಿಸಬೇಕು ಎಂದರು. ಬಳಿಕ ಶಾಮ್ಸ್ ಪ್ರೌಢಶಾಲೆ, ಬಂಜಾರ ಪ್ರೌಢ ಶಾಲೆ ಹಾಗೂ ಚೇತನಾ ಪದವಿಪೂರ್ವ ಕಾಲೇಜುಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಪರೀಕ್ಷಾ ವ್ಯವಸ್ಥೆಯನ್ನು ವೀಕ್ಷಿಸಿದ ಜಿಪಂ ಸಿಇಒ ಅವರು, ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಪರೀಕ್ಷೆ ಬರೆಯುವಂತಾಗಲು ಸೂಕ್ತ ವಾತಾವರಣ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮೆರಾಗಳು, ವೆಬ್ ಕಾಸ್ಟಿಂಗ್ ವ್ಯವಸ್ಥೆ, ಪ್ರಥಮ ಚಿಕಿತ್ಸಾ ಕಿಟ್ ಹಾಗೂ ಕುಡಿಯುವ ನೀರು, ಶೌಚಾಲಯ ಸೇರಿದಂತೆ ಮೂಲಭೂತ ಸೌಕರ್ಯಗಳ ಸ್ಥಿತಿಗತಿ ಪರಿಶೀಲಿಸಿ, ಎಲ್ಲವೂ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಖಚಿತಪಡಿಸಿಕೊಂಡರು.



ಪರೀಕ್ಷಾ ಅವಧಿಯಲ್ಲಿ ಯಾವುದೇ ರೀತಿಯ ಅಕ್ರಮಗಳು ನಡೆಯದಂತೆ ಕಟ್ಟುನಿಟ್ಟಿನ ಮೇಲ್ವಿಚಾರಣೆ ವಹಿಸಬೇಕು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಅನಧಿಕೃತ ವ್ಯಕ್ತಿಗಳ ಸಂಚಾರವನ್ನು ನಿಯಂತ್ರಿಸಬೇಕು ಎಂದರು. ಪರೀಕ್ಷಾ ಪ್ರಶ್ನೆಪತ್ರಿಕೆಗಳ ಸುರಕ್ಷಿತ ವಿತರಣೆಯ ಬಗ್ಗೆ ವಿಶೇಷ ಗಮನ ಹರಿಸಬೇಕು. ಸಮಯಪಾಲನೆ ಕಟ್ಟುನಿಟ್ಟಾಗಿ ಅನುಸರಿಸಬೇಕು. ಪರೀಕ್ಷಾ ಕರ್ತವ್ಯದಲ್ಲಿರುವ ಸಿಬ್ಬಂದಿ ತಮ್ಮ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸಿ, ಯಾವುದೇ ಲೋಪ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು ಎಂದರು. ಪರೀಕ್ಷೆಗಳು ಸುಸೂತ್ರವಾಗಿ, ಯಾವುದೇ ಅಡಚಣೆ ಇಲ್ಲದೆ ನಡೆಯಲು ಇಲಾಖೆಯ ಎಲ್ಲ ಅಧಿಕಾರಿಗಳ ಸಮನ್ವಯ ಅತ್ಯವಶ್ಯಕವಾಗಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅತ್ಯಂತ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದರು. ಎಸ್‌ಎಸ್‌ಎಲ್‌ಸಿ ಜಿಲ್ಲಾ ನೋಡೆಲ್ ಅಧಿಕಾರಿ ಟಿ.ಎಸ್. ಕೊಲ್ಹಾರ, ಜಿಲ್ಲೆಯ ಎಲ್ಲ ವಲಯಗಳ ಮುಖ್ಯಸ್ಥರು, ಪರೀಕ್ಷಾ ವೆಬ್ ಕಾಸ್ಟಿಂಗ್ ವೀಕ್ಷಕರು, ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಕರು, ಪೊಲೀಸ್ ಸಿಬ್ಬಂದಿ, ಆರೋಗ್ಯ ಕಾರ್ಯಕರ್ತರು, ಇತರೆ ಸಿಬ್ಬಂದಿ ಇದ್ದರು.

ಆತ್ಮವಿಶ್ವಾಸ ಇಲ್ಲದೆ ಗೆಲುವು ಸಾಧ್ಯವಿಲ್ಲ

ಮುದ್ದೇಬಿಹಾಳ: ಹೊಸ ಹೊಸ ಸೇವಾ ಕ್ಷೇತ್ರಗಳನ್ನು ಗುರುತಿಸಿ ಕಾರ್ಯಕರ್ತರು ಕೆಲಸ ಮಾಡಬೇಕು. ತನ್ನ ಸೇವೆ, ಪರರ ಸೇವೆ ಹಾಗೂ ದೇವರ ಸೇವೆ ಮಾಡುವುದನ್ನು ಸ್ಕೌಟ್ಸ್ ಮತ್ತು ಗೈಡ್ಸ್ ಸದಸ್ಯರಿಗೆ ಮನವರಿಕೆ ಆದಾಗ ಸಮಾಜ ಸುಂದರವಾಗುತ್ತದೆ ಎಂದು ಸ್ಕೌಟ್ಸ್ ಮತ್ತು ಗೈಡ್ಸ್ ಘಟಕದ ಜಿಲ್ಲಾ ಅಧ್ಯಕ್ಷ ಡಾಕ್ ಸತೀಶ್ ಜಗಜಿನ್ನಿ ಹೇಳಿದರು.

ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ವಾರ್ಷಿಕ ವಿಶೇಷ ಮೇಳ ಹಾಗೂ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಮಾತನಾಡಿ, ಕಾರ್ಯಕರ್ತರು ಅನೇಕ ಅವಕಾಶಗಳನ್ನು ಪಡೆಯಲು ಮತ್ತು ಜೀವನದಲ್ಲಿ ಯಶಸ್ವಿ ಹೊಂದಲು ಶಿಬಿರವು ಅನುಕೂಲ ಮಾಡುತ್ತದೆ. ಆತ್ಮ ವಿಶ್ವಾಸವಿಲ್ಲದೆ ಎಂದಿಗೂ ಗೆಲುವು ಸಾಧಿಸಲು ಸಾಧ್ಯವಿಲ್ಲ ಎಂದರು.

ಸ್ಥಳೀಯ ಸಂಸ್ಥೆಯ ಚೇರ್ಮನ್, ನಿವೃತ್ತ ಪ್ರಾಧ್ಯಾಪಕ ಪ್ರೊ. ಎಸ್.ಎಸ್. ಹೂಗಾರ್ ಮಾತನಾಡಿ, ನಿಸ್ವಾರ್ಥ ಸೇವೆ ಮಾಡುವ ಘಟಕವಾಗಿ ರೂಪಗೊಂಡಿರುವ ಅಂತಾರಾಷ್ಟ್ರೀಯ ಸಂಸ್ಥೆ ಸ್ಕೌಟ್ಸ್ ಮತ್ತು ಗೈಡ್ಸ್ ಆಗಿದೆ. ವಿಶ್ವಾಸಾರ್ಹತೆ ಮತ್ತು ಪಾರದರ್ಶಕತೆಯಿಂದ ಸರ್ವರಿಗೂ ಸೇವೆ ಮಾಡುವುದೇ ಇದರ ಉದ್ದೇಶವಾಗಿದೆ ಎಂದು ಹೇಳಿದರು.

ಜಿಲ್ಲಾ ತರಬೇತಿ ಆಯುಕ್ತ ಎಸ್. ಬೊಮ್ಮನಹಳ್ಳಿ ಮಾತನಾಡಿ, ಸೇವೆಯಿಂದ ಸನ್ಮಾನ ದೊರೆಯುತ್ತದೆ. ಸರ್ವರಿಗೂ ಸೇವೆಯನ್ನು ಮಾಡುವ ವೇದಿಕೆಯ ಸ್ಕೌಟ್ಸ್ ಮತ್ತು ಗೈಡ್ಸ್ ಆಗಿದೆ. ವಿದ್ಯಾರ್ಥಿಗಳು ಕಾರ್ಯಕರ್ತರಾಗಿ ಬೆಳೆದು ಸಂಘಟನೆಯನ್ನು ಹೆಚ್ಚು ವಿಸ್ತರಿಸಬೇಕು ಎಂದು ಮನವಿ ಮಾಡಿದರು.

ಪ್ರಾಂಶುಪಾಲ ಡಾ. ಎಚ್.ಎ. ಕಟಗೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಜು ಅಲಕುಂಟೆ, ಜಿಲ್ಲಾ ಕಾರ್ಯದರ್ಶಿ ಪಿ.ಎಸ್ ಕುಂಬಾರ, ಡಿ. ಬಿ. ಅತ್ತಾರ ವೇದಿಕೆಯಲ್ಲಿ ಇದ್ದರು.

ಪ್ರಾಧ್ಯಾಪಕರಾದ ಎಲ್.ಹೆಚ್. ಮಮದಾಪೂರ, ಹಂಪಣ್ಣ, ಗಿರೀಶ ವಾಗಣಗೇರಿ, ಜ್ಯೋತಿಕಾ ಕೆ. ಕಾಲೇಜು ಘಟಕದ ರೋವರ್ಸ್ ಮತ್ತು ರೇಂಜರ್ಸ್ ಲೀಡರ್‌ಗಳಾದ ಪ್ರೊ. ಮೌನೇಶ್, ಪ್ರೊ ವನಿತಾ ದೊಡ್ಡಮನಿ, ವೈಶಾಲಿ ಶಾಖಾಪುರೆ, ಬಸವರಾಜ ಹಡಪದ, ಡಾ. ವೈ.ಕೆ ಗುಂಡಕರ್ಜಗಿ ಇತರರು ಉಪಸ್ಥಿತರಿದ್ದರು. ಸಂಜೆ ಶಿಬಿರಾರ್ಥಿಗಳಿಂದ ಊರಿನಲ್ಲಿ ಜಾಗೃತಿ ಜಾಥಾ ಹಾಗೂ ರಾತ್ರಿ ಶಿಬಿರಾಗ್ನಿ ಕಾರ್ಯಕ್ರಮ ಜರಗಿತು.



ಮಾ.30ರಂದು ಪೂರ್ವಭಾವಿ ಸಭೆ: ಶ್ರೀಗಳು

ಇಂಡಿ: ಇಂಡಿ ನಗರದಲ್ಲಿ ಪಂಚಮಸಾಲಿ ಸಮಾಜದ ಬಡಮಕ್ಕಳಿಗೆ ಉಚಿತ ವಸತಿನಿಲಯ ಹಾಗೂ ದಾಸೋಹ ಮತ್ತು ಶಾಖಾ ಮಠ ನಿರ್ಮಾಣಕ್ಕೆ ಜಾಗ ನೀಡುವ ಕುರಿತು ಚರ್ಚಿಸಲು ಮಾ. 30ರಂದು ಮದ್ಯಾಹ್ನ 12ಕ್ಕೆ ಇಂಡಿ ನಗರದ ಶಾಂತೇಶ್ವರ ಪ್ರೌಢಶಾಲಾ ಆವರಣದಲ್ಲಿ ಪೂರ್ವಭಾವಿ ಸಭೆ ನಿಗದಿಪಡಿಸಲಾಗಿದ್ದು ಸಮಾಜ ಬಾಂಧವರು ಅಂದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಬಸವಜಯ ಮೃತ್ಯುಂಜಯ ಮಹಾಸ್ವಾಮೀಜಿ ಮನವಿ ಮಾಡಿದರು.

ಅವರು ನಗರದ ಅಕ್ಕಮಹಾದೇವಿ ಸೌಹಾರ್ದ ಸಹಕಾರಿ ಸಂಘದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಅಂದು ಸಮಾಜದ ಶಾಖಾ ಮಠ, ಬಡ ಮಕ್ಕಳಿಗೆ ಉಚಿತ ಪ್ರಸಾದ ನಿಲಯ ಮತ್ತು ಸಮಾಜ ಮಂದಿರ ನಿರ್ಮಾಣ ಕುರಿತು ಚರ್ಚೆ ನಡೆಸಲಿದ್ದು, ಯಾರಾದರೂ ದಾನಿಗಳು ಜಾಗ ನೀಡುತ್ತಿದ್ದರೆ ಸಮಾಜ ಮಂದಿರಕ್ಕೆ ಅವರ ಹೆಸರು ಇಡೋಣ. ಪಂಚಮಸಾಲಿ ಸಮಾಜ 3 ಬಿ ವರ್ಗದಲ್ಲಿ ಬರುತ್ತಿದ್ದು ವಿದ್ಯಾರ್ಥಿನಿಲಯಗಳಲ್ಲಿ ಅವಕಾಶಗಳು ಕಡಿಮೆ ಸಿಗುತ್ತಿವೆ. ಹೀಗಾಗಿ ಸಮಾಜದ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಉಚಿತ ವಸತಿ ಹಾಗೂ ಪ್ರಸಾದ ನಿಲಯ ಅತೀ ಅವಶ್ಯವಾಗಿದೆ ಎಂದರು.



ಸಭೆಯಲ್ಲಿ ಇಂಡಿ ತಾಲೂಕಾ ಪಂಚಮಸಾಲಿ ಸಮಾಜ ಅಧ್ಯಕ್ಷ ವಿ.ಎಚ್. ಬಿರಾದಾರ, ಪ್ರ.ಕಾರ್ಯದರ್ಶಿ ಶಿವಾನಂದ ಚಾಳೀಕಾರ, ಉಮೇಶ ಬಳಬಟ್ಟಿ, ಸುಧಾಕರಗೌಡ ಬಿರಾದಾರ, ಶಿವು ದೇವರ, ಭೀಮಾಶಂಕರ ಮುರಗುಂಡಿ, ಪರಮೇಶ್ವರ ಪತಂಗೆ, ಶ್ರೀಕಾಂತ ಕೂಡಿಗನೂರ, ಮಂಜುನಾಥ ಕಾಮಗೊಂಡ, ಶಾಂತುಗೌಡ ಬಿರಾದಾರ, ರಮೇಶ ಬಿರಾದಾರ, ಅನೀಲ ತೆನ್ನೆಳ್ಳಿ, ವಿನೋದ ಪಾಟೀಲ, ಈರನಗೌಡ ಪಾಟೀಲ, ಅಶೋಕ ಬಳಬಟ್ಟಿ, ಶ್ರೀಕಾಂತ ಗಡಗಲಿ, ಸಚಿನ್ ಮೇಡೇದಾರ ಸೇರಿದಂತೆ ಮತ್ತಿತರರಿದ್ದರು.

ಮಧುಮೇಹ ಕಾಯಿಲೆಗೆ ಭಯ ಪಡಬೇಕಾಗಿಲ್ಲ

ಚಡಚಣ: ಮಾನವನ ಜೀವನದಲ್ಲಿ ಕೆಲವರಿಗೆ ಮಧುಮೇಹ ಸರ್ವೆ ಸಾಮಾನ್ಯ ಆದಕ್ಕಾಗಿ ಭಯ ಪಡಬೇಕಾಗಿಲ್ಲ ಮಾನಸಿಕವಾಗಿ ಈ ಸಕ್ಕರೆ ಕಾಯಿಲೆ ಬಗ್ಗೆ ಚಿಂತೆ ಮಾಡಿದರೆ ಭಯ ಪಟ್ಟರೆ ಮಧುಮೇಹ ಜಾಸ್ತಿಯಾಗುತ್ತದೆ ವಿನಃ ಕಡಿಮೆ ಆಗುವುದಿಲ್ಲ ಆದ್ದರಿಂದ ಸಿಹಿ ಆಹಾರ, ಮಾಂಸಹಾರ ಬಿಟ್ಟು ಸಾತ್ವಿಕ ಸಸ್ಯ ಆಹಾರದೊಂದಿಗೆ ಸ್ವೀಕರಿಸಿದರೆ ಆರೋಗ್ಯ ಭಾಗ್ಯ ಸುಸಂಪನ್ನಗೊಳ್ಳುತ್ತದೆ ಎಂದು ಬೆಂಗಳೂರಿನ ಖ್ಯಾತ ಅನುಭವಿ ವೈದ್ಯ ಡಾ. ಲಕ್ಷ್ಮೀನಾರಾಯಣರವರು ತಮ್ಮ ಮನದಾಳದ ಮಾತು ಹಂಚಿಕೊಂಡರು.

ದಾವಣಗೆರೆಯ ಜಯದೇವ ವೃತ್ತದಲ್ಲಿರುವ ಶಿವಯೋಗಿ ಮಂದಿರದ ಒಳಾಂಗಣದ ಶ್ರೀ ಜಗದ್ಗುರು ಜಯದೇವ ಸಾಂಸ್ಕೃತಿಕ ಭವನದಲ್ಲಿ ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ಆಶ್ರಯದಲ್ಲಿ ಇತ್ತೀಚಿಗೆ ನಡೆದ ಮಧುಮೇಹ ಕಾರ್ಯಾಗಾರದಲ್ಲಿ ಮಾತನಾಡಿದರು.

ಈಸಮಾರಂಭದಸಾನಿಧ್ಯ ವಹಿಸಿದ ಚಿತ್ರದುರ್ಗದಶ್ರೀಮುರುಘರಾಜೇಂದ್ರ ಬೃಹನ್ಮಠದ ಡಾ. ಶಿವಮೂರ್ತಿ ಮುರುಘಾಶರಣರು ಮಾತನಾಡಿ, ಮಧುಮೇಹ ಮುಕ್ತ ಜೀವನಕ್ಕೆ ದಾವಣಗೆರೆಯಲ್ಲಿ ಮೊಟ್ಟ ಮೊದಲು ಈ ಕಾರ್ಯಾಗಾರ ನಡೆದಿದ್ದು ಮಧುಮೇಹ ಕಾಯಿಲೆಯಿಂದ ಬಳಲುವವರಿಗೆ ಈ ಜಾಗೃತಿ ಅಭಿಯಾನ ನಡೆದಿದ್ದು ಶ್ಲಾಘನೀಯ. ವಿನೂತನ ಪ್ರಯೋಜನಕಾರಿ ಚಿಂತನೆ ಮತ್ತು ಸಂದರ್ಶನ ವೈದ್ಯಡಾ. ಲಕ್ಷ್ಮೀನಾರಾಯಣರೊಂದಿಗೆ ಸಾರ್ವಜನಿಕರು ವಿಚಾರ ವಿನಿಮಯ ಮಾಡಿದ್ದು ಒಂದು ಒಳ್ಳೆಯ ಕಾಯಕ ಎಂದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಡಾ. ಶಾರದಾ, ಡಾ.ಕುಮಾರ್‌ರವರು ಸಕ್ಕರೆ ಕಾಯಿಲೆ ಬಗ್ಗೆ ಉಪನ್ಯಾಸ ನೀಡಿದರು. ದಾವಣಗೆರೆಯ ವಿರಕ್ತಮಠದ ಡಾ. ಬಸವಪ್ರಭು ಸ್ವಾಮೀಜಿಯರು ವೇದಿಕೆಯಲ್ಲಿ ಉಪಸ್ಥಿತರಿದ್ದು ಎಲ್ಲರಿಗೂ ಆಶೀರ್ವಾದ ಮಾಡಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ ಪ್ರಾರಂಭದಲ್ಲಿ ಸ್ವಾಗತ ಮಾಡಿ ಅಚ್ಚುಕಟ್ಟಾಗಿ ನಿರೂಪಣೆ, ಮಾಡಿ ಸಕ್ಕರೆ ಕಾಯಿಲೆ ಬಗ್ಗೆ ಕೆಲವು ಮಾಹಿತಿ ಕೊಟ್ಟು ಕೊನೆಗೆ ವಂದಿಸಿದರು.



ಜಾಲವಾದ ಗ್ರಾಮದಲ್ಲಿ ಪಶು ಆಸ್ಪತ್ರೆ ಸ್ಥಾಪನೆಗೆ ಒತ್ತಾಯ



ದೇವರಹಿಪ್ಪರಗಿ: ತಾಲೂಕಿನ ಜಾಲವಾದ ಗ್ರಾಮದಲ್ಲಿ ಪಶು ಆಸ್ಪತ್ರೆ ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ವಿಧಾನ ಪರಿಷತ್ತಿನ ಬಜೆಟ್ ಅಧಿವೇಶನದಲ್ಲಿ ಬುಧವಾರ ವಿಪ ಸದಸ್ಯ ಕೇಶವ ಪ್ರಸಾದ.ಎಸ್ ಚುಕ್ಕೆ ಗುರುತಿಲ್ಲದ ಪ್ರಶ್ನೆ–1632ರಡಿ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ ಅವರಿಗೆ ಪ್ರಶ್ನಿಸಿದರು.

ದೇವರಹಿಪ್ಪರಗಿ ತಾಲೂಕಿನ ಜಾಲವಾದ ಗ್ರಾಮದಲ್ಲಿ ಪಶು ಆಸ್ಪತ್ರೆ ನಿರ್ಮಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆ ಇದ್ದಲ್ಲಿ ಯಾವ ಕಾಲಮಿತಿಯಲ್ಲಿ ಮಂಜೂರಾತಿಯನ್ನು ನೀಡಲಾಗುವುದು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು, ಗ್ರಾಮದಲ್ಲಿ ಜಾನುವಾರಗಳು ಬಹು ಸಂಖ್ಯೆಯಲ್ಲಿ ಇದ್ದು ರೋಗ ರುಜಿನಗಳಿಗೆ ತುತ್ತಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಹೊಸದಾಗಿ ಪಶು ಆಸ್ಪತ್ರೆ ಮಂಜೂರಾತಿಗೆ ಯಾವ ಯಾವ ಗಣ್ಯ ವ್ಯಕ್ತಿಗಳು ಶಿಫಾರಸ್ಸು ಪತ್ರಗಳನ್ನು ನೀಡಿದ್ದಾರೆ ಹಾಗೂ ಹೊಸದಾಗಿ ಪಶು ಆಸ್ಪತ್ರೆ ನಿರ್ಮಿಸಲು ಬೇಕಾದ ಸರ್ಕಾರದ ಮಾನದಂಡ ಮತ್ತು ಮೂಲ ಸೌಕರ್ಯಗಳು ಇದ್ದರು ವಿಳಂಬವಾಗಲು ಕಾರಣವೇನು? ಈ ಕುರಿತು ವಿಪ ಸದಸ್ಯ ಕೇಶವ ಪ್ರಸಾದ.ಎಸ್ ಪ್ರಶ್ನಿಸಿದರು.

ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್ ಉತ್ತರಿಸಿ, ಈ ಕುರಿತು ಪಶು ಆಸ್ಪತ್ರೆ ಸ್ಥಾಪನೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತಗೊಂಡಿರುತ್ತದೆ. ಆದ್ಯತೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಪರಿಶೀಲಿಸಲಾಗುವುದು. ಜಾನುವಾರಗಳಲ್ಲಿ ರೋಗೋದ್ರೇಕ ಉಂಟಾಗಿರುವ ಬಗ್ಗೆ ವರದಿಯಾಗಿರುವುದಿಲ್ಲ. ಮುಂಜಾಗ್ರತ ಕುರಿತು ಲಸಿಕೆ ಹಾಕಲಾಗಿದೆ. ತಾಲೂಕಿನ ಜಾಲವಾದ ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಮಂಜೂರು ಮಾಡಲು ನಾವು ಸಲ್ಲಿಸಿದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಆದ್ಯತೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ನೂತನ ಪಶು ಚಿಕಿತ್ಸೆಗಳ ಮಂಜುರಾತಿಗೆ ಪರಿಶೀಲಿಸಲಾಗುತ್ತಿದೆ ಎಂದು ಉತ್ತರಿಸಿದ್ದಾರೆ.

ಎನ್‌ಎಸ್‌ಎಸ್‌ನಿಂದ ನೈತಿಕತೆ ಬೆಳವಣಿಗೆ

ಸಿಂದಗಿ: ವಿದ್ಯಾರ್ಥಿಗಳು ವ್ಯಕ್ತಿತ್ವ ರೂಪಿಸಿಕೊಳ್ಳುವುದರ ಜೊತೆಗೆ ಬದಲಾವಣೆ ಕಾಣಲು ಶಿಬಿರ ಪೂರಕ ಎಂದು ರಾಂಪೂರದ ಆರೂಢ ಸಂಗನಬಸವೇಶ್ವರ ಶ್ರೀಮಠದ ನಿತ್ಯಾನಂದ ಮಹಾರಾಜರು ಹೇಳಿದರು.

ಸಿಂದಗಿ ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವತಿಯಿಂದ ದತ್ತು ಗ್ರಾಮ ರಾಂಪೂರದಲ್ಲಿ ಹಮ್ಮಿಕೊಂಡ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿ, ಹಳ್ಳಿಗಳಲ್ಲಿ ಭಾವೈಕ್ಯ, ಸಂಸ್ಕಾರ, ಸಂಸ್ಕೃತಿಯನ್ನು ಕಾಣಬಹುದು. ಜಾತಿ, ಧರ್ಮ, ಭಾಷೆಯ ಸಂಕೋಲೆಗಳಿಂದ ದೂರವಿರುವ ಗ್ರಾಮೀಣ ಜನರ ಜೀವನದಿಂದ ಉತ್ತಮ ನಾಗರಿಕತ್ವದ ನೀತಿ ಪಾಠ ಕಲಿಯಲು ಸಾಧ್ಯ. ವಿದ್ಯಾರ್ಥಿಗಳಲ್ಲಿನ ನೈತಿಕತೆ, ಶಿಸ್ತು, ಸಾಮಾಜಿಕ ಸೇವೆಗೆ ಎನ್‌ಎಸ್‌ಎಸ್ ಘಟಕ ಮೂಲ ಪ್ರೇರಣೆಯಾಗುತ್ತದೆ ಎಂದರು.

ಈ ವೇಳೆ ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಎಸ್.ಹಳೆಮನಿ, ಎನ್‌ಎಸ್‌ಎಸ್ ಘಟಕದ ಸಂಯೋಜಕ ಡಾ.ಯಮನಪ್ಪ ಕೆಳಗೇರಿ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ರಾಜಶೇಖರ ಬೆನಕನಹಳ್ಳಿ ಮಾತನಾಡಿದರು. ಘಟಕ 2ರ ಸಂಯೋನಾಧಿಕಾರಿ ಪ್ರೊ.ರಾಜೇಸಾಬ ಶಿಬಿರದ ಉದ್ದೇಶಗಳನ್ನು ಬಗ್ಗೆ ತಿಳಿಸಿದರು. ಅನಿಲ ಕುರಬತಳ್ಳಿ ಸ್ವಾಗತಿಸಿ, ಆಕಾಶ ಹೆಗಡೆ ವಂದಿಸಿದರು. ಐಶ್ವರ್ಯ ದೇವರಮನಿ ನಿರೂಪಿಸಿದರು. ಶಿಬಿರದಲ್ಲಿ ಕಾಲೇಜಿನ ಬೋಧಕ–ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳಿದ್ದರು.



ಜಗಜೀವನ ರಾಂ, ಅಂಬೇಡ್ಕರರವರ ಜಯಂತಿ ಆಚರಣೆಗೆ ಸಿದ್ಧತೆ

ಬಸವನಬಾಗೇವಾಡಿ: ಜಯಂತಿ ಆಚರಣೆ ಕಾರ್ಯಕ್ರಮಗಳಿಗೆ ಎಲ್ಲ ಇಲಾಖೆಗಳ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು. ಅನಾವಶ್ಯಕವಾಗಿ ಕಾರ್ಯಕ್ರಮಗಳಿಂದ ದೂರವಾಗುವ ಅಧಿಕಾರಿಗಳ ವಿರುದ್ಧ ನೋಟಿಸ್ ಜಾರಿಮಾಡಲಾಗುವುದು ಇದಕ್ಕೆ ಅಸ್ಪಾದ ನೀಡಬೇಡಿ ಎಂದು ತಹಶೀಲ್ದಾರ ವೈ.ಎಸ್. ಸೋಮನಕಟ್ಟಿ ಸೂಚಿಸಿದರು.

ಪಟ್ಟಣದ ತಹಶೀಲ್ದಾರ ಕಚೇರಿಯ ಸಭಾಭವನದಲ್ಲಿ ಏ.5ರಂದು ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ ರಾಂ ಹಾಗೂ ಏ.14ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ ಜಯಂತಿ ನಿಮಿತ್ತ ಜರುಗಿದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಈಗಾಗಲೇ ಅಬಕಾರಿ ಇಲಾಖೆಯ ಅಧಿಕಾರಿ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸದೇ ಇರುವುದ್ದರಿಂದ ಅವರ ವಿರುದ್ಧ ನೋಟಿಸ್ ಜಾರಿ ಮಾಡಲಾಗಿದ್ದು ವಿಚಾರಣೆ ನಡೆಯುತ್ತಿದೆ ಎಂದರು.

ಜಯಂತಿಗಳನ್ನು ಆಚರಿಸುವ ಕುರಿತು ದಲಿತ ಮುಖಂಡರಾದ ತಮ್ಮಣ್ಣ ಕಾನಾಗಡ್ಡಿ, ಅರವಿಂದ ಸಾಲವಾಡಗಿ, ಅಶೋಕ ಚಲವಾದಿ, ಸಂಜೀವ ಕಲ್ಯಾಣಿ, ಪರಶುರಾಮ ದಿಂಡವಾರ, ವೈ.ಎಸ್.ಮ್ಯಾಗೇರಿ, ಗುರುರಾಜ ಗುಡಿಮನಿ, ಮಾಂತೇಶ ಸಾಸಾಬಾಳ, ಯಮನೂರಿ ಚಲವಾದಿ ಸೇರಿದಂತೆ ಇತರರು ಸಲಹೆ ನೀಡಿದರು. ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕಿ ಮಂಜುಳಾ ಹಿರೇಮನಿ, ಜಗಜೀವನ ರಾಂ ಹಾಗೂ ಅಂಬೇಡ್ಕರ್ ಅವರ ಜಯಂತಿಯನ್ನು ಒಂದೇ ವೇದಿಕೆ ಮೇಲೆ ಆಚರಿಸುವುದು ಸೂಕ್ತ ಎಂದರು.ಜಯಂತಿಗಳನ್ನು ಆಚರಣೆಗೆ ಹಿರಿಯ ಅಧಿಕಾರಿಗಳಿಗೆ ಕೆಲವು ಜವಾಬ್ದಾರಿಗಳನ್ನು ನೀಡಲಾಯಿತು. ಡಿವೈಎಸ್ ಪಿ. ಬಲ್ಲಪ್ಪ ನಂದಗಾವಿ, ತಾಪಂ ಇಒ ವೆಂಕಟೇಶ ವಂದಾಲ ಮಾತನಾಡಿದರು.



ಈ ವೇಳೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳಾದ ಎಂ.ಎಚ್. ಯರಝರಿ, ಶಿಲ್ಪಾ ಹಿರೇಮಠ, ವಸಂತ ರಾಠೋಡ, ಡಾ.ಕವಿತಾ ದೊಡಮನಿ, ಎಸ್.ಜಿ.ದೊಡಮನಿ, ವ್ಹಿ.ಬಿ.ಗೊಂಗಡಿ, ಸುರೇಶ ವಂದಾಲ, ಮುಖಂಡರಾದ ಮಹಾಂತೇಶ ಚಕ್ರವರ್ತಿ, ರಮೇಶ ಮ್ಯಾಗೇರಿ, ರಾಜು ದಿಂಡವಾರ, ಮುತ್ತು ಬಿದರಿ, ಉಮೇಶ ಆಲಕೊಪ್ಪರ, ಸಂಗಮೇಶ ಕಳ್ಳಿಮನಿ, ಯಮನಪ್ಪ ಮ್ಯಾಗೇರಿ, ಶ್ರೀಶೈಲ ಹೆಬ್ಬಾಳ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ವೆಂಕಟೇಶ್ವರ ಜಾತ್ರೆಯಲ್ಲಿ ಪರಣ್ಣ ಮುನವಳ್ಳಿ ಭಾಗಿ



• **ಕೊಪ್ಪಳ:** ಗಂಗಾವತಿ ವಿಧಾನಸಭಾ ಕ್ಷೇತ್ರದ ವೆಂಕಟಗಿರಿ ಗ್ರಾಮದ ಶ್ರೀವೆಂಕಟೇಶ್ವರ ದೇವರ ಜಾತ್ರಾ ಮಹೋತ್ಸವದಲ್ಲಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಭಾಗವಹಿಸಿದರು. ಮುಖಂಡ ದಳಪತಿ, ಅಮರೇಗೌಡ್ರು, ಸಿದ್ದಲಿಂಗಯ್ಯ ಸ್ವಾಮಿ ಗಡ್ಡಿಮಠ, ಬಸನಗೌಡ ದಾಸನಾಳ, ಚನ್ನವೀರನಗೌಡ ಕೋರಿ, ದುರ್ಗಪ್ಪ ಆಗೊಲಿ, ರಾಘವೇಂದ್ರ, ಅಕ್ಕಿ ಚಂದ್ರಶೇಖರ್, ಮಂಜಪ್ಪ, ಪಂಪಣ್ಣ, ಮಂಜುನಾಥ್ ಗೌರಿಪುರ, ಶೇಖರ್ ಗೌಡ, ಸಿದ್ದಪ್ಪ ನಾಯಕ್, ಬೆಟ್ಟಪ್ಪ ಬೋವಿ, ರವಿ ದೇಸಾಯಿ, ಚನ್ನಬಸವ ಸ್ವಾಮಿ ಕಲ್ಮಠ, ರಾಮುಲು ಉಡಮ್ ಕಲ್ ಇತರರಿದ್ದರು.

ಮಾ.27ಕ್ಕೆ ಅದ್ದೂರಿ ಶ್ರೀರಾಮ ನವಮಿ ಉತ್ಸವ

• **ಕಲಬುರಗಿ:** ಜಿಲ್ಲೆಯ ಜೇವರ್ಗಿ ಪಟ್ಟಣದ ಓಂ ನಗರದಲ್ಲಿರುವ ಶ್ರೀರಾಮಾಂಜನೇಯ ದೇವಸ್ಥಾನದಲ್ಲಿ ಇದೇ ಬರುವ ಮಾ.27ರಂದು ಶ್ರೀರಾಮ ನವಮಿ ಉತ್ಸವ ಅತ್ಯಂತ ಸಡಗರ ಸಂಭ್ರಮದಿಂದ ಹಮ್ಮಿಕೊಳ್ಳಲಾಗಿದೆ. ದೇವಸ್ಥಾನದ ವತಿಯಿಂದ ಧಾರ್ಮಿಕ ಕಾರ್ಯಕ್ರಮಗಳ ಆಯೋಜಿಸಲ್ಪಟ್ಟಿದ್ದು, ಅಂದು ಬೆಳಿಗ್ಗೆ 7:30ಕ್ಕೆ ಅಷ್ಟೋತ್ತರ 9:00 ರಿಂದ 12:00 ರವರೆಗೆ ಸ್ಥಳೀಯ ಭಜನಾ ಮಂಡಳಿಗಳಿಂದ ಭಜನಾ ಸುಧೆ ಕಾರ್ಯಕ್ರಮ ಜರುಗಲಿದೆ. ಮಧ್ಯಾಹ್ನ 12ಕ್ಕೆ ಶ್ರೀರಾಮದೇವರ ಜನ್ಮ ಪ್ರಯುಕ್ತ ವಿಶೇಷ 'ತೊಟ್ಟಿಲು ಸೇವೆ' ನೆರವೇರಲಿದೆ ನಂತರ ಶ್ರೀಸತ್ಯನಾರಾಯಣ ಪೂಜೆ, ಮಹಾ ನೈವೇದ್ಯ ಹಾಗೂ ಮಹಾ ಮಂಗಳಾರತಿ ನಡೆಯಲಿದೆ. ಮಧ್ಯಾಹ್ನ 1:00 ರಿಂದ 3:30ರವರೆಗೆ ಭಕ್ತಾದಿಗಳಿಗೆ ತೀರ್ಥ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಈ ಪುಣ್ಯ ಕಾರ್ಯಕ್ರಮದಲ್ಲಿ ಪಟ್ಟಣದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕುಟುಂಬ ಸಮೇತರಾಗಿ ಪಾಲ್ಗೊಂಡು ಶ್ರೀರಾಮದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಮಂಡಳಿಯು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇವರಿಗೇ ಸವಾಲು ಹಾಕಿದ ದೇವರದಾಸಿಮಯ್ಯ



• **ಮಾನ್ವಿ:** ಹನ್ನೆರಡನೆಯ ಶತಮಾನದ ವಚನಕಾರರಲ್ಲಿ ಅಗ್ರಗಣ್ಯ ವಚನಕಾರ ದೇವರ ದಾಸಿಮಯ್ಯ ದೇವರಿಗೇ ಸವಾಲು ಹಾಕಿದ ಗಟ್ಟಿಗ ದೇವರ ದಾಸಿಮಯ್ಯ ಎಂದು ಮಾನ್ವಿ ತಾಲೂಕ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಕೆ.ಈ.ನರಸಿಂಹ ಹೇಳಿದರು. ಅವರು ಇಂದು ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಆದ್ಯ ವಚನಕಾರ ಜೇಡರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ದಲ್ಲಿ ಮಾತನಾಡಿದರು.

ವಚನ ಸಾಹಿತ್ಯ ಜಾಗತಿಕ ಮಹತ್ವ ಪಡೆದಿದೆ. ಅದರಲ್ಲೂ ದೇವರ ದಾಸಿಮಯ್ಯ ನವರ ವಚನಗಳು ಸಮಾಜದ ಸರ್ವರ ಬದುಕಿನ ಸಮಸ್ಯೆಗಳನ್ನು ನಿವಾರಿಸಲು ಸಹಕಾರಿ ಆಗಿವೆ ಎಂದರು.

ಒಡಲುಗೊಂಡವ ಹಸಿವ ಒಡಲುಗೊಂಡವ ಹುಸಿವ ಎಂದು ಅಡಿಗಡಿಗೆ ನುಡಿಯದಿರು ನೀನೊಮ್ಮೆ ಒಡಲುಗೊಂಡು ನೋಡಾ ರಾಮನಾಥ ಎಂದು ಭಗವಂತನಿಗೆ ಸವಾಲು ಹಾಕಿದವರು ದಾಸಿಮಯ್ಯ ಎಂದು ಹೇಳಿ ಮಾತಿನ ಉದ್ದಕ್ಕೂ ದಾಸಿಮಯ್ಯ ರ ವಚನಗಳನ್ನು ಉದಾಹರಣೆ ನೀಡಿದರು.

ತಹಶಿಲ್ದಾರ ಭೀಮ ರಾವ್ ರಾಮ ಸಮುದ್ರ ಅಧ್ಯಕ್ಷತೆ ವಹಿಸಿದ್ದರು. ನೇಕಾರ ಸಮುದಾಯದ ಗುಮ್ಮಾ ಬಸವರಾಜ ವಕೀಲರು, ಮಸ್ಕಿ ಗಂಗಾಧರ, ಜಿ.ಶಿವುಕುಮಾರ, ಜಿ.ಪ್ರೇಮ ಕುಮಾರ, ಸತೀಶಕುಮಾರ, ಪ್ರದೀಪ್, ಮಾರ್ಕಂಡಯ್ಯ, ಸಿದ್ರಾಮ ಬುದ್ದಿ, ಸುಶಿಲಮ್ಮ, ಸೇರಿದಂತೆ ಅನೇಕರು ಇದ್ದರು.



ಯಲಬುರ್ಗಾ: ತಾಲೂಕಿನ ಯಾಪಲದಿನ್ನಿ ಗ್ರಾಮದಲ್ಲಿ ಭಾರತಿಯ ಕ್ರಾಂತಿಕಾರಿ ಕಿಸಾನ್ ಸೇನಾ ಗ್ರಾಮ ಘಟಕದ ನಾಮಫಲಕವನ್ನು ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ಸಂಘದ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಎಂ.ಎನ್. ಅನಾವರಣಗೊಳಿಸಿದರು. ಸಮಾಜ ಸೇವಕ ಭರತ ರಾಮೇಗೌಡ ಕ್ರಾಂತಿಕಾರಿ ಕಿಸಾನ್ ಸೇನಾ ಸಂಘದ ಜಿಲ್ಲಾಧ್ಯಕ್ಷ ಪಿಡ್ಡನಗೌಡ ಮಾಲಿಪಾಟೀಲ ಇತರರಿದ್ದರು.

ಎಲ್ಲ ಕ್ಷೇತ್ರದಲ್ಲೂ ಮುನ್ನಡೆ ಸಾಧಿಸಿ

• **ಕುಕನೂರು:** ಬಂಜಾರ ಸಮುದಾಯದ ಯುವಕರು ಪ್ರತಿಯೊಂದು ಕ್ಷೇತ್ರದಲ್ಲೂ ಮುನ್ನಡೆ ಸಾಧಿಸಿದಾಗ ಮಾತ್ರ ನಮ್ಮ ಹಿರಿಯರು ಕಂಡ ಕನಸು ನನಸಾಗಲು ಸಾಧ್ಯ ಎಂದು ಗೋರ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ಸುರೇಶ ಬಳೂಟಗಿ ಹೇಳಿದರು.

ತಾಲೂಕಿನ ಹೊನ್ನುಣಸಿ ತಾಂಡಾದಲ್ಲಿ ನಡೆದ ಸದ್ಗುರುಶ್ರೀ ಸೇವಾಲಾಲ ಮಹಾರಾಜರ ಭೋಗ ಕಾರ್ಯಕ್ರಮ ನೆರವೇರಿಸಿ ಮಾತನಾಡಿದ ಅವರು ನಮ್ಮ ಸಮುದಾಯದ ಜನರು ತಮ್ಮ ಮಕ್ಕಳನ್ನು ಒಳ್ಳೆಯ ಶಿಕ್ಷಣ ನೀಡಿ, ಪ್ರಜ್ಞಾವಂತ ನಾಗರಿಕರನ್ನಾಗಿ ಮಾಡಿ ಸಮಾಜದಲ್ಲಿ ಉನ್ನತ ಸ್ಥಾನ ಮಾನ ಪಡೆದುಕೊಳ್ಳುವಂತೆ ಬೆಳೆಸಬೇಕು.ನಮಗೆ ಸಿಕ್ಕಿರುವ ಮೀಸಲಾತಿ ಕಸಿದುಕೊಳ್ಳುವ ಷಡ್ಯಂತ್ರ ನಡೆಯುತ್ತಿದ್ದು, ಅದನ್ನು ಉಳಿಸಲು ನಮ್ಮ ಸಮಾಜ ಪಕ್ಷಾತೀತವಾಗಿ ಒಗ್ಗಟ್ಟಾಗಿ ಹೊರಡಬೇಕು. ಮೂಢನಂಬಿಕೆ, ದುಶ್ಚಟ, ವರದಕ್ಷಿಣೆ ಇಂಥ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನೆ ಮಾಡಿ ಸದೃಢ ಸಮಾಜ ಕಟ್ಟುವ ಸಂಕಲ್ಪ ಮಾಡಬೇಕು ಎಂದರು.

ಗೋರ ಸಿಕವಾಡಿ ಫುಲ್ ಟೈಮರ್ (ಪೂರ್ಣಾವಧಿ ಕಾರ್ಯಕರ್ತ) ಉಮೇಶ ರಾಠೋಡ ಮಾತನಾಡಿ, ನಮ್ಮ ಬಂಜಾರ ಸಮಾಜ ಸುಮಾರು 7000 ವರ್ಷಗಳ ಭವ್ಯ ಇತಿಹಾಸ ಹೊಂದಿದ್ದು, ಶ್ರೀಮಂತ ಸಂಸ್ಕೃತಿ, ಭಾಷೆ, ಆಚಾರ ವಿಚಾರ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಮರೆಯದೇ ಅವುಗಳನ್ನು ಉಳಿಸುವ ಕಾರ್ಯ ಮಾಡಬೇಕು ಎಂದು ಹೇಳಿದರು.



ಕುಕನೂರು ತಾಲೂಕಿನ ಹೊನ್ನುಣಸಿ ತಾಂಡಾದಲ್ಲಿ ನಡೆದ ಸದ್ಗುರುಶ್ರೀ ಸೇವಾಲಾಲ ಮಹಾರಾಜರ ಭೋಗ ಕಾರ್ಯಕ್ರಮ ಜರುಗಿತು. ಗೋರ ಸೇನಾ ಮುಖಂಡರಾದ ವಿಶ್ವನಾಥ ರತನ್, ರಾಘವೇಂದ್ರ, ಬಳಗೇರಿ, ತಾಂಡಾದ ನಾಯಕರಾದ ನಿಂಗಪ್ಪ ಚವ್ಹಾಣ, ಈರಣ್ಣ ಚವ್ಹಾಣ,ಯಮನೂರ ರಾಠೋಡ, ಚಂದ್ರು ಚವ್ಹಾಣ ಹಾಗೂ ಮಹಿಳೆಯರು, ಯುವಕರು ಇದ್ದರು.

ದೇವರ ದಾಸಿಮಯ್ಯ ಜಯಂತಿ | ಎಎಸ್ಪಿ ಕುಮಾರಸ್ವಾಮಿ ಹೇಳಿಕೆ

ದೇವರದಾಸಿಮಯ್ಯರ ಕೊಡುಗೆ ಅಪಾರ

• **ರಾಯಚೂರು:** ಜನ ಸಾಮಾನ್ಯನಿಗೂ ಅರ್ಥವಾಗುವ ಸುಲಲಿತ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ಸಮಾಜವನ್ನು ಸುಧಾರಿಸುವ ಪ್ರಯತ್ನವನ್ನು ಆದ್ಯ ಕವಿ ದೇವರದಾಸಿಮಯ್ಯ ಮಾಡಿದ್ದರು ಎಂದು ಎಎಸ್ಪಿ ಕುಮಾರಸ್ವಾಮಿ ಹೇಳಿದರು.

ಸೋಮವಾರ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಪಂ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಶ್ರೀದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ವಚನಗಳಿಂದ ಸ್ವಸ್ಥ ಸಮಾಜ ನಿರ್ಮಾಣ ಮಾಡಿ ಸನ್ಮಾರ್ಗದೆಡೆಗೆ ನಡೆಸಿದರು. ವಚನಕಾರರಲ್ಲಿ ಮೊದಲ ವಚನಕಾರರೆಂದು ಹೆಸರುವಾಸಿಯಾಗಿ, ಸಮಾಜದಲ್ಲಿ ಎಲ್ಲರೂ ಒಂದೇ ಆಗಿದ್ದಾರೆ. ಇಲ್ಲಿ ಜಾತಿ, ಲಿಂಗ, ಧರ್ಮ ಹಾಗೂ ವರ್ಣ ಬೇದವಿಲ್ಲ, ಎಲ್ಲರೂ ಸಮನಾಗಿ, ಉತ್ತಮ ಜೀವನವನ್ನು ನಡೆಸಬೇಕೆಂಬ ಸಂದೇಶಗಳನ್ನು ತಮ್ಮ ವಚನಗಳ ಮೂಲಕ ಸಮಾಜಕ್ಕೆ ದಾಸಿಮಯ್ಯ ತಿಳಿಸಿದ್ದು, ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ಬದುಕನ್ನು ರೂಪಿಸಿಕೊಳ್ಳಬೇಕು ಎಂದರು.

ಮಹಾನಗರ ಪಾಲಿಕೆಯ ಸದಸ್ಯ ಕಾರ್ಯದರ್ಶಿ ಹಾಗೂ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಾ ಶಾವಂತಗೇರಾ ಮಾತನಾಡಿ, ವಿಶ್ವ ಹಾಗೂ ಕನ್ನಡ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ಅಪಾರವಾದದ್ದು, ಬಸವಣ್ಣನವರಿಗಿಂತಲೂ ಮುಂಚಿತವಾಗಿಯೇ 11ನೇ ಶತಮಾನದಲ್ಲಿ ವಚನ ಸಾಹಿತ್ಯವನ್ನು ರಚಿಸಿದವರು ದೇವರ ದಾಸಿಮಯ್ಯನವರಾಗಿದ್ದಾರೆ ಎಂದು ಹೇಳಿದರು.



> ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಒಂದು ವರ್ಷದಲ್ಲಿ ಸುಮಾರು 33 ಜಯಂತಿಗಳನ್ನು ಆಚರಣೆ ಮಾಡಲಾಗುತ್ತದೆ. ಅದರಲ್ಲಿ ದೇವರದಾಸಿಮಯ್ಯ ಜಯಂತಿಯೂ ಒಂದಾಗಿದ್ದು, ದೇವರ ದಾಸಿಮಯ್ಯನವರು ವಚನ ಸಂಗ್ರಹ ಹೊತ್ತಿಗೆಯ ಮೂಲಕ ಸಮಾಜಕ್ಕೆ ಉತ್ತಮ ಸಂದೇಶಗಳನ್ನು ನೀಡಿದ್ದಾರೆ. ರಾಮನಾಥ ಎಂಬ ಅಂಕಿತದಿಂದ ಹಲವು ವಚನಗಳನ್ನು ರಚಿಸಿ, ಸಮಾಜಕ್ಕೆ ಉತ್ತಮ ಹಾದಿಯನ್ನು ಹಾಕಿಕೊಟ್ಟಿದ್ದಾರೆ.
>
> ■ ಉತ್ತರಾದೇವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ

ಉಪನ್ಯಾಸ ನೀಡಿದ ರಮೇಶಬಾಬು ಯಾಳಗಿ, ನಾಡಿನ ಎಲ್ಲ ಸ್ಪುರುಷರನ್ನು ಆಯಾ ಜಾತಿಗೆ ಸೀಮಿತ ಮಾಡಬಾರದು ಅವರೆಲ್ಲ ನಾಡಿನ ಆದರ್ಶಪ್ರಾಯರಾಗಬೇಕು. ದಾಸಿಮಯ್ಯ ಜಯಂತಿಯು ಕೇವಲ ನೇಕಾರ ಸಮಾಜಕ್ಕೆ ಸೀಮಿತವಾಗದೇ. ಇಡೀ ಮನುಕುಲಕ್ಕೆ ಸಂಭ್ರಮದ ಹಬ್ಬವಾಗಬೇಕು. ಪ್ರತಿಯೊಬ್ಬರ ಬಾಳನ್ನು ಬೆಳಗಿಸುವ ಸದ್ಗುಣಗಳು ವಚನಗಳಲ್ಲಿ ಅಡಗಿದ್ದು, ವರ್ತನೆಗಳನ್ನು ಸರಿಪಡಿಸುವ, ಸರಿದಾರಿಯಲ್ಲಿ ನಡೆಯಲು ವಚನಗಳು ಸಹಕಾರಿಯಾಗಿವೆ ಎಂದು ಹೇಳಿದರು. ವೇದಿಕೆ ಕಾರ್ಯಕ್ರಮಕ್ಕೂ ಪೂರ್ವದಲ್ಲಿ ದೇವರ ದಾಸಿಮಯ್ಯ ಭಾವಚಿತ್ರಕ್ಕೆ ರಾಯಚೂರು ತಹಶೀಲ್ದಾರ ಸುರೇಶ ವರ್ಮ, ರಾಯಚೂರು ಮಹಾನಗರ ಪಾಲಿಕೆಯ ಕಂದಾಯ ವಿಭಾಗದ ಉಪ ಆಯುಕ್ತೆ ಸಂತೋಷ ರಾಣಿ, ಮುಖಂಡರಾದ ರವಿ ಭೋಸರಾಜು, ನರಸಿಂಹಲು ಮಾಡಗಿರಿ, ಕೆ.ಶಾಂತಪ್ಪ ಅವರು ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಸಮಾಜದ ಮುಖಂಡರಾದ ಜಿ.ನಾಗರಾಜ ಮಾನವಿ, ದೊಡ್ಡ ಈರಣ್ಣ, ಉದಯ ಕುಮಾರ್, ಹೆಚ್.ವೆಂಕಟೇಶ, ಮೈಕಲ್ ಬಾಬು, ದತ್ತಾತ್ರೇಯ, ವಿಠ್ಠಲ್, ಪುಷ್ಪವಂತಿ, ನಾಗರಾಜ, ಶ್ರೀನಿವಾಸ ಕೆ.ಎನ್., ಶಿವಾನಂದ, ಬಸವರಾಜ ಇತರಿದ್ದರು.

ಮೂಲ ಸೌಕರ್ಯಗಳಿಗೆ ಜೆಡಿಎಸ್ ಆಗ್ರಹ

• **ಕೊಪ್ಪಳ:** ನಾಗರಿಕ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆಗ್ರಹಿಸಿ ಜೆಡಿಎಸ್ ಪಕ್ಷದ ನಿಯೋಗವು ಸೋಮವಾರ ಜಿಲ್ಲಾಡಳಿತಕ್ಕೆ ಮನವಿ ಪತ್ರ ಸಲ್ಲಿಸಿತು.

ಮುಖ್ಯ ರಸ್ತೆಗಳಲ್ಲಿ ನೆರಳಿನ ಪರದೇ ಅಳವಡಿಸುವುದು, ಗವಿಮಠದ ಕೆರೆ ಪಕ್ಕದಲ್ಲಿ ರುದ್ರಭೂಮಿ, ಕುಣಕೇರಿ, ಹಾಲವರ್ತಿ, ಹೂವಿನಾಳ, ಕುಣಕೇರಿ ತಾಂಡಾ ಗ್ರಾಮಗಳಿಗೆ ಹೋಗುವ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸುವುದು, ಗಂಗಾವತಿ-ಹೊಸಪೇಟೆ ರಸ್ತೆ, ಕುಷ್ಟಗಿ ರಸ್ತೆ, ಲೇಬರ್ ಸರ್ಕಲ್, ಭಾಗ್ಯನಗರ ರಸ್ತೆ, ಗಡಿಯಾರ ಕಂಬ, ಸಿಂದೋಗಿ ರಸ್ತೆ, ಕುಣಕೇರಿ ಕ್ರಾಸ್ ರಸ್ತೆ ಪ್ರದೇಶಗಳಲ್ಲಿ ಬಸ್ ತಂಗುದಾಣ ನಿರ್ಮಾಣ, ಪಾರ್ಕ್ ನಿರ್ಮಾಣ,

ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ, ನಾಲೆ ವ್ಯವಸ್ಥೆ,

ಚರಂಡಿಗಳ ಸ್ವಚ್ಛತೆ ಸೇರಿದಂತೆ ಇತರೆ ಕಾಮಗಾರಿಗಳನ್ನು ಈ ಕೂಡಲೇ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ಮೂಲಭೂತ ಸೌಕರ್ಯಗಳು ಇಲ್ಲದೆ ಇರುವುದರಿಂದ ನಾಗರಿಕರಿಗೆ ತೀವ್ರ ತೊಂದರೆಯಾಗಿದೆ. ಇದನ್ನು ಜಿಲ್ಲಾಡಳಿತ ಕೂಡಲೇ ಗಮನಿಸಿ ಕಾರ್ಯ ಪ್ರವೃತ್ತವಾಗಬೇಕೆಂದು ಆಗ್ರಹಿಸಿದರು.

ಅಪರ ಜಿಲ್ಲಾಧಿಕಾರಿ ಸಿದ್ದರಾಮಯ್ಯ ಅವರು ಮನವಿ ಪತ್ರ ಸ್ವೀಕರಿಸಿ ಬೇಡಿಕೆಗಳ ಈಡೇರಿಕೆಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಪಕ್ಷದ ನಗರ ಘಟಕದ ಅಧ್ಯಕ್ಷ ಸೋಮನಗೌಡ ಹೊಗರನಾಳ ನೇತೃತ್ವದ ನಿಯೋಗದಲ್ಲಿ ಗೌರವ ಅಧ್ಯಕ್ಷಸಿದ್ದಪ್ಪ ಕವಲೂರು, ಜಿಲ್ಲಾ ಕೈಗಾರಿಕಾ ಅಧ್ಯಕ್ಷ ಮಾರುತಿಗೌಡ ಪೊಲೀಸ್ ಪಾಟೀಲ್, ಜಿಲ್ಲಾ ಮುಖಂಡರಾದ ಮಂಜುನಾಥ ಅಳವಂಡಿ ವದಗನಾಳ, ಮಹೇಶ್ ಕಂದಾರಿ, ಮಹಿಳಾ ನಗರ ಅಧ್ಯಕ್ಷೆ ನಿರ್ಮಲಾ ಮೇದಾರ, ನಗರ ಕಾನೂನು ಅಧ್ಯಕ್ಷ ಬಸವರಾಜ್ ಎಸ್., ನಗರ ಉಪಾಧ್ಯಕ್ಷರಾದ ಗಂಗಾಧರ ವಸ್ತ್ರದ್, ನಗರ ಪ್ರಧಾನ ಕಾರ್ಯದರ್ಶಿ ಸಿದ್ದೇಶ ಇಂಗಳದಾಳ, ನಗರ ಮಹಿಳಾ ವಿದ್ಯಾರ್ಥಿ ವಿಭಾಗ ಅಧ್ಯಕ್ಷ ಜಯಶ್ರೀ ಬಸವರಾಜ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಬೆಳಗಿನ ಬುತ್ತಿ ಕವನ ಸಂಕಲನ ಲೋಕಾರ್ಪಣೆ

• **ಕುಷ್ಟಗಿ:** ಪಟ್ಟಣದ ಮಾತೋಶ್ರೀ ಹೊಳೆಯಮ್ಮ ಮಹಿಳಾ ಪದವಿ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಬಾಲಕಿಯರ ಪ್ರೌಢ ಶಾಲೆ ಹನಮಸಾಗರ ಮತ್ತು ಭುವನ್ ಪ್ರಕಾಶನ ಸಂಯುಕ್ತಾಶ್ರಯದಲ್ಲಿ ಸಾಹಿತಿ ಬೀರಪ್ಪ ಕಡ್ಲಿಮಟ್ಟಿ ಅವರ ಬೆಳಗಿನ ಬುತ್ತಿ ಕವನ ಸಂಕಲನ ಲೋಕಾರ್ಪಣೆ ಸಮಾರಂಭ ನಡೆಯಿತು.

ಶಾಸಕ ದೊಡ್ಡನಗೌಡ ಪಾಟೀಲ ಮಾತನಾಡಿ, ಕವಿ ತನ್ನಲ್ಲಿರುವ ಅನೇಕ ವಿಚಾರ ಗಳನ್ನು ಕೃತಿಗಳ ಮೂಲಕ ಹೊರ ತಂದಾಗ ಮಾತ್ರ ಸಮಾಜಕ್ಕೆ ಬೆಳಕಾಗುತ್ತದೆ. ಜನರಿಗೆ ಉಪಯುಕ್ತವಾಗಬೇಕು. ಓದು ಹವ್ಯಾಸ ಕಡಿಮೆ ಆಗಿದೆ. ಕವನ ಸಂಕಲನ, ಕಥಾ ಸಂಕಲನ ಹೊರತರಬೇಕಿದೆ. ಓದುಗರನ್ನು ಹಿಡಿದಿಡುವ ಕೆಲಸವಾಗಬೇಕು. ಕವಿ ಹೃದ ಯದ ಜತೆಗೆ ಮಾನವೀಯ ಮೌಲ್ಯ ಕಲಿಸಬೇಕಿದೆ ಎಂದರು.

ಚಂದಪ್ಪ ಹಕ್ಕಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಾಹಿತ್ಯ ರಚನೆ ಮಾಡುವುದು ಅಷ್ಟು ಸುಲಭವಲ್ಲ, ಪರಪುಂಜಗಳ ಕಟ್ಟಿ ಕೊಂಡ ರಚಿಸಿರುತ್ತಾರೆ ಎಂದರು.

ಜಿಪಂ ಮುಖ್ಯ ಲೆಕ್ಕಾಧಿಕಾರಿ ಅಮೀನಸಾಬ ಅತ್ತಾರ ಆಶಯ ನುಡಿ ವ್ಯಕ್ತಪಡಿಸಿ, ಜಾತಿ, ಮತ ಪಂಥ ಮೀರಿ ಕವನಗಳನ್ನು ಬರೆದಿದ್ದಾರೆ. ನಾವೂ ಹೃದಯರಾಗರಿಬೇಕು. ಬದುಕಿನ ಪ್ರೇರಣೆ ಅದರಲ್ಲಿ ಅಡಗಿದೆ ಎಂದರು.

ನಿವೃತ್ತ ಉಪನ್ಯಾಸಕ ಹಾಗೂ ಸಾಹಿತಿ ಡಾ.ನಾಗಾರಾಜ ನಾಡಗೌಡ್ರ ಮಾತನಾಡಿ, ಪ್ರೀತಿ ಎನ್ನುವ ಶಕ್ತಿ ಇಂದು ನಮ್ಮೆಲರನ್ನು ಒಟ್ಟಗೂಡಿಸಿದೆ. ಮನುಷ್ಯ ಜಾತಿಯನ್ನು ನಾವು ಎಂದು ಅಳವಡಿಸಿಕೊಳ್ಳಲಿಲ್ಲ, ಬಸವಣ್ಣನತತ್ವಗಳನ್ನುಅಳವಡಿಸಿಕೊಳ್ಳಬೇಕು. ಜಾತ್ಯಾತೀತ ಕವಿ. ನಾವುಗಳು ಇಂದು ಮಕ್ಕಳಿಗೆ ಸಂಸ್ಕಾರ ಕಲಿಸುತ್ತಿಲ್ಲ, ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿವೆ.

ಜಿಪಂ ಮಾಜಿ ಹನಮಂತಪ್ಪ ಚೌಡ್ಕಿ, ಬಿಇಒ ಉಮಾದೇವಿ ಬಸಾಪುರ, ಜಿಪಂ ಮುಖ್ಯ ಲೆಕ್ಕಾಧಿಕಾರಿ ಅಮಿನಸಾಬ ಅತ್ತಾರ, ಡಾ.ನಾಗರಾಜ ನಾಡಗೌಡ, ಪ್ರಾಧ್ಯಾಪಕ ಡಾ.ನಿಂಗಪ್ಪಕಂಬಳಿ, ಡೈಯಟ್‌ನ ವೆಂಕಟೇಶ ಗೌಡ್ರ, ಪ್ರಾಥಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷ ನಿಂಗಪ್ಪ ಗುನ್ನಾಳ, ಕಸಾಪ ಅಧ್ಯಕ್ಷ ಲಂಕೆಪ್ಪ ವಾಲೇಕಾರ, ಪವಾಡೆಪ್ಪ ಚೌಡ್ಕಿ, ನೀಲನಗೌಡ್ರ ಹೊಸಗೌಡ್ರ, ಶಿವಬಸಪ್ಪ ಕಡೆಮನಿ, ಬೀರಪ್ಪ ಕುರಿ, ಮಲ್ಲಿಕಾರ್ಜುನ ಲಕ್ಕಲಕಟ್ಟಿ, ಮಲ್ಲಪ್ಪ ಹೆಬ್ಬಾಳ, ನಾಗಪ್ಪ ಬಿಳೆಯಪ್ಪನವರ್, ಮಲ್ಲಪ್ಪ ಚನ್ನಪ್ಪನವರ್, ಗೌರಮ್ಮತಳವಾರ, ಶಕೀರಬಾಬು ಸೇರಿದಂತೆ ಇತರರಿದ್ದರು.



ಸೇಬಿನಕಟ್ಟಿ ಹನುಮಾವಧೂತರ ರಥೋತ್ಸವ ಅದ್ದೂರಿ

• **ಹನುಮಸಾಗರ:** ಸಮೀಪದ ಸೇಬಿನಕಟ್ಟಿ ಗ್ರಾಮವು ಸರ್ವ ಧರ್ಮ ಸಮನ್ವಯ ಸಂಕೇತವಾಗಿದೆ. ಗ್ರಾಮದ ಆರಾಧ್ಯ ದೈವನಾದ ಶ್ರೀಗುರು ಹನುಮಾವಧೂತರು ನೆರೇಗಲ್ಲ ಗ್ರಾಮದ ಬ್ರಾಹ್ಮಣ ದಂಪತಿ ಜೀವನ್ ಭಟ್ಟರು ಮತ್ತು ತುಳಜಾಭವಾನಿಯವರ ಗರ್ಭದಲ್ಲಿ ಜನಿಸಿ, ಬಾಲ್ಯದಲ್ಲೇ ವಿಶೇಷ ಗುಣಗಳನ್ನು ತೋರಿದ ಅವರು, ಚಿಕ್ಕ ವಯಸ್ಸಿನಲ್ಲಿಯೇ ಮನೆ ತೊರೆದು ಸೇವೆಯ ಮಾರ್ಗ ಆರಿಸಿಕೊಂಡರು.

ಇವರು ಅಜಾತನಾಗಲಿಂಗ ಅವರಿಂದ ದೀಕ್ಷೆ ಪಡೆದು ಅವರ ಶಿಷ್ಯನಾಗಿ ಅದ್ವೈತ ಸಂಪ್ರದಾಯ ಪ್ರಚಾರ ಮಾಡಿದರು. ದೇವತ್ ಮುನಿಯ ಮಾರ್ಗದರ್ಶನದಲ್ಲಿ ಅವರು ಆಧ್ಯಾತ್ಮಿಕ ಜ್ಞಾನವನ್ನು ಪಡೆದು, ಸಮಾಜದಲ್ಲಿ ಧರ್ಮ ಮತ್ತು ಸತ್ಪ್ರವೃತ್ತಿಗಳನ್ನು ಬೆಳೆಸಲು ಶ್ರಮಿಸಿದರು.

ಮಹಾರಾಷ್ಟ್ರ ಮತ್ತು ಕರ್ನಾಟಕದ ಅನೇಕ ಭಾಗಗಳಲ್ಲಿ ಸಂಚರಿಸಿ, ತಮ್ಮ ಅಮೋಘ ಲೀಲೆಯಿಂದ ಜನರನ್ನು ಪ್ರೇರೇಪಿಸಿದರು.



ನರೇಗಲ್ಲ, ಕಾಲಕಾಲೇಶ್ವರ, ಕೊಪ್ಪಳ, ಬೂದಗುಂಪಿ, ಕುಂಬಳಾವತಿ, ಯರಗೇರಿ, ಮಡಿಕೇರಿ, ಹನಮಸಾಗರ ಮತ್ತು ಸೇಬಿಣಕಟ್ಟಿ ಮುಂತಾದ ಸ್ಥಳಗಳಲ್ಲಿ ದುಷ್ಟರನ್ನು ಬುದ್ದಿಗೊಳಿಸಿ, ಶಿಷ್ಟರನ್ನು ರಕ್ಷಿಸಿದರು. ಇವರ ಮಹಾನ್ ಕಾರ್ಯಗಳಿಗೆ 'ಧರ್ಮೋಧಾರಕ' ಎಂಬ ಬಿರುದು ದೊರೆಯಿತು.

ಪ್ರತಿವರ್ಷ ಇಲ್ಲಿ ನಡೆಯುವ ಜಾತ್ರೆ ಬಹಳ ಭರ್ಜರಿಯಾಗಿದ್ದು, ಹೆಚ್ಚಿನ ಭಕ್ತರು ಪೂಜೆ, ಭಜನೆ, ಅನ್ನದಾನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಈ ಜಾತ್ರೆ ಗ್ರಾಮೀಣ ಸಂಸ್ಕೃತಿ ಮತ್ತು ಭಕ್ತಿಯ ಸೊಬಗನ್ನು ಪ್ರತಿಬಿಂಬಿಸುತ್ತದೆ.

ಭಕ್ತರ ನಂಬಿಕೆಯ ಪ್ರಕಾರ, ಈ ದೇವಸ್ಥಾನದಲ್ಲಿ ಪ್ರಾರ್ಥನೆ ಮಾಡಿದರೆ ಕಷ್ಟಗಳು ನಿವಾರಣೆ ಆಗುತ್ತವೆ. ಮನಶಾಂತಿ ದೊರೆಯುತ್ತದೆ ಎಂದು ಜನರು ನಂಬುತ್ತಾರೆ.

ಪ್ರತಿವರ್ಷ ಯುಗಾದಿ ಪ್ರತಿಪದದಂದು ಶ್ರೀಗುರು ಹನಮಧೂತ್ನ ಜಾತ್ರಾ ಮಹೋತ್ಸವ, ಮರುದಿನ ಅಡ್ಡಪಲ್ಲಕ್ಕಿ ಉತ್ಸವ, ಪುರಾಣ ಪ್ರವಚನ ಮಂಗಳ, ಸಾಮೂಹಿಕ ವಿವಾಹ, ರಕ್ತದಾನ ಶಿಬಿರ,ಸಿರಿಗನ್ನಡ ಸ್ವರ ಸಂಗೀತ ಪಾಠಶಾಲೆ ಸೇಬಿನಕಟ್ಟೆ ಹನುಮಸಾಗರ ಆಶ್ರಯದಲ್ಲಿ ಸಂಗೀತ ರಸಮಂಜರಿ ಕಾರ್ಯಕ್ರಮ ಸೇರಿದಂತೆ ವಿವಿಧ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗಿದವು.

ರೈತರನ್ನು ಒಕ್ಕಲೆಬ್ಬಿಸುವ ಹುನ್ನಾರ: ಎಂ.ಎನ್.ಕುಕನೂರು ಆರೋಪ

• **ಯಲಬುರ್ಗಾ:** ಫಲವತ್ತಾದ ಭೂಮಿಯನ್ನು ಖರೀದಿ ಮಾಡಿ ವಾಣಿಜ್ಯೋದ್ಯಮ ಪ್ರಾರಂಭಿಸಿ ರೈತರನ್ನು ಒಕ್ಕಲುತನದಿಂದ ಒಕ್ಕಲೆಬ್ಬಿಸುವ ಹುನ್ನಾರ ಕೇಂದ್ರ ಮತ್ತು ರಾಜ್ಯ ಸರಕಾರ ಮಾಡುತ್ತಿದೆ ಎಂದು ಭಾರತೀಯ ಕ್ರಾಂತಿಕಾರಿ ಕಿಸಾನ್ ಸೇನಾ ಸಂಘದ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಎಂ.ಎನ್. ಕುಕನೂರು ಹೇಳಿದರು.

ತಾಲೂಕಿನ ಯಾಪಲದಿನ್ನಿ ಗ್ರಾಮದಲ್ಲಿ ಭಾರತಿಯ ಕ್ರಾಂತಿಕಾರಿ ಕಿಸಾನ್ ಸೇನಾ ಗ್ರಾಮ ಘಟಕದ ನಾಮ ಫಲಕ ಅನಾವರಣಗೊಳಿಸಿ ಮಾತನಾಡಿದ ಅವರು, ನಮ್ಮನ್ನಾಳುವ ಚುನಾಯಿತ ಪ್ರತಿನಿಧಿಗಳು ದೇಶವಿದೇಶಗಳಲ್ಲಿ ಕುಳಿತು ಕೊಂಡು ನಮ್ಮ ಭೂಮಿಯನ್ನ ಖರೀದಿ ಮಾಡಿ ರೈತರು ಹೊಲಗಳಲ್ಲಿ ವಿಂಡ್ ಪವರ್ ಹಾಗೂ ಸೋಲಾರ್ ಪ್ಲಾಂಟೇಶನ್ ಅಳವಡಿಸಿ ವಾಣಿಜ್ಯೋದ್ಯಮ ಮಾಡುತ್ತಿದ್ದಾರೆ ಎಂದರು. ಸಮಾಜ ಸೇವಕ ಭರತ ರಾಮೇಗೌಡ ಕ್ರಾಂತಿಕಾರಿ ಕಿಸಾನ್ ಸೇನಾ ಸಂಘದ ಜಿಲ್ಲಾಧ್ಯಕ್ಷ ಪಿಡ್ಡನಗೌಡ ಮಾಲಿಪಾಟೀಲ, ಕರವೇ ಜಿಲ್ಲಾಧ್ಯಕ್ಷ ಬಸವರಾಜ ಹಳ್ಳಿ, ಜಿಲ್ಲಾ ಉಪಾಧ್ಯಕ್ಷ ದುರುಗಪ್ಪ ಮಾದರ, ತಾಲೂಕಾಧ್ಯಕ್ಷ ಅಯ್ಯಪ್ಪ ಭಾವಿ, ವಿಜಯಕುಮಾರ ಛಲವಾದಿ, ಕಳಕಯ್ಯ ಹಿರೇಮಠ, ಕಳಕಯ್ಯ ಬಳ್ಳೊಳ್ಳಿ, ಬಸಣ್ಣ ಹಟ್ಟಿ, ಪ್ರಭುದೇವ ಮೇಟಿ, ಗ್ಯಾನಪ್ಪ ಮೇಟಿ, ಕನಕಾಚಲ ವಾಲ್ಮೀಕಿ, ತಿಮ್ಮನಗೌಡ ಪೊಲೀಸ್‌ಪಾಟೀಲ, ರಾಜಪ್ಪ ಕುರಿ, ದ್ಯಾಮಣ್ಣ ಕಲ್ಲೂರು, ನಾಗರಾಜ ಮೇಟಿ, ರಾಮಣ್ಣ ಪೂಜಾರ, ಕನಕಪ್ಪ ಬಡಿಗೇರ, ಕಾಶಿಮಸಾಬ, ಬಸವರಾಜ ವಾಲ್ಮೀಕಿ, ಹನುಮಂತಪ್ಪ ದೀಪಾಲಿ, ಮಾರುತಿ ಪೊಲೀಸ್‌ಪಾಟೀಲ, ಹನುಮಂತ ಕವಳಕೇರಿ, ಕರಿಯಪ್ಪ ತಳವಾರ, ಮಂಜುನಾಥ ದೊಡ್ಮನಿ ಇದ್ದರು.

ಭವಿಷ್ಯದ ಪೀಳಿಗೆಗೆ ಅಂತರ್ಜಲ ಮಟ್ಟ ಕಾಯ್ದುಕೊಳ್ಳಿ

• **ಕಲಬುರಗಿ:** ನೀರು ಭೂಮಿ ಮೇಲೆ ಸಿಗುವ ಜೀವ ಜಲ. ಇದು ರಾಷ್ಟ್ರೀಯ ಆಸ್ತಿಯಾಗಿದೆ. ಪ್ರತಿ ಮನೆಯಲ್ಲಿ ಮಿತ ನೀರು ಬಳಕೆಯೊಂದಿಗೆ ನೀರಿನ ಸಂರಕ್ಷಣೆ ಮತ್ತು ಮಳೆನೀರು ಕೊಯ್ಲು ಉಪಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಭವಿಷ್ಯದ ಪೀಳಿಗೆಗೆ ಅಂತರ್ಜಲ ಮಟ್ಟ ಕಾಯ್ದುಕೊಳ್ಳಬೇಕಾಗದ ಅಗತ್ಯವಿದೆ ಎಂದು ಜಿಪಂ ಸಿಇಒ ಭಂವರ್ ಸಿಂಗ್ ಮೀನಾ ಅವರು ಗ್ರಾಮಸ್ಥರಿಗೆ ಕರೆ ನೀಡಿದರು.

ಜಿಪಂ, ತಾಪಂ ಹಾಗೂ ನಂದಿಕೂರ ಗ್ರಾಪಂ ಸಂಯುಕ್ತಾಶ್ರಯದಲ್ಲಿ ನಂದಿಕೂರ ಗ್ರಾಮದಲ್ಲಿ ಆಯೋಜಿಸಿದ ವಿಶ್ವ ಜಲ ದಿನ-2026 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೈನಂದಿನ ಜೀವನದಲ್ಲಿ ನೀರಿನ ಅವಶ್ಯಕತೆ ಮತ್ತು ಜವಾಬ್ದಾರಿಯುತ ಲವಾಗಿ ಅದರ ಬಳಕೆಯ ಮಹತ್ವವನ್ನು ಒತ್ತಿ ಹೇಳಿದ ಅವರು, ಅನಗತ್ಯ ನಲ್ಲಿಯಿಂದ ನೀರು ಪೋಲಾಗದಂತೆ ನೋಡಿಕೊಳ್ಳಿ ಎಂದರು.



ಮನೆ ಮಟ್ಟದಲ್ಲಿ ಸೋಕ್ ಪಿಟ್ ಗಳು ಮತ್ತು ಸಮುದಾಯ ಮಟ್ಟದಲ್ಲಿ ಲೀಚ್ ಪಿಟ್‌ಗಳು ಮತ್ತು ರೀಚಾರ್ಜ್ ಪಿಟ್‌ಗಳು, ಜೊತೆಗೆ ಮೇಲ್ಛಾವಣಿ ಮಳೆ ನೀರು ಕೊಯ್ಲು ರಚನೆಗಳ ಕುರಿತು ಪ್ರಾಯೋಗಿಕ ಪ್ರದರ್ಶನದ ಮೂಲಕ ಸಾರ್ವಜನಿಕರಿಗೆ ಮಾಹಿತಿ ನೀಡಿದಲ್ಲದೆ ಜಿಲ್ಲೆಯಾದ್ಯಂತ ನೀರಿನ ಸಾಕ್ಷರತೆ, ಅಂತರ್ಜಲ ಸಂರಕ್ಷಣೆ ಮತ್ತು ಸುಸ್ಥಿರ ನೀರಿನ ನಿರ್ವಹಣೆಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಜಾಗೃತಿ ಉಂಟು ಮಾಡುವ ಕೆಲಸ ಜಿಪಂ ಮಾಡುತ್ತಿದೆ ಎಂದರು.

ಗ್ರಾಮೀಣ ಭಾಗದಲ್ಲಿ ಜಲ ಮೂಲಗಳಾದ ಕೆರೆ, ಬಾವಿ, ಕೊಳವೆ ಬಾವಿ, ಗುಮ್ಮಿ, ಪುಷ್ಕರಣಿಗಳಂತಹ ಜಲ ಮೂಲಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಜೊತೆಗೆ ಹಳ್ಳಿ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆಗೆ ಅಧಿಕಾರಿಗಳು ಹೆಚ್ಚು ಮುತುವರ್ಜಿ ವಹಿಸಬೇಕು ಎಂದು ಅಧಿಕಾರಿಗಳಿಗೆ ಸಿಇಒ ಭಂವರ್ ಸಿಂಗ್ ಮೀನಾ ಕರೆ ನೀಡಿದರು.

ಗ್ರಾಮೀಣ ಭಾಗದಲ್ಲಿ ನೀರು ಪೂರೈಕೆಯ ಗುಮ್ಮಿ, ಓಎಚ್‌ಟಿ ಟ್ಯಾಂಕ್, ವಾಟರ್ ಪೈಪ್‌ಲೈನ್, ಕೊಳವೆ ಬಾವಿ ಸುತ್ತ ನಿರಂತರ ಸ್ವಚ್ಛತೆ ಮಾಡುವುದರ ಜೊತೆಗ ಪ್ರತಿ ಹಂತದಲ್ಲಿಯೂ ಕ್ಲೋರಿನೇಷನ್ ಮಾಡಿ ನೀರು ಶುದ್ಧೀಕರಣಕ್ಕೆ ಬೇಕಾದ ಬ್ಲೀಚಿಂಗ್ ಪೌರ್ ದಾಸ್ತಾನು ಮಾಡಿಕೊಳ್ಳಬೇಕು. ಕೊಲವೆ ಬಾವಿ ಗಳಿಗೆ ಯಾವುದೇ ಕಾರಣಕ್ಕೂ ಚರಂಡಿ ನೀರು ಕುಡಿಯುವ ನೀರಿಗೆ ಸೇರದಂತೆ ಕಟ್ಟೆಚ್ಚರ ವಹಿಸಬೇಕು. ಕೇಸಿಂಗ್ ಪೈಪ್ ಕನಿಷ್ಟ ನೆಲದಿಂದ ಎರಡು ಅಡಿ ಎತ್ತರ ಇರುವಂತೆ ನೋಡಿಕೊಳ್ಳಬೇಕು ಎಂದರು.

ನೀರು ಗುಣಮಟ್ಟ ಪರಿಶೀಲನಾ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಜಿಪಂ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಸಹಾಯಕ ಕಾರ್ಯದರ್ಶಿ ರೇವಣಸಿದ್ದಪ್ಪ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಇ.ಇ.ಜಗದೇವಪ್ಪ ಜೀವಣಗಿ, ಪಿಡಿಒ ಸಂದೀಪ ಗುತ್ತೇದಾರ ಹಾಗೂ ಇತರೆ ಸಿಬ್ಬಂದಿ ಇದ್ದರು.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹ

• **ಕುಕನೂರು:** ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಸೋಮವಾರ ಮಹಿಳಾ ದಿನಾಚರಣೆಯ ಅಂಗವಾಗಿ ಕರ್ನಾಟಕ ವ್ಯವಸಾಯ ವೃತ್ತಿಪರ ಯೂನಿಯನ್ ವತಿಯಿಂದ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿ ಅವರಿಗೆ ಮಹಿಳಾ ಕೂಲಿ ಕಾರ್ಮಿಕರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮನವಿ ನೀಡಲಾಯಿತು.

ನಂತರ ಸಂಘಟನಾಕಾರರು ಮಾತನಾಡಿ, ಇಂದಿನ ಸರ್ಕಾರ ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮತ್ತು ಪುರುಷರಿಗೆ ಸಮಾನ ಕೂಲಿ ಮತ್ತು ಕನಿಷ್ಠ ಕೂಲಿ 850ಗಳನ್ನು ದೃಢೀಕರಿಸಬೇಕು. ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ವರದಕ್ಷಣೆ ನಿಷೇಧ ಕಾಯ್ದೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕು. ಅತ್ಯಾಚಾರ ಮತ್ತು ಕೌಟುಂಬಿಕ ದೌರ್ಜನ್ಯಗಳಿಗೆ ಕಾರಣವಾಗಿರುವ ಮದ್ಯದ ಅಂಗಡಿಗಳನ್ನು ನಿಷೇಧಿಸಬೇಕು ದಲಿತ ಮಹಿಳೆಯರಿಗೆ 5 ಎಕರೆ ಭೂಮಿಯನ್ನು ಸರ್ಕಾರ ನೀಡಬೇಕು. 55 ವರ್ಷ ಪೂರೈಸಿದ ಪ್ರತಿ ಮಹಿಳೆಯರಿಗೆ ಪಿಂಚಣಿಯನ್ನು ಐದು ಸಾವಿರರೂಪಾಯಿಗಳನ್ನು ನೀಡಬೇಕು. ಮಹಿಳೆಯರಿಗಾಗಿ ಆಸ್ತಿ ಹಕ್ಕು ಕಾನೂನು ಪ್ರಚಾರ ಮಾಡಬೇಕು ಎಂದು ಹೇಳಿದರು. ಕೆವಿವಿ ಯೂನಿಯನ್ ನ ಜಿಲ್ಲಾ ಕಾರ್ಯದರ್ಶಿ ಯಲ್ಲಪ್ಪ ಮ್ಯಾಗಳಕೇರಿ, ತಾಲೂಕು ಸಂಯೋಜಕ ಲಲಿತಾ ಭಜಂತ್ರಿ, ಸುಂಕಪ್ಪ ಮಿಸಿ, ಶೈಲಜಾ ಬೆಲ್ಲದ ಇತರರಿದ್ದರು.



ದೇವರದಾಸಿಮಯ್ಯ ಜಯಂತಿ ಆಚರಣೆ



• **ಕೊಪ್ಪಳ:** ವಚನ ಸಾಹಿತ್ಯಕ್ಕೆ ದೇವರ ದಾಸಿಮಯ್ಯನವರ ಕೊಡುಗೆ ಅಪಾರವಾಗಿದ್ದು, ವಚನಗಳ ಮೂಲಕ ಸಮಾಜಕ್ಕೆ ಮಾರ್ಗದರ್ಶನ ನೀಡಿದರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಹೇಳಿದರು. ಸೋಮವಾರ ನಗರದ ಸಾಹಿತ್ಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಶ್ರೀದೇವರ ದಾಸಿಮಯ್ಯ ಅವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗಂಗಾವತಿಯ ಮುರಹರಿನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕರಾದ ಸಾಹಿತಿ ಅಮರಮ್ಮ ಕೋಟಿ ಅವರು ದೇವರ ದಾಸಿಮಯ್ಯ ಅವರ ಕುರಿತು ನೀಡಿದ ವಿಶೇಷ ಉಪನ್ಯಾಸದಲ್ಲಿ ದಾಸಿಮಯ್ಯನವರು ಕನ್ನಡದ ಮೊದಲ ವಚನಕಾರರಲ್ಲಿ ಒಬ್ಬರು. ಇವರನ್ನು ವಚನ ಸಾಹಿತ್ಯದ ಆದ್ಯ ವಚನಕಾರ ಎಂದು ಕರೆಯಲಾಗುತ್ತದೆ. ಅಂದಿನ ಕಾಲದ ಜನರಲ್ಲಿದ್ದ ಮೂಢನಂಬಿಕೆ, ಮೇಲು-ಕೀಳು ಎಂಬ ಭೇದಭಾವವನ್ನು ಇವರು ತಮ್ಮ ಸರಳ ಮಾತುಗಳ ಮೂಲಕ ತಿದ್ದಿದರು ಎಂದು ಹೇಳಿದರು. ಉಪ ತಹಶೀಲ್ದಾರ್ ಗವಿಸಿದ್ದಪ್ಪ ಹಾಗೂ ನೇಕಾರ ಸಮುದಾಯದ ಅಧ್ಯಕ್ಷರಾದ ಶಿವಶಂಕರಪ್ಪ ಚೆನ್ನಿ, ಶಿವಶಂಕರಪ್ಪ ಕರಡಕಲ ಹಾಗೂ ಸಮಾಜ ಬಂಧುಮಿತ್ರರಿದ್ದರು. ಕಾರ್ಯಕ್ರಮಕ್ಕೂ ಮೊದಲು ನಗರದ ಗೌರಿಶಂಕರ ದೇವಸ್ಥಾನ ಆವರಣದಿಂದ ಸಾಹಿತ್ಯ ಭವನದವರೆಗೆ ದಾಸಿಮಯ್ಯ ಅವರ ಭಾವಚಿತ್ರದ ಮೆರವಣಿಗೆ ಜರುಗಿತು.

ಕಿರುಸುದ್ದಿ

ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಣೆ

ಬಳ್ಳಾರಿ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಮಿತ್ತ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಜಿಲ್ಲೆಯ ನೂರಾರು ಮಹಿಳಾ ನೌಕರರು ಭಾಗವಹಿಸಿದ್ದರು.ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ನೆಲ್ಕುದ್ರಿ ಸದಾನಂದ, ಕಾರ್ಯದರ್ಶಿ ತಿಪ್ಪಾರೆಡ್ಡಿ ಜಿ.ವೈ., ಖಜಾಂಚಿ ಹನುಮಂತರಾಯ, ರಾಜ್ಯ ಪರಿಷತ್ ಸದಸ್ಯರಾದ ಸುರೇಶ ಕುಮಾರ್, ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಡಾ. ಎಂ. ಟಿ ಮಲ್ಲೇಶ್, ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳದ ರಾಜಶೇಖರ್ ಗಾಣಗೇರ, ಜಿ.ಕೆ. ರಾಮಕೃಷ್ಣ, ಶರಣಬಸವ, ರಾಜಶೇಖರ್, ವೀರೇಶ್ ಕುಮಾರ್, ರಮೇಶ್, ತೊಂಡ ಆಂಜಿನೇಯುಲು, ವಿಜಯ ಕಲ್ಯಾಣಿ, ಸೌಮ್ಯ ಕುಷ್ಟಗಿ ಸೇರಿದಂತೆ ಇತರರು ಭಾಗವಹಿಸಿದ್ದರು. ನಂತರ ವಿಜೇತರಿಗೆ ಬಹುಮಾನ ವಿತರಿಸಿ ಗೌರವಿಸಲಾಯಿತು.

ಗುಡದೂರು ದೊಡ್ಡ ಬಸವಾರ್ಯರ ಪುರಾಣ ಪ್ರಾರಂಭ

ಕುರುಗೋಡು: ತಾಲೂಕಿನ ಮುಷ್ಟಗಟ್ಟೆ ರಸ್ತೆಯಲ್ಲಿರುವ ಐತಿಹಾಸಿಕ ಶ್ರೀಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಮಹಾಮಹಿಮ ಶ್ರೀಗುಡದೂರ ದೊಡ್ಡಬಸವಾರ್ಯರ ಪುರಾಣ ಪ್ರವಚನ ಕಾರ್ಯಕ್ರಮ ಇಂದಿನಿಂದ ಪ್ರಾರಂಭವಾಗುತ್ತದೆ



ಎಂದು ದೇವಸ್ಥಾನದ ಆಡಳಿತ ಮಂಡಳಿ ತಿಳಿಸಿದೆಹತ್ತು ದಿನಗಳ ಕಾಲ ನಡೆಯುವ ಪುರಾಣ ಕಾರ್ಯಕ್ರಮ ಏ.2ರಂದು ಸರ್ವ ಭಕ್ತರ ಸಮ್ಮುಖದಲ್ಲಿ ಮಂಗಲಗೊಳುವುದು ಪ್ರತಿ ವರ್ಷದಂತೆ ಈ ವರ್ಷವೂ ಆಗಮಿಸುವ ಭಕ್ತರಿಗೆ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಲಿದೆ ಪ್ರತಿ ದಿನ ಮಠಾಧೀಶರು ಸಾನಿಧ್ಯ ಆಶೀರ್ವಚನ ನಡೆಯಲಿದ್ದು ಪುರಾಣ ಪ್ರವಚನ ಮೇಲು ಮಠದ ಶಡಕ್ಷರಸ್ವಾಮಿ ಕುರುಗೋಡು, ಪುರಾಣ ಪಠಣ ಎಸ್.ಪ್ರಭುಲಿಂಗನಗೌಡ ಮುಷ್ಟಗಟ್ಟೆ, ತಬಲ ವಾದಕರು ಎಂ.ಶೇಖರಯ್ಯ ಸ್ವಾಮಿ ಕುರುಗೋಡು ನಡೆಸಿಕೊಡಲಿದ್ದಾರೆ. ಕಾರ್ಯಕ್ರಮಕ್ಕೆ ಸುತ್ತಮುತ್ತಲಿನ ಮುಷ್ಟಗಟ್ಟೆ ಕುರುಗೋಡು ಕಲ್ಲುಕಂಭ ಗೆಣಿಕೆಹಾಳು ಎಚ್.ವೀರಾಪುರ ಮಲ್ಲಿಕಾರ್ಜುನ ಸ್ವಾಮಿ ಭಕ್ತರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾಗಬೇಕೆಂದು ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಎಸ್ .ಭೀಮನಗೌಡ ತಿಳಿಸಿದರು.

ನಾಗಮೋಹನ್ ದಾಸ್ ವರದಿ ಅವೈಜ್ಞಾನಿಕ: ಶಿವಶರಣ

ಕೆಂಭಾವಿ: ರಾಜ್ಯ ಸರ್ಕಾರ ನೇಮಕ ಮಾಡಿದ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗವು



ನೀಡಿರುವ ವರದಿಯು ಅವೈಜ್ಞಾನಿಕ ದೋಷಪೂರಿತ ಹಾಗೂ ಪಕ್ಷಪಾತದಿಂದ ಕೂಡಿದೆ ಒಳಮಿಸಲಾತಿ ನೀತಿ, ಆಯೋಗದ ವರದಿ ಹಾಗೂ ರೋಸ್ಟರ್ ವ್ಯವಸ್ಥೆಗಳ ವಿರೋಧವಾಗಿ ಈ ವರದಿಯನ್ನು ತಿರಸ್ಕರಿಸಿ ಮರು ಸಮೀಕ್ಷೆ ನಡೆಸಲು ಕೆಆರ್‌ಡಿಎಸ್ ಎಸ್ ಜಿಲ್ಲಾ ಸಂಘಟನಾ ಸಂಚಾಲಕ ಶಿವಶರಣ ಯಾಳಗಿ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇದೇ ಮಾ.25ರಂದು ಬೆಂಗಳೂರು ನಗರದ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳಿಗೆ ಅನ್ಯಾಯವಾಗುತ್ತಿದ್ದು, ಪರಿಶಿಷ್ಟ ಜಾತಿಗಳ ಒಳಮಿಸಲಾತಿ ವಿಚಾರದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಅವೈಜ್ಞಾನಿಕವಾಗಿದೆ. ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಏಕಸದಸ್ಯ ಆಯೋಗದ ವರದಿ ಅಪೂರ್ಣವಾಗಿದ್ದು, ಸಮೀಕ್ಷೆಸರಿಯಾದ ರೀತಿಯಲ್ಲಿ ನಡೆದಿಲ್ಲ ಎಂಬ ಆಕ್ಷೇಪವನ್ನು ಹಲವಾರು ಸಂಘಟನೆಗಳು ವ್ಯಕ್ತಪಡಿಸಿದ್ದರೂ, ಅದನ್ನು ಪರಿಗಣಿಸದೆ ವರದಿ ಸಲ್ಲಿಸಲಾಗಿದೆ. ಇದೊಂದು ಒಳ ಮೀಸಲಾತಿಯಲ್ಲಿ ಬಲಗೈ ಹಾಗೂ ಮತ್ತಿತರ ಸಮುದಾಯದಗಳಿಗೆ ಮರಣ ಶಾಸನವಾಗುತ್ತದೆ. ರೋಸ್ಟರ್ ಬಿಂದುಗಳ ವಿಷಯದಲ್ಲಿ ಉಂಟಾಗಿರುವ ಅತಿ ಗೊಂದಲದಿಂದ ನಾಗಮೋಹನ್ ದಾಸ್ ಸಮಿತಿ ನೀಡಿರುವ ವರದಿ ಅವೈಜ್ಞಾನಿಕವಾಗಿದೆ. ಹಂಚಿಕೆ ಹಾಗೂ ರೋಸ್ಟರ್ ವ್ಯವಸ್ಥೆಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತದೆ.

ಕಾಂತಮ್ಮ ನಿಧನ



ಕುರುಗೋಡು:2 ಸಮೀಪದ ರುದ್ರಪಾದ ಗ್ರಾಮದ ಕಾಂತಮ್ಮ (85) ನಿಧನರಾದರು. ಮೃತರು ಮೊಮ್ಮಕ್ಕಳು, ಸೊಸೆಯಂದಿರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.



ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಶ್ರೀ ಪ್ಯಾಟೆ ಬಸವೇಶ್ವರ ರಥೋತ್ಸವ ಸೋಮವಾರ ಸಂಜೆ ಸಂಭ್ರಮದಿಂದ ನೆಡೆಯಿತು. ಗುತ್ತಿಗನೂರು, ಒರ್ವಾಯಿ, ಶಿರಿಗೇರಿ, ಕಂಪ್ಲಿ, ಕಲ್ಲಕಂಭ, ಕುರುಗೋಡು, ಮಣ್ಣೂರು ಸೂಗೂರು, ಶ್ರೀರಾಮಚಂದ್ರಪುರ, ಸೋಮಲಾಪುರ, ಚಿಟಿಗಿನಹಾಳು, ಪಟ್ಟಣಸೆರಗು, ನೆಲ್ಲೂಡಿ, ಶಾಂತಿನಗರ, ಹಾವಿನಹಾಳ್, ಸೋಮಲಾಪುರ, ಎಳುಬೆಂಚಿ, ಮಹೆಬೂಬನಗರ ಇದ್ದರು.

ಪ್ಯಾಟೆ ಬಸವೇಶ್ವರ ರಥೋತ್ಸವ ಸಂಪನ್ನ

ಕುರುಗೋಡು: ಸಮೀಪದ ಎಮ್ಮಿಗನೂರು ಗ್ರಾಮದ ಶ್ರೀ ಪ್ಯಾಟೆ ಬಸವೇಶ್ವರ ರಥೋತ್ಸವ ಸೋಮವಾರ ಸಂಜೆ ಸಂಭ್ರಮದಿಂದ ನೆಡೆಯಿತು.

ಸಂಜೆ ರಥೋತ್ಸವಕ್ಕೆ ಸ್ಥಳೀಯ ಹಂಪಿ ಸಾವಿರ ದೇವರ ಮಠದ ವಾಮದೇವಾ ಮಹಾಂತ ಶಿವಾಚಾರ್ಯ ಶ್ರೀಗಳು ಹಾಗೂ ಜಡೇಶತಾತ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಅವಿಭಕ್ತ ಕುಟುಂಬಗಳು ರಥೋತ್ಸವ ಬಾಗಿ ಆಚರಣೆಯಲ್ಲಿ ಸಂಭ್ರಮದ ಸಂಪ್ರದಾಯ ಭಾರತೀಯರ ನೆಲೆಯಾಗಿದೆ ಎಂದರು.

ರಥೋತ್ಸವ ನಿಮಿತ್ಯ ಸತತ 5 ದಿನಗಳಕಾಲ ನಿತ್ಯ ಶ್ರೀಪ್ಯಾಟೆ ಬಸವೇಶ್ವರ ಮೂರ್ತಿಗೆ ಪಂಚಬಿಷೇಕ ಹಾಗೂ ನಿತ್ಯ ಪಲ್ಲಕ್ಕಿಯೋತ್ಸವ, ಪ್ರಭಾವಳಿ ಉಚ್ಛಾಯ ಧಾರ್ಮಿಕ ಕಾರ್ಯಕ್ರಮ ಮಾಡಿದ್ದು, ನೂರಾರು ಭಕ್ತರು ಭಾಗವಹಿಸಿ ಉತ್ತಿತ್ತಿ, ಬಾಳೆಹಣ್ಣು, ಬೇಡಿಕೆ ಹರಕೆ ತಿರಿಸಿದರು.

ಸಂಜೆ ರಥೋತ್ಸವಕ್ಕೆ ಪೂರ್ವದದಲ್ಲಿ ಸಂಪ್ರಾದಯಾಗಿ ಪದ್ದತಿಯಲ್ಲಿ ಕುಂಭೋತ್ಸವ ಪ್ರರ್ದಕ್ಷಣ ಮಾಡಲಾಗಿತು. ರಥೋತ್ಸವಕ್ಕೆ ಹೆಚ್ಚು ವಿವಿಧ ಬಗೆಯ ಬಣ್ಣದ ಗೊಂಬೆಗಳು ನೋಡಗರ ಗಮನ ಸೆಳೆಯಿತು. ಹೂಗಳಿಂದ ಅಲಂಕಾಲ ಮಾಡಿದ್ದು, ಸಕಲವಾದ್ಯ ಮೇಳ, ಡೋಳ್ಳು, ರಥೋತ್ಸವಕ್ಕೆ ಮೆರಗು ತಂದವು. ಒಂದು ದಿನದ ನಿರಂತರ ಭಜನೆ, ಉತ್ಸವ ಮೂರ್ತಿ ಮೆರವಣಿಗೆ ಸಾಕ್ಷಿಯಾಗಿತು. ಬೆಳಿಗ್ಗೆ ದೇವಸ್ಥಾನ ಆವರಣದಲ್ಲಿ ವಿವಿಧ ಬಗೆಯ ಹರಕೆ ಸಲ್ಲಿಸಲಾಯಿತು.



ಬಳ್ಳಾರಿ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಶಾಖೆ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ನಿಮಿತ್ತ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ನೆಲ್ಕುದ್ರಿ ಸದಾನಂದ, ಕಾರ್ಯದರ್ಶಿ ತಿಪ್ಪಾರೆಡ್ಡಿ ಜಿ.ವೈ., ಖಜಾಂಚಿ ಹನುಮಂತರಾಯ, ರಾಜ್ಯ ಪರಿಷತ್ ಸದಸ್ಯರಾದ ಸುರೇಶ ಕುಮಾರ್ ಇತರರಿದ್ದರು.

ಅಣಿಮಾಡಿ ಅಷ್ಟ ಸಿದ್ಧಿ ಮೂರ್ತಿಗಳ ಸ್ಥಾಪನೆ | ಕಾಶಿ ಶ್ರೀಗಳ ಹಿತೋಪದೇಶ

ವಿಶ್ವಾರಾಧ್ಯರು ಮನುಕುಲದ ಉದ್ಧಾರಕರು

ಯಾದಗಿರಿ: ಸಿದ್ಧಿ ಪುರುಷ ವಿಶ್ವಾರಾಧ್ಯರು ಅಣಿ ಮಾಡಿ, ಅಷ್ಟಸಿದ್ಧಿಯನ್ನು ವಶಪಡಿಸಿಕೊಂಡು ಕಾಶಿಯಲ್ಲಿ ಅಭ್ಯಾಸ ಮಾಡಿ, ಅಪಾರ ಆಧ್ಯಾತ್ಮಿಕ ಜ್ಞಾನ ಸಂಪಾದಿಸಿ, ಇಡೀ ದೇಶದ ತುಂಬೆಲ್ಲಾ ಸಂಚಾರ ಮಾಡಿ, ಮನುಕುಲವನ್ನು ಉದ್ಧಾರ ಮಾಡಿದ್ದಾರೆ ಎಂದು ಕಾಶಿ ಜಗದ್ಗುರು ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು ನುಡಿದರು.



> ಪ್ರಸಕ್ತ ದಿನಗಳಲ್ಲಿ ಎಲ್ಲರೂ ಶಾಂತಿ-ನೆಮ್ಮದಿಯಿಂದ ಬಾಳಬೇಕಾದರೆ ಸ್ವಲ್ಪ ಸಮಯ ಮಠ-ಮಾನ್ಯಗಳಲ್ಲಿ ನಡೆಯುವ ಆಧ್ಯಾತ್ಮಿಕ ಚಟುವಟಿಕೆಗಳತ್ತ ಮೀಸಲಿಡಬೇಕು, ಅಂದಾಗ ಮಾತ್ರ ನಿಮ್ಮೆಲ್ಲರ ಆಲೋಚನೆಗಳು ಬದಲಾವಣೆಯಾಗಿ ಸನ್ಮಾರ್ಗದಲ್ಲಿ ಆದರ್ಶ ಬದುಕು ಸಾಗಿಸಲು ಸಹಾಯವಾಗಲಿದೆ.
>
> ■ ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು, ಕಾಶಿ ಜಗದ್ಗುರು

ತಾಲೂಕಿನ ಅಬ್ಬೆ ತುಮಕೂರಿನ ಸಿದ್ಧಿ ಪುರುಷ ವಿಶ್ವಾರಾಧ್ಯರ ಅನುಗ್ರಹ ಕ್ಷೇತ್ರದಲ್ಲಿ ಕಳೆದ 3 ದಿನಗಳಿಂದ ಹಮ್ಮಿಕೊಂಡಿದ್ದ ಅಣಿಮಾಡಿ ಅಷ್ಟ ಸಿದ್ಧಿ ಮೂರ್ತಿಗಳ ಸ್ಥಾಪನಾ ಸಮಾರೋಪ ಸಮಾರಂಭದ ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿ, ಈ ನಾಡಿನಲ್ಲಿ ಯಾರೇ ಆಗಲೀ ತಮ್ಮ ಕಷ್ಟ-ಕಾರ್ಪಣ್ಯಗಳೊಂದಿಗೆ ವಿಶ್ವಾರಾಧ್ಯರ ದರ್ಶನ ಪಡೆದರೆ ಅವುಗಳೆಲ್ಲ ಪರಿಹಾರವಾಗಿ ಶಾಂತಿ, ನೆಮ್ಮದಿ ಬದುಕು ಸಾಗಿಸಿ ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿಕೊಂಡು ಬಂದಿರುವುದನ್ನು ಕಾಣುತ್ತೇವೆ ಎಂದರು.

ಪಂಚ ಪೀಠಗಳು ಅನಾದಿ ಕಾಲದಿಂದ ಸನಾತನ ಧರ್ಮವನ್ನು ಉಳಿಸಿ-ಬೆಳೆಸುವ ಜೊತೆಗೆ ಭಕ್ತರಿಗೆ ಆಧ್ಯಾತ್ಮಿಕ ಚಿಂತನೆಗಳ ಜೊತೆಗೆ ಮಾನವೀಯ ಮೌಲ್ಯಗಳನ್ನು ತಿಳಿಸಿ, ಅವರ ಉದ್ಧಾರಕ್ಕಾಗಿ ಶ್ರಮಿಸುತ್ತೀವೆ, ಕಾರಣ ಎಲ್ಲರೂ ಪ್ರಾಚೀನ ಕಾಲದಿಂದ ಆಚರಿಸಿಕೊಂಡು ಬರುತ್ತಿರುವ ಧಾರ್ಮಿಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗುವ ಮೂಲಕ ಯುವ ಪೀಳಿಗೆಗೆ ಮಾರ್ಗದರ್ಶನ ನೀಡುವುದು ಎಲ್ಲರ ಕರ್ತವ್ಯವಾಗಿದೆ ಎಂದರು.

ಅಬ್ಬೆತುಮಕೂರು ಮಠ ಇಂದು ಎಲ್ಲ ವರ್ಗದ ಜನರ ಮಠವಾಗಿದೆ, ಶ್ರೀಗಳು ತ್ರಿವಿಧ ದಾಸೋಹಗಳ ಮೂಲಕ ಈ ಭಾಗದ ಅಭಿವೃದ್ಧಿಗೆ ಹಾಗೂ ನಾಡಿಗೆ ಒಳ್ಳೇಯ ಸಂದೇಶ ನೀಡುತ್ತಿರುವ ಕಾರ್ಯ ಶ್ಲಾಘನೀಯ ಎಂದು ಬಣ್ಣಿಸಿದರು.

ಮಠದ ಪೀಠಾಧಿಪತಿ ಡಾ.ಗಂಗಾಧರ ಮಹಾಸ್ವಾಮಿಜಿ ಆಶೀರ್ವಚನ ನೀಡಿ, ವಿಶ್ವಾರಾಧ್ಯರ ಜೀವನ, ಆಧ್ಯಾತ್ಮಿಕ ಸಾಧನೆಗಳನ್ನು ವಿವರಿಸಿ, ಎಲ್ಲಾ ಸಮಾಜದ ಭಕ್ತರ ಸಹಾಯ-ಸಹಕಾರದಿಂದ ವಿಶ್ವಾರಾಧ್ಯರ ಅಪೇಕ್ಷೆಯಂತೆ ಧಾರ್ಮಿಕ ಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಸಮಾಜದಲ್ಲಿ ಶಾಂತಿ, ಸಾಮರಸ್ಯ ಮೂಡಿಸಿ, ಸಮಾಜವನ್ನು ಪ್ರಗತಿಯತ್ತ ಕೊಂಡ್ಯೊಯ್ಯುವ ಕೆಲಸ ಮಾಡುತ್ತಿದ್ದೇವೆ. ನಿಮ್ಮೇಲ್ಲರ ಸಂಕಲ್ಪಗಳು ಈಡೇರಲಿ ಎಂದು ನುಡಿದರು.

ಅನುಗ್ರಹ ಮಠಕ್ಕೆ ಕಿರಿಯ ಶ್ರೀಗಳಾದ ಶಿವಶೇಖರಯ್ಯ ಸ್ವಾಮಿ ಅವರನ್ನು ಕಾಶಿ ಜಗದ್ಗುರುಗಳು ಆಶೀರ್ವದಿಸಿದರು.

ಶಹಾಪುರದ ಸೂಗೂರೇಶ್ವರ ಮಹಾಸ್ವಾಮಿಜಿ, ಚಟ್ನಳ್ಳಿಯ ವಿಶ್ವಾರಾಧ್ಯಶ್ರೀ, ನಿಲಗಲ್ ಶ್ರೀಗಳು, ಮಹಾರಾಷ್ಟ್ರದ ಮಾಜಿ ಸಚಿವ ಸಿದ್ಧರಾಮ ಮೇತ್ರೆ, ಶ್ರೀನಿವಾಸರಡ್ಡಿ ಪಾಟೀಲ್ ಚೆನ್ನೂರ, ಡಾ.ವೀರಭದ್ರಪ್ಪ ಯಲ್ಹೇರಿ, ಚೆನ್ನಪ್ಪಗೌಡ ಮೋಸಂಬಿ, ಮಹೇಶರಡ್ಡಿ ಮುದ್ನಾಳ, ಶರಣಪ್ಪಗೌಡ ಬಬಲಾದಿ, ಅನಂತಪ್ಪ ಯದ್ಲಾಪುರ, ಶರಣಗೌಡ ತಂಗಡಗಿ, ಓಂಕಾರ ತಿವಾರಿ ಸೈದಾಪುರ, ಟಿ.ಎನ್‌ಭೀಮುನಾಯಕ, ವಿಶ್ವನಾಥರಡ್ಡಿ ಮಾಲಿ ಪಾಟೀಲ್ ಅಬ್ಬೆತುಮಕೂರ, ನರಸಣ್ಣಗೌಡ ರಾಯಚೂರ, ಮಹೇಶಪಾಟೀಲ್ ಅಬ್ಬೆ ತುಮಕೂರ, ಅಜಯ ಸಿನ್ನೂರ ಸೇರಿದಂತೆ ಸಹಸ್ರಾರು ಭಕ್ತರು ಉಪಸ್ಥಿತರಿದ್ದರು.

ವಿಶೇಷ ಪ್ಯಾಕೇಜ್ ಘೋಷಣೆಗೆ ಒತ್ತಾಯ

ಬೀದರ : ಕಾರಂಜಾ ನೀರಾವರಿ ಯೋಜನೆಗಾಗಿ ಭೂಮಿ ನೀಡಿದ ರೈತ ಸಂತ್ರಸ್ತರಿಗೆ ಸಮರ್ಪಕ ಪರಿಹಾರ ನೀಡುವ ವಿಚಾರದಲ್ಲಿ ಸಚಿವ ಶಿವರಾಜ್ ತಂಗಡಗಿ ನೀಡಿದ ಹೇಳಿಕೆಯನ್ನು ಖಂಡಿಸಿ, ಕಾಲಮಿತಿಯಲ್ಲಿ ವಿಶೇಷ ಪ್ಯಾಕೇಜ್ ಘೋಷಿಸಲು ಒತ್ತಾಯಿಸಲಾಗಿದೆ.

ಬೀದರ ನಗರದ ಅಂಬೇಡ್ಕರ್ ವೃತ್ತದಲ್ಲಿ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯಿಂದ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ ಹಿರಿಯ ಹೋರಾಟಗಾರ ಡಾ.ಲಕ್ಷ್ಮಣ ದಸ್ತಿ ಮಾತನಾಡಿ, ವಿಧಾನಪರಿಷತ್ತಿನಲ್ಲಿ ಕಾರಂಜಾ ಸಂತ್ರಸ್ತರ ಪ್ರಶ್ನೆಗೆ ಸಂಬಂಧಿಸಿದಂತೆ ಡಿಕೆ ಶಿವಕುಮಾರ ಅವರ ಅನುಪಸ್ಥಿತಿಯಲ್ಲಿ ಅವರ ಪರವಾಗಿ ಉತ್ತರಿಸಿದಶಿವರಾಜ್‌ತಂಗಡಗಿಅವರಉತ್ತರ ಬೇಜವಾಬ್ದಾರಿಯುತವಾಗಿದ್ದು, ಬೀದರ ಜಿಲ್ಲೆಯ ಜನತೆಗೆ ಅವಮಾನಕಾರಿಯಾಗಿದೆ ಎಂದು ಆರೋಪಿಸಿದರು.

ಈ ವೇಳೆ ವಿಧಾನಪರಿಷತ್ ಸದಸ್ಯರಾದ ಎಂ.ಜಿ.ಮೂಳೆ ಸದನದಲ್ಲಿ ಕಾರಂಜಾ ಸಂತ್ರಸ್ತರಿಗೆ ಮಾನವೀಯತೆ ಹಾಗೂ ವೈಜ್ಞಾನಿಕ ಆಧಾರದ ಮೇಲೆ ಪರಿಹಾರ ನೀಡುವ ಕುರಿತು ಪ್ರಶ್ನೆ ಕೇಳಿದ್ದರು. ಕಾರಂಜಾ ಸಂತ್ರಸ್ತರ ಸಮಸ್ಯೆ ಕುರಿತು ದಶಕಗಳಿಂದ ಹೋರಾಟ ನಡೆಯುತ್ತಿದ್ದು, ಸರ್ಕಾರಕ್ಕೂ ಈ ವಿಷಯ ಮನದಟ್ಟಾಗಿದೆ. ನ್ಯಾಯಾಲಯದ ತೀರ್ಪುಗಳನ್ನು ಮಾನದಂಡವನ್ನಾಗಿ ಮಾಡಿಕೊಂಡು ವೈಜ್ಞಾನಿಕ ಹಾಗೂ ಮಾನವೀಯತೆ ಆಧಾರದ ಮೇಲೆ ಪರಿಹಾರ ನೀಡಬೇಕು ಎಂದು ಡಾ.ದಸ್ತಿ ಒತ್ತಾಯಿಸಿದರು.

ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಚಂದ್ರಶೇಖರ್ ಪಾಟೀಲ್ ಹುಚ್ಚಕ್ಕನಹಳ್ಳಿ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ ಅವರು ಈ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿ ಹಲವಾರು ಸಭೆಗಳಲ್ಲಿ ಭರವಸೆ ನೀಡಿದ್ದಾರೆ. ಮುಖ್ಯಮಂತ್ರಿ ಸಹ ಈ ಕುರಿತು ಸಭೆ ನಡೆಸಿ ಭರವಸೆ ನೀಡಿರುವುದಾಗಿ ಹೇಳಿದರು.

ಮುಖಂಡರಾದ ವಿನಯ್ ಮಾಳ್ಗೆ, ಮಹೇಶ್ ಗೋರನಾಳಕರ್ ಮಾತನಾಡಿದರು.ರಾಜಪ್ಪ ಕೋಸಂ, ರಾಜಪ್ಪ ಬುಸ್ಸಾ, ವೀರೇಂದ್ರ ಭತಮುರಗೆ, ರೇವಣಪ್ಪ ಕಾಂಜೋಳ, ಸಂಗಾರೆಡ್ಡಿ ಅವರಾದ, ಹರ್ಷವರ್ಧನ್ ರಾಥೋಡ್, ಶ್ರೀಧರ ಸೋಮನೋರ್, ಮಾರಪ್ಪ ಕೌದೆ, ಇಸೂಫ್ ರೇಕುಳಗಿ, ಮಹ್ಮದ್ ಸೋಲಾಪೂರೆ, ಲಕ್ಷ್ಮೀ ಕೌದೆ ಇತರರಿದ್ದರು.



ಪುರಂದರ ದಾಸರ ಸ್ಮರಣೆ, ದಾಸವಾಣಿ ಕಾರ್ಯಕ್ರಮ

ಬಳ್ಳಾರಿ: ಸಂಗೀತಕ್ಕೆ ಅಗಾಧವಾದ ಶಕ್ತಿಯಿದೆ. ಸುಮಧುರ ಗಾಯನಕ್ಕೆ ಎಲ್ಲರೂ ತಲೆ ಬಾಗಲಿದ್ದಾರೆ. ಕೆಲ ಕಾಲ ಆವರಿಸಿರುವ ಮನಸ್ಸಿನ ಭಾರ ಕಡಿಮೆಯಾಗಲಿದೆ. ಸಂಗೀತದ ಶಕ್ತಿ ಅಪಾರ ಎಂದು ಪೋಲಾಕ್ಸ್ ಹನುಮಂತಪ್ಪ ಹೇಳಿದರು.

ನಗರದಸಿರುಗುಪ್ಪ ರಸ್ತೆಯ ವಿರಾಟ್ ನಗರ ಪ್ರದೇಶದ ಗಾನಯೋಗಿ ಕಲಾ ಕೇಂದ್ರದಲ್ಲಿ ಶ್ರೀ ಗುರು ಪುಟ್ಟರಾಜ ಸಂಗೀತ ಪಾಠ ಶಾಲೆ ಟ್ರಸ್ಟ್ ಹಾಗೂ ಸಪ್ತಸ್ವರ ಕಲಾವಿಧರ ಬಳಗದ ಆಶ್ರಯದಲ್ಲಿ ಶ್ರೀ ಪುರಂದರ ದಾಸರ ಸ್ಮರಣೆ ನಿಮಿತ್ತ ಆಯೋಜಿಸಿದ್ದ ದಾಸವಾಣಿ ಸಂಗೀತ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಸಂಗೀತದಿಂದ ಹೃದಯಕ್ಕೆ ಆನಂದ, ಮನಸ್ಸಿಗೆ ಸಂತಸ, ಉಲ್ಲಾಸ ದೊರೆಯಲಿದೆ. ಒತ್ತಡದ ಬದುಕಿಗೆ ಸಂಗೀತ ನಾನಾ ರೀತಿಯ ಆಯಾಮಗಳಲ್ಲಿ ಕೆಲಸ ಮಾಡುವ ಮೂಲಕ ಸದೃಢ ಆರೋಗ್ಯಕ್ಕೂ ಸಹಕಾರಿಯಾಗಲಿದೆ ಎಂದರು.

ಸಮಾಜ ಸುಧಾರಣೆಯ ಹಾಗೂ ಹರಿಭಕ್ತಿ ಚಿಂತನೆಯ ಉದಾತ್ತ ದೃಷ್ಟಿ ಕೋನದಿಂದ ದಾಸ ಸಾಹಿತ್ಯದ ಕೊಡುಗೆಯ ಮೂಲಕ ಎಲ್ಲರಿಗೂ ಉಪಕರಿಸಿದ ಶ್ರೀ ಪುರಂದರ ದಾಸರ ಸ್ಮರಣೆಯ ನಿಮಿತ್ತ ಶ್ರೀ ಗುರುಪುಟ್ಟರಾಜ್ ಸಂಗೀತ ಪಾಠ ಶಾಲೆಯಿಂದ ಹಾಗೂ ಸಪ್ತಸ್ವರ ಕಾಲ ಬಳಗದ ವತಿಯಿಂದ ಆಯೋಜಿಸಿದ ಈ ಸಂಗೀತ ಕಾರ್ಯಕ್ರಮ ನಿಜಕ್ಕೂ ಅತ್ಯಂತ ಸಂತಸ ಮೂಡಿಸಿದೆ ಎಂದರು.

ಕಲಾವಿದ ರಾಮರಾವ್ ಕುಲಕರ್ಣಿ ಮಾತನಾಡಿದರು. ಕಲಾವಿದ ವಿಠಲ ದೇಸಾಯಿ,ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿ, ಕಲಾವಿದರಾದ ಕೆ.ಎಸ್. ಸತ್ಯನಾರಾಯಣ ರಾವ್, ಜಯಲಕ್ಷ್ಮೀ, ವಿದ್ಯಾ ರಘುನಾಥ್, ವಿಜಯೇಂದ್ರ, ರಾಮರಾವ್ ಕುಲಕರ್ಣಿ, ಪುಟ್ಟರಾಜ ಕಗ್ಗಲ, ಪಂಚಾಕ್ಷರಿ ಕಗ್ಗಲ, ಬಸವರಾಜ್, ವಿದ್ಯಾಶ್ರೀ ಸೇರಿದಂತೆ ಅನೇಕ ಕಲಾವಿದರು ಶ್ರೀ ಪುರಂದರ ದಾಸರ ಕೃತಿಗಳನ್ನು ಪ್ರಸ್ತುಪಡಿಸಿದರು.

ಕಲಾವಿದರಾದ ಹಿರಿಯ ಪತ್ರಕರ್ತ ಎಂ.ಅಹಿರಾಜ್, ಪುಟ್ಟರಾಜ ಕಗ್ಗಲ ತಬಲಾ ಸಾಥ್ ನೀಡಿದರು. ಪ್ರಾಚಾರ್ಯ ಪಂ.ದೊಡ್ಡಬಸಪ್ಪ ಗವಾಯಿ ಕಗ್ಗಲ ಹಾಗೂ ಪೋಲಾಕ್ಸ ಹನುಮಂತಪ್ಪ ಹಾರ್ಮೋನಿಯಂ ಸಾಥ್ ನೀಡಿದರು.

ಡಾ.ರಾಧಿಕಾ ಆಚಾರ್ಯ, ಡಿಡಿಪಿಐ ಕಚೇರಿಯ ಅಧಿಕಾರಿ ಹರಿ ಪ್ರಸಾದ್ ಸೇರಿದಂತೆ ಇತರರಿದ್ದರು. ನಂತರ ಎಲ್ಲ ಕಲಾವಿದರೂ ಪಂ.ದೊಡ್ಡಬಸಪ್ಪ ಗವಾಯಿ ಕಗ್ಗಲ ಅವರನ್ನು ಸನ್ಮಾನಿಸಿ ಗೌರವಿಸಿದರು.



ಜೋಳ ಖರೀದಿ ಕೇಂದ್ರಕ್ಕೆ ಚಾಲನೆ

ಸಿರುಗುಪ್ಪ: ಜೋಳ ಖರೀದಿ ಕೇಂದ್ರವು ರೈತರಿಗೆ ಬಹಳಷ್ಟು ಅನುಕೂಲವಾಗುವ ಜೊತೆಗೆ ಸರ್ಕಾರದಡಿಯಲ್ಲಿ ಸಿಗುವ ಬೆಂಬಲ ಬೆಲೆಯಿಂದ ರೈತರ ಬದುಕು ಆರ್ಥಿಕವಾಗಿ ವೃದ್ಧಿಯಾಗಲು ಸಹಕಾರವಾಗಿದೆ ಎಂದು ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚೊಕ್ಕ ಬಸವನಗೌಡ ಹೇಳಿದರು.

ಪಟ್ಟಣದ ಎಪಿಎಂಸಿ ಎದುರುಗಡೆ ಜೋಳ ಖರೀದಿ ಕೇಂದ್ರಕ್ಕೆ ಸೋಮವಾರ ಚಾಲನೆ ನೀಡಿ ಮಾತನಾಡಿದರು.

ತಾಲೂಕಿನಲ್ಲಿ ಅತಿ ಹೆಚ್ಚಾಗಿ ಜೋಳ ಬೆಳೆ ಬೆಳೆಯುತ್ತಿದ್ದು, ಇಲ್ಲಿನ ರೈತರಿಗೆ ಸಮರ್ಪಕವಾಗಿ ಬೆಂಬಲ ಬೆಲೆ ದೊರಕಬೇಕೆಂಬ ದೃಷ್ಟಿಯಿಂದ ಜೋಳ ಖರೀದಿ ಕೇಂದ್ರ ಪ್ರಾರಂಭಿಸಲಾಗಿದೆ. ಇದರಿಂದ ರೈತರು ಖರೀದಿ ಕೇಂದ್ರಕ್ಕೆ ತಾವು ಬೆಳೆದಂತಹ ಗುಣಮಟ್ಟದ ಜೋಳವನ್ನು ನೀಡುವ ಮೂಲಕ ಬೆಂಬಲ ಬೆಲೆ ಪಡೆದುಕೊಳ್ಳಲು ಮುಂದಾಗಬೇಕು. ಮಾರುಕಟ್ಟೆಯಲ್ಲಿ ಬೆಲೆ ಕುಸಿದಾಗ ರೈತರಿಗೆ ಬೆಂಬಲ ಬೆಲೆ ಒದಗಿಸಿ ನಷ್ಟತಪ್ಪಿಸುವುದು ಜೋಳ ಖರೀದಿ ಕೇಂದ್ರದ ಮುಖ್ಯ ಉದ್ದೇಶವಾಗಿದೆ ಎಂದರು. ಖರೀದಿ ಕೇಂದ್ರ ಅಧಿಕಾರಿ ವೈಜ್ಯನಾಥ್ ಪಾಟೀಲ ಮಾತನಾಡಿ, ಕೆ.ಬೆಳಗಲ್ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ



ಸಂಘದ ಸೊಸೈಟಿ ವ್ಯಾಪ್ತಿಯಲ್ಲಿ ಬರುವ ಒಂದು ಜೋಳ ಖರೀದಿ ಕೇಂದ್ರವನ್ನು ಸಿರಗುಪ್ಪ ನಗರದ ಎಪಿಎಂಸಿ ಎದುರುಗಡೆ ಸ್ಥಾಪಿಸಿಲಾಗಿದೆ.

ನಮ್ಮ ಜೋಳ ಖರೀದಿ ಕೇಂದ್ರಕ್ಕೆ ಮುಂಗಾರು ಬೆಳೆಯ 40,493 ಕ್ವಿಂಟಾಲ್, ಹಿಂಗಾರು ಬೆಳೆಯ 20,243 ಕ್ವಿಂಟಾಲ್ ಜೋಳ ನೊಂದಣಿಯಾಗಿವೆ ಎಂದು ತಿಳಿಸಿದರು. ಫುಡ್ ಗ್ರೇಡರ್ ಕಿರಣ್ ಕುಮಾರ್, ಆಹಾರ ನಿರೀಕ್ಷಕ ಮಹಾ ರುದ್ರಗೌಡ, ಕೆ.ಬೆಳಗಲ್ ಸೊಸೈಟಿ ಅಧ್ಯಕ್ಷ ಪಾಲಾಕ್ಷಿಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕರಿಬಸಪ್ಪ, ಸಿರುಗುಪ್ಪ ನಂಬರ್ ಒನ್ ಸೊಸೈಟಿ ಅಧ್ಯಕ್ಷ ಟಿ. ನಾಂಚರಯ್ಯ, ಪಿಎಲ್ಡಿ ಬ್ಯಾಂಕ್ ನಿರ್ದೇಶಕ ಹೆರಕಲ್ ಜಡೇಸ್ವಾಮಿ, ಖರೀದಿ ಅಧಿಕಾರಿ ವೈಜ್ಯನಾಥ್ ಪಾಟೀಲ್ ಇತರರಿದ್ದರು.

ಅದ್ದೂರಿ ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವ

ಹೂವಿನಹಡಗಲಿ: ತಾಲೂಕಿ ನ ಅಡವಿಮಲ್ಲನಕೇರಿ ಗ್ರಾಮದ ಆರಾಧ್ಯ ದೈವ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ರಥೋತ್ಸವವು ಸೋಮವಾರ ಭಕ್ತರಿಂದ ವಿಶೇಷ ಪೂಜೆ ಸಲ್ಲಿಸುವ ಮೂಲಕ ಮಹಾರಥೋತ್ಸವಕ್ಕೆ ಚಾಲನೆ ನೀಡಿದರು.

ಸಂಜೆ 5.40ಕ್ಕೆ ಸರಿಯಾಗಿ ಭಕ್ತ ಸಾಗರದಿಂದ ರಥೋತ್ಸವ ಜರುಗಿತು. ಕಳಸಕ್ಕೆ ಬಾಳೆಹಣ್ಣು ಎಸೆದು ಭಕ್ತರು ಸಂಭ್ರಮಿಸಿದರು. ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು. ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಪಟಾಕ್ಷಿ ಹರಾಜು ಮೋರಿಗೇರಿ ಸರ್ವಮ್ಮ ಎಂಬುವರಿಗೆ 51,101 ರೂ.ಗಳಿಗೆ ಹರಾಜು ಪ್ರಕ್ರಿಯೆ ನಡೆಯಿತು.ಯುಗಾದಿ ಹಬ್ಬದ ಅಂಗವಾಗಿ ನಾನಾ ಧಾರ್ಮಿಕ ಮತ್ತು ಪೂಜಾ ವಿಽವಿಧಾನಗಳು ಶ್ರದ್ಧೆ, ಭಕ್ತಿಯಿಂದ ನಡೆದವು. ಸುತ್ತಮುತ್ತಲಿನ ಭಕ್ತರು ಹಾಗೂ ಗ್ರಾಮಸ್ಥರು ಯುವಕರು ಇದ್ದರು.



ದೇವರದಾಸಿಮಯ್ಯ ಕೊಡುಗೆ ಅಪಾರ: ಗೋಟೂರು

ಹಗರಿಬೊಮ್ಮನಹಳ್ಳಿ: ಬಸವಾದಿ ಶರಣರ ಪೂರ್ವದಲ್ಲಿಯೇ ಹಲವಾರು ವಚನಗಳನ್ನು ರಚಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ ಕನ್ನಡದ ಮೊಟ್ಟ ಮೊದಲ ವಚನಕಾರ ಎಂಬ ಹೆಗ್ಗಳಿಕೆ ಪಾತ್ರರಾಗಿದ್ದ ಜೇಡರ (ದೇವರ) ದಾಸಿಮಯ್ಯ ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪಾರವಾದದ್ದು ಎಂದು ತಾಲೂಕು ನೇಕಾರ ಒಕ್ಕೂಟದ ಅಧ್ಯಕ್ಷ ಗೋಟೂರು ಬಸವರಾಜ ತಿಳಿಸಿದರು.



ಸೋಮವಾರ ಕನ್ನಡ ಆದ್ಯ ವಚನಕಾರ ದೇವರ (ಜೇಡರ) ದಾಸಿಮಯ್ಯ ಅವರ ಕಾರ್ಯಕ್ರಮವನ್ನು ಆಡಳಿತ ಸೌಧದಲ್ಲಿ ಹಮ್ಮಿಕೊಳ್ಳಲಾಗಿತ್ತು. ದೇವರ (ಜೇಡರ) ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಅರ್ಪಿಸಿ ಮಾತನಾಡಿದರು. ಸತಿ ಪತಿಗಳೊಂದಾದ ಭಕ್ತಿ ಹಿತಮೊಪ್ಪುವುದು ಶಿವಂಗೆ, ಕಡೆಗೀಲು ಬಂಡಿಗಾ ದಾರ ಕಡಗೀಲಿಲ್ಲದ ಬಂಡಿ ಹೊರಗಡಿಯದು ಎರಡು ಚಕ್ರದ ಬಂಡಿಗೆಕಡೆಗಿಲುಬೇಕು.ಜೀವನವೆಂಬ ಬಂಡಿಗೆ ಸರಾಗವಾಗಿ ಸಾಗಲು ಶರಣರ ತತ್ವ ಆದರ್ಶಗಳು ಅಗತ್ಯ ಕಾಯಕದ ಮಹತ್ವ ಪುರುಷರಷ್ಟೇ ಸ್ತ್ರೀಯರು ಸರಿ ಸಮಾನರು ಎಂದು ಪ್ರತಿಪಾದಿಸಿದವರಾಗಿದ್ದರು ಎಂದರು.

ಪದ್ಮಶಾಲಿ ಸಮಾಜದ ಅಧ್ಯಕ್ಷ ಅನಿಲ್‌ಕುಮಾರ್ ಜಾಣ ಮಾತನಾಡಿ, ನೇಕಾರ ಸಮುದಾಯ ಆರ್ಥಿಕ, ರಾಜಕೀಯ, ಶೈಕ್ಷಣಿಕ, ಔದ್ಯೋಗಿಕವಾಗಿ ಹಿಂದುಳಿದಸಮಾಜಗಳಲ್ಲಿ ಅತಿ ಹಿಂದುಳಿದ ಸಮಾಜ ನಮ್ಮದಾಗಿದೆ ಲೇಖರು ಒಕ್ಕೂಟದ ಎಲ್ಲಾ ಸಮಾಜದ ಬಾಂಧವರು ಸೇರಿ ಸಮಾಜವನ್ನು ಸಂಘಟಿಸುವ ಅಗತ್ಯತೆ ಇದೆ ಎಂದರು. ಉಪ ತಹಶೀಲ್ದಾರ್ ಶಿವಕುಮಾರ್ ಗೌಡ, ಅಧಿಕಾರಿ ನಾಗರಾಜ, ನೇಕಾರ ಒಕ್ಕೂಟದ ಕಾರ್ಯದರ್ಶಿ ನರೇಂದ್ರ ಬಾಬು ಮಾತನಾಡಿದರು.

ಖಜಾಂಚಿ ವಿರೂಪಾಕ್ಷಪ್ಪ ಕುರುವಿನ ಶೆಟ್ಟಿ, ಅಧ್ಯಕ್ಷ ಮಾಲವಿ ಮಲ್ಲಿಕಾರ್ಜುನ ದೇವಾಂಗ ಅಧ್ಯಕ್ಷ ಪಂಪಣ್ಣ ಮಲ್ಲಿಕಾರ್ಜುನ ಕಡ್ಡಿ ಮಹಿಳಾ ಘಟಕದ ಅಧ್ಯಕ್ಷೆ ತುಳಸಿಮೂರ್ತಿರಾಜ್, ಉಪಾಧ್ಯಕ್ಷರಾದ ವಿಜಯಲಕ್ಷ್ಮಿ , ವನಜಾಕ್ಷಿ ಗೋಟೂರ್,ಪ್ರಧಾನಕಾರ್ಯದರ್ಶಿ ಪಾರ್ವತಿ ಶಂಕ್ರಪ್ಪ, ಕಾರ್ಯದರ್ಶಿ ನಾಗರತ್ನ, ಖಜಾಂಚಿ ಜ್ಯೋತಿ ಹೆಚ್, ಶ್ಯಾಮಲಾ, ಜಯಶ್ರೀ, ಗಾಯತ್ರಿ, ಶಾಂತ, ನಾಗರತ್ನಮ್ಮ, ಶ್ರೀದೇವಿ, ಸುಮ, ಶಾರದಮ್ಮ, ಶಿಲ್ಪ ಶೈಲಾ, ಮುಖಂಡರಾದ ಅಡೂರುಶಿವಕುಮಾರ್, ಸಮಗಂಡಿ ನಾಗರಾಜ, ಅಡೂರು ಬಸವರಾಜ, ಶ್ಯಾವಿ ದೇವರಾಜ, ಹೀರಾಳು ವಾಸಣ್ಣ ಶರಣಪ್ಪ, ಕಾಳೇಶ್ ಜಿ., ನೀಲಕಂಠಪ್ಪ, ಮಲ್ಲಣ್ಣ, ವೀರೇಶ್ ಬಾಬು, ವಿಶ್ವನಾಥ, ಚಂದ್ರಶೇಖರ, ಮಹೇಶ್ ತಟ್ಟಿ, ಶಿವಾನಂದ ಮಂಜುನಾಥ ಬಸವರಾಜ ವೀರಣ್ಣ , ಕೆಂಚಪ್ಪ ಸೇರಿದಂತೆ ಇತರರಿದ್ದರು.

> ಮಹನೀಯರ ಜಯಂತಿ ಆಚರಣೆ ಸ್ಥಳದಲ್ಲಿ ಬಂದ ಯಾವುದೇ ಸಮಾಜದ ನಾಗರಿಕರು ಹೀಗೆ ನಿಂತುಕೊಂಡು ಭಾಷಣ ಕೇಳುವ ಹಾಗೆ ಇರಬಾರದು. ದೇವರ ದಾಸಿಮಯ್ಯ ಜಯಂತಿಗೆ ಬಂದಿರುವ ಸಮಾಜದ ನಾಗರಿಕರಿಗೆ ಅಗೌರವ ತೋರುವಂತಿದೆ.
>
> ■ ಜಾಣ ಶಿವಾನಂದ, ನ್ಯಾಯವಾದಿ

ನಾಳೆಯಿಂದ ‘ಅರಮನೆ’ ಧಾರಾವಾಹಿ ಪ್ರಸಾರ

▸ ಅರವಿಂದ್ ಬಸಾಪುರ

» ಕುಂ ವೀರಭದ್ರಪ್ಪ ಅವರ ಕಾದಂಬರಿಯೊಂದು ಧಾರಾವಾಹಿ ರೂಪದಲ್ಲಿ ಮೂಡಿ ಬರುತ್ತಿದೆ

ಕೊಟ್ಟೂರು: ಕನ್ನಡ ನಾಡಿನ ಹೆಮ್ಮೆಯ ಸಾಹಿತಿ, ನಾಡೋಜ ಕೊಟ್ಟೂರಿನ ಕುಂ. ವೀರಭದ್ರಪ್ಪ ಅವರ ಅರಮನೆ ಕಾದಂಬರಿ, ಚಂದನ ವಾಹಿನಿಯಲ್ಲಿ ಮಾ.25ರಿಂದ ಧಾರಾವಾಹಿಯಾಗಿ ಪ್ರಸಾರವಾಗಲಿದೆ.

ಮಾ.23 ಮತ್ತು 24ರಂದು ರಾತ್ರಿ 10ಕ್ಕೆ ಚಂದನದಲ್ಲಿ ಸಾಹಿತಿ ಕುಂವೀ ಮತ್ತು ನಿರ್ದೇಶಕ ಮಂಸೋರೆ ಅವರ ಸಂದರ್ಶನ ಪ್ರಸಾರವಾಗಲಿದೆ. ಮಾ.25ರಿಂದ ಪ್ರತಿ ರಾತ್ರಿ 7.30ಕ್ಕೆ ಧಾರವಾಹಿ ಪ್ರಸಾರವಾಗಲಿದೆ. ಕುಂವೀಯವರ ಕಾದಂಬರಿಯೊಂದು ಧಾರಾವಾಹಿ ರೂಪದಲ್ಲಿ ಮೂಡಿ ಬರುತ್ತಿರುವುದಕ್ಕೆ ಅವರ ಅಭಿಮಾನಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

ಕುಂವೀ ಅವರ ಕಥೆ ಆದರಿಸಿ ಮನ ಮೆಚ್ಚಿದ ಹುಡುಗಿ, ಬೇಲಿಯ ಹೂಗಳು, ಕೆಂಡದ ಮಳೆ ಸೇರಿ ಅನೇಕ ಚಲನಚಿತ್ರಗಳು ತೆರೆಗೆ ಬಂದಿವೆ. ಕುಂವೀಯವರ ಮಹತ್ವಾಂಕಾಕ್ಷೆಯ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಅರಮನೆ ಕಾದಂಬರಿ, ಓದುಗರನ್ನು ಬಹುವಾಗಿ ಆಕರ್ಷಿಸಿತ್ತು. ಅಪ್ಪಟ ಗ್ರಾಮೀಣ ಕೊಟ್ಟೂರು ನೆಲದ ಕಾದಂಬರಿಯ ಕಥಾ ವಸ್ತುವಾಗಿದ್ದರಿಂದ



ಓದುಗರು ಬಹು ಆಸಕ್ತಿಯಿಂದಲೇ ಬಿಡುಗಡೆ ಯಾಗುವುದನ್ನು ಕಾದಿದ್ದರು. ಕಾದಂಬರಿ ಬಿಡುಗಡೆಯಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದಿತ್ತು. ಇದೀಗ ಅದೇ ಅರಮನೆ ಕಾದಂಬರಿ, ಚಂದನ ಟಿವಿಯಲ್ಲಿ ಧಾರಾವಾಹಿಯಾಗಿ ಪ್ರಸಾರವಾಗುತ್ತಿರುವುದು ಓದುಗರಲ್ಲಿ ವಿಶೇಷ ಕುತೂಹಲ ಮೂಡಿಸಿದೆ. ಧಾರವಾಹಿಯನ್ನು ರಾಷ್ಟ್ರ ಹಾಗೂ ರಾಜ್ಯ ಪ್ರಶಸ್ತಿ ವಿಜೇತ ಮಂಸೋರೆ ನಿರ್ದೇಶಿಸಿದ್ದಾರೆ.

ಪದ್ಮಶ್ರೀ ಬಿ.ಜಯಶ್ರೀ ಪ್ರಮುಖ ಪಾತ್ರದಲ್ಲಿದ್ದು, ಬಿ.ಎಂ.ಗಿರಿರಾಜ, ವೆಂಕಟೇಶ್ ಪ್ರಸಾದ್, ಚಂದನಾ, ಸಿತಾರ ನಿನಾಸಂ, ಬಿಂದು ರಕ್ಷಿದಿ, ವಿನಯ್ ಕೃಷ್ಣಸ್ವಾಮಿ, ಗುಂಡಣ್ಣ, ಮಂಜುನಾಥ ಜಂಬೆ ಸೇರಿ ಅನೇಕ ಚಿತ್ರರಂಗ ಹಾಗೂ ರಂಗಭೂಮಿ ಕಲಾವಿದರು ನಟಿಸಿದ್ದಾರೆ.

ಅರಮನೆ ಕಾದಂಬರಿ ಬ್ರಿಟಿಷ್ ಆಡಳಿತಕ್ಕೆ ಸಂಬಂದ್ದಿಸಿದ್ದಾಗಿದೆ.

ಕಾದಂಬರಿಯಲ್ಲಿ ಬರುವ ರಾಣಿಯ ತವರು ಕೂಡ್ಲಿಗಿ ತಾಲೂಕಿನ ಕುದುರೆಡವು ಗ್ರಾಮ. ಬ್ರಿಟಿಷ್ ಸರಕಾರ ಆಡಳಿತಕ್ಕೆ ಕೇಂದ್ರ ಸ್ಥಾನವಾಗಿದ್ದ ಬಳ್ಳಾರಿ ಕಲೆಕ್ಟರ್ ಆಗಿದ್ದ ಥಾಮಸ್ ಮನ್ರೋ, ತನ್ನ ಆಡಳಿತದಲ್ಲಿ ಜಾರಿ ತಂದಿದ್ದ ಭೂ ಸುಧಾರಣೆ ವ್ಯವಸ್ಥೆಯನ್ನು ಕಥೆಯಲ್ಲಿ ತಿಳಿಸಲಾಗಿದೆ.

ಅಪ್ಪಟ ಅಖಂಡ ಬಳ್ಳಾರಿ ಜಿಲ್ಲೆ, ಆಂಧ್ರ ಪ್ರದೇಶ ಭಾಗದಲ್ಲಿ ನಡೆಯುವ ಘಟನೆಗಳೇ ಕಾದಂಬರಿಯಲ್ಲಿವೆ. ಬ್ರಿಟಿಷ್ ಆಡಳಿತ ಕಾಲಕ್ಕೆ ಓದುಗರನ್ನು ಕೊಂಡಯ್ದು ಅನುಭವ ಕಾದಂಬರಿ ನೀಡಿತ್ತು. ಇದೀಗ ಅದು ಕಿರುತೆರೆ ಮೇಲೆ ಬರುತ್ತಿರುವುದು ಓದುಗರ ಉತ್ಸಾಹವನ್ನು ಇಮ್ಮಡಿಗೊಳಿಸಿದೆ.

ಅರಮನೆ ಕಾದಂಬರಿಯನ್ನು ಚಂದನ ಟಿವಿಯವರೇ ನಿರ್ಮಿಸುತ್ತಿದ್ದಾರೆ. ಮಂಸೋರೆ ನಿರ್ದೇಶನ, ಜಯಶ್ರೀಯವರಂತಹ ಕಲಾವಿದರು ಇದ್ದಾರೆ.